
ಲೋಕ ಚಿಂತಕರು



ಲೇಖನಗಳ ಸಂಗ್ರಹ

ಮೂಲಕ 05.4.2017 ರೊಳಗೆ ಈ ಕೆಳಗಿನ E-mail Id ಗಳಿಗೆ ಕಳುಹಿಸಬೇಕು.

mangaluravijay@gmail.com
grpoornima2@gmail.com
naduvinamath@gmail.com
1981nanjup@gmail.com

ಗಮನಿಸಿ

1. ಪುಸ್ತಕದಲ್ಲಿ ಪ್ರಕಟಣೆಗೆ ಅರ್ಹವಾದ ಪ್ರಬಂಧಗಳನ್ನು ಆಯ್ಕೆ ಮಾಡಲು ಸಮಿತಿ ರಚಿಸಿದ್ದು, ಸಮಿತಿಯ ತೀರ್ಮಾನ ಅಂತಿಮ.
2. ಪುಸ್ತಕವು ISBN ನಂಬರ್ ಹೊಂದಿರುತ್ತದೆ.

ಪ್ರಬಂಧದ ವಿಷಯಗಳು

1. ಬುದ್ಧನ ಅಹಿಂಸಾ ತತ್ವ
2. ಸಾಮಾಜಿಕ ನ್ಯಾಯ ಮತ್ತು ಬಸವ ಚಿಂತನೆ
3. ಆರೋಗ್ಯಕರ ಸಮಾಜಕ್ಕೆ ಗಾಂಧೀ/ಅಂಬೇಡ್ಕರ್ ಕೊಡುಗೆ
4. ಗಾಂಧೀ ಮತ್ತು ಅಂಬೇಡ್ಕರ್ ದೃಷ್ಟಿಯಲ್ಲಿ ಶಿಕ್ಷಣ
5. ನ್ಯಾಯ: ಗಾಂಧೀ ಮತ್ತು ಅಂಬೇಡ್ಕರ್ ಕಂಡಂತೆ
6. ಗಾಂಧೀ ಮತ್ತು ಅಂಬೇಡ್ಕರರ ಮುಖ್ಯ ಹೋರಾಟಗಳು
7. ಗಾಂಧೀ ಮತ್ತು ಅಂಬೇಡ್ಕರ್ ಚಿಂತನೆ ನೀಡುವ ಸ್ಫೂರ್ತಿ
8. ಸ್ವಾತಂತ್ರ್ಯ: ಗಾಂಧೀ ಮತ್ತು ಅಂಬೇಡ್ಕರ್ ನಿಲವು
9. ಭಾರತಕ್ಕೆ ಗಾಂಧೀ ಮತ್ತು ಅಂಬೇಡ್ಕರ್ ನೀಡಿದ ಆದರ್ಶ
10. ಗಾಂಧೀ ಮತ್ತು ಅಂಬೇಡ್ಕರ್ ವಿದ್ಯಾರ್ಥಿ ಜೀವನ
11. ಗಾಂಧೀ – ಅಂಬೇಡ್ಕರ್ ಸಹಪಯಣ
12. ಮಾರ್ಗದರ್ಶಿಗಳು: ಗಾಂಧೀ ಮತ್ತು ಅಂಬೇಡ್ಕರ್

ಒಓಡಿ ಸೌಲಭ್ಯ

ಈ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲು ಬಯಸುವ ಅಧ್ಯಾಪಕರಿಗೆ ಕಾಲೇಜು ಶಿಕ್ಷಣ ಇಲಾಖೆಯಿಂದ ಒಓಡಿ ಸೌಲಭ್ಯವನ್ನು ಒದಗಿಸಲಾಗುವುದು.

ವಿವರಗಳಿಗೆ ಸಂಪರ್ಕಿಸಿ

ಪ್ರೊ|| ಜಗದೀಶ ನಡುವಿನಮಠ	ಡಾ.ಪೂರ್ಣಿಮಾ ಜಿ.ಆರ್.
7760587041	99804–76471
ಮಂಗ್ಳೂರ ವಿಜಯ	ಪ್ರೊ|| ನಂಜುಂಡ ಪಿ.
94491–02294	98459–30836

ವಿಚಾರ ಸಂಕಿರಣ ಸಮಿತಿ

ಅಧ್ಯಕ್ಷರು

ಡಾ|| ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕಾರ್ಯದರ್ಶಿಗಳು

ಪ್ರೊ|| ಜಿ.ಬಿ.ಶಿವರಾಜು, ಶ್ರೀ ಈ. ಬಸವರಾಜು
ಶ್ರೀ ಮಂಗ್ಳೂರ ವಿಜಯ

ಸದಸ್ಯರುಗಳು

ಪ್ರೊ|| ಜಗದೀಶ ನಡುವಿನಮಠ
ಸಂಚಾಲಕರು, ಗಾಂಧಿ ಅಧ್ಯಯನ ಕೇಂದ್ರ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ

ಪ್ರೊ|| ಬಿ.ಸಿ. ಶಿವಪ್ರಸಾದ
ಸಂಚಾಲಕರು, ಗಾಂಧಿ ಅಧ್ಯಯನ ಕೇಂದ್ರ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೆಲಮಂಗಲ


ಪ್ರೊ|| ಹನುಮಂತರಾಜು
ಸಂಚಾಲಕರು, ಗಾಂಧಿ ಅಧ್ಯಯನ ಕೇಂದ್ರ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೂರು

ಪ್ರೊ|| ನಂಜುಂಡ ಪಿ.
ಸಂಚಾಲಕರು, ಅಂಬೇಡ್ಕರ್ ಅಧ್ಯಯನ ಕೇಂದ್ರ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ

ಡಾ. ಪೂರ್ಣಿಮಾ ಜಿ.ಆರ್.
ರಾಜ್ಯಶಾಸ್ತ್ರ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ

ಪ್ರೊ|| ಸುರೇಶ್‌ಕುಮಾರ ಎಂ.ಎಸ್.
ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಡ್ಡಬಳ್ಳಾಪುರ

ಪ್ರೊ|| ಚೆಲುವರಾಜು
ಮುಖ್ಯಸ್ಥರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೂರು



ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು

ಹಾಗೂ

ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳ
ಗಾಂಧೀ ಅಧ್ಯಯನ ಕೇಂದ್ರಗಳು
ಹಾಗೂ
ಅಂಬೇಡ್ಕರ್ ಅಧ್ಯಯನ ಕೇಂದ್ರಗಳ
ಸಂಯುಕ್ತ ಆಶ್ರಯದಲ್ಲಿ

ಡಾ|| ಬಿ.ಆರ್.ಅಂಬೇಡ್ಕರ್‌ರವರ 126ನೇ ಜಯಂತಿ ಆಚರಣೆ ಪ್ರಯುಕ್ತ

ಆರೋಗ್ಯಕರ ಸಮಾಜಕ್ಕೆ ಬುದ್ಧ, ಬಸವ, ಗಾಂಧೀ ಮತ್ತು ಅಂಬೇಡ್ಕರ್ ವಿಚಾರಗಳ ಕೊಡುಗೆ ಕುರಿತು

ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ

ದಿನಾಂಕ
20–4–2017 ಗುರುವಾರ

ಸ್ಥಳ

ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು
(ಶಿವಾನಂದ ಸ್ಟೋರ್ಸ್ ಸರ್ಕಲ್ ಬಳಿ)

ಇಂದೇ
ನೋಂದಾಯಿಸಿಕೊಳ್ಳಿ
ವಿಚಾರ ಸಂಕಿರಣದಲ್ಲಿ
ಪಾಲುಗೊಳ್ಳಿ

ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ಲೋಕ ಚಿಂತಕರು

ಲೇಖನಗಳ ಸಂಗ್ರಹ

ಪ್ರಧಾನ ಸಂಪಾದಕರು :
ಡಾ. ವೂಡೇ ಪಿ. ಕೃಷ್ಣ

ಕಾರ್ಯನಿರ್ವಾಹಕ ಸಂಪಾದಕರು :
ಇಂದಿರಾ ಕೃಷ್ಣಪ್ಪ


ಸಹ ಸಂಪಾದಕರು :
ಡಾ. ಗಣನಾಥ ಶೆಟ್ಟಿ ಎಕ್ಕಾರು
ಮಂಗಳೂರು ವಿಜಯ
ಪ್ರೊ. ಜಗಧೀಶ. ನಡುವಿನಮಠ
ಡಾ. ಪೂರ್ಣಿಮಾ ಜಿ.ಆರ್.
ಪ್ರೊ. ಪಿ. ನಂಜುಂಡ

ಪ್ರಕಾಶಕರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

LOKA CHINTAKARU
Collected Articles
Published by **Karnataka Gandhi Smaraka Nidhi**
Gandhi Bhavana, Kumara Park East
Bengaluru - 560001
Phone : 080-22261967

ISBN NO : 978-1-63535-757-8

ಮೊದಲ ಮುದ್ರಣ	:	2018
ಪ್ರತಿಗಳು	:	1000
ಪುಟಗಳು	:	XVI + 268
ಬೆಲೆ	:	145/–
ಮುದ್ರಕರು	:	ಕ್ರಿಯೇಟಿವ್‌ಗೀಕ್ಸ್ ಯಾದವ ಕಾಲೇಜು ರಸ್ತೆ, ಮಾಧವನಗರ ಬೆಂಗಳೂರು – 560001 ದೂರವಾಣಿ : 080 40927049




ಅರ್ಪಣೆ

ಹಿರಿಯ ಗಾಂಧೀವಾದಿ ಹಾಗೂ
ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಮಾಜಿ ಕಾರ್ಯದರ್ಶಿಗಳು

ಕೆ.ಎಸ್. ನಾರಾಯಣಸ್ವಾಮಿ ಅವರಿಗೆ

(1981–1986)

ಗೌರವಪೂರ್ವಕವಾಗಿ



ಸತ್ಯ ಮತ್ತು ಅಹಿಂಸೆಗಳು ವ್ಯಕ್ತಿಗಳ ಆಚರಣೆಗೆ ಮಾತ್ರವೇ ಅಲ್ಲದೆ, ಗುಂಪುಗಳ, ಸಮಾಜಗಳ ಮತ್ತು ಜನಾಂಗಗಳ ಆಚರಣೆಗೂ ಬರುವಂತೆ ಮಾಡಬೇಕು. ನನ್ನ ಮಟ್ಟಿಗೆ ಅದೇ ಉದ್ದೇಶವಾಗಿದೆ. ಅದರ ಸಲುವಾಗಿಯೇ ನಾನು ಬದುಕಿದ್ದೇನೆ. ಅದನ್ನು ಸಾಧಿಸುವ ಪ್ರಯತ್ನದಲ್ಲಿ ಪ್ರಾಣ ಕೊಡಲಿಕ್ಕೂ ಸಿದ್ಧನಾಗಿದ್ದೇನೆ. ನನ್ನ ಶ್ರದ್ಧೆಯ ದಿನ ದಿನವೂ ನನಗೆ ಹೊಸ ಸತ್ಯಗಳನ್ನು ನೋಡಲು ನೆರವಾಗುತ್ತಿದೆ. ಅಹಿಂಸೆಯು ಆತ್ಮನ ಗುಣ; ಆದ್ದರಿಂದಲೇ ಜೀವನದ ಎಲ್ಲ ವ್ಯವಹಾರಗಳಲ್ಲಿಯೂ ಎಲ್ಲರಿಂದಲೂ ಅದು ಆಚರಣೆಯಲ್ಲಿ ತರಲ್ಪಡಬೇಕು. ಎಲ್ಲ ವ್ಯವಹಾರಗಳಲ್ಲಿಯೂ ಅದು ಆಚರಿಸಲ್ಪಡಲು ಬಾರದಿದ್ದರೆ, ಅದಕ್ಕೆ ವ್ಯಾವಹಾರಿಕವಾಗಿ ಬೆಲೆ ಇರುವುದಿಲ್ಲ.

– ಮಹಾತ್ಮ ಗಾಂಧೀ

ಮೊದಲ ಮಾತು

ಬಾ ಮತ್ತು ಬಾಪು 150ನೇ ವರ್ಷಾಚರಣೆ ಸಂದರ್ಭದ ಬಾಪೂಜಿ ಅವರ ದಿನಾಚರಣೆಯಂದು 'ಲೋಕ ಚಿಂತಕರು' ಕೃತಿಯನ್ನು ಪ್ರಕಟಿಸಲು ಸಂತೋಷವಾಗಿದೆ. ಗಾಂಧೀ ಭವನದಿಂದ ಈ ವರ್ಷಾಚರಣೆ ಪುಸ್ತಕ ಮಾಲಿಕೆಯ ಏಳನೆಯ ಪುಸ್ತಕವಾಗಿ ಈ ಕೃತಿ ಲೋಕಾರ್ಪಣೆಗೊಳ್ಳುತ್ತಿದೆ. ರಾಜ್ಯ ಪ್ರಥಮ ದರ್ಜೆ ಕಾಲೇಜು ಅಧ್ಯಾಪಕರುಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಂದ ಲೇಖನಗಳನ್ನು ಬರೆಯಿಸಿ, ಕೃತಿರೂಪದಲ್ಲಿ ಕ್ರೋಢೀಕರಣ ಮಾಡಿದ, ಅಂದಿನ ವಿಚಾರ ಸಂಕಿರಣ ಸಮಿತಿಯ ಎಲ್ಲಾ ಸದಸ್ಯರು ಮತ್ತು ಸಂಚಾಲಕರುಗಳಾಗಿದ್ದ, ಮಂಗಳೂರು ವಿಜಯ, ಪ್ರೊ. ಜಗಧೀಶ. ನಡುವಿನಮಠ, ಡಾ. ಪೂರ್ಣಿಮಾ, ಪ್ರೊ. ನಂಜುಂಡ ಅವರ ಆಸಕ್ತಿ ಮತ್ತು ಶ್ರಮಕ್ಕೆ ನಾನು ಅಭಾರಿಯಾಗಿದ್ದೇನೆ.

ಭಾರತದ ರಾಷ್ಟ್ರ ನಿರ್ಮಾಪಕರು, ದಾರ್ಶನಿಕರು ಮತ್ತು ಮಾನವೀಯತೆಯ ಸಾಕಾರ ಸ್ವರೂಪರಾದ, ಬುದ್ಧ, ಬಸವಣ್ಣ, ಮಹಾತ್ಮ ಗಾಂಧಿ ಮತ್ತು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳನ್ನು ನಮ್ಮ ಯುವಜನರಲ್ಲಿ ಒಡಮೂಡಿಸಲು ಸದಾ ಕಾರ್ಯತತ್ಪರಾಗಿರುತ್ತಿದ್ದ, ಗಾಂಧೀ ಭವನದ ಹಿಂದಿನ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯ ಅವರ ಆಶಯದ ಭಾರತರತ್ನ ಡಾ. ಅಂಬೇಡ್ಕರ್ ಅವರ 126ನೇ ಜನುಮ ದಿನಾಚರಣೆ ಅರ್ಥಪೂರ್ಣವಾಗಿ ಆಚರಿಸುವುದಾಗಿತ್ತು. ಆದರೆ ಅವರ ಅಕಾಲಿಕ ನಿಧನದಿಂದ, ನಮ್ಮಲ್ಲಿ ಶೋಕ ಮಡುಗಟ್ಟಿದ್ದರೂ, ಅವರ ಆಶಯಗಳನ್ನು ಅನುಷ್ಠಾನಗೊಳಿಸುವುದರ ಮುಖಾಂತರ ಅವರಿಗೆ ಗೌರವ ಸಲ್ಲಿಸಬೇಕೆಂದು ದಿನಾಂಕ 20.04.2017ರಂದು ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರ 126ನೇ ಜನುಮ ದಿನಾಚರಣೆ ಎಂದಿನಂತೆ ಆಯೋಜಿಸಲಾಯಿತು. ಈ ಕಾರ್ಯಕ್ರಮದ ಆಯೋಜನೆಯಲ್ಲಿ ಮಹತ್ವದ ಪಾತ್ರವಹಿಸಿದ ಪ್ರೊ. ಶಿವರಾಜು, ಉಪಾಧ್ಯಕ್ಷರು ಮತ್ತು ನಮ್ಮೆಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರುಗಳಿಗೆ ನಾನು ಹೃತ್ಪೂರ್ವಕ ವಂದನೆಗಳನ್ನು ತಿಳಿಸುತ್ತೇನೆ. ಈ ಕಾರ್ಯಕ್ರಮದ ಸಹಭಾಗಿತ್ವವಹಿಸಿದ, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟಿನ ಮ್ಯಾನೇಜಿಂಗ್ ಟ್ರಸ್ಟಿಗಳಾದ

ಶ್ರೀಮತಿ ಇಂದಿರಾ ಕೃಷ್ಣಪ್ಪ, ರುದ್ರಪ್ಪ ಹನಗವಾಡಿ, ಮಾವಳ್ಳಿ ಶಂಕರ್ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಸಂಪರ್ಕಾಧಿಕಾರಿಗಳಾದ ಡಾ. ಗಣನಾಥ ಶೆಟ್ಟಿ ಎಕ್ಕಾರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರಿಗೆ ಆತ್ಮೀಯ ನಮನಗಳು.

ವಿಶ್ವದ ಶಾಂತಿ ಸೌಹಾರ್ದತೆಯ ತಾಯಿಬೇರಿನ ಬೆಸುಗೆಯನ್ನು ತಮ್ಮ ವಿಚಾರಧಾರೆಗಳು ಮತ್ತು ತತ್ವ ಸಿದ್ಧಾಂತಗಳ ಮೂಲಕ ಇಂದಿಗೂ ಬೆಸೆಯುತ್ತಿರುವ 'ಲೋಕ ಚಿಂತಕರ' ಚಿಂತನೆಗಳನ್ನು ಕೃತಿ ರೂಪದಲ್ಲಿ ಪ್ರಕಟಿಸಲು ಅತ್ಯಂತ ಶ್ರಮವಹಿಸಿದ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀಮತಿ ಇಂದಿರಾ ಕೃಷ್ಣಪ್ಪ ಇವರಿಗೆ ನಾನು ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಲೋಕ ಚಿಂತಕರ ಜ್ಞಾನಪ್ರಭೆಯಿಂದ ಅವರ ಮಾರ್ಗದರ್ಶನದಿಂದ ಬಹು ಸಂಸ್ಕೃತಿಯ ನಮ್ಮ ಭಾರತ ದೇಶ ವಿಶ್ವ ಮನ್ನಣೆಗೆ ಪಾತ್ರವಾಗಲು ಸಕಾರಣವಾಗಿರುವ ಅಂಶವನ್ನು ನಮ್ಮ ಯುವಜನರ ಮನದಲ್ಲಿ ಒಡಮೂಡಿಸಲು ಮತ್ತು ಸೌಹಾರ್ದಯುತ ಸಹಬಾಳ್ವೆಯ ಆಶಯದ ಈ ಕೃತಿ ಗಾಂಧೀ ಭವನದ ಘನತೆಯನ್ನು ಉನ್ನತೀಕರಿಸಿದೆ ಎಂದು ನಾನು ಪರಿಭಾವಿಸುತ್ತೇನೆ.

ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕ.ಗಾಂ.ಸ್ಮಾ.ನಿ.

ನಿಮ್ಮೊಂದಿಗೆ

ಬಾ ಮತ್ತು ಬಾಪು 150ನೇ ವರ್ಷಾಚರಣೆಯ ಸುಸಂದರ್ಭದಲ್ಲಿ ಬುದ್ಧ ಬಸವ, ಗಾಂಧಿ ಮತ್ತು ಅಂಬೇಡ್ಕರ್ ಅವರ ವಿಚಾರಧಾರೆಗಳ ಕುರಿತಾದ 'ಲೋಕ ಚಿಂತಕರು' ಕೃತಿಯನ್ನು ಪ್ರಕಟಿಸಲು ಹರ್ಷವಾಗುತ್ತದೆ. ಈ ಕೃತಿಯನ್ನು ಹೊರತರಲು ಕಾರಣವಾದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಸ್ಮರಿಸುವುದು ಔಚಿತ್ಯಪೂರ್ಣವಾಗುತ್ತದೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್ ರಾಷ್ಟ್ರೀಯ ಸೇವಾ ಯೋಜನೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯದ ಪ್ರಥಮ ದರ್ಜೆ ಕಾಲೇಜು, ಗಾಂಧೀ ಅಧ್ಯಯನ ಕೇಂದ್ರ ಮತ್ತು ಅಂಬೇಡ್ಕರ್ ಅಧ್ಯಯನ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ 126ನೇ ಜನುಮ ದಿನಾಚರಣೆ ಪ್ರಯುಕ್ತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಗಾಂಧಿ ಭವನದಲ್ಲಿ ದಿನಾಂಕ 20.04.2017ರಂದು ಆಯೋಜಿಸಲಾಗಿತ್ತು. ಈ ವಿಚಾರ ಸಂಕಿರಣದ ಪ್ರಮುಖ ಧ್ಯೇಯ "ಆರೋಗ್ಯಕರ ಸಮಾಜಕ್ಕಾಗಿ ಬುದ್ಧ, ಬಸವ, ಗಾಂಧಿ ಮತ್ತು ಅಂಬೇಡ್ಕರ್ ಅವರ ವಿಚಾರಗಳ ಕೊಡುಗೆ" ಎಂಬುದಾಗಿತ್ತು.

ಈ ಕಾರ್ಯಕ್ರಮದ ಪೂರ್ವಭಾವಿಯಾಗಿ ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರುಗಳಿಂದ 'ಲೋಕ ಚಿಂತಕರು' ವಿಚಾರಧಾರೆಗಳ ಕುರಿತಾದ ಲೇಖನಗಳನ್ನು (ದಿ.05.04.2017ರೊಳಗೆ) ಆಹ್ವಾನಿಸಲಾಗಿತ್ತು. ಹಾಗೆ ಬಂದ ಲೇಖನಗಳ ಗುಣಮಟ್ಟವನ್ನಾಧರಿಸಿ, ಪ್ರಕಟಣೆಗೆ ಅರ್ಹವಾದವುಗಳನ್ನು ಆಯ್ಕೆ ಮಾಡಲು ಅಂದಿನ ಅಧ್ಯಕ್ಷರಾದ ಡಾ.ಹೊ. ಶ್ರೀನಿವಾಸಯ್ಯ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ವಿಚಾರ ಸಂಕಿರಣ ಸಮಿತಿಯಲ್ಲಿ ಪ್ರೊ. ಜಗಧೀಶ ನಡುವಿನಮಠ, ಪ್ರೊ. ಬಿ.ಸಿ. ಶಿವಪ್ರಸಾದ್, ಪ್ರೊ. ಹನುಮಂತರಾಜು, ಪ್ರೊ. ನಂಜುಂಡ ಪಿ., ಡಾ. ಪೂರ್ಣಿಮಾ, ಪ್ರೊ. ಸುರೇಶ್ ಕುಮಾರ್, ಪ್ರೊ. ಚೆಲುವರಾಜು ಅವರುಗಳು ಸದಸ್ಯರಾಗಿದ್ದರು.

ಹೀಗೆ ಈ ಕಾರ್ಯಕ್ರಮದ ಆಯೋಜನೆಯಲ್ಲಿ ಅತ್ಯುತ್ಸಾಹದಿಂದ ಭಾಗಿಗಳಾಗಿದ್ದ ಅಂದಿನ ಅಧ್ಯಕ್ಷರಾಗಿದ್ದ ಡಾ. ಹೊ. ಶ್ರೀನಿವಾಸಯ್ಯ ಅವರು ಅಕಾಲಿಕವಾಗಿ ಕಾಲವಶರಾದರು. ಹೀಗಿದ್ದೂ ಗಾಂಧಿ ಭವನದ ಕಾರ್ಯ ಯೋಜನೆಗಳನ್ನು ಯಥಾವತ್ ಮುಂದುವರಿಸುವ ನಿಟ್ಟಿನಲ್ಲಿ ದುಃಖದ ನಡುವಿನಲ್ಲೂ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಡಾ. ವೂಡೇ ಪಿ. ಕೃಷ್ಣ ಅವರು ಈ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ಆಯೋಜಿಸಿದರು ಮತ್ತು 'ಲೋಕ ಚಿಂತಕರು' ಕುರಿತಾದ ಗ್ರಂಥವನ್ನು ಪ್ರಕಟಿಸುವ

ಜವಾಬ್ದಾರಿಯನ್ನು ಉಪಾಧ್ಯಕ್ಷರಾದ ಪ್ರೊ. ಶಿವರಾಜು, ಸಹ ಕಾರ್ಯದರ್ಶಿಗಳಾದ ಮಂಗಳೂರು ವಿಜಯ ಹಾಗೂ ವಿಚಾರ ಸಂಕಿರಣ ಸಮಿತಿಯ ಸದಸ್ಯರುಗಳಿಗೆ ವಹಿಸಿದ್ದರು. ಅದರಂತೆ ಸದಸ್ಯರುಗಳಾದ ಪ್ರೊ. ಜಗಧೀಶ ನಡುವಿನಮತ, ಡಾ. ಪೂರ್ಣಿಮಾ ಜಿ.ಆರ್., ಪ್ರೊ. ನಂಜುಂಡ ಪಿ. ಹಾಗು ಮಂಗಳೂರು ವಿಜಯ ಇವರು ರಾಜ್ಯದ ಪ್ರಥಮ ದರ್ಜೆ ಕಾಲೇಜು ಅಧ್ಯಾಪಕರುಗಳಿಂದ ಬಂದಿದ್ದ ನೂರಾರು ಲೇಖನಗಳಲ್ಲಿ ಗುಣಮಟ್ಟದ ಅರ್ಹ 54 ಲೇಖನಗಳನ್ನು ಆಯ್ಕೆ ಮಾಡಿ ಪ್ರಕಟಣೆಗೆ ಸಿದ್ಧಗೊಳಿಸಿದರು. ಹಾಗೆ ಸಜ್ಜುಗೊಂಡ ಲೇಖನ ಮಾಲೆಯು ಬಾ ಮತ್ತು ಬಾಪು 150ರ ವರ್ಷಾಚರಣೆಯ ಸಂದರ್ಭದ ಬಾಪೂಜಿ ಅವರ ಜನುಮ ದಿನಾಚರಣೆ ದಿನಾಂಕ 02.10.2018ರ ಅತ್ಯಪೂರ್ವ ದಿನದಂದು ಲೋಕಾರ್ಪಣೆಗೊಳ್ಳುತ್ತಿರುವುದು ಗಾಂಧಿ ಭವನಕ್ಕೆ ಹೆಮ್ಮೆಯ ವಿಚಾರವಾಗಿದೆ.

ಈ ಕೃತಿಯನ್ನು ಪ್ರಕಟಣೆಗೆ ಸಿದ್ಧಗೊಳಿಸಿದ ಆಯ್ಕೆ ಸಮಿತಿಯ ಎಲ್ಲಾ ಸದಸ್ಯರು ಮತ್ತು ಗಾಂಧಿ ಭವನದ ಸಿಬ್ಬಂದಿ ವರ್ಗದವರು ಈ ಅಪೂರ್ವ ಕಾರ್ಯದಲ್ಲಿ ಸಹಭಾಗಿಗಳಾಗುವ ಗೌರವಕ್ಕೆ ಪಾತ್ರರಾಗಿದ್ದಾರೆ. 'ಲೋಕ ಚಿಂತಕರು' ಕೃತಿಯಲ್ಲಿನ ಲೇಖನಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕ/ಲೇಖಕಿಯರು ಅವರ ಜೀವಮಾನದಲ್ಲಿ ಒಮ್ಮೆ ಮಾತ್ರ ಲಭ್ಯವಾಗುವ ಬಾ ಮತ್ತು ಬಾಪುವಿನ 150ನೇ ವರ್ಷಾಚರಣೆಯ ಸರ್ವೋತ್ಕೃಷ್ಟ ದಿನದಂದು ಅವರ ಬರಹಗಳು ಕೃತಿರೂಪದಲ್ಲಿ ಲೋಕಾರ್ಪಣೆಗೊಂಡ ಅಪೂರ್ವ ಕ್ಷಣಗಳ ಸುವರ್ಣಾವಕಾಶ ಪಡೆದಿದ್ದಾರೆ. ಈ ಗ್ರಂಥದ ಪ್ರಕಟಣಾ ಸಮಿತಿಯ ಪ್ರಧಾನ ಸಂಪಾದಕರಾದ ಡಾ. ವೂಡೇ ಪಿ. ಕೃಷ್ಣ ಅವರು ಮತ್ತು ಸಹ ಸಂಪಾದಕರಾದ ಮಂಗಳೂರು ವಿಜಯ ಪ್ರೊ. ಜಗಧೀಶ. ನಡುವಿನಮತ, ಡಾ. ಪೂರ್ಣಿಮಾ, ಪ್ರೊ. ಪಿ. ನಂಜುಂಡ ಇವರುಗಳು ಈ ಅನುಪಮ ದಿನದಂದು ಕೃತಿ ಪ್ರಕಟಗೊಳ್ಳಲು ಎಲ್ಲಾ ರೀತಿಯ ಸಹಕಾರ ನೀಡಿರುವುದಕ್ಕೆ ಅವರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಕೃತಿಯು ಪ್ರಕಟಗೊಳ್ಳಲು ಕಾರಣವಾದ ಮೂಲ ವೇದಿಕೆಯ ಸ್ಮರಣೆ ಸಕಾಲಿಕವೆಂದು ಭಾವಿಸಿದ್ದೇನೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಜನುಮದಿನವನ್ನು ವಿಶ್ವದಾದ್ಯಂತ "ವಿಶ್ವ ಜ್ಞಾನದಿನ"ವಾಗಿ ಆಚರಿಸಲು ವಿಶ್ವಸಂಸ್ಥೆ ಅವರು ಘೋಷಿಸಿರುವುದು, ಭಾರತಕ್ಕೆ ಘನತೆಯನ್ನು ತಂದಂಥ ವಿಚಾರವಾಗಿದೆ. ಅಂಥಹ ಲೋಕಮಾನ್ಯರಾದ ಭಾರತ ರತ್ನ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನುಮ ದಿನಾಚರಣೆಯನ್ನು ಗಾಂಧಿ ಭವನದಲ್ಲಿ "ರಾಷ್ಟ್ರೀಯ ವಿಚಾರ ಸಂಕಿರಣ"ದ ಸ್ವರೂಪದಲ್ಲಿ ಆಚರಣೆಗೆ ಸನ್ನದ್ಧಗೊಳಿಸಿದ, ಉಪಾಧ್ಯಕ್ಷರಾದ ಪ್ರೊ. ಜಿ.ಬಿ. ಶಿವರಾಜು ಅವರು ಮತ್ತು ವಿ.ಎಸ್. ತಿಪ್ಪನಗೌಡ ಅವರು ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕವಾದ ಅಭಿನಂದನೆಗಳು ಸಲ್ಲುತ್ತವೆ.

ಅಂದಿನ ವಿಚಾರ ಸಂಕಿರಣದ ಪ್ರಮುಖ ಧ್ಯೇಯವಾದ "ಆರೋಗ್ಯಕರ ಸಮಾಜಕ್ಕಾಗಿ ಬುದ್ಧ, ಬಸವ, ಗಾಂಧಿ ಮತ್ತು ಅಂಬೇಡ್ಕರರ ವಿಚರಗಳ ಕೊಡುಗೆ" ಅನುಸಾರವಾಗಿ ವಿಚಾರ ಸಂಕಿರಣಕ್ಕೆ ಸಕಲ ರೀತಿಯಲ್ಲಿ ನೆರವು ನೀಡಿದ ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್‌ನ, ಮ್ಯಾನೇಜಿಂಗ್ ಟ್ರಸ್ಟಿಗಳಾದ ಇಂದಿರಾ ಕೃಷ್ಣಪ್ಪ, ಟ್ರಸ್ಟಿಗಳಾದ ರುದ್ರಪ್ಪ ಹನಗವಾಡಿ, ಮಾವಳ್ಳಿ ಶಂಕರ್, ಆರ್. ನಾಗರಾಜ್ ಮತ್ತೆಲ್ಲಾ ಟ್ರಸ್ಟಿಗಳಿಗೂ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಸಂಪರ್ಕಾಧಿಕಾರಿಗಳಾದ ಡಾ. ಗಣನಾಥ ಶೆಟ್ಟಿ ಎಕ್ಕಾರು ಅವರು ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಎಲ್ಲಾ ಪದಾಧಿಕಾರಿಗಳಿಗೂ ಹಾಗೂ ರಾಜ್ಯ ಪ್ರಥಮ ದರ್ಜೆ ಕಾಲೇಜುಗಳು, ಗಾಂಧೀ ಅಧ್ಯಯನ ಕೇಂದ್ರಗಳು ಮತ್ತು ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಸಂಯೋಜಕರುಗಳಿಗೂ ಆತ್ಮೀಯ ನಮನಗಳನ್ನು ಸಲ್ಲಿಸುತ್ತೇನೆ.

ಅಂದಿನ ವಿಚಾರ ಸಂಕಿರಣದಲ್ಲಿ ಬಹುತ್ವದ ಭಾರತೀಯ ಸಮಾಜದ ಪ್ರಜೆಗಳ ಮನಸ್ಸುಗಳನ್ನು ಬೆಸೆಯುವ ಭಾರತವನ್ನು ಸರ್ವ ಜನಾಂಗದ ತೋಟವಾಗಿಸಿದ ರಾಷ್ಟ್ರ ನಿರ್ಮಾಪಕರಾದ ಬುದ್ಧ, ಬಸವಣ್ಣ, ಗಾಂಧಿ ಮತ್ತು ಅಂಬೇಡ್ಕರ್ ಅವರ ಆಶಯ ತತ್ವ ಸಿದ್ಧಾಂತ, ವಿಚಾರ ಧಾರೆಗಳನ್ನು ಮಂಡಿಸಿದ ವಿಷಯ ತಜ್ಞರು, ಚಿಂತಕರು ಮತ್ತು ಚಳುವಳಿಗಾರರು ಆಗಿರುವ ದಿನೇಶ್ ಅಮೀನ ಮಟ್ಟು, ರುದ್ರಪ್ಪ ಹನಗವಾಡಿ, ಮಾವಳ್ಳಿ ಶಂಕರ್, ಡಾ. ಗಣನಾಥಶೆಟ್ಟಿ ಎಕ್ಕಾರು, ಡಾ. ಸಿದ್ದಲಿಂಗಯ್ಯ, ರಂಜಾನ್ ದರ್ಗಾ ಡಾ. ಆರ್.ಕೆ. ರಮೇಶ್ ಬಾಬು, ಪ್ರೊ. ರವಿವರ್ಮಕುಮಾರ್, ಡಾ. ಮೀನಾ ದೇಶಪಾಂಡೆ, ಡಾ. ಜೀವನ್‌ಕುಮಾರ್, ಡಾ. ಮೂಡ್ನಕೂಡ ಚಿನ್ನಸ್ವಾಮಿ, ಇಂದಿರಾ ಕೃಷ್ಣಪ್ಪ, ಲಕ್ಷ್ಮೀನಾರಾಯಣ ನಾಗವಾರ ಅವರುಗಳಿಗೆ ಹಾರ್ದಿಕವಾದ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ವಿಚಾರ ಸಂಕಿರಣದ ವಿಚಾರಗಳನ್ನು ಸಚಿತ್ರವಾಗಿ ಪ್ರಕಟಿಸಿದ ಸಂಯುಕ್ತ ಕರ್ನಾಟಕ, ವಾರ್ತಾ ಭಾರತಿ ಮತ್ತು ಉದಯವಾಣಿ ಪತ್ರಿಕೆಗಳ ಸಂಪಾದಕರುಗಳಿಗೆ ಆದರದ ನಮಸ್ಕಾರಗಳು. ಈ ಕೃತಿಗೆ ಮುನ್ನುಡಿಯನ್ನು ಬರೆದು ಸಹಭಾಗಿಗಳಾದ ಪ್ರಧಾನ ಸಂಪಾದಕರಾದ ಗಾಂಧಿ ಭವನದ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರಿಗೆ ಆದರದ ಪ್ರಣಾಮಗಳು.

'ಲೋಕ ಚಿಂತಕರು' ಗ್ರಂಥವನ್ನು ಅತ್ಯಾಸಕ್ತಿಯಿಂದ ಅತ್ಯಪೂರ್ವವಾದ ಮುಖಪುಟ ವಿನ್ಯಾಸದೊಂದಿಗೆ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ನಮನಗಳು ಸಲ್ಲುತ್ತವೆ.

ಇಂದಿರಾ ಕೃಷ್ಣಪ್ಪ
ಗೌ. ಕಾರ್ಯದರ್ಶಿ
ಕ.ಗಾಂ.ಸ್ಮಾ.ನಿ.

ಆಶಯ ನುಡಿ

ಡಾ. ಬಿ.ಆರ್.ಅಂಬೇಡ್ಕರ್ ಅವರು ಭಾರತದಲ್ಲಿ ಸಮಾನತೆಯ ಸಿದ್ಧಾಂತವನ್ನು ಪ್ರತಿಪಾದಿಸಿದರು. ದಲಿತ ಮತ್ತು ಹಿಂದುಳಿದ ವರ್ಗದವರಲ್ಲಿ ಆತ್ಮಾಭಿಮಾನವನ್ನು ಮೂಡಿಸಿದವರು. ಭಾರತದ ಸಂವಿಧಾನದ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದರು. ಒಟ್ಟಿನಲ್ಲಿ ಅವರ ಸಿದ್ಧಾಂತಗಳು ಭಾರತದ ಸಾಮಾಜಿಕ ವ್ಯವಸ್ಥೆಯ ಮೇಲೆ ಮಹತ್ವದ ಪರಿಣಾಮವನ್ನು ಬೀರಿದೆ. ಇಂತಹ ಮಾನವತಾವಾದಿ ಆದರ್ಶಪ್ರಾಯರಾಗಿರುವ ಸಂವಿದಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಆದರ್ಶ, ಚಿಂತನೆ ಮತ್ತು ವಿಚಾರಗಳನ್ನು ಹಾಗೂ ಅವರ ಜೀವನ ಮೌಲ್ಯಗಳನ್ನು, ಇಂದಿನ ಯುವಪೀಳಿಗೆಯನ್ನು ಉತ್ತೇಜಿಸುವುದಕ್ಕಾಗಿ ವಿಚಾರಗೋಷ್ಠಿ, ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಅತ್ಯವಶ್ಯಕವಾಗಿರುತ್ತದೆ.

ಡಾ. ಬಿ.ಆರ್. ಅಂಬೇಡ್ಕರ್ ಅವರ ತಾತ್ವಿಕತೆಗಳನ್ನು ಇಂದಿನ ವಿದ್ಯಾರ್ಥಿಗಳಿಗೆ ತಿಳಿಸಿಕೊಡುವುದು ಇಂದು ಅನಿವಾರ್ಯವಾಗಿದೆ. ಅವರ ಹೋರಾಟ ಮತ್ತು ಸಿದ್ದಾಂತಗಳು ನೈಜವಾಗಿ ದೇಶದ ದಮನಿತರ ಬಗ್ಗೆ ಚಿಂತಿಸುವಂತೆ ಮಾಡುತ್ತದೆ. ಅಸ್ಪೃಶ್ಯತೆ ವಿರುದ್ದ ಅವರು ನಡೆಸಿದ ಹೋರಾಟ ಮತ್ತು ಅದನ್ನು ಚಾರಿತ್ರಿಕವಾಗಿ ವಿಶ್ಲೇಷಿಸುವ ಅವರ ಒಳನೋಟಗಳು ನಮ್ಮ ಸಮಾಜದಲ್ಲಿ ಇನ್ನೂ ಜೀವಂತವಾಗಿರುವ ಜಾತಿ ವ್ಯವಸ್ಥೆಯ ಬಗ್ಗೆ ಚಿಂತಿಸುವಂತೆ ಮಾಡುತ್ತದೆ. ಪ್ರಜಾಪ್ರಭುತ್ವದ ಕುರಿತಾದ ಅವರ ಚಿಂತನೆಯೇ ವಿಶಿಷ್ಟವಾದುದು. ಖಚಿತ ತಾತ್ವಿಕ ಹಿನ್ನೆಲೆಯಿದ್ದಾಗ ಹಿಂಸಾತ್ಮಕ ಹೋರಾಟವು ಅನಿವಾರ್ಯವಲ್ಲ ಎಂಬ ಅವರ ನಿಲುವು ಕ್ರಾಂತಿಯ ಕುರಿತಾದ ಹೊಸ ಚಿಂತನೆಯನ್ನು ರೂಪಿಸುತ್ತದೆ. ಭಾರತದ ಸಂವಿಧಾನವು ವಿಶ್ವದ ಶ್ರೇಷ್ಠ ಸಂವಿಧಾನವಾಗಲು ಅವರ ಚಿಂತನೆಗಳು ಮೂಲ ಕಾರಣವಾಗಿದೆ. ಈ ದೃಷ್ಟಿಯಿಂದ "ಸಂವಿದಾನ ಶಿಲ್ಪಿ" ಎಂದು ಜನಸಾಮಾನ್ಯರು ನೀಡಿದ ಬಿರುದು ಅರ್ಥಪೂರ್ಣವಾಗಿದೆ. ಈ ಎಲ್ಲ ದೃಷ್ಟಿಯಿಂದ 125ನೇ ಜನ್ಮ ದಿನಾಚರಣೆ ನೆಪದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ವಿದ್ಯಾರ್ಥಿ ಮಾನಸಕ್ಕೆ ಕೊಂಡೊಯ್ಯುವ ಕೈಂಕರ್ಯ ಇದಾಗಿದೆ.


ಮೇಲಿನ ವಿಚಾರದಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಕೋಶವು ಡಾ. ಬಿ.ಆರ್. ಅಂಬೇಡ್ಕರ್ ಅವರ ಉದಾತ್ತ ಧ್ಯೇಯಗಳ ಬಗ್ಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು 2016–17ನೇ ಸಾಲಿನ ಕ್ರಿಯಾಯೋಜನೆಯಲ್ಲಿ ರೂ.15.00 ಲಕ್ಷಗಳನ್ನು

ಹಂಚಿಕೆ ಮಾಡಲಾಗಿದೆ. ಇದರಿಂದ ಒಟ್ಟು 15 ಕಾರ್ಯಕ್ರಮಗಳನ್ನು ರಾಜ್ಯದ ವಿವಿಧೆಡೆ ನಡೆಸಲಾಗಿದೆ. ಗಾಂಧೀ ಭವನದ ಸಹಾಯದೊಂದಿಗೆ ಈ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿದ್ದು, ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳು ಮತ್ತು ಸ್ವಯಂ ಸೇವಕರು ಈ ವಿಚಾರ ಸಂಕಿರಣದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಸಿದ್ಧಾಂತವನ್ನು ಯುವ ಮನಸಿಗೆ ತಲುಪಿಸುವಲ್ಲಿ ತಕ್ಕಮಟ್ಟಿನ ಯಶಸ್ಸನ್ನು ಪಡೆಯಲಾಗಿದೆ. ರಾಷ್ಟ್ರೀಯ ಸೇವಾ ಯೋಜನೆಯು ಮುಂದಿನ ದಿನಗಳಲ್ಲಿ ನಿರಂತರವಾಗಿ ಡಾ.ಬಿ.ಆರ್. ಅಂಬೇಡ್ಕರ್ ಪ್ರಚಾರ ಅಭಿಯಾನವನ್ನು ಹಮ್ಮಿಕೊಳ್ಳಲಾಗುವುದು.

ಡಾ. ಗಣನಾಥ ಶೆಟ್ಟಿ
ರಾಜ್ಯ ಎನ್.ಎಸ್.ಎಸ್. ಅಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ರಾಜ್ಯ ಪ್ರಥಮ ದರ್ಜೆ ಕಾಲೇಜುಗಳ ಗಾಂಧೀ ಅಧ್ಯಯನ ಕೇಂದ್ರ ಮತ್ತು ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ 126ನೇ ಜಯಂತಿಯನ್ನು ದಿ.20.04.2017ರಂದು ಆಚರಿಸಿದ ಸಂದರ್ಭದ ಪತ್ರಿಕಾ ವರದಿ

ಗಾಂಧಿ ದಲಿತ ವಿರೋಧಿಯಲ್ಲ: ಅಮೀನ್‌ಮಟ್ಟು



ಬೆಂಗಳೂರು, ಏ.20: ಬಹುಮುಖಿ ಆಯಾಮಗಳನ್ನು ಹೊಂದಿದ್ದ ಗಾಂಧಿಯನ್ನು ದಲಿತರು ಸೇರಿದಂತೆ ಎಲ್ಲ ಸಮುದಾಯದವರು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ಅವರನ್ನು ದಲಿತವಿರೋಧಿ ಎಂದು ಕಾಣುತ್ತಾರೆ. ಆದರೆ, ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರನ್ನೂ ಅವರ ಭಿನ್ನಾಭಿಪ್ರಾಯಗಳ ಮೂಲಕ ಅರಿಯುವ ಬದಲು ಸಹಮತ ಹೊಂದಿದ್ದ ವಿಚಾರಗಳ ಮೂಲಕ ಅರ್ಥ ಮಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್‌ಮಟ್ಟು ಅಭಿಪ್ರಾಯಪಟ್ಟರು.

ಗುರುವಾರ ನಗರದ ಗಾಂಧಿ ಭವನದಲ್ಲಿ ಗುರುವಾರ ಏರ್ಪಡಿಸಿದ್ದ 'ಆರೋಗ್ಯಕರ ಸಮಾಜಕ್ಕೆ ಬುದ್ಧ, ಬಸವ, ಗಾಂಧಿ ಮತ್ತು ಅಂಬೇಡ್ಕರ್ ವಿಚಾರಗಳ ಕೊಡುಗೆ' ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಹಿಂದೂ ಸಮಾಜದಲ್ಲಿನ ಅಸ್ಪೃಶ್ಯತೆ ಮತ್ತು ಅಪಮಾನವನ್ನು ಗಾಂಧೀಜಿ ತೀಕ್ಷ್ಣವಾಗಿ ವಿರೋಧಿಸುತ್ತಿದ್ದರು. ಪುನರ್ಜನ್ಮವೇನಾದರೂ ಇದ್ದರೆ ದಲಿತನಾಗಿ ಹುಟ್ಟಬೇಕೆಂಬ ಆಸೆ ಇದೆ ಎಂದು ಹೇಳಿದ್ದ ಗಾಂಧೀಜಿಯನ್ನು ದೇಶ ವಿಭಜಕ, ದಲಿತ ವಿರೋಧಿ ಎನ್ನುವಂತೆ ಬಿಂಬಿಸುವುದು ಸರಿಯಲ್ಲ ಎಂದ ಅವರು, ನಮ್ಮಲ್ಲಿ ಹೆಚ್ಚಿನ ದಲಿತರು ಗಾಂಧೀಜಿಯವರ ಬಗ್ಗೆ ಪೂರ್ವಗ್ರಹ ಹೊಂದಿದ್ದಾರೆ ಎಂದರು.

ಭಾರತದಲ್ಲಿ ಅಂಬೇಡ್ಕರ್‌ರನ್ನು ದಲಿತರಿಗೆ, ಬಸವಣ್ಣರನ್ನು ಲಿಂಗಾಯತರಿಗೆ ಹೀಗೆ ನಮ್ಮಲ್ಲಿನ ನಾಯಕರನ್ನು ಒಂದೊಂದು ಜನಾಂಗ ಅಥವಾ ಸಮುದಾಯದ ನಾಯಕರೆಂತೆ ಸೀಮಿತಗೊಳಿಸಲಾಗಿದೆ. ಹೀಗಾಗಿ ಅವರನ್ನೆಲ್ಲ ಪ್ರಶ್ನಿಸುವುದಾಗಲಿ, ಟೀಕಿಸುವುದಾಗಲಿ ಕಷ್ಟವಾಗಿದೆ. ಆದರೆ, ಯಾರ ಹಿಡಿತಕ್ಕೂ ಸಿಗದ ಗಾಂಧಿ ಬಗ್ಗೆ ಎಂಥದೇ ಟೀಕೆ ಮಾಡಿದರೂ ಯಾರೂ ಬೀದಿಗಿಳಿಯುವುದಿಲ್ಲ. ಇದು ಗಾಂಧೀಜಿಯ ಶಕ್ತಿಯನ್ನು ತೋರಿಸುತ್ತದೆ ಎಂದು ಅವರು ಹೇಳಿದರು.

ಬುದ್ಧ, ಬಸವ, ಗಾಂಧಿ ಮತ್ತು ಅಂಬೇಡ್ಕರ್ ಎಲ್ಲರೂ ನಿಜವಾದ ಪ್ರಜಾಪ್ರಭುತ್ವವಾದಿಗಳು. ಕೇವಲ ಒಬ್ಬರನ್ನು ಮಾತ್ರ ಅಧ್ಯಯನ ಮಾಡಿ ಎಲ್ಲರನ್ನು ವಿರೋಧಿಸುವುದು ಸರಿಯಲ್ಲ. ಎಲ್ಲರನ್ನೂ ಅಧ್ಯಯನ ಮಾಡಬೇಕು. ಆಗ ಮಾತ್ರ ದೇಶದ ಸಂಕೀರ್ಣತೆ ಅರ್ಥವಾಗುತ್ತದೆ. ಅಸ್ಪೃಶ್ಯತೆಯ ನಿವಾರಣೆ ಮತ್ತು ಹಿಂದೂ-ಮುಸ್ಲಿಂ ಐಕ್ಯತೆಯನ್ನು ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಬಯಸಿದ್ದರು ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ದಲಿತ ಮುಖಂಡ ಮಾವಳ್ಳಿ ಶಂಕರ್, ಇಂದಿಗೂ ದೇಶದ ಒಂದು ಬೀದಿಗೆ ಅಂಬೇಡ್ಕರ್ ಹೆಸರನ್ನು ಇಡುವುದು ಸುಲಭವಾಗಿಲ್ಲ. ದಲಿತ ವರ್ಗದ ಕೆಲಸಗಳೆಲ್ಲವೂ ಹೋರಾಟದ ಮೂಲಕವೇ ಆಗಬೇಕಾಗಿದೆ. ಮಾನವೀಯ ನೆಲೆಯ ಮೇಲೆ ಭಾರತವನ್ನು ಕಟ್ಟಬೇಕೆನ್ನುವ ಅವರ ಕನಸನ್ನು ನಾವೆಲ್ಲರೂ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಗಾಂಧಿ ಭವನದ ಅಧ್ಯಕ್ಷ ವೂಡೆ ಕೃಷ್ಣ, ದಲಿತ ಮುಖಂಡರಾದ [illegible], ಇಂದಿರಾ ಕೃಷ್ಣಪ್ಪ, ಮಂಗ್ಳೂರ ವಿಜಯ, ಪ್ರೊ.ಶಿವರಾಜು ಮುಂತಾದವರು ಉಪಸ್ಥಿತರಿದ್ದರು.



ಚಾಲನೆ...

ಗಾಂಧಿ ಭವನದಲ್ಲಿ ಗುರುವಾರ ಏರ್ಪಡಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಮುಖ್ಯಮಂತ್ರಿಗಳ ಮಾಧ್ಯಮ ಕಾರ್ಯದರ್ಶಿ ದಿನೇಶ್ ಅಮಿನ್ ಮಟ್ಟು ಚಾಲನೆ ನೀಡಿದರು.

ಪರಿವಿಡಿ

ಗಾಂಧಿ ತತ್ವಾನುಷ್ಠಾನದ ಪ್ರಸ್ತುತತೆ

ಡಾ. ಚಿಕ್ಕಚನ್ನಯ್ಯ

ಗಾಂಧಿವಾದವೆನ್ನುವುದು ಸದ್ವಿಚಾರಗಳ ಆಗರ. ಮಾನವನ ಆಧ್ಯಾತ್ಮಿಕ ಅತ್ಯುನ್ನತ ಚಿಂತನೆಗಳು ಗಾಂಧೀಜಿ ಅವರ ಮೂಲಕ ಪ್ರಕಟಗೊಂಡಿವೆ. ಭಾರತದ ಸ್ವಾತಂತ್ರ್ಯ ಚಳುವಳಿ ಗಾಂಧೀಜಿಗೆ ಇಂತಹ ಮೌಲ್ಯಗಳ ಅನುಷ್ಠಾನಕ್ಕೆ ಪ್ರಾಯೋಗಿಕ ಕರ್ಮಭೂಮಿಯಾಗಿತ್ತು. ಅವರ ಬದುಕೇ ಮಾನವ ಸಮಾಜದ ಅತ್ಯುನ್ನತ ಮೌಲ್ಯಗಳ ಸತ್ಯದರ್ಶನದಂತಿತ್ತು. ಅವರು ಸುಮಾರು 3000 ವರ್ಷಗಳ ಮಾನವ ಜೀವನದ ಆಧ್ಯಾತ್ಮಿಕ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳ ಅತ್ಯುನ್ನತ ಪರಂಪರೆಯನ್ನು ಪುನರುತ್ಥಾನಗೊಳಿಸುವ ಪ್ರಯತ್ನ ಮಾಡಿದರು. ಅವರು ಸತ್ಯಕ್ಕಾಗಿ ನಡೆಸಿದ ಪ್ರಯೋಗಗಳಲ್ಲಿ ಬುದ್ಧ, ಮಹಾವೀರ, ಯೇಸು, ಬಸವೇಶ್ವರ, ಚೈತನ್ಯ ಮುಂತಾದವರು ಬೋಧಿಸಿದ ತತ್ವಗಳ ಕಾರ್ಯಾನುಷ್ಠಾನದ ಸಾಧ್ಯತೆಗಳನ್ನು ಸ್ವತಃ ತೋರಿಸಿಕೊಟ್ಟರು. ಹಾಗಾಗಿ ಅವರೊಬ್ಬ "ಅನುಷ್ಠಾನ ತತ್ವದರ್ಶಿ." ಅವರ ಧ್ಯೇಯ ಮಾನವ ಕುಲದ ಅಭ್ಯುದಯವಾಗಿತ್ತು. ಮನುಷ್ಯಜಾತಿ ಸತ್ಯ-ಅಹಿಂಸೆಗಳ ಮೂಲಕ ಮಾತ್ರ ತನ್ನ ದೊಡ್ಡ ಗುರಿಯತ್ತ ಮುನ್ನಡೆಯುವುದು ಸಾಧ್ಯ ಎಂಬುದು ಅವರ ಪ್ರಬಲ ನಂಬಿಕೆಯಾಗಿತ್ತು. ದೈನಂದಿನ ಸತ್ಯದ ಅನ್ವೇಷಣೆ, ಪ್ರೇಮ, ಸೇವೆ, ಆತ್ಮವೇದನೆ ತ್ಯಾಗಗಳ ಮೂಲಕ ಅದನ್ನು ಊರ್ಜಿತಗೊಳಿಸುವುದು ಅವರ ಅತ್ಯಂತ ಅಸಾಧಾರಣ ಹಾಗೂ ಕ್ರಿಯಾಶೀಲ ಬದುಕಿನ ಪ್ರಜ್ಞೆಯಾಗಿತ್ತು. ಗಾಂಧೀಜಿಯರ ಪ್ರಜ್ಞೆ ವಿಶ್ವಪ್ರಜ್ಞೆಯ ಪ್ರತೀಕ. ಹೀಗಾಗಿ ವಿಶ್ವದ ಪ್ರತಿಯೊಂದು ರಾಷ್ಟ್ರ, ವ್ಯಕ್ತಿ, ಸಮಾಜಗಳು ಗಾಂಧೀ ವಿಚಾರಗಳನ್ನು ತಮ್ಮ ವಾಸ್ತವ ಬದುಕಿನಲ್ಲಿ ಉಪಯೋಗಿಸದೇ ಹೋದರೆ ವಿಶ್ವದಲ್ಲಿ ಶಾಂತಿ, ಸೌಹಾರ್ದ, ಸಂಯಮ, ತ್ಯಾಗ, ಸಹಕಾರ ಮತ್ತು ಸ್ನೇಹಯುತ ಸಂಬಂಧಗಳ ಸ್ಥಾಪನೆ ಅಸಾಧ್ಯವೇ ಸರಿ.

ಪ್ರಸ್ತುತ ದಿನಗಳಲ್ಲಿ ನಮ್ಮ ಸಮಾಜ, ದೇಶ ಅಥವ ವಿಶ್ವಕ್ಕೆ ಗಾಂಧೀವಾದದ ಅಗತ್ಯ. ಗಾಂಧೀ ತತ್ವಾನುಷ್ಠಾನದ ಬಗ್ಗೆ ಹೊಣೆ ಹೊರದೆ, ನಡೆಯುತ್ತಿರುವ ದಿನಮಾನಗಳಿವು. ಈ ದುರಂತ ಸಂದರ್ಭಗಳ ಬಗ್ಗೆ ಆತಂಕ ಕಾಡುತ್ತದೆ. ಗಾಂಧಿಯ ಜೊತೆಯಲ್ಲೇ ಭಗವದ್ಗೀತೆ, ಖುರಾನ್, ಬೈಬಲ್, ಜೆಂಡಾ ಆವೆಸ್ತಾದಂತ ಧಾರ್ಮಿಕ ಕೃತಿಗಳು ಸಹ ಪ್ರಯಾಣಿಕರಂತೆ ಇರುವಾಗ, ಬುದ್ಧ ಬಸವವಾದಿಗಳು ಅವರೊಡನೆ ನಿತ್ಯ ಸಂಭಾಷಿಸುವಾಗ ನಾವು ಗಾಂಧಿವಾದಕ್ಕೆ ಬೆನ್ನು ತಿರುಗಿಸಿ ನಡೆಯುವುದು ಎಷ್ಟು ಸೂಕ್ತ ಎಂಬ ಪ್ರಶ್ನೆ ಏಳುತ್ತದೆ.

ಬುದ್ಧ ಹೇಳಿದ ಅಹಿಂಸಾತತ್ವ, ಬಸವ ಹೇಳಿದ ಕುಲ–ಜಾತಿ–ವರ್ಣ–ಮೌಢ್ಯರಹಿತ, ಧರ್ಮ–ಶಾಸನಗಳು, ಭಗವದ್ಗೀತೆ ಸಾರಿದ ಕರ್ಮದ ಮಹತ್ವ ಉಪನಿಷತ್ತುಗಳು ಸಾರಿದ ಆಧ್ಯಾತ್ಮಿಕ ದಾರಿಗಳನ್ನು ಭಾರತೀಯರು ತಿರಸ್ಕರಿಸುವುದು ಎಷ್ಟು ಸೂಕ್ತ? ನಡೆ, ನುಡಿ, ಕಾಯಕ, ನೀತಿ, ಧರ್ಮಗಳು ಮಾನವ ಸಂಬಂಧ ಹಾಗೂ ಸಮಾಜದ ಆರೋಗ್ಯ ಮತ್ತು ಬಲವರ್ಧನೆಗೆ ಬೇಕು. ಇಂತಹ ಹೊತ್ತಿನಲ್ಲಿ ನಾವು ನಮ್ಮ ತಲ್ಲಣಗಳಿಗೆ ಸೂಕ್ತ ಉತ್ತರ ಹುಡುಕಲು ಗಾಂಧೀತತ್ವ ಆಶ್ರಯಿಸದೆ ವಿಧಿಯಿಲ್ಲ. ಜಾಗತಿಕವಾಗಿ ಜರುಗುತ್ತಿರುವ ಕೆಲ ಘಟನೆಗಳು, ಧರ್ಮಾಧಾರಿತ, ಭಯೋತ್ಪಾದಕತೆ, ಹಿಂಸೆಗಳು ಮಾನವ ಜನಾಂಗವನ್ನು ಗಾಂಧಿವಾದವನ್ನು ಆಶ್ರಯಿಸಲು ಒತ್ತಾಯಿಸುತ್ತವೆ.

ಬುದ್ಧನ ಅಹಿಂಸಾ ತತ್ವ ಅಷ್ಟಾಂಗ ಮಾರ್ಗಗಳು ಗಾಂಧೀ ಬದುಕಿನಲ್ಲಿ ಮಡುಗಟ್ಟಿದ್ದವು. ಅವರ ಪ್ರತಿ ನಡೆ ಚಿಂತನೆ ನುಡಿಗಳಲ್ಲಿ ನಾವು ಇದನ್ನು ಕಾಣಬಹುದಾಗಿತ್ತು. ಅವರ ಪ್ರತಿಯೊಂದು ಕಾರ್ಯಗಳ ಹಿಂದೆ ಸದುದ್ದೇಶ ಇರುತ್ತಿದ್ದವು. ಸಾರ್ವತ್ರಿಕ ಒಳಿತು ಅವರ ಆಶಯವಾಗಿತ್ತು. ಅದಕ್ಕಾಗಿ ಅವರು ಎಂತಹ ತ್ಯಾಗಕ್ಕೂ ಸಿದ್ದರಾಗಿದ್ದರು. ಯೇಸುವಿನ ಪಶ್ಚಾತಾಪ, ಪ್ರಾಯಶ್ಚಿತ ಕೂಡ ಅವರಲ್ಲಿ ಹಲವು ಸಂದರ್ಭಗಳಲ್ಲಿ ಪ್ರಕಟಗೊಂಡಿವೆ. ದೇಹವನ್ನು ದಂಡಿಸುವುದು, ಉಪವಾಸ, ಧ್ಯಾನ, ಯೋಗ ಇವರ ಬದುಕಿನಲ್ಲಿ ಹಾಸುಹೊಕ್ಕಾಗಿದ್ದವು. ಸತ್ಯವೇ ದೇವರು ದೇವರೇ ಸತ್ಯ, ಪ್ರೇಮ, ಬೆಳಕು ಎಂಬುದು ಇವರ ನಂಬಿಕೆ. ಅತೀವ ಶ್ರದ್ಧೆ ನಂಬಿಕೆಗಳ ಮೂಲಕವೇ ತಮ್ಮನ್ನು ತಾವು ಪ್ರಯೋಗಕ್ಕೆ ಒಳಪಡಿಸಿಕೊಂಡರು. ಅವರು ಹಾಕಿಕೊಂಡ ಗುರಿ ಮತ್ತು ಮಾರ್ಗಗಳ ನಡುವೆ ಸಮನ್ವಯತೆ ಇತ್ತು. ಅವೆರಡನ್ನೂ ಅವಿನಾಭಾವ, ಅವಿಚ್ಛೇದ ಸಂಬಂಧ ಆ ನಡೆಗಳ ಅವರ ಬದುಕೆ ಆಗಿದ್ದವು. ಗುರಿ ಮತ್ತು ಮಾರ್ಗ ಎಂಬ ಯುಕ್ತಿ ನೀತಿಶಾಸ್ತ್ರ ಮತ್ತು ನೈತಿಕ ನಡವಳಿಕೆಯಷ್ಟೇ ಹಳೆಯದು.

ಗಾಂಧೀ ಅವರ ಅಖಂಡ ಸ್ವರೂಪವನ್ನು ಸಹಜ ಪ್ರವೃತ್ತಿಯಿಂದ ಪರಿಗ್ರಹಿಸಿದರು. ಅವರ ದೃಷ್ಟಿಯಲ್ಲಿ ಗುರಿ ಒಳ್ಳೆಯದ್ದಾಗಿರಬೇಕು ಮಾತ್ರವಲ್ಲ ದಾರಿಯೂ ಅಷ್ಟೇ ಒಳ್ಳೆಯದಾಗಿರಬೇಕು. ಶ್ರೀಕೃಷ್ಣನ ಭಗವದ್ಗೀತೆ ಸಂದೇಶ ಗಾಂಧೀಜಿ ಅವರ ಚಿಂತನೆಗಳ ವಿರುದ್ಧವೆನಿಸುತ್ತದೆ. ಹಿಂಸೆಯನ್ನು ಸಕಾರಣಕ್ಕಾಗಿ ಸಮರ್ಥಿಸುವುದು ಕಾರ್ಯಕಾರಣ ಸಂಬಂಧ ಹುಡುಕುವುದನ್ನು ನೋಡಬಹುದು. ಭಗವಂತನ ಅಪೇಕ್ಷೆಯಂತೆ ಎಲ್ಲವೂ ನೆರವೇರುವುದು ಮನುಷ್ಯ ನೆಪಮಾತ್ರ ಎಂಬ ತರ್ಕ ಮುಂದೊಡ್ಡಿ ಮಾನವ ಚಿಂತನೆಯ ದಿಕ್ಕನ್ನು ಬದಲಿಸುವುದನ್ನೂ ಕಾಣಬಹುದು. ಎಲ್ಲವನ್ನೂ ಭಗವಂತನೆ ಮಾಡಿಸಬಹುದಾದರೇ ಮನುಷ್ಯನ ಕೆಲಸವೇನು? ಅಂದರೆ ಮೇಲೆ ಒಳಿತು ಕೆಡುಕುಗಳನ್ನು ತಾನೇ ಸೃಷ್ಟಿಸಿ ಅವತಾರವೆತ್ತುವ ಅಗತ್ಯವೂ ಕೂಡ ಇರುವುದಿಲ್ಲವೆನಿಸುತ್ತದೆ. ಗಾಳಿಯನ್ನು ಬಿತ್ತಿ ಬಿರುಗಾಳಿಯನ್ನು ಬೆಳೆಯುವುದರಲ್ಲಿ ಯಾವ ಪುರುಷಾರ್ಥವಿದೆ ಎಂಬ ಪ್ರಶ್ನೆ ಭಗವದ್ಗೀತೆಯ ಕೆಲವು ಭಾಗಗಳನ್ನು ಕುರಿತು ಹೇಳಬೇಕಾಗುತ್ತದೆ. ಒಳ್ಳೆಯ ಗುರಿಗಳನ್ನು ಕೆಟ್ಟ ಮಾರ್ಗಗಳಿಂದ ಸಾಧಿಸುವುದು ಕೆಟ್ಟ ಗುರಿಗಳನ್ನು ಒಳ್ಳೆಯ ಮಾರ್ಗಗಳನ್ನು

ಹಿಂಬಾಲಿಸಲಾರವು ಆದುದರಿಂದ ಮುಖ್ಯವಾದ ಒತ್ತು ಒಳ್ಳೆಯ ಮಾರ್ಗಗಳ ಮೇಲಿರಬೇಕು. ಗುರಿಗಳು ತಮ್ಮನ್ನು ತಾವು ನೋಡಿಕೊಳ್ಳುತ್ತವೆ ಹೀಗಾಗಿ ಮಾರ್ಗಗಳೇ ಗುರಿಗಳು ಮರ ಬೀಜದಂತೆ ಮಾತ್ರ ಇರುತ್ತದೆ, ಹಣ್ಣು ಮರದಂತೆ ಇರುತ್ತದೆ ಹಣ್ಣಿನಿಂದ ಮರವನ್ನು ಅರಿಯಬಹುದು ಎಂಬುದೇ ನಿಜವಾದ ಸೂಕ್ತಿ. ಪ್ರಕೃತಿಯ ಈ ಮನಗಾಣಿಸುವ ತರ್ಕವನ್ನು ಗಾಂಧೀಜಿ ಅವರು ಅಹಿಂಸಾ ತತ್ವದ ಮೂಲಕ ಬಲಗೊಳಿಸಿದರು.

ಇಂತಹ ಕಣ್ಮುಂದಿನ ಸತ್ಯ ನಮ್ಮ ಮುಂದಿದ್ದರೂ ಭಾರತೀಯರಾದ ನಾವು ಗಾಂಧೀವಾದವೆಂದರೆ ಹಳಸಲು ಗ್ರಹಿಸುವುದು ಹಾಗೂ ಗಾಂಧೀಜಿ ಅವರನ್ನೂ ರಾಷ್ಟ್ರೀಯತೆ, ದೇಶಭಕ್ತಿ, ವಿಚಾರಗಳನ್ನು ಉಗ್ರವಾಗಿ ಟೀಕಿಸುವುದು, ಈಗಲೂ ಮುಂದುವರಿದಿದೆ. ಭಾರತದ ಸ್ವತಂತ್ರ ಚಳುವಳಿಯ ಕೆಲವು ವಿಕೃತ ಫಲಿತಾಂಶಗಳಿಗೆ ಗಾಂಧೀಯೇ ನೇರ ಹೊಣೆಯೆಂಬಂತೆ ಕೆಲ ಸಂಘಟನೆಗಳ ಬಲವಾದ ನಂಬಿಕೆಯಿದೆ. ಹೀಗಾಗಿ ಉಗ್ರವಾದದ ಆವೇಶ, ಅಸಹನೆ, ಅನ್ಯಧರ್ಮಗಳ ನಿಂದನೆ, ತೀರ ಅತಿರೇಕವೆನಿಸುವಂತ ವರ್ತನೆಗಳು ಇತ್ತೀಚಿಗೆ ಕೇಳಿಬರುತ್ತಿದೆ. 'ರಾಷ್ಟ್ರಪಿತ' ಎಂದು ಒಪ್ಪಿಕೊಳ್ಳಲು ಹಿಂಜರಿಯುವ ಪ್ರವೃತ್ತಿ ಕೆಲವರಲ್ಲಿ ಇದೆ. ಇಂತವರಿಗೆ ಪವಾಡ ಪುರುಷರಲ್ಲೇ ಅತೀವ ನಂಬಿಕೆ ಶ್ರದ್ಧೆಯೇನೊ ಎಂದೂ ಅನಿಸುತ್ತದೆ.

ಭಾರತದ ಹಲವು ಸಮಸ್ಯೆಗಳಿಗೆ ಪರಿಹಾರ ರೂಪವಾಗಿ ನಾವು ಗಾಂಧೀ ಮಾರ್ಗವನ್ನು ಅನುಸರಿಸಲು ಹಿಂಜರಿಯುವುದೇಕೆ? ಹಿಂಸಾರೂಪವಾದ ನಮ್ಮ ನಡವಳಿಕೆ ಆಚರಣೆಗಳು ಆದಷ್ಟು ಪರಿಣಾಮಕಾರಿ ಫಲಿತಾಂಶ ತಂದು ಕೊಡಬಲ್ಲದು ಎಂಬುದನ್ನು ನಾವು ಈವತ್ತಿಗೂ ಪ್ರಶ್ನಿಸಿಕೊಳ್ಳದೇ ಇರುವುದು ಯಾಕೆ? ಭಾರತದ ನಿಜವಾದ ವ್ಯಕ್ತಿತ್ವವನ್ನು ಅವರ ಚಿಂತನೆಗಳ ಗ್ರಹಿಕೆಗಳನ್ನು ಇನ್ಯಾವ ನೆಲೆಗಳಲ್ಲಿ ಕಾಣಲು ಸಾಧ್ಯ. ಅದು ಗಾಂಧೀ ಮಾರ್ಗದಲ್ಲೇ ಘನೀಕರಿಸಿಕೊಂಡಿರುವುದನ್ನು ನಾವು ಒಪ್ಪಿಕೊಳ್ಳಲು ಸಿದ್ಧವಿಲ್ಲವಲ್ಲ ಎಂಬ ಆಂತಕ ಮತ್ತೊಂದು ರಕ್ತ ಸಿಕ್ತ ಭಾರತ ಚರಿತ್ರೆಯನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಈ ಎರಡೂ ತತ್ವಗಳ ಬೆಳವಣಿಗೆಗಳು ಭಾರತೀಯರನ್ನು ಅಹಿಂಸೆ ಉದ್ಧಟತನ, ಅತೀರೇಕದ ಅಪಾಯಗಳಿಗೆ ಕೊಂಡೊಯ್ಯಬಹುದು ಎಂಬ ಆಂತಕಗಳು ಕಾಡದೇ ಇರದು. ನಮ್ಮ ಸಾಮಾಜಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ವರ್ತನೆಗಳ ಮೇಲೆ ಈ ರಾಷ್ಟ್ರಗಳ ಬೆಳವಣಿಗೆಗಳು ಬೇರೊಂದು ರೀತಿಯ ರಾಷ್ಟ್ರೀಯ ಸಮಸ್ಯೆಗಳನ್ನು ತಂದೊಡ್ಡಬಹುದು.

ಭವಿಷ್ಯದ ನಂಬಿಕೆಗಳಿಗಿಂತ ಪ್ರಸ್ತುತ ಬೆಳವಣಿಗೆಗಳನ್ನು ನಮ್ಮ ಸರ್ಕಾರಗಳ ಕಾರ್ಯ ನೀತಿ, ವರ್ತನೆಗಳು ಗಾಂಧೀಮಾರ್ಗಕ್ಕೂ ವಿಚಾರ ನೆಲೆಯಲ್ಲಿ ಪರಿಸ್ಥಿತಿ ನಿಭಾಯಿಸಿಕೊಳ್ಳುವ ತೀರ್ಮಾನಗಳ ಮೇಲೆ ನಂಬಿಕೆ ಇರಿಸುವಂತಿದೆ. ಗಾಂಧೀಮಾರ್ಗ, ಗಾಂಧೀವಾದ ಸ್ವಾತಂತ್ರ್ಯ ಹೋರಾಟಗಳಿಗಿಂತಲೂ ಮಹತ್ವವಾದುದು ಹಾಗೂ ಒಂದು ದೇಶದ ಆತ್ಮಜಾಗೃತಿ ನಮ್ಮ ಪರಂಪರೆಯ ಸುದೀರ್ಘ ಅನುಭವಗಳನ್ನು ಜಾಗತಿಕ ಸಮಸ್ಯೆಗಳ ಸಂದರ್ಭಕ್ಕೆ ಸೂಕ್ತ ಶಾಶ್ವತ ಪರಿಹಾರವೊಂದನ್ನು ಶಾಂತಿ ಅಹಿಂಸಾ ತತ್ವಗಳ ಪ್ರಯೋಗಗಳ ಮೂಲಕ ತೋರಿಸಿಕೊಟ್ಟದ್ದು ಹೆಚ್ಚು ಮಹತ್ವವಾದುದೆಂದು ಹೇಳಬಹುದು.

ಗಾಂಧೀ ತತ್ವದ ಆಧುನಿಕ ಆಯಾಮಗಳು ಹಾಗೂ ಹೊಸ ತಲೆಮಾರಿನ ಕನ್ನಡ ಕಾವ್ಯ

ಚನ್ನರಾಜು ಎಂ.

ಹಲವು ಭಾಷೆ, ಸಂಸ್ಕೃತಿ, ಸಮುದಾಯಗಳು, ಬುಡಕಟ್ಟು, ಪ್ರಾದೇಶಿಕ ಹಾಗೂ ನೈಸರ್ಗಿಕ ವೈವಿಧ್ಯತೆಯನ್ನು ಹೊಂದಿದ ಭಾರತದಂಥ ದೇಶವು ಇಪ್ಪತ್ತೊಂದನೆಯ ಶತಮಾನದ ನಾಗರೀಕತೆಗೆ ಮಣೆ ಹಾಕಿರುವ ಈ ಕಾಲದಲ್ಲೂ, ಈ ಮಣ್ಣಿನಲ್ಲಿ ಚರಿತ್ರೆ ನಿರ್ಮಿಸಿರುವ ವ್ಯಕ್ತಿಗಳ ಚಿಂತನೆಯ ಕಡೆ ಹೊರಳುವುದು ಏಕೆ ಮುಖ್ಯವಾಗಿದೆ ಎಂಬುದು ಇಲ್ಲಿನ ಒಟ್ಟು ಚರ್ಚೆಯ ತಿರುಳಾಗಿದೆ.

ಜಗತ್ತಿಗೆ ಶಾಂತಿಯನ್ನು ಬೋಧಿಸಿ, ಅಹಿಂಸೆಯನ್ನು ಸಾರಿದ ನಾಡು ಎಂದು ಎಲ್ಲೆಡೆ ಮಾತು ಕೇಳುತ್ತಿದ್ದರೂ, ಈ ದೇಶಕ್ಕೆ ಮತ್ತೆ ಶಾಂತಿಯ, ಅಹಿಂಸೆಯ, ಸಮಾನತೆಯ ಪಾಠಗಳು ಎಂದಿಗಿಂತ ಇಂದು ಅವಶ್ಯವಿದೆ. ಬುದ್ಧನ ಶಾಂತಿ, ಬಸವನ ಸಮಾನತೆ, ಗಾಂಧಿಯ ಅಹಿಂಸೆ ಹಾಗೂ ಅಂಬೇಡ್ಕರ್‌ರ ಶೋಷಣೆ-ಅಸಮಾನತೆ ವಿರೋಧಿ ನಿಲವು, ಲೋಹಿಯಾ ಸಮಾಜವಾದ.. .. ಇತ್ಯಾದಿ ಎಲ್ಲವೂ ಇಂದಿನ ಪ್ರಪಂಚಕ್ಕೆ ಬೆಳಕಾಗಬೇಕಿದೆ. ಈ ಪ್ರಬಂಧದಲ್ಲಿ ಮುಖ್ಯವಾಗಿ ಮಹಾತ್ಮ ಗಾಂಧೀಜಿ ಅವರ ತತ್ವಗಳು, ಸಿದ್ಧಾಂತಗಳು ಅವುಗಳು ಪಡೆದುಕೊಳ್ಳುತ್ತಿರುವ ಆಧುನಿಕ ಆಯಾಮಗಳು ಮತ್ತು ಗಾಂಧಿ ವ್ಯಕ್ತಿತ್ವವನ್ನು ಇಪ್ಪತ್ತೊಂದನೆಯ ಶತಮಾನದ ಕನ್ನಡ ಕಾವ್ಯ ಗ್ರಹಿಸಿರುವ ಬಗೆಯನ್ನು ವಿಶ್ಲೇಷಿಸಲಾಗಿದೆ.

ಸ್ವತಂತ್ರ ಪೂರ್ವ ಭಾರತದಲ್ಲಿ ಹಿಂಸೆಯ ಮೂಲಕವೇ ಅಧಿಕಾರ ನಡೆಸುವ ಮತ್ತು ಸಮಾಜವನ್ನು ನಡೆಸುವ ಪದ್ಧತಿಯಿತ್ತು. ರಾಜ್ಯ ರಕ್ಷಣೆ, ವಿಸ್ತರಣೆ ಯಾವುದೇ ವಿಚಾರವಾದರೂ ಅದು ಯುದ್ಧದಿಂದಲೇ ಪ್ರಾರಂಭವಾಗಬೇಕಿತ್ತು. ಜನರ ವಿರೋಧಕ್ಕೆ, ಅಭಿವ್ಯಕ್ತಿಗೆ ಯಾವುದೇ ರೀತಿಯ ಅವಕಾಶ ಇರಲಿಲ್ಲ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಲೋಕದಲ್ಲಿ ದಿಗ್ಬಂಧನವಿತ್ತು. ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದು ಅಹಿಂಸೆಯ ಮೂಲಕ, ಶಾಂತಿಯುತ ಸತ್ಯಾಗ್ರಹ, ಉಪವಾಸದಂತಹ ಹೋರಾಟದ ತಂತ್ರಗಳು ಮೊದಲು ಭಾರತದಲ್ಲಿ ಪ್ರಾರಂಭವಾದದ್ದು ಮಹಾತ್ಮ ಗಾಂಧೀಜಿ ಅವರಿಂದ ಎಂದು ಹೇಳಬಹುದು. ಭಾರತದಲ್ಲಿ ಅಂದಿನ ವರೆಗೂ ವಸಾಹತುಶಾಹಿಯನ್ನು ವಿರೋಧಿಸಲು ಯುದ್ಧತಂತ್ರಗಳನ್ನೆ ಬಳಸಿದ್ದು ಕಂಡು ಬರುತ್ತದೆ. ಪ್ರಥಮ ಸ್ವಾತಂತ್ರ ಸಂಗ್ರಾಮ, ಹಲಗಲಿ

ಬೇಡರ ದಂಗೆ, ಕಿತ್ತೂರು ಹೋರಾಟಗಳನ್ನು ವಿಶ್ಲೇಷಿಸಿದರೆ ಇದನ್ನು ತಿಳಿಯಬಹುದು. ಆದರೆ ಗಾಂಧೀಜಿ, ಭಾರತದ ಹೋರಾಟದ ರೂಪಗಳಿಗೆ ಬಹುದೊಡ್ಡ ತಿರುವನ್ನು ನೀಡಿದರು.

ಗಾಂಧೀಜಿಯನ್ನು, 'ಸ್ವಾತಂತ್ರ ತಂದುಕೊಟ್ಟವರು, ಶಾಂತಿ–ಅಹಿಂಸೆಯ ಪರ್ಯಾಯ ಮಾರ್ಗ ನೀಡಿದವರು, ಸಹಬಾಳ್ವೆಯ ಮಂತ್ರ ಹೇಳಿಕೊಟ್ಟವರು' ಎಂದಷ್ಟೇ ಚರ್ಚೆ ಮಾಡುವುದು ಗಾಂಧೀ ಚಿಂತನೆಯನ್ನು ಸೀಮಿತ ನೋಟದ ಮೂಲಕ ಅರ್ಥೈಸಿಕೊಂಡಂತಾಗುತ್ತದೆ. ಗಾಂಧೀಜಿ ತಮ್ಮ 'ನಿರ್ವಸಾಹಿತೀಕರಣ ಚಿಂತನೆ'ಯಲ್ಲಿ "ಭಾರತದ ರಾಜಕೀಯ ಸ್ವಾತಂತ್ರಕ್ಕಿಂತ ಭೌತಿಕ ಮತ್ತು ಬೌದ್ಧಿಕ ಸ್ವಾತಂತ್ರದ ಅವಶ್ಯಕತೆ ಇದೆ" ಎಂಬುದನ್ನು ಅಂದೇ ಮನಗಾಣಿಸಿದ್ದರು. ಭಾರತದಂತಹ ಶ್ರಮ–ಸಂಸ್ಕೃತಿಯ ನಾಡಿನಲ್ಲಿ ಬೃಹತ್ ಉದ್ದಿಮೆಗಳು, ಯಂತ್ರ ನಾಗರೀಕತೆ ಸೃಷ್ಟಿಸುವ ದಾಸ್ಯ, ವರ್ಗ ತಾರತಮ್ಯ, ಸಂಪತ್ತಿನ ಕ್ರೋಢೀಕರಣ ಕುರಿತು ಹಾಗೂ ದೇಶೀ ಸಂಪ್ರದಾಯ ಮತ್ತು ಪರಂಪರೆಯಲ್ಲಿ ಉಳಿದುಕೊಂಡು ಬಂದಂತಹ ಹಲವು ಸಾಂಸ್ಕೃತಿಕ ಮತ್ತು ಸಾಮುದಾಯಿಕ ಕಲೆಗಳ ನಾಶ ಕುರಿತು ಅರಿವು ಮೂಡಿಸುವ ಕೆಲಸವನ್ನು ಗಾಂಧೀಜಿ ಮಾಡಿದರು. ಕೇವಲ ವಿಜ್ಞಾನ, ತಂತ್ರಜ್ಞಾನ, ಯಂತ್ರಗಳಿಂದ ಭಾರತದ ಅಭಿವೃದ್ಧಿಯನ್ನು ಸಾಧಿಸುವುದು ಅಸಾಧ್ಯ ಅಲ್ಲದೆ, ಅದು ಹೆಚ್ಚು ಹಾನಿಕರ ಎಂಬುದನ್ನು ಅವರು ಮಂಡಿಸಿದರು. ಭಾರತದಲ್ಲಿ ಕೈಮಗ್ಗಗಳಿದ್ದ ಸ್ಥಳದಲ್ಲಿ ಯಂತ್ರಗಳು ಬರುತ್ತಿರುವುದನ್ನು ಗಮನಿಸಿ, "ಯಂತ್ರಗಳು ಮತ್ತು ಬೃಹತ್ ಉದ್ದಿಮೆಗಳು ಭಾರತವನ್ನು ಸರ್ವನಾಶ ಮಾಡುತ್ತವೆ ಎಂಬ ಬಗ್ಗೆ ತೀವ್ರವಾದ ವಿಷಾದವನ್ನು ಗಾಂಧೀಜಿ ವ್ಯಕ್ತಪಡಿಸಿದರು. ಪ್ರಜಾಪ್ರಭುತ್ವ, ಸಮಾನತೆ, ಸಮಾಜವಾದ, ಶಾಂತಿ, ಅಹಿಂಸೆಯನ್ನು ಪ್ರಚುರಪಡಿಸುತ್ತಿದ್ದಂತಹ ಆ ಕಾಲದಲ್ಲಿ ಯಂತ್ರ ನಾಗರೀಕತೆ ಬೆಳೆಯುತ್ತಲೇ ಬಂದಿತು. ಗಾಂಧೀಜಿ ಇದನ್ನು 'ತಿಳಿದೂ ಮಾಡುತ್ತಿರುವ ತಪ್ಪುಗಳ ವಿಷಮಸ್ಥಿತಿ' ಎಂತಲೂ ಕರೆದರು. ಇದರಿಂದಲೇ ತಮ್ಮ "ಹಿಂದ್ ಸ್ವರಾಜ್" ಕೃತಿಯಲ್ಲಿ ಗಿರಣಿ, ರೈಲು, ಕೆಲವು ಮಾದರಿಯ ವಿಜ್ಞಾನ ಭಾರತಕ್ಕೆ ಬೇಡವೆಂದು ವಾದಿಸಿರುವುದನ್ನು ಕಾಣಬಹುದು.

ಇಂದಿನ ನವವಸಾಹತುಶಾಹಿ ಆಕ್ರಮಣದ ಸಂಧರ್ಭದಲ್ಲಿ ಬಂಡವಾಳಶಾಹಿ ವ್ಯವಸ್ಥೆಯು, ದೇಶೀ ಪರಂಪರೆ, ಸಾಂಪ್ರದಾಯಿಕ ಕಲೆಗಳ ನಾಶ ಮಾಡುತ್ತಿದೆ. ಯಂತ್ರಗಳನ್ನು ಅನಿವಾರ್ಯವಾಗಿ ಅವಲಂಬಿಸಬೇಕಾದ ಸಂದಿಗ್ಧತೆ ಕಾಣುತ್ತಿದೆ. ಹೀಗಾಗಿ, ಗಾಂಧೀಜಿ ಚಿಂತನೆ ಮೊದಲೇ ಈ ಕುರಿತು ಎಚ್ಚರಿಕೆ ನೀಡಿತ್ತು ಎಂಬುದು, ಅವರು ಸ್ವದೇಶಿ ಚಳುವಳಿಯನ್ನು ಚರಕದ ಮೂಲಕ ಪ್ರಾರಂಭಿಸಿದ್ದು ಬಹಳ ನೆನಪಾಗುತ್ತದೆ.

ಗಾಂಧೀ ತೋರಿದ ಹೋರಾಟದ ನೆಲೆಗಳು ಪ್ರಸ್ತುತ ಸಂದರ್ಭದಲ್ಲಿ ಕಾಣುವ ಬಿಡಿ ಬಿಡಿ ವಿಷಯಗಳಿಂದಲೂ ನಾವು ಮನಗಾಣಲು ಸಾಧ್ಯ. ಭ್ರಷ್ಟಾಚಾರ ವಿರುದ್ಧ ಅಣ್ಣಾ ಹಜಾರೆ ನಡೆಸಿದ ಹೋರಾಟಗಳು, ಮಣಿಪುರದಲ್ಲಿ ಇರೋಮ್ ಶರ್ಮಿಳ ಚಾನು ಅವರು ಎತ್ತಿದ ಧ್ವನಿ, ನಡೆಸಿದ ಸುದೀರ್ಘ ಉಪವಾಸ ಸತ್ಯಾಗ್ರಹ, ಗುಜರಾತ್

ರಾಜ್ಯದ ಊನಾ ಪ್ರಕರಣ ಕುರಿತು ನಡೆದ ದಲಿತ ಚಳುವಳಿ, ಕರ್ನಾಟಕದ ಅಂಗನವಾಡಿ ಕಾರ್ಯಕರ್ತೆಯರು ಮಾಡಿದ ಬೃಹತ್ ಸತ್ಯಾಗ್ರಹ ಹೋರಾಟ, ವಿಚಾರವಂತರ ಹತ್ಯೆಯ ಸಂದರ್ಭದಲ್ಲಿ ಉಂಟಾದ ಸಾಹಿತ್ಯಕ ಮತ್ತು ಸಾಮಾಜಿಕ ಚಳುವಳಿಗಳು, ಪ್ರಜಾಪ್ರಭುತ್ವ ಮತ್ತು ಅಭಿವ್ಯಕ್ತಿ ಸ್ವತಂತ್ರಕ್ಕಾಗಿ ನಡೆಯುವ ಹೋರಾಟಗಳು.. .. ಇತ್ಯಾದಿಗಳು ಗಾಂಧೀಜಿ ಚಿಂತನೆಯ ವಿವಿಧ ಆಯಾಮಗಳನ್ನು ಪ್ರತಿಫಲಿಸುತ್ತವೆ.

ಗಾಂಧೀಜಿ ಚಿಂತನೆಯ ಧನಾತ್ಮಕ ಆಯಾಮಗಳು ಒಂದೆಡೆ ಕಂಡು ಬಂದರೆ, ಇನ್ನೊಂದೆಡೆ ಪಟ್ಟಭದ್ರ ಶಕ್ತಿಗಳು ಗಾಂಧೀ ಚಿಂತನೆಯನ್ನೇ ತಮ್ಮ ಹಿತ, ಪ್ರಚಾರಕ್ಕಾಗಿ ಬಳಸಿಕೊಳ್ಳುವ ಹಾಗೂ ಗಾಂಧೀ ಚಿಂತನೆ ಮುಂದಿಟ್ಟು ಜನರನ್ನು ತಪ್ಪು ದಾರಿಗೆಳೆಯುವ ಪ್ರಯತ್ನಗಳೂ ನಡೆಯುತ್ತಿವೆ ಎಂಬುದನ್ನು ನಾವು ಮರೆಯಲಾಗದು.

ಕೇಂದ್ರ ಸರ್ಕಾರ ತನ್ನ ಯೋಜನೆಯೊಂದಕ್ಕೆ "ಸ್ವಚ್ಛ ಭಾರತ್" ಎಂದು ಹೆಸರಿಡುತ್ತದೆ. ಇದಕ್ಕೆ ಗಾಂಧೀಜಿ ಭಾವಚಿತ್ರ, ಕನ್ನಡಕ ಇತ್ಯಾದಿಗಳನ್ನು ಬಳಸುತ್ತದೆ. ಆದರೆ, ಗಾಂಧೀಜಿ ಸ್ವಚ್ಛತೆಯ ಬಗ್ಗೆ ನೀಡಿದ ಚಿಂತನೆಯನ್ನು ಸರ್ಕಾರದ ಕ್ರಮ ಅಪಹಾಸ್ಯ ಮಾಡುವಂತಿದೆ. ಗಾಂಧೀಜಿ, ಸಮಾಜದ ನೆಲೆಯಲ್ಲಿ ಸ್ವಚ್ಛತೆಯನ್ನು ಬಯಸಿದ ಹಾಗೆಯೆ, ವ್ಯಕ್ತಿಯ ನೆಲೆಯಲ್ಲಿ ಕೂಡ ಸ್ವಚ್ಛತೆಯನ್ನು ಎಂದರೆ ಸತ್ಯ, ಅಹಿಂಸೆ, ಸಹಬಾಳ್ವೆ ಇತ್ಯಾದಿಗಳನ್ನು ಅಪೇಕ್ಷಿಸಿದ್ದರು. ಕೇಂದ್ರ ಸರ್ಕಾರ ಗಾಂಧೀಜಿಯ ಈ ತತ್ವಗಳನ್ನು ಮೂಲೆಗೆ ಬಿಸಾಡಿ, ಅವರ ಭಾವಚಿತ್ರ ಮತ್ತು ಕನ್ನಡಕವನ್ನು ಮಾತ್ರ ಎತ್ತಿಕೊಂಡು, ತನ್ನ ಇರಾದೆಯನ್ನು ಬಯಲಿಗಿಟ್ಟಿದೆ. ಈ ನಿಲವು, ವ್ಯಕ್ತಿಯ ಮತ್ತು ದೇಶದ ಬಾಹ್ಯ ಸ್ವಚ್ಛತೆಯನ್ನು ಮಾತ್ರ ನಿರ್ವಚಿಸಿ, ಗಾಂಧೀಜಿಯ ಉದಾತ್ತ ಆಶಯವನ್ನು ಸೀಮಿತ ದೃಷ್ಟಿಕೋನದಿಂದ ನೋಡಿದೆ.

ಗಾಂಧೀಜಿ ಪ್ರತಿಪಾದಿಸಿದ ಖಾದಿ ಬಟ್ಟೆ ಅಭಿಯಾನ, ಚರಕ ಸಂಸ್ಕೃತಿ, ಸ್ವ-ಉದ್ಯೋಗ ಮತ್ತು ಸ್ವಾವಲಂಬನೆಯ ಪ್ರತೀಕಗಳು. ಇವು ನಿರ್ವಸಾಹತೀಕರಣ ಚಿಂತನೆಯ ಹಿನ್ನೆಲೆಯಲ್ಲಿ ಮೂಡಿಬಂದವು. ಆದರೆ, ಇಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಖಾದಿ, ಸ್ವದೇಶಿ ಚಿಂತನೆ ಮೂಲೆಗೆ ದೂಡಲ್ಪಟ್ಟಿವೆ. ಆಧ್ಯಾತ್ಮ, ಯೋಗ ಇತ್ಯಾದಿಗಳು ಕೋಮುವಾದಿ ರೂಪ ತಳೆಯುತ್ತಿವೆ. ಒಂದು ನಿರ್ದಿಷ್ಟ ಧರ್ಮಕ್ಕೆ ಪುಷ್ಟಿ ನೀಡುವಂತೆ ಇವುಗಳನ್ನು ಮುನ್ನೆಲೆಗೆ ತರಲಾಗುತ್ತಿದೆ. ಭೌತಿಕ ಮತ್ತು ಬೌದ್ಧಿಕ ನೆಲೆಯಲ್ಲಿ ಒಂದು ಧಾರ್ಮಿಕ ಆಶಯವನ್ನು ಬಲವಂತದಿಂದ ಪ್ರಸಾರ ಮಾಡುವ ಪ್ರವೃತ್ತಿ ಕಾಣುತ್ತಿದೆ. ಇದು ಎಗ್ಗಿಲ್ಲದೇ ನಡೆಯುತ್ತಿದೆ. ಗಾಂಧೀಜಿ ಚಿಂತನೆ ಮಂಡಿಸಿದಂತೆ ಶಾಂತಿಯ, ಅಹಿಂಸೆಯ, ಸಹಬಾಳ್ವೆಯ ಭಾರತವನ್ನು ರೂಪಿಸುವ ಆಶಯ ತಿರಸ್ಕೃತವಾಗಿದೆ. ಗಾಂಧೀಜಿ ಚಿಂತನೆ ನೆಪದಲ್ಲಿ ಅವರ ಮೂಲಾಶಯಕ್ಕೇ ವಿರುದ್ಧವಾದ ಚಾಣಕ್ಯ ತಂತ್ರ ಇದು. ಇದೇ ಕೇಡು ಸ್ಥಾಪಿಸುವ ಪ್ರಯತ್ನ. ಗಾಂಧೀಜಿ ಚಿಂತನೆಯನ್ನು ಅನ್ವಯಿಸುವ ಕ್ರಮದಲ್ಲೇ ಅಪ್ರಾಮಾಣಿಕತೆಯನ್ನು ತೋರುವ ಕ್ರಮ ಇದು.

ಗಾಂಧೀಜಿ ವ್ಯಕ್ತಿತ್ವ ಮತ್ತು ಚಿಂತನೆ ಹಲವು ಬಗೆಯಲ್ಲಿ ನಿರ್ವಚನ ಗೊಳ್ಳುತ್ತಿರುವ ಸಂದರ್ಭದಲ್ಲಿ 21ನೆಯ ಶತಮಾನದ ಕನ್ನಡ ಕಾವ್ಯದಲ್ಲಿ ಗಾಂಧೀ ವ್ಯಕ್ತಿತ್ವ ಮತ್ತು ಗಾಂಧೀ ಚಿಂತನೆ ಒಡಮೂಡಿರುವ ಬಗೆಯನ್ನು ಪರೀಶೀಲಿಸುವುದು ಕುತೂಹಲ ಹುಟ್ಟಿಸುವ ಸಂಗತಿಯೂ ಹೌದು. ಯಾವುದೇ ಸಾಹಿತ್ಯದ ಪ್ರಕಾರಗಳು ತನ್ನ ಸಮಾಜದಲ್ಲಿ ಘಟಿಸುವ ಸಂಗತಿಗಳು, ಚಿಂತನೆಗಳು, ಸಿದ್ಧಾಂತಗಳ ಕಡೆಗೆ ಸಂದೇಹಿಸುವ ನೋಟ ಬೀರುತ್ತವೆ. ಇದು ಕೂಡ ಒಂದು ಮಾದರಿಯ ಚಿಂತನಾಕ್ರಮ, ವಿಶ್ಲೇಷಣಾತ್ಮಕ ನೋಟ. ಹಾಗೆಯೆ ಇದು ಬೆಳವಣಿಗೆಯ ಆಯಾಮವೂ ಹೌದು. ಸಂದೇಹಿಸುವ ಕ್ರಮವು ಸಾಹಿತ್ಯ, ಸಮಾಜದ ನೈತಿಕ ಜವಾಬ್ದಾರಿ ಹೆಚ್ಚಲು ಪುಷ್ಟಿ ನೀಡುತ್ತದೆ. ಗಾಂಧೀಜಿ ಚಿಂತನೆ ಭಿನ್ನ ಬಗೆಯಲ್ಲಿ ನಿರೂಪಣೆಗೊಳ್ಳುತ್ತಾ, ಕನ್ನಡ ಕಾವ್ಯ ವಿಭಿನ್ನ ಬಗೆಯಲ್ಲಿ ಅದನ್ನು ಕಟ್ಟಿಕೊಂಡಿರುವುದನ್ನು ಗ್ರಹಿಸಬಹುದು.

ಯು.ಆರ್.ಅನಂತಮೂರ್ತಿ ಅವರ 'ಅಭಾವ' ಕವನ ಸಂಕಲನದ "ಗಾಂಧಿ ಮತ್ತು ಎಂಟನೇ ಹೆನ್ರಿ' ಕವನವು ಹೀಗೆ ಚಿಂತನೆಯನ್ನು ಅಭಿವ್ಯಕ್ತಗೊಳಿಸುತ್ತದೆ.

ಬೇಸರವಾದಾಗ ತಾಯಂದಿರು ಊಟ ಬಿಡಲ್ಲವೆ?
ಮಾತಾಡೋದು ಬಿಡಲ್ಲವೆ?
ಎಲ್ಲ ಬಿಟ್ಟಂತೆ ಕಂಡರೂ ಕಸ ಮುಸುರೆ ಅಂತ,
ವ್ರತಗ್ರಿತ ಅಂತ ಕಾಲ ಕಳೀತಾನೆ
ಮನೆಮಂದಿ ಮೇಲೆ ಒಂದು ಕಣ್ಣಿಟ್ಟು ಕಾಯಲ್ಲವೆ?

ಅದೇ ಆಗ್ರಹದ ಗಾಂಧಿಗೆ
ದೇಶವೇ ಊರು ಅಂತ ಅನ್ನಿಸಿ
ಊರೇ ಮನೆಯಾಗಿಬಿಟ್ಟು
ಚರಿತ್ರೆ ಅಂದರೆ ಸಂಸಾರದ ಒಳಗಿನ ಕಳವಳ ಸಿಟ್ಟು ಸಿಡುಕು
ಕೆಲವೊಮ್ಮೆ ಕೋಲಾಹಲಗಳಂತೆಯೂ ಕಂಡರೆ,

(ಗಾಂಧಿ ಮತ್ತು ಎಂಟನೇ ಹೆನ್ರಿ)

ಈ ಕವನದಲ್ಲಿ ಗಾಂಧೀಜಿ ಅವರ ಒಟ್ಟು ಜೀವನ ಮತ್ತು ವ್ಯಕ್ತಿತ್ವವು ಭಾರತದ ಸ್ವತಂತ್ರ, ಸ್ವರಾಜ್ ಹಾಗೂ ಶಾಂತಿಯ ನಾಡನ್ನಾಗಿ ರೂಪಿಸಲು ಶ್ರಮಿಸಿದ್ದನ್ನು ಕಾಣಬಹುದು. ಎಂಟನೇ ಹೆನ್ರಿ ತನಗೆ ಉತ್ತರಾಧಿಕಾರಿಯಾಗಬಲ್ಲ ಒಂದು ಗಂಡು ಮಗು ಜನಿಸಲಿಲ್ಲವಲ್ಲ ಎಂಬ ಕೊರಗಿನಿಂದ ತನ್ನ ರಾಜ್ಯ ಮತ್ತು ಬದುಕು ಎರಡೂ ಬರಡಾಗುತ್ತದೆ ಎಂದು ಭಾವಿಸಿದ್ದನು. 'ರಾಜ್ಯಕ್ಕೂ ಮುಂದೆ ಅಭಿವೃದ್ಧಿಯಿಲ್ಲ' ಎಂದು ಭಾವಿಸುವಷ್ಟು, 'ವೈಯಕ್ತಿಕ ಜೀವನವೇ ರಾಜ್ಯದ ಜೀವನ' ಎಂದು ಎಂಟನೇ ಹೆನ್ರಿ ಗ್ರಹಿಸಿದ ಪರಿ ಇಲ್ಲಿ ವ್ಯಕ್ತಗೊಂಡರೆ, ಗಾಂಧಿ 'ಭಾರತದ ಬದುಕೇ ನನ್ನ ಬದುಕು' ಎಂದು

ತಿಳಿದು ಶ್ರಮಿಸಿದ್ದು ಕೂಡ ಇಲ್ಲಿ ಅಭಿವ್ಯಕ್ತವಾಗಿದೆ. ಈ ಎರಡೂ ಭಿನ್ನ ನೆಲೆಗಳನ್ನು ತೌಲನಿಕವಾಗಿ ಈ ಕವಿತೆ ವಿಶ್ಲೇಷಿಸುತ್ತದೆ.

ಇದೇ ರೀತಿಯಾಗಿ ಚಂದ್ರಶೇಖರ ಕಂಬಾರ ಅವರ "ಎಲ್ಲಿದೆ ಶಿವಾಪುರ" ಕವನ ಸಂಕಲನದ 'ಗಾಂಧೀಜಿ ಸ್ವರ್ಗದಿಂದ ಇಳಿದು ಬಂದಾಗ' ಎಂಬ ಕವಿತೆಯು ಗಾಂಧೀ ವಿಚಾರ ಧಾರೆ ಅಸ್ತಿತ್ವವನ್ನು ಕಳೆದುಕೊಂಡು, ಉಂಟಾಗಿರುವ ಸಾಮಾಜಿಕ ವಿಘಟನೆ ಕುರಿತು ಆತಂಕ ಮತ್ತು ವಿಷಾದವನ್ನು ಮಂಡಿಸುತ್ತದೆ.

ಯಾವ ದೇಶವಿದು?
ನೆಲದಲ್ಲಿ ಹುಲ್ಲು ಹುಟ್ಟಿಲ್ಲ!
ಬಾನಲ್ಲಿ ಚಿಕ್ಕೆ ಮೊಳೆತಿಲ್ಲ!
ಭೂಮಿ ಆಕಾಶ,
ಕಲಬೆರಕೆಯಾಗಿವೆ
ಹಗಲು ರಾತ್ರಿ!
ಎಷ್ಟೊಂದು ಕೆಂಪು ಚುಕ್ಕಿಗಳು
ಈ ದೇಶದ ನಕಾಶದಲ್ಲಿ!
ಪ್ರಕ್ಷುಬ್ಧವಾಗಿದೆ
ವಾಯುಮಂಡಲ
'ಹೊಸನಾತ ಹೊಸ ನಾತ'
ಕೊಟ್ಟಿಗೆಯ ಕರು
ಕೊಟ್ಟಿಗೆಯಲ್ಲೇ
ತೊಟ್ಟಿಲ ಹಸುಳೆ ತೊಟ್ಟಿಲಲ್ಲೇ
ಕತ್ತು ಚೆಲ್ಲಿವೆ!
ಹರಿಯದ ನದಿಯ ದಡದಲ್ಲಿ
ಮೀನು ತೇಲಾಡಿವೆ.
ಕಾಲ ಮೇಲೆ ನಿಂತಿವೆ ಬಾವಲಿ
ಮರಕ್ಕೆ ನೇತು ಬಿದ್ದಿವೆ ನವಿಲು!
ಹೂತು ಹೋಗಿವೆ
ಆದ ಹೋದ ಎಲ್ಲ ಕತೆ.

(ಗಾಂಧೀಜಿ ಸ್ವರ್ಗದಿಂದ ಇಳಿದು ಬಂದಾಗ)

ಇತ್ತೀಚಿನ ಹೊಸತಲೆಮಾರಿನ ಕನ್ನಡ ಕವಿ ಸುಬ್ಬು ಹೊಲೆಯಾರ್ ಮತ್ತು ಲಕ್ಕೂರು ಆನಂದ ಅವರ ಕಾವ್ಯದಲ್ಲಿ ಗಾಂಧಿ ಚಾರಿತ್ರಿಕ ಗ್ರಹಿಕೆಗಳು ಹೀಗೆ ಕಾಣಿಸುತ್ತವೆ.

ಸುಬ್ಬು ಹೊಲೆಯಾರ್ ಅವರ "ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು" ಕವನ ಸಂಕಲನದ "ಗಾಂಧೀಜಿ ಅವರನ್ನು ಪ್ರೀತಿಸಲಾರದವರು" ಎಂಬ ಕವನವು ಹೀಗೆ ಮಂಡಿಸುತ್ತದೆ.

ಗಾಂಧೀ ಜೀ ಅವರು
ಗಾಂಧೀಜೀಯಾಗಿದ್ದರು ಎಂದೇ
ನಾನು ಪ್ರೀತಿಸುತ್ತೇನೆ;
ಮಹಾತ್ಮರೆಂದಲ್ಲ.
ಅವರು ಮನುಷ್ಯರಾಗಿದ್ದು
ಗುಬ್ಬಚ್ಚಿಯಾಗಿ ಗೂಡು ಕಟ್ಟಿದ್ದಕ್ಕೆ
ನಾನು ಪ್ರೀತಿಸುತ್ತೇನೆ;
ಪಿತಾಮಹರೆಂದಲ್ಲ.

ಇಡೀ ದೇಹ
ಮುಪ್ಪು ಮುಪ್ಪಾಗಿದ್ದರೂ
ಉಪ್ಪಿನ ಮಹಾಸಾಗರದಿಂದ
ಮರಳು ದಂಡೆಯನ್ನು ದಾಟಿದ
ಒಂಟಿ ಕೋಲಿನ ಗುರುತುಗಳಿಗಾಗಿ
ನಾನು ಪ್ರೀತಿಸಿದ್ದು
"ಬಾಪೂಜಿ" ಎಂದು ಬಾಯಿ ತುಂಬಿಕೊಂಡಿದ್ದು
ಗುಣಗಾನಕ್ಕಲ್ಲ; ಗೌರವಕ್ಕಾಗಿ.

(ಗಾಂಧೀಜಿಯನ್ನು ಪ್ರೀತಿಸಲಾರದವರು)

ಲಕ್ಕೂರು ಆನಂದ ಅವರ "ಬಟವಾಡೆಯಾಗದ ರಸೀತಿ" ಕವನ ಸಂಕಲನದ "ಜಂಗಮನೊಬ್ಬನು ಉಳಿಸಿಹೋದ ಹೆಜ್ಜೆ" ಎಂಬ ಕವನವು ಹೀಗೆ ಪ್ರಕಟಗೊಳಿಸುತ್ತದೆ.

ಬೆವರು ವಾಸನೆ ಬಡಿಯದಂತೆ
ಗಾಂಧಿ ಬಜಾರಿನ ನಾಲ್ಕು ರಸ್ತೆಯ ನಡುವೆ
ಅಲ್ಲಲ್ಲಿ ನಿಲ್ಲಿಸಿದ ಪ್ರತಿಮೆಗಳಿಗೆ ಗಾಳಿನ ಪಂಜರಗಳನ್ನು
ಮುಸ್ತಾಪು ಮಾಡುತ್ತಿದ್ದಾರೆ.

ಗಾಂಧಿ ಅಹಿಂಸೆ ಕುರಿತಾಗಿ
ಬುದ್ಧ ಶಾಂತಿಗಾಗಿ, ಬಾಬಾ ಸಮಾನತೆಗಾಗಿ
ಎದುರು-ಬದುರಾಗಿ ಮಾತನಾಡುತ್ತಿರಬೇಕಾದರೆ
ನಾನು ಹೋಗಿ ಐದಂಗುಲದ ಹಜ್ಜೆಯ ಕುರಿತು ಕೇಳಬಹುದು?
(ಜಂಗಮನೊಬ್ಬನು ಉಳಿಸಿಹೋದ ಹೆಜ್ಜೆ)

ಈ ಎರಡು ಕವಿತೆಗಳು ಗಾಂಧಿಯ ಚಿತ್ರಣಗಳನ್ನು ವಿಭಿನ್ನವಾಗಿ ಕಟ್ಟಿಕೊಡುತ್ತವೆ. 'ಗಾಂಧೀಜಿ ಅವರನ್ನು ಪ್ರೀತಿಸಲಾರದವರು' ಎಂಬ ಕವಿತೆಯು ಗಾಂಧೀಜಿ ಮೂರ್ತಿಪೂಜೆಗಷ್ಟೇ ಸಿದ್ಧವಿರುವವರನ್ನು ಮತ್ತು ಅವರ ಭಟ್ಟಂಗಿಗಳನ್ನು ಉದ್ದೇಶಿಸಿ ಮಾತನಾಡುತ್ತದೆ. ಗಾಂಧೀಜಿ ವಿಚಾರಧಾರೆ, ಚಿಂತನಾಕ್ರಮ, ತತ್ವಗಳು, ಆದರ್ಶ ಮತ್ತು ಎಲ್ಲವನ್ನು ಮನುಷ್ಯನ ನೆಲೆಯಲ್ಲಿ ಚಿಂತಿಸುವ ಮೂಲಕ ಶಾಂತಿಯನ್ನ, ಅಹಿಂಸೆಯನ್ನು ಜಪಿಸಿದ ಪರಿಪೂರ್ಣ ವ್ಯಕ್ತಿಯಾಗಿ ಕಾಣುವಲ್ಲಿ ಇವರು ಸೋತಿದ್ದನ್ನು ಇಲ್ಲಿ ದಾಖಲಿಸಲಾಗಿದೆ.

ಹಾಗೆಯೆ "ಜಂಗಮನೊಬ್ಬನು ಉಳಿಸಿಹೋದ ಹೆಜ್ಜೆ" ಕವಿತೆಯು ಎಲ್ಲವೂ ಸಿದ್ಧಾಂತಗಳಾಗಿ, ವಿಚಾರಗಳಾಗಿ ಸ್ಥಾಪಿತಗೊಳ್ಳುತ್ತಿರುವ ಸಂದರ್ಭವನ್ನು ಕಟುವಾಗಿ ವಿಮರ್ಶಿಸುತ್ತದೆ. ಬುದ್ಧ, ಗಾಂಧಿ, ಅಂಬೇಡ್ಕರ್ ಅವರ ಚಿಂತನೆಗಳ ವಿಸ್ತಾರ ಹಾಗೂ ವಾಸ್ತವದ ಸಮಾಜವನ್ನು ಮುಖಾಮುಖಿಗೊಳಿಸುವ ಪರಿಯನ್ನು ಇಲ್ಲಿ ಕಾಣಲು ಸಾಧ್ಯವಿದೆ. ಮುಖ್ಯವಾಗಿ ಈ ಕವಿತೆಗಳು, ಗಾಂಧೀಜಿ ವ್ಯಕ್ತಿತ್ವ ಮತ್ತು ವಿಚಾರಗಳನ್ನು ವೈಭವೀಕರಿಸುವ, ಆರಾಧಿಸುವ ಕಾವ್ಯವಾಗಿ ಮೂಡಿಬಂದಿರುವುದಿಲ್ಲ. ಗಾಂಧೀಜಿ ವಿಚಾರಗಳ ಅನ್ವಯಿಕತೆಯನ್ನು ಮುಖ್ಯವಾಗಿ ಧ್ಯಾನಿಸುವ ಕಾವ್ಯವಾಗಿದೆ. ಇಂದಿನ ಸಮಾಜಕ್ಕೆ ಬುದ್ಧ, ಗಾಂಧೀ, ಅಂಬೇಡ್ಕರ್ ವಿಚಾರಗಳು, ತತ್ವ ಸಿದ್ಧಾಂತಗಳು ಅವಶ್ಯ; ಇವರು ಎಲ್ಲಾ ಕಾಲಕ್ಕೂ ಸಮಕಾಲೀನರಾಗುವ ಚಾರಿತ್ರಿಕ ವ್ಯಕ್ತಿಗಳು ಎಂಬುದನ್ನು ಕಾಣಬಹುದಾಗಿದೆ.

ಪರಾಮರ್ಶನ ಗ್ರಂಥಗಳು

- ಸದ್ಯದ ಹಂಗು : (ಗಾಂಧಿ ಚಿಂತನೆ – ಲೇಖನ) ರಾಜೇಂದ್ರ ಚೆನ್ನಿ ಪಲ್ಲವ ಪ್ರಕಾಶನ.
- ಅಭಾವ : ಯು.ಆರ್.ಅನಂತಮೂರ್ತಿ, ಅಭಿನವ ಪ್ರಕಾಶನ
- ಎಲ್ಲಿದೆ ಶಿವಾಪುರ : ಚಂದ್ರಶೇಖರ ಕಂಬಾರ. ಅಭಿನವ ಪ್ರಕಾಶನ
- ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು : ಸುಬ್ಬು ಹೊಲೆಯಾರ್
- ಬಟವಾಡೆಯಾಗದ ರಸೀತಿ : ಲಕ್ಕೂರು ಆನಂದ, ಅಭಿನವ ಪ್ರಕಾಶನ.

ಗಾಂಧಿ-ಅಂಬೇಡ್ಕರ್ ಚಿಂತನೆ ನಮಗೀಗ ಅನಿವಾರ್ಯ

ಚಲುವರಾಜು

ಇಡೀ ವಿಶ್ವ ಕಂಡ ಮಹಾನ್ ಶಾಂತಿದೂತ ಮಹಾತ್ಮ ಗಾಂಧಿ. ಜಾತಿ, ಅಸ್ಪೃಶ್ಯತೆ, ಅಸಮಾನತೆಯ ವಿರುದ್ಧ ಅಂಬೇಡ್ಕರ್‌ರವರಂತೆ ಗಾಂಧೀಜಿ ಕೂಡ ಹೋರಾಡಿದ್ದಾರೆ. ಗಾಂಧೀಜಿ ಒಳಗೆ ಒಬ್ಬ ಸನಾತನವಾದಿ ಹಿಂದೂ ಇದ್ದುದು ಒಮ್ಮೆ ಕಂಡು ಬಂದರೆ, ಇನ್ನೊಮ್ಮೆ ಅವರಲ್ಲಿ ದಮನಿತರ ಪರವಾಗಿ, ಮಾನವತಾವಾದದ ಕಡೆಗೆ ಹಂಬಲಿಸುವ ಪರಿವರ್ತನಾಕಾರ ಇರುವುದೂ ಕಂಡು ಬರುತ್ತದೆ. ಗಾಂಧೀಜಿ 'ಹರಿಜನೋದ್ಧಾರ' ಮತ್ತು 'ಅಸ್ಪೃಶ್ಯತಾ ನಿವಾರಣೆ'ಯ ಕ್ರಾಂತಿಕಾರಿ ಹೋರಾಟ ನಡೆಸಿದ್ದು ಅನಕ್ಷರಸ್ಥರಿಗೂ ಗೊತ್ತು. ಗ್ರಾಮಗಳ ಬಗ್ಗೆ, ಸ್ವಚ್ಛತೆಯ ಬಗ್ಗೆ, ಸ್ವಯಂ ಉದ್ಯೋಗದ ಬಗ್ಗೆ, ಗುಡಿ ಕೈಗಾರಿಕೆಯ ಬಗ್ಗೆ ಗಾಂಧೀಜಿಗಿದ್ದ ಕಾಳಜಿ ಆರ್ಥಿಕ ತಜ್ಞರನ್ನೂ ನಾಚಿಸುವಂತಿವೆ.

ಗಾಂಧೀಜಿ ಹರಿಜನರ ಮನೆಗಳಲ್ಲಿ, ಕೇರಿಗಳಲ್ಲಿ ಉಳಿದುಕೊಳ್ಳುವುದರ ಮೂಲಕ ಸಮಾಜ ಪರಿವರ್ತನೆಗೆ ಮುಂದಾದವರು. ಅಂಬೇಡ್ಕರ್ ಹಾಗೆ ಗಾಂಧೀಜಿ ಕೂಡ ತಳ ಸಮುದಾಯದ ಏಳಿಗೆಗೆ ಚಿಂತಿಸಿದ್ದಾರೆ. ಭಾರತದ ಸಂವಿಧಾನವನ್ನು ರಚಿಸಲು ಕರಡು ಸಮಿತಿ ಸಭೆಯಲ್ಲಿ ಪಾಲ್ಗೊಂಡು ಚರ್ಚಿಸುವಾಗ, ಅಂಬೇಡ್ಕರರ ಹೆಸರು ಹೇಳಿದವರು ಗಾಂಧೀಜಿ. ಗಾಂಧೀಜಿ ಇಂತಹ ಹೃದಯ ಪರಿವರ್ತನೆಯ ವಿಶಾಲ ಮಾನವತಾವಾದಿಯಾಗಿದ್ದರೂ, ನಮ್ಮ ಹೃದಯಗಳು ಅದನ್ನು ಕಾಣದಾದವು. ಏಕೆಂದರೆ, ಇಂದಿಗೂ ನಮ್ಮನ್ನು ಅಲಿಖಿತ ಸಂವಿಧಾನವೇ ಆಳುತ್ತಿದೆ. ನಮ್ಮ ಸಾಮಾಜಿಕ ಪ್ರಜ್ಞೆಯ ಮೇಲೆ ಅದರ ಛಾಪೇ ಇದೆ. ಹಾಗಾಗಿ, ಅಲ್ಲಿ ಸಮಾನತೆ ಬದಲು ಅಸಮಾನತೆ ಇದೆ. ಅಸ್ಪೃಶ್ಯತೆ ಇದೆ.

ಭಾರತದ ಘನತೆ ನಾಶವಾಗುತ್ತಿರುವುದು ಇದರಿಂದಲೇ. ಗೌರವದ ಬದುಕು ನಮ್ಮೊಳಗೆ ನಾಶವಾಗಿರುವುದೂ ಹೀಗೆಯೇ. ಈ ನಾಡಿನ ಶೋಷಿತ ಜನವರ್ಗಗಳು ಸಾಮಾಜಿಕ ಅಸಮಾನತೆಯಿಂದ ಸಾಕಷ್ಟು ಬವಣೆ ಅನುಭವಿಸಿವೆ. ಹೀಗಾಗಿ ಅವರು ಮುಖ್ಯವಾಹಿನಿಗೆ ಬರುವಂತೆ ಮಾಡುವುದು ಇಂದಿನ ಅಗತ್ಯ. ಜಾತಿ-ಮತದ ಭೇದಭಾವವಿಲ್ಲವೆಂಬ ಭರವಸೆ ದೊರೆತರೆ ಮಾತ್ರ ಅವರು ನಂಬುತ್ತಾರೆ.

ನಮ್ಮ ಸಾಮಾಜಿಕ ವ್ಯವಸ್ಥೆಯು ತಾರತಮ್ಯದ ಮೇಲೆ ನಿಂತಿರುವುದರಿಂದ, ಯಾವ ದಾರಿಯಲ್ಲೂ ಹೋದರೂ ಜಾತಿ ಕಾಡುತ್ತದೆ. ಇಂತಹ ಜಾತಿ ಮನಸ್ಸುಗಳಿಗೆ ಸಾಕಷ್ಟು ಅರಿವು ವಿಸ್ತರಿಸಬೇಕಾಗಿದೆ. ಜಾತಿ ಅವಮಾನದಿಂದ ಕ್ರೋಧ–ಆಕ್ರೋಶ ವ್ಯಕ್ತಪಡಿಸುವುದರಿಂದ ಜಾತೀಯತೆ ಕಡಿಮೆಯಾದೀತೆ? ಖಂಡಿತ ಇಲ್ಲ. ಇದರ ಬದಲು ಗಾಂಧಿ–ಅಂಬೇಡ್ಕರ್ ಚಿಂತನೆಯ ಅರಿವಿನಿಂದ ಜಾತಿ ಅವಮಾನ ಮಾಡುತ್ತಿರುವ ಜನರಲ್ಲಿ ಅರಿವು, ಚಿಂತನೆ, ಮಾನವೀಯತೆ ಅಂಶಗಳನ್ನು ಬಿತ್ತಬೇಕು. ಈ ಘಟ್ಟದಲ್ಲಿ ನಮಗೆ ಅಂಬೇಡ್ಕರ್ ಮತ್ತು ಗಾಂಧೀಜಿ ಇಬ್ಬರೂ ಬೇಕಾಗುತ್ತಾರೆ. ಅವರ ಮಾರ್ಗದರ್ಶನ ನಮಗೆ ಅತ್ಯವಶ್ಯಕವಾಗುತ್ತದೆ.

ಅಂಬೇಡ್ಕರ್ ತಮ್ಮ ಚಿಂತನೆ, ಪ್ರಾಮಾಣಿಕತೆ, ಮನುಷ್ಯತ್ವ ನಿಷ್ಠೆ ಮತ್ತು ವಿದ್ವತ್‌ನಿಂದಾಗಿ ಜಗತ್ತಿಗೆ ಮಾದರಿಯಾದರು. ಇದು ಸ್ವಾಭಿಮಾನದ, ಘನತೆಯ, ಗೌರವದ ಮಾರ್ಗ. ಗಾಂಧೀಜಿ ಅವರ ಮಾರ್ಗದ ಬಗ್ಗೆ ವರ್ತಮಾನದಲ್ಲಿ ಪರಿಶೀಲಿಸುವುದು ಸೂಕ್ತ. ಗಾಂಧಿ ಬಗ್ಗೆ ಅಂಬೇಡ್ಕರ್‌ಗಿದ್ದ ಅಭಿಪ್ರಾಯವನ್ನು ನಾವು ಸಂಕುಚಿತ ಚಿಂತನೆಯಲ್ಲಿ ಅರ್ಥೈಸಿಕೊಳ್ಳುವುದು ಸರಿಯಲ್ಲ. ಇಡೀ ಸಮಾಜ ಗಾಂಧೀಜಿ ಮತ್ತು ಅಂಬೇಡ್ಕರ್ ಅವರನ್ನು ಪ್ರಾಂಜಲ ದೃಷ್ಟಿಕೋನದಿಂದ ಅರಿತುಕೊಳ್ಳುವುದಕ್ಕೆ ನಾವು ನಿಮಿತ್ತವಾಗಬೇಕು. ಅಂಬೇಡ್ಕರ್ ಬಗ್ಗೆ ದ್ವೇಷ, ತಾತ್ಸಾರ ತಾಳುವುದಾಗಲಿ, ಗಾಂಧೀಜಿ ಬಗ್ಗೆ ದ್ವೇಷ–ತಾತ್ಸಾರ ತೋರುವುದಾಗಲಿ ಖಂಡಿತ ಸರಿ ಕಾಣುವುದಿಲ್ಲ. ಇಬ್ಬರೂ ತಮಗೆ ಸರಿ ಕಂಡ ದಾರಿಯಲ್ಲಿ ಸಮಾಜದ ಒಳಿತಿಗಾಗಿ ಚಿಂತಿಸಿದರು ಮತ್ತು ಕಾರ್ಯಕ್ರಮ ಹಮ್ಮಿಕೊಂಡರು. ಒಬ್ಬರನ್ನು ಇನ್ನೊಬ್ಬರ ವಿರುದ್ಧ ನಿಲ್ಲಿಸುವ ಬದಲು, ಇಬ್ಬರನ್ನೂ ಇಟ್ಟುಕೊಂಡು ನಾವು ಇಂದಿನ ಸಮಾಜವನ್ನು ಸರಿಪಡಿಸುವುದು ನಮಗೆ ಮುಖ್ಯವಾಗಬೇಕು. ಗಾಂಧೀಜಿ ತಾವು ನಂಬಿದ್ದ ಧರ್ಮದಲ್ಲಿ 'ಅಸ್ಪೃಶ್ಯತೆ ಆಚರಣೆ ಮಹಾಪಾಪ; ಅದು ಹಿಂದೂ ಧರ್ಮದ ಬಹುದೊಡ್ಡ ಕಳಂಕ' ಎಂದಿದ್ದು ಸಣ್ಣ ಸಂಗತಿಯೇನಲ್ಲ. ಅಂಬೇಡ್ಕರ್ ಅಸ್ಪೃಶ್ಯತೆಯನ್ನು 'ಅಪರಾಧ' ಎಂದರು. ಇಬ್ಬರ ಪ್ರಯತ್ನವೂ ಅಸ್ಪೃಶ್ಯತೆ ನಿರ್ಮೂಲನೆ ಕುರಿತಾಗಿತ್ತು. ಗಾಂಧೀಜಿ ದೇಶದ ಸಮಸ್ಯೆಗಳಿಗೆ ಆದ್ಯತೆ ನೀಡಿದರೆ, ಅಂಬೇಡ್ಕರ್ ಸಮಾಜದಲ್ಲಿನ ಅಸಮಾನತೆಯ ಬಗ್ಗೆ ಆದ್ಯತೆಯನ್ನು ನೀಡಿದರು. ಗಾಂಧೀಜಿ ದೇಶದ ಜನರಿಗೆ ಆಗುತ್ತಿದ್ದ ಅನ್ಯಾಯವನ್ನು ಎತ್ತಿ ಹೇಳುವುದಕ್ಕೆ ಹೆಚ್ಚಿನ ಸಮಯ ಕೊಟ್ಟರೆ, ಅಂಬೇಡ್ಕರ್ ಶೋಷಿತ ಸಮುದಾಯಗಳಿಗೆ ಆಗುತ್ತಿದ್ದ ಅನ್ಯಾಯವನ್ನು ಎತ್ತಿ ಹೇಳುವುದಕ್ಕೆ ಹೆಚ್ಚಿನ ಸಮಯ ಕೊಟ್ಟರು. ಒಟ್ಟಾರೆ, ಆರೋಗ್ಯಕರ ಸಮಾಜ ನಿರ್ಮಾಣದ ಬಗ್ಗೆ ಗಾಂಧೀಜಿ ಮತ್ತು ಅಂಬೇಡ್ಕರ್ ಅವರಿಗೆ ಇದ್ದ ನಿಷ್ಠೆ, ಪ್ರಾಮಾಣಿಕತೆಯನ್ನು ಯಾರೂ ಶಂಕಿಸಬೇಕಿಲ್ಲ.

ಅಂಬೇಡ್ಕರ್ ಎಂದರೆ ಈ ರಾಷ್ಟ್ರದ ಒಬ್ಬ ದೊಡ್ಡ ಚಾಂಪಿಯನ್. ಅಂಬೇಡ್ಕರ್ ಚಿಂತನೆ ಎಂದರೆ ವರ್ತಮಾನದ ಎಚ್ಚರಿಕೆ. ಅಂದರೆ ಅವರು ನಮ್ಮೊಳಗೆ ಹೊಸದಾಗಿ ಹುಟ್ಟಬೇಕು. ಈಗ ವರ್ತಮಾನದಲ್ಲಿ ಜಾಗತೀಕರಣದ ಪರಿಣಾಮಗಳಲ್ಲಿ ಶೋಷಿತ ವರ್ಗಕ್ಕೆ ಹೊಸದಾಗಿ ಅವರ ಸಂದೇಶಗಳು ಬೇಕು. ಖಾಸಗೀ ಕ್ಷೇತ್ರಗಳಲ್ಲಿ ಮೀಸಲಾತಿ ಮೂಲಕ ಅವರ ನ್ಯಾಯಪರ ಸಾಮಾಜಿಕ ಆಶಯಕ್ಕೆ ಬೆಲೆ ತರಬೇಕು. ಸರ್ಕಾರ

ಮಾಡಬೇಕಾದ ಕೆಲಸವನ್ನೆಲ್ಲಾ ಖಾಸಗಿಯವರಿಗೆ ನೀಡಲಾಗುತ್ತಿದೆ. ಆಗ, ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ನೀಡುವುದು ಅವಶ್ಯಕವಾಗುತ್ತದೆ. ಮಾಧ್ಯಮ ಕ್ಷೇತ್ರಗಳಲ್ಲಿ, ಉದ್ಯಮ ಕ್ಷೇತ್ರಗಳಲ್ಲಿ ಅಂಬೇಡ್ಕರ್ ವಿಚಾರಗಳಿಗೆ ಹೆಚ್ಚು ಅವಕಾಶ ಇರಬೇಕು. ವಿಶೇಷವಾಗಿ ಯುವಜನತೆಗೆ ಇದನ್ನು ತಿಳಿಸುವಂತಾಗಬೇಕು. ವರ್ತಮಾನದ ಅಗತ್ಯಕ್ಕೆ ಸರಿಯಾಗಿ ತೆರೆದುಕೊಳ್ಳುವಂತೆ ಅವರನ್ನು ಸಜ್ಜುಗೊಳಿಸಬೇಕು. ಪಠ್ಯ ವಿಷಯ ನಮ್ಮ ಮಕ್ಕಳ ಮನಸ್ಸನ್ನು ಶುದ್ಧವಾಗಿಸುವಂತೆ ಸಿದ್ಧಪಡಿಸಲ್ಪಡಬೇಕು. ಶಿಕ್ಷಣವನ್ನು ಎಲ್ಲ ಬಗೆಯ ಶೋಷಣೆಯಿಂದ ಮುಕ್ತವಾಗಿಸುವ ಪ್ರಯತ್ನಗಳು ನಡೆಯಬೇಕು. ಸ್ವಾಭಿಮಾನ ಬದುಕಿನ ಭಾಗವಾಗಬೇಕು.

ಜಾತಿ ಸಮಾಜವು ಕುಬ್ಜ, ರೋಗಿಷ್ಠ ಮತ್ತು ಹಿಂಸೆಗೆ ಹಾದಿ ಮಾಡಿಕೊಡುವಂಥದ್ದು. ಆದ್ದರಿಂದ ನಮಗೆ ಸಮಾನತೆ–ಜಾತ್ಯಾತೀತತೆ ತತ್ವಗಳು ಬೇಕು. 'ಅಸಮಾನತೆ ಮುಂದುವರೆದರೆ ಪ್ರಜಾಪ್ರಭುತ್ವಕ್ಕೆ ಆಪತ್ತು ಖಚಿತ' ಎಂದು ಅಂಬೇಡ್ಕರ್ ಹೇಳಿದ್ದಾರೆ. ಈ ಮಾತನ್ನು ಗಮನದಲ್ಲಿರಿಸಿಕೊಂಡು ವರ್ತಮಾನದಲ್ಲಿ ನಾನು ಮುಂದಡಿ ಇಡಬೇಕಿದೆ. ಅಸಮಾನತೆ ನಿವಾರಣೆ ಮಾಡುವ ಸವಾಲನ್ನು ನಾವು ಸ್ವೀಕರಿಸಲೇ ಬೇಕು. ಸಮಾನತೆಯ ಕನಸೇ ನಮ್ಮನ್ನು ಆ ದಿಕ್ಕಿನತ್ತ ಕೊಂಡೊಯ್ಯಬಲ್ಲದು. ಸಮಾನತೆ ನಾಶವಾಗಿರುವುದರಿಂದಲೇ ಶ್ರೇಣಿಕೃತ ಸಮಾಜ ಜೀವಂತವಾಗಿದೆ. ಶ್ರೇಣೀಕೃತ ಸಮಾಜದಿಂದ ಕೆಲವರಿಗೆ ಉನ್ನತಿ, ಹಲವರಿಗೆ ಅಧೋಗತಿ. ಭ್ರಾತೃತ್ವ ಇಲ್ಲದ್ದರಿಂದ ಜಾತಿ ಬಂದಿದೆ; ಅಸ್ಪೃಶ್ಯತೆ ಇದೆ. ಜಾತಿಪ್ರಜ್ಞೆ ಇರುವುದರಿಂದ ನ್ಯಾಯಪ್ರಜ್ಞೆ ಕಳೆದು ಹೋಗಿದೆ. ನ್ಯಾಯಪ್ರಜ್ಞೆ ಇಲ್ಲದ್ದರಿಂದ ಸಾಮಾಜಿಕ ಅನ್ಯಾಯ ಕಾಣುತ್ತಿಲ್ಲ. ಹೀಗಾಗಿ ಸ್ವಾತಂತ್ರ್ಯ ಸಮಾನತೆ, ಭ್ರಾತೃತ್ವ ಉರು ಹೊಡೆಯುವ ತತ್ವಗಳಾಗಿ ಉಳಿದಿವೆ. ಶಿಕ್ಷಣ ಮನುಷ್ಯಪ್ರಜ್ಞೆಯನ್ನು ಶುಚಿಗೊಳಿಸುತ್ತದೆ ಎಂದು ಅಂಬೇಡ್ಕರ್ ನಂಬಿದ್ದರು. ಆದರೆ, ಅದೂ ಪೂರ್ಣ ನಿಜವಾಗಿ ಕಾಣುತ್ತಿಲ್ಲ. ಈಗ ಶಿಕ್ಷಣ ಪಡೆದವರಲ್ಲೂ ಜಾತಿಪ್ರಜ್ಞೆ ಜಾಗೃತವಾಗೇ ಇದೆ. ಆದರೆ, ನಾವೆಲ್ಲರೂ ನೆನಪಿಡೋಣ: ಜಾತಿ ಅಳಿಯದೆ ಭ್ರಾತೃತ್ವ ಹುಟ್ಟುವುದಿಲ್ಲ. ಆಗ, ನಾವು ಎಲ್ಲರೂ ಭಾರತೀಯರಾಗಿ ಒಟ್ಟಿಗೆ ಇರುವುದು ಕಷ್ಟವಾದೀತಲ್ಲವೆ?

ಗಾಂಧಿ–ಅಂಬೇಡ್ಕರ್ ವಿಶಾಲ ಹೃದಯಿಗಳು; ಇಬ್ಬರೂ ಅಪ್ಪಟ ಮಾನವತಾವಾದಿಗಳು. ಇಬ್ಬರೂ ದೇಶದ ಬಗ್ಗೆ ಮತ್ತು ಅನ್ಯಾಯದ ಬಗ್ಗೆ ಚಿಂತಿಸಿದ್ದಾರೆ. ಗಾಂಧಿ ಮತ್ತು ಅಂಬೇಡ್ಕರ್ ಚಿಂತನೆಗಳು ಕೆಲವು ಸಾರ್ವತ್ರಿಕ ವಾದವುಗಳಿದ್ದವು; ಇನ್ನೂ ಕೆಲವು ಸಾಂದರ್ಭಿಕವಾದವುಗಳಿದ್ದವು. ಸಾಂದರ್ಭಿಕ ವಾದವುಗಳಿಗೆ ನಾವು ಈಗ ಹೆಚ್ಚಿನ ಮಹತ್ವವನ್ನು ನೀಡುವ ಅವಶ್ಯಕತೆ ಇಲ್ಲ. ಇಬ್ಬರೂ ಸಾರ್ವತ್ರಿಕ ಒಳಿತಿಗಾಗಿ ಮಂಡಿಸಿದ ಚಿಂತನೆಯನ್ನು ನಾವೀಗ ಮುಂದಕ್ಕೆ ಕೊಂಡೊಯ್ಯಬೇಕಿದೆ. ಇಬ್ಬರೂ ನಡೆಸಿದ ಚಿಂತನೆಗಳು ವರ್ತಮಾನಕ್ಕೆ ತುಂಬಾ ಅನಿವಾರ್ಯ ಎಂಬುದು ಸಾರ್ವತ್ರಿಕ ಸತ್ಯವಾಗಿದೆ.

ರಾಷ್ಟ್ರಕ್ಕೆ ಅಂಬೇಡ್ಕರ್ ಅಂತಹ ತಂದೆ, ಗಾಂಧೀ ಅಂತಹ ತಾಯಿ ಬೇಕು. 'ಅಂಬೇಡ್ಕರ್ ಎನ್ನುವ ದೇಹದಲ್ಲಿರುವ ಆತ್ಮವೇ ಗಾಂಧಿ' ಎಂಬ ಮಾತನ್ನು ನಾವು ಹೃದಯಕ್ಕೆ ಇಳಿಸಿಕೊಳ್ಳಬೇಕು. ಇಬ್ಬರೂ ಪ್ರಪಂಚದ ಬಹುದೊಡ್ಡ ಚೇತನಗಳು.

ಸಾಮಾಜಿಕ ನ್ಯಾಯ ಮತ್ತು ಬಸವ ಚಿಂತನೆ

ಡಾ. ಜಿ.ಇ. ಅಜ್ಜಪ್ಪ

ಸಾಮಾಜಿಕ ನ್ಯಾಯ

ಸಾಮಾಜಿಕ ನ್ಯಾಯವೆಂಬುದು ವ್ಯಕ್ತಿ ಮತ್ತು ಸಮಾಜದ ಮಧ್ಯೆ ಇರುವ ಭಾವನೆಗೆ ಸಂಬಂಧಿಸಿದುದು. ಸಂಪತ್ತು, ಸಂಪನ್ಮೂಲ, ಅವಕಾಶಗಳ ಸಮಾನ ಹಂಚಿಕೆಯೇ ಸಾಮಾಜಿಕ ನ್ಯಾಯವಾಗಿದೆ. ಯಾವುದೇ ಮತಧರ್ಮದ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ಗುರುತಿಸದೆ, ಅರ್ಹತೆಯ ಹಿನ್ನೆಲೆಯಲ್ಲಿ ಅವಕಾಶ ನೀಡುವುದು, ಮಾನವ ಹಕ್ಕು ಮತ್ತು ಸಮಾನತೆ ತತ್ವ ಇದುವೇ ಸಾಮಾಜಿಕ ನ್ಯಾಯ.

ನಮ್ಮ ದೇಶದ ಇತಿಹಾಸವನ್ನು ಗಮನಿಸಿದರೆ, ಸಾಮಾಜಿಕ ನ್ಯಾಯಕ್ಕೆ ಕಾಲಕಾಲಕ್ಕೆ ಧಕ್ಕೆ ಒದಗುತ್ತಲೇ ಬಂದಿದೆ. ಇಂತಹ ಕಾಲದಲ್ಲಿ ಅದನ್ನು ಸರಿಪಡಿಸಲು ದಾರಿ ತೋರುವ ಚಿಂತಕರು, ಸಮಾಜಸುಧಾರಕರು ಬಂದು ತಮ್ಮ ಚಿಂತನೆಯನ್ನು ಬಿಟ್ಟು ಹೋಗಿದ್ದಾರೆ. ಅವರಲ್ಲಿ ಬುದ್ಧ ಬಸವ, ಗಾಂಧಿ, ಅಂಬೇಡ್ಕರ್‌ರವರ ಚಿಂತನೆಗಳು ಮುಖ್ಯವಾಗುತ್ತವೆ.

ಬಸವ ಚಿಂತನೆ:

ಹನ್ನೆರಡನೆ ಶತಮಾನ ನಮ್ಮ ನಾಡಿನ ಇತಿಹಾಸದಲ್ಲಿ ಪ್ರಮುಖವಾದ ಕಾಲಘಟ್ಟ. ಸಾಮಾಜಿಕ ನ್ಯಾಯದ ಪರಿಕಲ್ಪನೆಗಳಾದ ಸಮಾನತೆ, ಅವಕಾಶಗಳ ಸಮಾನ ಹಂಚಿಕೆ, ಕಾಯಕ ತತ್ವ ಮುಂತಾದ ವಿಷಯಗಳನ್ನು ಕುರಿತು ಚಿಂತಿಸಿ, ಸಮಾಜದ ಜನರಲ್ಲಿ ಆ ಭಾವನೆ ಮೂಡಲು ಕಾರಣರಾದವರು ಸಮಾಜ ಸುಧಾರಕ, ಸಾಹಿತಿ ಮತ್ತು ಭಕ್ತಿ ಭಂಡಾರಿ ಧಾರ್ಮಿಕ ಪುರುಷನೆಂದು ಗುರುತಿಸಲ್ಪಡುವ ಬಸವಣ್ಣ ಅವರು.

ಬಸವಣ್ಣ ಅವರು ಗತಿಸಿ 850 ವರ್ಷಗಳಾದರೂ, ಕನ್ನಡ ನಾಡಿನ ಜನಮಾನಸದಲ್ಲಿ ಜೀವನ ಮೌಲ್ಯ ಸಾರುವ ಅವರ ವಚನಗಳು ಇಂದೂ ಮಾರ್ದನಿಸುತ್ತಿವೆ. ಸಮಾಜ ಮುಖಿಯಾದ ಸಾಮಾಜಿಕ ನ್ಯಾಯದ ಭಾವನೆಗಳಿಂದ ಒಡಮೂಡಿದ ಅಂದಿನ ವಚನಕಾರರ ನುಡಿಗಳು ಬಡವರ ಕಣ್ಣೀರು ಒರೆಸುವಂತಿದ್ದು, ಅವುಗಳು ತಳ ಸಮುದಾಯದ ಜನರ ದಾರಿ ದೀಪವಾಗಿವೆ. ಅವುಗಳ ವೈಶಿಷ್ಟ್ಯ ಅಪಾರ. ಅವುಗಳನ್ನು

ನೆನಪಿಸಿಕೊಂಡು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವ ಮಾತನ್ನು ನಾವು ಆಡುತ್ತೇವೆ; ಆ ಕಡೆ ಹೆಜ್ಜೆ ಹಾಕುತ್ತೇವೆ. ನಮ್ಮ ಹೃದಯದಲ್ಲಿರುವ ಆಶಯವೇ ಬಸವಣ್ಣನ ಚಿಂತನೆ. ಬಸವಣ್ಣ ಎನ್ನುವುದು ಪರಿವರ್ತನೆಯ ಮಹಾಸೌಧ.

ಕಾಯಕ ತತ್ವ–ಸಮಾನತೆ:

ಬಸವಣ್ಣನವರು ಸ್ಥಾವರ ಮಾದರಿಯ ಬದುಕನ್ನು ಖಂಡಿಸಿ ಮನುಷ್ಯ ಜೀವನಕ್ಕೆ ಕಾಯಕವೇ ಶ್ರೇಷ್ಠವೆಂದು ಪ್ರತಿಪಾದಿಸತೊಡಗಿದರು. ಬಸವಣ್ಣನವರ ಬದುಕಿನ ಕ್ರಮ, ಚಿಂತನೆ, ಸಾಮಾನ್ಯ ಜನರ ಬದುಕನ್ನು ಕಟ್ಟಲು ಶ್ರಮಿಸಿದ್ದು ನಿರಾಕಾರ ತತ್ವದೆಡೆಗೆ ಪಯಣಿಸಿದ್ದು ಎಲ್ಲವೂ ಗಮನಾರ್ಹ. ಆದುದರಿಂದಲೇ ಬಸವಣ್ಣನವರು ಕಟ್ಟಿದ್ದು ಮಠವಲ್ಲ, ಅನುಭವ ಮಂಟಪ. ವ್ಯಕ್ತಿಯೊಬ್ಬ ಸ್ವಾವಲಂಬನೆಗೆ ಸಂಬಂಧಿಸಿದಂತೆ ತನ್ನ ಜೀವನ ನಿರ್ವಹಣೆಗೆ ಒಂದು ಕೆಲಸ ಮಾಡಬೇಕು. ಆರ್ಥಿಕ ನೆಲೆ, ನ್ಯಾಯ ಕೊಡುವ ಯಾವುದಾದರೂ ಕೆಲಸ ಮಾಡಬೇಕು. ಶ್ರಮ ಗೌರವ, ಉದ್ಯೋಗಶೀಲತೆ ಮಾನವನ ಸಹಜ ಪ್ರವೃತ್ತಿಯಾಗಬೇಕು ಎಂಬುದು ಬಸವಣ್ಣನ ಆಶಯ.

"ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ" ಎಂದು ಅವರು ಹೇಳಿದ್ದಾರೆ. ಕಾಯಕ ತತ್ವದ ಪ್ರಕಾರ ಸ್ವಂತ ದುಡಿಮೆ ಹೊರತಾದ ಧನವು ಕಸಕ್ಕಿಂತಲೂ ಕಡೆ. ಬೇಡುವ ಪ್ರವೃತ್ತಿ ಅತ್ಯಂತ ಹೀನವಾದದು. ಪ್ರತಿಯೊಬ್ಬ ವ್ಯಕ್ತಿ ದುಡಿದು ಬದುಕಬೇಕು. ಬೇರೆಯವರನ್ನು ಅವಲಂಬಿಸಿ ಬದುಕಬಾರದು. ಸಾಮಾಜಿಕ ಉದ್ದೇಶವಿರುವ ಸಂಪತ್ತಿನ ಉತ್ಪಾದನೆಗೆ ನೆರವಾಗುವ ಬೌದ್ಧಿಕ ಮತ್ತು ದೈಹಿಕ ಶ್ರಮವನ್ನು ಬಸವಣ್ಣ 'ಕಾಯಕ' ಎಂದಿದ್ದಾರೆ. ಕೆಲಸದಿಂದ ಸಂಪತ್ತು ಉತ್ಪತ್ತಿಯಾಗುತ್ತದೆ. ಸಂಪತ್ತನ್ನು ನಾವು ಕೇವಲ ನಮ್ಮ ಸುಖಭೋಗಕ್ಕಾಗಿ ಬಳಸಬಾರದು. ನಾವು ಈ ಸಮಾಜದ ಒಂದು ಅಂಗ. ನಮ್ಮ ಯಾವುದೇ ಸಾಧನೆ ಅಥವಾ ಗಳಿಕೆಯಲ್ಲಿ ಈ ಸಮಾಜಕ್ಕೆ ಪಾಲಿದೆ. ಕಾಯಕದ ಮೂಲಕ ಜಗತ್ತಿನ ಹಿತಕ್ಕಾಗಿ ಸರ್ವವನ್ನು ತ್ಯಾಗ ಮಾಡಿ, ಸಮಾಜದ ಉನ್ನತಿಗಾಗಿ ದುಡಿಯಬೇಕು. ಮಾನವರು ತಮ್ಮ ಬದುಕನ್ನು ನಡೆಸುವ ಸಮಯದಲ್ಲಿ ಉದರ ಪೋಷಣೆಯ ಸಲುವಾಗಿ ಯಾವುದಾದರೂ ಒಂದು ಕೆಲಸ ಮಾಡಬೇಕು. ಅದೇ ಕಾಯಕ ತತ್ವ.

ಕಾಯಕ ತತ್ವದ ಪ್ರಕಾರ ನಾವು ಸುಲಭ ಸಂಪಾದನೆಗಾಗಿ ಅಡ್ಡ ಹಾದಿ ಹಿಡಿಯಬಾರದು. ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಬೆವರು ಸುರಿಸಿ ದುಡಿಯಬೇಕು. ವಾಮಮಾರ್ಗದ ಹಣಕ್ಕೆ ದುರಾಸೆ ಪಡಬಾರದು. ಆರ್ಥಿಕ ಚಟುವಟಿಕೆಗಳ ನೆಲಗಟ್ಟಿನ ಮೇಲೆ ನಿಂತಿರಬೇಕು. 'ಪವಿತ್ರ ಕಾರ್ಯವೆಂದರೆ, ಪ್ರಾಮಾಣಿಕವಾದ ದುಡಿಮೆ, ವಾಮಮಾರ್ಗದ ಹಣ ಸಂಪಾದನೆ ಪಾಪಕಾರ್ಯ' ಎಂದು ಅವರು ಹೇಳಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿ ಯಾವುದಾದರೊಂದು ಕಾಯಕ ಮಾಡಿ ಬದುಕಲೇಬೇಕಾಗಿತ್ತು. ಕೆಲಸದಲ್ಲಿ ಶ್ರೇಷ್ಠ ಕನಿಷ್ಠವೆಂಬ ತಾರತಮ್ಯ ಇರಬಾರದೆಂಬುದು ಬಸವಣ್ಣನ ನಿಲುವಾಗಿತ್ತು.

ದುಡಿಮೆಯಲ್ಲಿ ಆಧ್ಯಾತ್ಮಿಕ ನೆಲೆಯ ಮೂಲಕ ದುಡಿಮೆಗಾರರಿಗೆ ಹೆಚ್ಚಿನ ಮಹತ್ವವನ್ನು ತಂದುಕೊಡಲು ಅವರು ಬಯಸಿದರು. ನಾವು ಮಾಡುವ ಕಾಯಕ ಸಾಮಾಜಿಕ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗಿದೆ ಎಂದೂ ಬಸವಣ್ಣ ಹೇಳುತ್ತಾರೆ. ಕಾಯಕ ಎನ್ನುವುದು ಕೇವಲ ಹೊಟ್ಟೆಪಾಡಿಗಾಗಿ ಮಾಡುವ ಕರ್ಮವಾಗಿರದೆ ಅದು ವ್ಯಕ್ತಿಯ ಆಧ್ಯಾತ್ಮಿಕ ವಿಕಾಸಕ್ಕೆ ಮತ್ತು ಸಾಮಾಜಿಕ ಹಿತಾಸಕ್ತಿಗೆ ಪೂರಕವಾಗಿರಬೇಕೆಂದು ಬಸವಣ್ಣ ಅಭಿಪ್ರಾಯಪಟ್ಟರು.

ಜಾತಿ–ಮತಾತೀತ

ವ್ಯಕ್ತಿಗಳನ್ನು ಜಾತಿಯ ಮೂಲಕ ತಿಳಿಯಲು ಪ್ರಯತ್ನಿಸುವುದರಿಂದ ಸಮಾಜದಲ್ಲಿ ಸಾಮಾಜಿಕ ಅಸಮಾನತೆ ಯಥಾ ಪ್ರಕಾರ ಮುಂದುವರೆಯುತ್ತದೆ ಎಂಬುದನ್ನು ಗ್ರಹಿಸಿದ ಬಸವಣ್ಣ ವ್ಯಕ್ತಿಯನ್ನಾಗಲೀ, ಜಾತಿಯನ್ನಾಗಲೀ, ಆಧಾರವಾಗಿರಿಸಿಕೊಂಡು ಮತ್ತೊಬ್ಬರನ್ನು ಕೀಳಾಗಿ ಕಾಣುವುದರ ವಿರುದ್ಧ ಧ್ವನಿ ಎತ್ತಿದ್ದಾರೆ.

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸಿದಿರಯ್ಯ
ಕಕ್ಕಯನೊಕ್ಕುದನಿಕ್ಕ ನೋಡಯ್ಯ
ದಾಸಯ್ಯ ಶಿವದಾನವನೆರೆಯ ನೋಡಯ್ಯ
ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ

ನನ್ನನ್ನು ಉತ್ತಮ ಕುಲದಲ್ಲಿ ಹುಟ್ಟಿದವ ಎಂದು ಯಾರೂ ಹೇಳಬೇಡಿರಿ. ಕಕ್ಕಯ್ಯ–ದಾಸಯ್ಯರೊಂದಿಗಿನ ನನ್ನ ಸ್ನೇಹ ಇಲ್ಲದಾಗುತ್ತದೆ ಎಂಬ ಆತಂಕ ವ್ಯಕ್ತಪಡಿಸುತ್ತಾರೆ.

ಸೆಟ್ಟಿ ಎಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ?
ಮಾದಾರನೆಂಬೆನೆ ಚನ್ನಯ್ಯನ
ಆನುಹಾರುವನೆಂದರೆ
ಕೂಡಲಸಂಗಯ್ಯ ನಗುವನಯ್ಯ

ಎಂಬುದಾಗಿ ಹೇಳಿದ ಬಸವಣ್ಣ, ಜಾತಿಯ ಹಿನ್ನೆಲೆಯಲ್ಲಿ ಯಾರನ್ನೇ ಆಗಲಿ ಗುರುತಿಸುವುದನ್ನು ಒಪ್ಪುವುದಿಲ್ಲ. ಮೇಲು ಕೀಳು ಎಂಬುದಿಲ್ಲ ಎಂದು ಹೇಳುತ್ತಾ

ಮೇಲಾಗಲೊಲ್ಲೆ ಕೀಳಾಗಲೊಲ್ಲದೆ
ಕೀಳಿಂಗಲ್ಲದೆ ಹಯನು ಕರೆವುದೆ ?
ಮೇಲಾಗಿ ನರಕದೊಳೋಲಾಡಲಾರೆನು
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು

ಎಂದು ಹೇಳುವಲ್ಲಿ ಮೇಲು ಕೀಳು ಎಂಬುದು ಇಲ್ಲ. ಕೀಳಿನಲ್ಲಿಯೇ ಶ್ರೇಷ್ಠತೆ ಇದೆ ಎಂದಿದ್ದಾರೆ.

'ಸಮಾಜದ ಒಳಿತಿಗಾಗಿ ವ್ಯಕ್ತಿ ತನ್ನಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳ ಬೇಕು. ಕಾಯಕ ಮತ್ತು ದಾಸೋಹಗಳ ಮೂಲಕ ಸಾಮಾಜಿಕ ಅಭ್ಯುದಯ ಸಾಧಿಸಬಹುದು' ಎನ್ನುವುದು ಅವರ ನಂಬಿಕೆಯಾಗಿತ್ತು. ತಾನು-ತನ್ನದು ಎಂಬ ಅಹಂಕಾರ ಮಮಕಾರವನ್ನು ತೊರೆದು ಸಮಾಜದ ಒಟ್ಟು ಕ್ಷೇಮಕ್ಕಾಗಿ ಎಲ್ಲರೂ ಯತ್ನಿಸಬೇಕು ಎಂದ ಅವರು, ಜಾತಿ ಕುಲಗಳ ವ್ಯತ್ಯಾಸವನ್ನು ಹೋಗಲಾಡಿಸಲು ಶ್ರಮಿಸಿದರು.

ವ್ಯಾಸ ಬೋಯಿತಿಯ ಮಗ
ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿ ಭೋ
ಕುಲದಿಂದ ಮುನ್ನೇನಾದಿರಿ ಭೋ
ಸಾಕ್ಷಾತ್ ಅಗಸ್ತ್ಯ ಕಬ್ಬಿಲ
ದೂರ್ವಾಸ ಮಚ್ಚಿಗ
ಕಶ್ಯಪ ಕಮ್ಮಾರ
ಕೌಂಡಿನ್ಯನೆಂಬ ಋಷಿ
ಮೂರು ಲೋಕವರಿಯೆ ನಾವಿದ ಕಾಣೆ ಭೋ
ನಮ್ಮ ಕೂಡಲ ಸಂಗನ ವಚನವಿಂತೆಂದುದು
ಶ್ವಪಚೋಪಿಯಾದರೇನು ಶಿವಭಕ್ತನೇ ಕುಲಜಂ ಭೋ

ಕೆಳಜಾತಿಗಳೆಂದು ಸಮಾಜ ಗುರುತಿಸಿರುವ ಜಾತಿಗಳೇ ಶ್ರೇಷ್ಠ ವ್ಯಕ್ತಿಗಳಿಗೆ ಜನ್ಮ ನೀಡಿವೆ ಎಂದು ಆ ಜಾತಿಗಳ ಜನರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ, ಆ ಮೂಲಕ ಅವರ ಜಾತಿಗಳಿಗೆ ಸಾಮಾಜಿಕ ಸ್ಥಾನಮಾನ ತಂದುಕೊಡುವ ಪ್ರಯತ್ನವನ್ನು ಬಸವಣ್ಣ ಮಾಡಿದ್ದಾರೆ.

ಕೊಲುವವನೇ ಮಾದಿಗ
ಹೊಲಸ ತಿಂಬುವವನೇ ಹೊಲೆಯ
ಕುಲವೇನೋ? ಆವಂದಿರ ಕುಲವೇನೋ
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು

ಎಂದು ಕುಲಜಾತಿಯ ವ್ಯಾಖ್ಯಾನವನ್ನು ನೀಡಿದ್ದಾರೆ. ಆ ಮೂಲಕ 'ಜಾತಿಯ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ಮೇಲು ಕೀಳೆಂದು ಗುರುತಿಸದೆ ಅವರು ಮಾಡುವ ಕಾಯಕದಿಂದ ಗುರುತಿಸಬೇಕು' ಎಂದು ಹೇಳಿದ್ದಾರೆ. ಆ ಮೂಲಕ ಎಲ್ಲರಲ್ಲೂ ಉತ್ತಮರಿದ್ದಾರೆ ಅದನ್ನು ಗುರುತಿಸಬೇಕು ಹಾಗೂ ಒಳ್ಳೆಯ ನಡತೆಯನ್ನು

ಹೊಂದಿದವರೆ ಉತ್ತಮರಾಗುತ್ತಾರೆ ಎಂದು ಹೇಳಿದ್ದಾರಲ್ಲದೆ, ಶ್ರೇಷ್ಠತೆಗೂ ಜಾತಿಗೂ ಯಾವ ಸಂಬಂಧವೂ ಇಲ್ಲ ಎಂದಿದ್ದಾರೆ.

ವಿದ್ಯೆಯಲ್ಲಿ ಸಾಮಾಜಿಕ ನ್ಯಾಯ:

ಪ್ರಜಾಪ್ರಭುತ್ವದ ನಿಲುವಿನ ಅನುಭವ ಮಂಟಪವನ್ನು ಸ್ಥಾಪಿಸಿ, ಲೋಕಹಿತ ಆಲೋಚನೆಯನ್ನು ಬಸವಣ್ಣ ಮಾಡಿದರು. ಸಮಾನತೆಯ ಸಂಕೇತ ಮತ್ತು ವಿದ್ಯೆಯ ಅರಿವಿನ ಕಡೆಗೆ ಜಾಗೃತರಾದರು. ಆಗಿನ ಕಾಲದಲ್ಲಿ ವಿದ್ಯೆ ಕೆಲವೇ ಜನರ ಆಸ್ತಿಯಾಗಿದ್ದಿತು. ಜನಸಾಮಾನ್ಯರು ಶಿಕ್ಷಣದಿಂದ ವಂಚಿತರಾಗಿದ್ದರು. ವೇದಶಾಸ್ತ್ರಗಳಲ್ಲಿ ಅಧ್ಯಯನ ಮಾಡಿ, ತಾವು ಶ್ರೇಷ್ಠರೆಂದು ಭಾವಿಸಿದ್ದ ಬ್ರಾಹ್ಮಣರ ವಿರುದ್ಧ ಬಸವಣ್ಣ ಧ್ವನಿ ಎತ್ತಿದರು.

ಬದುಕಲು ಒಂದಿಲ್ಲೊಂದು ದುಡಿಮೆ ಮಾಡಬೇಕಿದ್ದ ಸಂದರ್ಭದಲ್ಲಿ ದೈಹಿಕ ಶ್ರಮದ ವೃತ್ತಿಗಳು ಪ್ರಮುಖವಾಗಿದ್ದವು. ಮಾನವನು ತನ್ನ ಆಹಾರವನ್ನು ತಾನೇ ಹುಡುಕಿ ಸಂಗ್ರಹಿಸಿಕೊಳ್ಳಬೇಕಾಗುತ್ತಿತ್ತು. ನಂತರದ ದಿನಗಳಲ್ಲಿ ಮಾನವನು ಜ್ಞಾನ ಹೆಚ್ಚಿಸಿಕೊಳ್ಳುತ್ತಾ ಹೋದಂತೆ ದೈಹಿಕ ಶ್ರಮದ ವೃತ್ತಿಯನ್ನು ಹೀನಾಯವಾಗಿ ಕಾಣಲಾಯಿತು. ಸಮಾಜದಲ್ಲಿ ಒಂದು ಗುಂಪು ವಿದ್ಯೆಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡು, ವೇದಶಾಸ್ತ್ರ–ಪುರಾಣ–ಆಗಮ ಗ್ರಂಥಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಿತು. ಬಹುಕಾಲ ಬಹುಪಾಲು ಜನರನ್ನು ಅಜ್ಞಾನದಲ್ಲಿರಿಸುವ ಮೂಲಕ, ಅವರ ದೈಹಿಕ ಶ್ರಮದ ಉತ್ಪನ್ನಕ್ಕೆ ಒಡೆಯರು ತಾವಾಗಿ, ನಿರಾತಂಕದಲ್ಲಿ ಬದುಕುವ ವ್ಯವಸ್ಥೆಯನ್ನು ಮಾಡಿಕೊಂಡಿತು. ಶ್ರಮಜೀವಿಗಳನ್ನು ಹಗಲಿರುಳು ದುಡಿಯಲು ಹಚ್ಚಿ, ದುಡಿಮೆಯಿಂದ ಬಂದ ಉತ್ಪನ್ನಗಳನ್ನು ತಮ್ಮಲ್ಲಿ ಯಥೇಚ್ಛವಾಗಿ ಸಂಗ್ರಹಿಸಿಟ್ಟುಕೊಂಡು, ಸಮಾಜದ ಮೇಲ್ವರ್ಗಗಳು ಐಷಾರಾಮಿಯಾಗಿ ಬದುಕುತ್ತಿದ್ದರು.

ಇಂಥ ಹೊತ್ತಿನಲ್ಲಿ ಬಸವಣ್ಣ, ಕಾಯಕ ತತ್ವಕ್ಕೆ ಸಾಮಾಜಿಕ ನ್ಯಾಯ ಮತ್ತು ಸಾರ್ವತ್ರಿಕ ಮಹತ್ವವನ್ನು ತಂದುಕೊಡಲು ಪ್ರಯತ್ನಿಸಿದರು. 'ಜ್ಞಾನ ಶ್ರೇಷ್ಠ, ಶ್ರಮ ಕನಿಷ್ಟ' ಎಂಬ ವ್ಯತ್ಯಾಸವನ್ನು ಕಟುವಾಗಿ ವಿರೋಧಿಸಿದರು.

ಶಾಸ್ತ್ರ ಘನವೆಂಬೆನೆ ಕರ್ಮವ ಭಜಿಸುತ್ತಿದೆ
ವೇದ ಘನವೆಂಬೆನೆ ಪ್ರಾಣವಧೆಯ ಹೇಳುತ್ತಿದೆ
ಶೃತಿ ಘನವೆಂಬೆನೆ ಮುಂದಿಟ್ಟು ಅರಸುತ್ತದೆ
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ
ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು
ಕೂಡಲ ಸಂಗಮದೇವನ

ವೇದಶಾಸ್ತ್ರಗಳು ಕರ್ಮಸಿದ್ಧಾಂತದಲ್ಲಿ ನಂಬಿಕೆ ಮೂಡಿಸುತ್ತವೆ. ಜೊತೆಗೆ ಶೋಷಣೆಗೆ ಕೇಂದ್ರವಾಗಿವೆ. ಶ್ರಮಜೀವಿಗಳನ್ನು ಗೌರವದಿಂದ ನೋಡುವ ಬದಲು ಕೀಳಾಗಿ

ಕಾಣುತ್ತಾರೆ ಎಂಬುದನ್ನು ಬಸವಣ್ಣ ವಿರೋಧಿಸಿದರು. ಆದ ಕಾರಣ ಕುಲಕಸುಬು ಮಾಡುವ ಕಾಯಕ ಜೀವಿಗಳಿಗೆ ಸಮಾಜದಲ್ಲಿ ಆರ್ಥಿಕ ನ್ಯಾಯ, ಸಾಮಾಜಿಕ ನ್ಯಾಯ ದಕ್ಕಬೇಕೆನ್ನುವ ನಿಟ್ಟಿನಲ್ಲಿ ಬಸವಣ್ಣ ಪ್ರಯತ್ನಿಸಿದರು.

ಸ್ತ್ರೀ ಸಮಾನತೆ

ಮನುಧರ್ಮಶಾಸ್ತ್ರ ಸ್ತ್ರೀಯರನ್ನು ನಿಕೃಷ್ಟವಾಗಿ ಕಂಡಿತ್ತು. ಸ್ತ್ರೀ ಸ್ವಾತಂತ್ರ್ಯ-ಸಮಾನತೆಯ ಬಗ್ಗೆ ಬಸವಣ್ಣ ಅಪಾರ ಗೌರವ ಹೊಂದಿದ್ದರು. ಇವುಗಳನ್ನು ಅವರು ಬಲವಾಗಿ ಪ್ರತಿಪಾದಿಸಿದರು. ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ ಕಲ್ಪಿಸಿದರು. ಅವರ ಕಾಲದಲ್ಲಿ ಇದ್ದ ಸ್ತ್ರೀ ವಚನಕಾರರ ದಂಡು ಬಹುದೊಡ್ಡದು. ಬಸವಣ್ಣ ಮಹಿಳೆಯರನ್ನು ಶಿವನ ಪತ್ನಿ ಮಹಾದೇವಿ ಎಂದೇ ಕಂಡು ಆರಾಧಿಸುತ್ತಿದ್ದರು.

ಸ್ತ್ರೀಯರ ಮೇಲಿನ ಮೋಹದಿಂದ ದಾರಿ ತಪ್ಪುವ ಮಂದಿಯನ್ನು ಬಸವಣ್ಣ ಹೀಗೆ ಎಚ್ಚರಿಸಿದ್ದಾರೆ.

ಪರಸ್ತ್ರೀ ಪರಧನವೆಂಬೀ ಜೂಬಿಗಂಜುವೆ
ಛಲಬೇಕು ಶರಣಂಗೆ ಪರಸ್ತ್ರೀಯನೊಲ್ಲೆನೆಂಬ
ನೋಡಲಾಗದು ನುಡಿಸಲಾಗದು ಪರಸ್ತ್ರೀಯ ಕಾಣಿರೋ
ಪರವಧುವನ್ನು ಮಹಾದೇವಿ ಎಂಬೆ ಕೂಡಲಸಂಗಮದೇವ

ಸ್ತ್ರೀಗೆ ಗೌರವ ಕೊಡಬೇಕು. ಪರಸ್ತ್ರೀ-ಪರಧನಕ್ಕೆ ಆಸೆ ಪಡಬಾರದು ಎಂದು ಅವರು ಹೇಳಿದ್ದಾರೆ. ಹೆಣ್ಣು ಜೀವನದ ಮಾರ್ಗದರ್ಶಿ, ಆಕೆಯಿಂದಾಗಿ ಗಂಡು ಸರಿಯಾದ ಮಾರ್ಗದಲ್ಲಿ ಜೀವನ ನಡೆಸಲು ಸಾಧ್ಯ. ಹೆಣ್ಣನ್ನು ಕೀಳಾಗಿ ಕಾಣುತ್ತಿದ್ದ ಕಾಲದಲ್ಲಿ ಅಕ್ಕಮಹಾದೇವಿ, ಮುಕ್ತಾಯಕ್ಕ, ನೀಲಾಂಬಿಕೆ, ಗಂಗಾಂಬಿಕೆ ಅವರ ವಚನಗಳಲ್ಲಿ ಬರೆಯುವ ಅವಕಾಶಗಳನ್ನು ಬಳಸಿಕೊಂಡರು.

ಹುಳಿವಿಡಿದು ಘೃತವ ಕಾಂಬಂತೆ
ಅಕ್ಷರವಿಡಿದು ವಿದ್ಯೆಯನರಿವಂತೆ
ಅನ್ನವಕೊಂಡು ಚೈತನ್ಯವ ಪಡೆವಂತೆ
ಸತಿಹಿಡಿದು ನಿರ್ಮಾಣ ಸತಿಯ ಕಾಣು

ಎಂದು ಹೇಳುವಲ್ಲಿ ಬಸವಣ್ಣ ಸ್ತ್ರೀಯರಿಗೆ ಉನ್ನತ ಸ್ಥಾನವನ್ನು ನೀಡಿರುವುದು ಸ್ಪಷ್ಟವಾಗುತ್ತದೆ.

ಸಾಮಾಜಿಕ ಮತ್ತು ಮತೀಯ ಸಂಕುಚಿತತೆಯ ದುಷ್ಪರಿಣಾಮವಾಗಿ ಮಾನವ ಕುಲದಲ್ಲಿ ತಲೆದೋರುವ ಮೇಲು-ಕೀಳೆಂಬ ಎಂಗಡಣೆಯನ್ನು ಬಸವಣ್ಣ ಮಾನ್ಯ

ಮಾಡಲಿಲ್ಲ. ಪ್ರಾಂತ-ಪ್ರದೇಶವಾಗಲಿ, ಧನ-ಧಾನ್ಯವಾಗಲಿ ಕೊನೆಗೆ ಪ್ರಕೃತಿ ಸಹಜವಾದ ಹೆಣ್ಣು-ಗಂಡೆಂಬ ಭೇದವಾಗಲಿ, ಮಾನವರನ್ನು ವಿಭಜಿಸಿ ಭಿನ್ನ ಭಿನ್ನಗೊಳಿಸಿ ಪ್ರತ್ಯೇಕಿಸುವುದನ್ನು ಅವರು ಸಹಿಸಲಿಲ್ಲ.

ಬದಲಾಗಿ ಜನರ ಒಗ್ಗಟ್ಟನ್ನು, ಒಡನಾಟವನ್ನು ಮತ್ತು ಇವನ್ನು ಅಭಿವೃದ್ಧಿ ಗೊಳಿಸುವಂತಹ ಧರ್ಮವನ್ನು ಬಸವಣ್ಣ ಬೋಧಿಸಿದರು. ಈ ಕಾರಣದಿಂದಲೇ ಬಸವಣ್ಣನವರು ಬೋಧಿಸಿದ ಧರ್ಮದ ಜೀವಾಳ ದಾನ-ದಯೆ-ನಿರಾಡಂಬರ-ವಿನಯ-ಭಕ್ತಿ-ದುಡಿಮೆ,-ನಿಷ್ಕಾಮಕರ್ಮ. ಮನುಕುಲವೆಲ್ಲ ಒಂದೆಂಬ ಭಾವದಿಂದ ಪರಸ್ಪರ ಹಿತ-ಅಭಿವೃದ್ಧಿಗಾಗಿ ಬಾಳಬೇಕೆಂಬುದೇ ಅವರ ದರ್ಶನಸಾರ. ಇದೇ ಸಾಮಾಜಿಕ ನ್ಯಾಯ. ಇದೇ ಇಂದಿಗೂ, ಎಂದೆಂದಿಗೂ ನಮಗೆ ಜೀವನ ಧ್ಯೇಯ.

ಆಧಾರ ಗ್ರಂಥಗಳು

- ಬಸವಣ್ಣನವರ ವಚನಗಳು- ಸಂ-ಡಾ.ಎಲ್.ಬಸವರಾಜು
- ಲೋಕ ಹಿತ - ಪ್ರೊ. ಎಚ್.ಲಿಂಗಪ್ಪ

ಗಾಂಧಿ ದೃಷ್ಟಿಯಲ್ಲಿ ಶಿಕ್ಷಣ

ಡಾ. ಆರ್. ಶಂಕರಪ್ಪ

ಭಾರತದಲ್ಲಿ ಶಿಕ್ಷಣದ ಹಿನ್ನೆಲೆ

ಭಾರತೀಯ ಶಿಕ್ಷಣ ವ್ಯವಸ್ಥೆಗೆ ಪರಂಪರೆ–ಇತಿಹಾಸ ಇದೆ. ತಕ್ಷಶಿಲಾ, ನಳಂದಾ, ವಿಕ್ರಮಶಿಲಾದಂತಹ ವಿಶ್ವವಿದ್ಯಾಲಯಗಳು ಇಲ್ಲಿದ್ದವು. ಇಂದಿನ ಶಿಕ್ಷಣ ಪದ್ಧತಿ ಇಂಗ್ಲೀಷ್ ಆಡಳಿತಗಾರರ ಕೊಡುಗೆ. ಯುರೋಪಿನ ಜ್ಞಾನ–ವಿಜ್ಞಾನಗಳಿಂದ ಪ್ರಭಾವಿತರಾಗಿದ್ದ ರಾಜಾರಾಮ್ ಮೋಹನ್ ರಾಯ್, ಇಂಗ್ಲೀಷ್ ಶಿಕ್ಷಣ ಹಾಗೂ ಭಾಷೆ ಅನಿವಾರ್ಯ ಎಂದು ಭಾವಿಸಿದ್ದರು. ಬ್ರಿಟಿಷರ ಆಡಳಿತಾವಧಿಯಲ್ಲಿ ಮೆಕಾಲೆಯ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಯಿತು. ದೇಶದ ವಿವಿಧ ಭಾಗದಲ್ಲಿ ಶಾಲಾ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳನ್ನು ತೆರೆಯಲಾಯಿತು. ಆಂಗ್ಲ ಶಿಕ್ಷಣ ಪಡೆದವರು ಮೇಲರಿಮೆ ಬೆಳೆಸಿಕೊಂಡರು. ಇದರ ನೋವಿನ ಚಿತ್ರಣವನ್ನು ಬಂಕಿಮ ಚಂದ್ರರು, 1878ರಲ್ಲಿ ಬರೆದ "ಲೋಕಶಿಕ್ಷಣ" ಎಂಬ ತಮ್ಮ ಲೇಖನದಲ್ಲಿ ಬಿಂಬಿಸಿದ್ದಾರೆ. 'ಇಂಗ್ಲೀಷ್ ಶಿಕ್ಷಣ/ವೈಜ್ಞಾನಿಕ/ಆಧುನಿಕ ಶಿಕ್ಷಣ ಉಪಯುಕ್ತವಲ್ಲ. ಇಲ್ಲಿನ ಪರಂಪರಾಗತ ಲೋಕಶಿಕ್ಷಣ ವ್ಯವಸ್ಥೆ ಹಾಗೂ ಇಲ್ಲಿನ ಭಾಷೆಗಳನ್ನೇ ಅನುಸರಿಸುವುದು ಹೆಚ್ಚು ಹಿತಕರ. ಇಂಗ್ಲೀಷ್ ಶಿಕ್ಷಣದಿಂದಾಗಿ ವಿದ್ಯಾವಂತರು ಅವಿದ್ಯಾವಂತರ ಬಗ್ಗೆ ಸಹಾನುಭೂತಿ ಕಳೆದುಕೊಳ್ಳುತ್ತಾರೆ. ಅವರು ಸಮುದಾಯದ ನಾಡಿ ಮಿಡಿತವನ್ನು ಹೃದಯವನ್ನು ಅರಿತುಕೊಳ್ಳಲು ಅಸಮರ್ಥರಾಗುತ್ತಾರೆ' ಎಂದು ತಿಳಿಸಿದರು.

ಅವರು ಮುಂದುವರೆದು, 'ಇಂಗ್ಲೀಷ್ ಶಿಕ್ಷಣವು ಭಾರತೀಯರನ್ನು ಸ್ವಾರ್ಥಿಗಳನ್ನಾಗಿಸಿ, ಸಾಮಾನ್ಯ ಜನತೆಯಿಂದ ಅವರನ್ನು ಬೇರ್ಪಡಿಸುತ್ತದೆ ಎಂದೂ ಹೇಳಿದರು. ಆದರೂ, ಬ್ರಿಟಿಷ್ ಆಡಳಿತದಲ್ಲಿ ಸೇವೆಗೆ ಸೇರಲು ಅನೇಕರು ಇಂಗ್ಲೀಷ್ ಶಿಕ್ಷಣ ಪಡೆದರು. ಕೆಲವರು ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೂ ಹೋದರು. ಇಂಥವರಲ್ಲಿ ಮೋಹನದಾಸ ಕರಮಚಂದ ಗಾಂಧಿ ಕೂಡ ಒಬ್ಬರಾಗಿದ್ದರು. ಅವರು 3 ವರ್ಷ ಇಂಗ್ಲೆಂಡಿನಲ್ಲಿದ್ದು, ಬ್ಯಾರಿಸ್ಟರ್ ಡಿಗ್ರಿ ಪಡೆದರು. ಆದರೂ, ಅವರು ಇಂಗ್ಲಿಷ್ ಶಿಕ್ಷಣದಿಂದಾಗುವ ಕೆಡುಕನ್ನು ತಮ್ಮ ದೇಶದ ಸಂದರ್ಭದಲ್ಲಿ ಅರಿತು ಕೊಂಡರು. ಅವರು ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗಲೂ, ದೇಶಕ್ಕೆ ಒಳಿತಾಗುವುದು ಸ್ಥಳೀಯ ಭಾಷೆಗಳಲ್ಲಿ ಶಿಕ್ಷಣ

ಕೊಡುವುದರಿಂದಲೇ' ಎಂದು ಅಭಿಪ್ರಾಯಪಟ್ಟರು. ಅಂದರೆ, ಭಾಷೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಂಕಿಮ ಚಂದ್ರರ ಅಭಿಪ್ರಾಯವನ್ನೇ ಗಾಂಧೀಜಿ ಒಪ್ಪಿಕೊಂಡಿದ್ದರು ಎಂಬುದು ಕಂಡು ಬರುತ್ತದೆ.

ಪ್ರಸಿದ್ಧ ಸಮಾಜ ಶಾಸ್ತ್ರಜ್ಞ ಡಾ॥ ಪೂರನ್ ಚಂದ್ರ ಜೋಶಿ ಅವರು, "ಭಾರತೀಯ ಸಂದರ್ಭದಲ್ಲಿ ಮೌಲಿಕ ಹಾಗೂ ಪ್ರಭಾವಶಾಲಿ ಚಿಂತನೆ ಬೆಳೆಸಿದ ಗಾಂಧೀಜಿ ಅನೇಕ ಸಶಕ್ತ ಮತ್ತು ಮಾರ್ಗದರ್ಶಿ ಪ್ರಯೋಗಗಳನ್ನು ಮಾಡಿದರು. ಯುರೋಪಿನ ನಗರಪ್ರಧಾನ ಔದ್ಯೋಗಿಕ ಸಮಾಜ ಮತ್ತು ನಾಗರಿಕತೆಗೆ ಭಿನ್ನವಾದ ಸಮಾಜ/ನಾಗರಿಕತೆ ಹೊಂದಿದ್ದ ಗ್ರಾಮ/ರೈತಪ್ರಧಾನ ಭಾರತ ದೇಶಕ್ಕೆ ಹೊಸ ದರ್ಶನವನ್ನು ನೀಡಲು ಮುಂದಾದರು. ವಾಕ್ ಪ್ರಧಾನ ಹಾಗೂ ಅನೌಪಚಾರಿಕ ಸಂವಹನದ ಮೇಲೆ ಆಧಾರಿತವಾದ ಲೋಕ ಶಿಕ್ಷಣ ಪರಂಪರೆಯನ್ನು ಜನರ ಮುಂದೆ ಇಟ್ಟು, ದೇಶದಲ್ಲಿ ನವ ಜಾಗರಣ ಪ್ರೇರಕ ಶಕ್ತಿಯಾದರು. ಜನರ ನಡುವೆ ಕಂದಕ ಮೂಡುವ ಬಗ್ಗೆ ಎಚ್ಚರಿಕೆ ನೀಡಿದರು. ಎಲ್ಲರ ಮಧ್ಯೆ ಸೇತುವೆ ನೆಲೆಗೊಳಿಸುವಂತಾಗಲು ಪ್ರಯತ್ನಿಸಿದರು. ಬ್ರಿಟಿಷ್ ಸಾಮ್ರಾಜ್ಯವಾದದ ಬುನಾದಿ ಮತ್ತು ಅದರ 'ವರ್ಚಸ್ಸು' ಅಲುಗಾಡುವುದಕ್ಕೆ ನಿಮಿತ್ತವಾದರು. ವ್ಯವಸ್ಥೆಯ ಪರಿವರ್ತನೆಗೆ ಹಾಗೂ ಪುನರ್ ನಿರ್ಮಾಣಕ್ಕೆ ಪ್ರೇರಕ ಶಕ್ತಿಯಾದರು. ರಾಷ್ಟ್ರದ ರಾಜಕೀಯದಲ್ಲಿ ನೈತಿಕ, ಸಾಂಸ್ಕೃತಿಕ ಮೌಲ್ಯಗಳು ಸಮಾವೇಶಗೊಳ್ಳಲು, ರಾಜಕೀಯ ಚೇತನ ಹಾಗೂ ಜವಾಬ್ದಾರಿ ಮೂಡಲು ಗಾಂಧೀಜಿ ನೀಡಿದ ಕೊಡುಗೆ, ಮಾಡಿದ ಪ್ರಯೋಗ 20ನೇ ಶತಮಾನದಲ್ಲಿ –ವಿಶೇಷವಾಗಿ ಏಷ್ಯಾದ ಸಂದರ್ಭದಲ್ಲಿ ಅದ್ಭುತ ಹಾಗೂ ಅನುಪಮವಾದುದಾಗಿತ್ತು' ಎನ್ನುತ್ತಾರೆ.

ಗಾಂಧೀಜಿ, ಶಿಕ್ಷಣ ಪರಂಪರೆಯ ವಿಕಾಸ ಮಾಡಿ, ಬ್ರಿಟಿಷ್ ವಸಾಹತು ಶಾಹಿಯನ್ನು ಪ್ರತಿಭಟಿಸುವ ದಾರಿಯನ್ನು ಪ್ರಸ್ತುತಗೊಳಿಸಿದರು. ಕಳೆದುಕೊಂಡ ರಾಷ್ಟ್ರೀಯ ಸ್ವಾತಂತ್ರ್ಯ ಹಾಗು ಅಸ್ಮಿತೆಯನ್ನು ಆ ಮೂಲಕವೇ ಪಡೆಯಲು ಸಾಧ್ಯ ಎಂದು ಅವರು ಸ್ಪಷ್ಟಪಡಿಸಿದರು. ಇದರಿಂದ, ಗಾಂಧೀಜಿ ಅವರು ರಾಜಾರಾಮ ಮೋಹನರಾಯ್ ಅವರ ಚಿಂತನೆಯ ಬದಲಿಗೆ ಬಂಕಿಮ ಚಂದ್ರರ ವಿಚಾರಕ್ಕೆ ಸಮೀಪ ಇದ್ದುದು ಕಾಣುತ್ತದೆ.

ಸಮಸ್ತ ಪ್ರಾಂತೀಯ ಭಾಷೆಗಳಿಗೆ ಮಹತ್ವ ನೀಡಬೇಕು. ಮಾತೃಭಾಷೆ ಮಾಧ್ಯಮದಲ್ಲಿಯೇ ಶಿಕ್ಷಣ ಕೊಡಬೇಕು ಸಂಪರ್ಕ ಮಾಧ್ಯಮವಾಗಿ ಹಿಂದಿ ಇರಬೇಕು ಎಂದು ಗಾಂಧೀಜಿ ತಿಳಿಸಿದರು. ಅವರು ಈ ಕುರಿತು ತಮ್ಮ ಕೃತಿ 'ಹಿಂದ್ ಸ್ವರಾಜ್'ದಲ್ಲಿ ಪ್ರಸ್ತಾಪಿಸಿದ್ದಾರೆ. 'ಇಂಗ್ಲಿಷರು ತಮ್ಮ ದೇಶದ ಅವಶ್ಯಕತೆಗೆ ಅನುಗುಣವಾಗಿ ಶಿಕ್ಷಣ ಪದ್ದತಿಯನ್ನು ಬದಲಿಸಬಹುದಾದರೆ, ಭಾರತೀಯರು ತಮ್ಮ ದೇಶದ ಪರಿಸ್ಥಿತಿ ಮತ್ತು ಅವಶ್ಯಕತೆಗೆ ಅನುಗುಣವಾಗಿ ಶಿಕ್ಷಣ ಪದ್ದತಿಯನ್ನು ಯಾಕೆ ಅನುಸರಿಸ ಬಾರದು? ಇಲ್ಲಿನ ಶಿಕ್ಷಣ ಪದ್ಧತಿ ಇಲ್ಲಿಗೆ ಸೂಕ್ತವಾಗಿರಬೇಕಲ್ಲವೆ? ವೇಲ್ಸ್ ಪ್ರಾಂತದ ಜನರು ತಮ್ಮ ಭಾಷೆಯ ಉಳಿವಿಗಾಗಿ ಮತ್ತು ಬಳಕೆಗಾಗಿ ಪ್ರಯತ್ನ ಮಾಡಬಹು ದಾದರೆ,

ಭಾರತೀಯರು ಯಾಕೆ ತಮ್ಮ ಭಾಷೆಯ ಪುನರುಜ್ಜೀವನ ಮಾಡಬಾರದು? ಇಂಗ್ಲೀಷ್ ಶಿಕ್ಷಣವನ್ನು ಸ್ವೀಕಾರ ಮಾಡಿಯೇ ನಾವು ಗುಲಾಮರಾದೆವಲ್ಲವೆ?' ಎಂದು ಕೇಳಿದರಲ್ಲದೆ, 'ಇಂಗ್ಲಿಷ್ ಶಿಕ್ಷಣವು ಆಧುನಿಕತೆ ಹಾಗೂ ಜ್ಞಾನೋದಯದ ವಾಹಕ ಎಂದು ಕೆಲವೇ ಭಾರತೀಯರು ಮಾಡುತ್ತಿದ್ದ ವಾದದಲ್ಲಿನ ಪೊಳ್ಳುತನವನ್ನು ಎತ್ತಿ ಹೇಳಿದರು.

ಗಾಂಧೀಜಿ ತಮ್ಮ 'ಇಂಡಿಯನ್ ಒಪೀನಿಯನ್' ಪತ್ರಿಕೆಯ 28-08-1910ರ ಸಂಚಿಕೆಯಲ್ಲಿ 'ಶಿಕ್ಷಣದಲ್ಲಿ ಮಾತೃಭಾಷೆಯ ಸ್ಥಾನ' ಎಂಬ ಲೇಖನದಲ್ಲಿ 'ಭಾರತೀಯ ಯುವಜನರು ಮಾತೃಭಾಷೆಯನ್ನು ಓದಲು, ಬರೆಯಲು ನಿರ್ಲಕ್ಷ್ಯ ತೋರುವುದು ಕಾಣುತ್ತದೆ. ಇದು ಅಕ್ಷಮ್ಯವಾದದ್ದು. ಅವರು ತಮ್ಮ ರಾಷ್ಟ್ರದ ಬಗೆಗೆ ಅಭಿಮಾನ ಹೊಂದಿರಬೇಕಲ್ಲವೆ? ಎನ್ನುತ್ತಾರೆ. ಇನ್ನೊಂದು ಲೇಖನ 'ಶಿಕ್ಷಣದ ಮಾಧ್ಯಮ ಯಾವುದಾಗಬೇಕು?' ಎಂಬುದರಲ್ಲಿ

"ಮಕ್ಕಳನ್ನು ಇಂಗ್ಲಿಷರನ್ನಾಗಿ ಮಾಡುವ, ಅವರಿಗೆ ಶಿಕ್ಷಣ ನೀಡಿ, ಅವರನ್ನು ವಸಾಹತುಶಾಹಿಯ ಸೇವೆಗೆ ಯೋಗ್ಯರನ್ನಾಗಿ ಮಾಡುವ ಪ್ರವೃತ್ತಿಯನ್ನು ಕಾಣುತ್ತೇವೆ. ತಮ್ಮ ರಾಷ್ಟ್ರೀಯ ವಿಶೇಷತೆ, ಪರಂಪರೆಯಿಂದ ಪಡೆದ ಶಿಕ್ಷಣ ಮತ್ತು ಸಂಸ್ಕೃತಿಯನ್ನು ಬಿಡಬೇಕು, ಇನ್ನೊಬ್ಬರನ್ನು ನಕಲು ಮಾಡಬೇಕು ಎಂದು ಇಂಗ್ಲೀಷರೂ ಅಪೇಕ್ಷಿಸಲಾರರು. ಮಾತೃಭಾಷೆ ಎಷ್ಟೇ ಸಾಮಾನ್ಯದ್ದಾಗಿರಲಿ, ಅದರ ಬಗ್ಗೆ ನಿರ್ಲಕ್ಷ್ಯ ತೋರಿದರೆ, ಅಪಾಯವನ್ನು ಎಳೆದುಕೊಂಡಂತೆ" ಎಂದಿದ್ದಾರೆ.

ಶಿಕ್ಷಣಕ್ಕೆ ಪ್ರೇರಣೆ

ಗಾಂಧೀಜಿ, ಭಾರತಕ್ಕೆ ಮರಳಿದ ಮೇಲೆ, ಭಾಷೆಯ ಪ್ರಶ್ನೆಯನ್ನು ಮೊದಲು ಎತ್ತಿದ್ದು 4 ಫೆಬ್ರವರಿ 1916ರಂದು ಕಾಶಿ ಹಿಂದೂ ವಿಶ್ವವಿದ್ಯಾಲಯದ ಉದ್ಘಾಟನಾ ಸಮಾರಂಭದಲ್ಲಿ. ಆ ಸಮಾರಂಭದಲ್ಲಿ ದೇಶದ ರಾಜ-ಮಹಾರಾಜರುಗಳು, ಅನೇಕ ಗಣ್ಯವ್ಯಕ್ತಿಗಳು ಹಾಜರಿದ್ದರು. ಅಲ್ಲಿ ಹಿಂದಿಯಲ್ಲಿ ಭಾಷಣ ಮಾಡಿದ ಏಕ ಮಾತ್ರ ವ್ಯಕ್ತಿ ಗಾಂಧೀಜಿ ಆಗಿದ್ದರು. ಉಳಿದವರ ಭಾಷಣಗಳು ಇಂಗ್ಲಿಷ್‌ನಲ್ಲಿ ಇದ್ದವು. ಗಾಂಧೀಜಿ ಈ ಸಂದರ್ಭದಲ್ಲಿ ಮಾತನಾಡುತ್ತ "ಈ ಮಹಾನ್ ವಿದ್ಯಾಪೀಠದ ಪ್ರಾಂಗಣದಲ್ಲಿ ನಮ್ಮದೇ ದೇಶದ ಜನರೊಡನೆ ಇಂಗ್ಲಿಷ್‌ನಲ್ಲಿ ಮಾತನಾಡುವುದು ನಾಚಿಕೆಗೇಡಿನ ಸಂಗತಿ. ಈ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯ ಮಾಧ್ಯಮದಲ್ಲೇ ಶಿಕ್ಷಣ ನೀಡುವ ವ್ಯವಸ್ಥೆಯಾಗುತ್ತದೆಂದು ನಾನು ಆಶಿಸಿದ್ದೇನೆ. ನಮ್ಮ ಭಾಷೆಯು ನಮ್ಮದೇ ಪ್ರತಿಬಿಂಬವಾಗಿದೆ. ನಮ್ಮ ಭಾಷೆಯಲ್ಲಿ ಉಚ್ಚ ವಿಚಾರಗಳನ್ನು ಅಭಿವ್ಯಕ್ತಪಡಿಸುವುದು ಸಾಧ್ಯವಿದೆ. ನಮಗೆ ನಮ್ಮದೇ ಭಾಷೆಯಲ್ಲಿ ಶಿಕ್ಷಣ ದೊರಕಿದ್ದರೆ, ಇಂದು ನಾವು ಎಂಥ ಸ್ಥಿತಿಯಲ್ಲಿರುತ್ತಿದ್ದೆವು. ನಮ್ಮ ಬಳಿ ಸ್ವತಂತ್ರ ಭಾರತ ಇರುತ್ತಿತ್ತು. ನಮ್ಮ ಬಳಿ ನಮ್ಮದೇ ವಿದ್ಯಾವಂತ ವ್ಯಕ್ತಿಗಳು ಇರುತ್ತಿದ್ದರು. ನಮ್ಮದೇ ನೆಲದಲ್ಲಿ ವಿದೇಶೀಯರ ಆಡಳಿತ

ಇರುತ್ತಿರಲಿಲ್ಲ" ಎಂದು ಹೇಳಿದರು. ಸಭೆಯಲ್ಲಿ ಹಾಜರಿದ್ದ ಹಲವು ಇಂಗ್ಲಿಷ್ ಭಕ್ತರಿಗೆ ಗಾಂಧಿ ಅವರ ಈ ಭಾಷಣದಿಂದ ಸಾಕಷ್ಟು ಕಿರಿಕಿರಿ ಆಯಿತು.

15 ಅಕ್ಟೋಬರ್ 1917ರಲ್ಲಿ ಬಿಹಾರದ ಭಾಗಲಪುರದಲ್ಲಿ ವಿದ್ಯಾರ್ಥಿಗಳ ಸಮ್ಮೇಳನದಲ್ಲಿ ಮಾತನಾಡುತ್ತ ಗಾಂಧೀಜಿ "ಮಾತೃಭಾಷೆಯ ಅನಾದರ ಎಂದರೆ ತಾಯಿಯ ಅನಾದರ. ಮಾತೃಭಾಷೆಗೆ ಅಪಮಾನ ಮಾಡುವವರು ಸ್ವದೇಶಿ ಎಂದು ಹೇಳಿಕೊಳ್ಳಲು ಯೋಗ್ಯರಲ್ಲ. ಉನ್ನತವಾದ ವಿಚಾರಗಳನ್ನು ಪ್ರಕಟಿಸಲು ನಮ್ಮ ಭಾಷೆಯಲ್ಲಿ ಶಬ್ದಗಳೇ ಇಲ್ಲ ಎಂದರೆ, ಅದು ಭಾಷೆಯ ದೋಷವಲ್ಲ. ಭಾಷೆಯನ್ನು ಬಳಸದಿರುವವರ, ಬೆಳೆಸದಿರುವವರ ದೋಷ. ಒಂದು ಕಾಲದಲ್ಲಿ ಇಂಗ್ಲಿಷ್‌ಗೂ ಇಂಥದೇ ಸ್ಥಿತಿ ಇತ್ತು. ಇಂಗ್ಲಿಷ್ ಯಾಕೆ ವಿಕಾಸವಾಯಿತೆಂದರೆ ಇಂಗ್ಲಿಷರು ಮುಂದುವರೆದರು; ತಮ್ಮ ಭಾಷೆಯನ್ನು ಕಟ್ಟಿದರು. ನಾವು ನಮ್ಮ ಮಾತೃಭಾಷೆಯ ಉನ್ನತಿ ಮಾಡದಿದ್ದರೆ, ಇಂಗ್ಲಿಷ್ ಮೂಲಕವೇ ನಮ್ಮ ಉನ್ನತ ವಿಚಾರಗಳನ್ನು ಪ್ರಕಟ ಪಡಿಸಬಹುದು. ಅದನ್ನು ವಿಕಾಸಗೊಳಿಸಬಹುದು ಎಂಬುದೇ ನಮ್ಮ ಸಿದ್ಧಾಂತವಾದರೆ ನಾವು ಸದಾಕಾಲ ಗುಲಾಮರಾಗಿಯೇ ಇರುತ್ತೇವೆ ಎಂಬುದರಲ್ಲಿ ಸಂದೇಹವಿಲ್ಲ. ಎಲ್ಲಿಯವರೆಗೆ ನಮ್ಮ ಮಾತೃ ಭಾಷೆಯಲ್ಲಿ ಎಲ್ಲ ವಿಚಾರಗಳನ್ನು ಪ್ರಕಟಿಸುವ ಶಕ್ತಿಯನ್ನು ನಾವು ತುಂಬುವ, ನಮ್ಮ ಮಾತೃಭಾಷೆಯಲ್ಲಿ ವೈಜ್ಞಾನಿಕ ವಿಷಯಗಳನ್ನು ತಿಳಿಸಿ ಹೇಳುವ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುವುದಿಲ್ಲವೊ, ಅಲ್ಲಿಯವರೆಗೆ ರಾಷ್ಟ್ರಕ್ಕೆ ಏನು ಜ್ಞಾನ ಸಿಕ್ಕೀತು?' ಎಂದರು. ಅವರು ಮುಂದುವರೆದು,

1. ನಗರದ ಜನರಿಗೆ ಹೊಸ ಜ್ಞಾನದ ಅವಶ್ಯಕತೆಯಿದೆ.
2. ಎಲ್ಲರೂ ಇಂಗ್ಲಿಷ್‌ನ್ನು ಎಂದೂ ತಿಳಿದುಕೊಳ್ಳಲಾರರು.
3. ಇಂಗ್ಲಿಷ್ ಓದಿದವರು ಮಾತ್ರ ಹೊಸ ಜ್ಞಾನವನ್ನು ಪಡೆಯಬಲ್ಲರಾದರೆ, ಎಲ್ಲರಿಗೂ ಹೊಸ ಜ್ಞಾನ ಸಿಗಲಾರದು.

ಎಲ್ಲ ಜನರೂ ವಿದ್ಯಾವಂತರಾಗಬೇಕು. ಶಿಕ್ಷಣವು ಎಲ್ಲರಿಗೆ ಸಂಬಂಧಿಸಿದ್ದು, ಹಾಗಾಗಿಯೇ ಅದನ್ನು ಎಲ್ಲರಿಗೂ ಅವರವರ ಮಾತೃಭಾಷೆಯಲ್ಲಿಯೇ ಕೊಡಬೇಕು. ಇಂಗ್ಲಿಷ್‌ನ ಮೋಹಪಾಶವು ಗುಲಾಮಗಿರಿಯನ್ನು ಮತ್ತಷ್ಟು ಬಲಿಷ್ಟಗೊಳಿಸುತ್ತದೆ. ದಾಸ್ಯದಿಂದ ಬಿಡುಗಡೆ ಪಡೆಯಬೇಕೆಂದರೆ ಇಂಗ್ಲಿಷ್‌ನಿಂದಲೂ ಬಿಡುಗಡೆ ಪಡೆಯಬೇಕು. ಸ್ವಾವಲಂಬನೆಗಾಗಿ ದೇಶೀಯ ಉದ್ಯೋಗಗಳ ವಿಕಾಸ ಆಗಬೇಕು. ನನಗೆ ಇಂಗ್ಲಿಷ್‌ನೊಡನೆ ವೈರವಿಲ್ಲ. ಆ ಭಾಷೆಯ ಭಂಡಾರ ದೊಡ್ಡದು. ಅಲ್ಲಿ ಜ್ಞಾನನಿಧಿ ಇದೆ. ಆದರೆ, ನನ್ನ ಅಭಿಪ್ರಾಯದಲ್ಲಿ ಹಿಂದೂಸ್ತಾನದ ಎಲ್ಲರೂ ಅದನ್ನು ಕಲಿಯುವ ಅವಶ್ಯಕತೆ ಇಲ್ಲ.

ನಿಮ್ಮಲ್ಲಿ ಇಷ್ಟೇ ಪ್ರಾರ್ಥನೆ ಮಾಡಬಲ್ಲೆ: ನಿಮ್ಮ ನಿಮ್ಮಲ್ಲಿ ವ್ಯವಹರಿಸುವಾಗ ಮತ್ತು ಸಾಧ್ಯವಿರುವ ಕಡೆಗಳಲ್ಲೆಲ್ಲ ಮಾತೃಭಾಷೆಯನ್ನೇ ಉಪಯೋಗಿಸಿ. ಇಲ್ಲಿರುವ

ಮಹನೀಯರು ಶಿಕ್ಷಣದ ಮಾಧ್ಯಮವಾಗಿ ಮಾತೃಭಾಷೆಯನ್ನೇ ಬಳಸಲು ಭಗೀರಥ ಪ್ರಯತ್ನ ಮಾಡಲಿ. ಭಾಗಲಪುರ ಬಿಹಾರದ ಒಂದು ನಗರ. ಇಲ್ಲಿ ಭೋಜಪುರಿ, ಮೈಥಿಲಿ, ಮಗಹಿ, ವಜ್ಜಿಕಾ ಹಾಗೂ ಅಂಗಿಕಾ ಇತ್ಯಾದಿ ನುಡಿಗಳಿವೆ. ಇವುಗಳೂ ಬೆಳೆಯಬೇಕು ಎಂದು ಗಾಂಧೀಜಿ ಭಾಗಲಪುರದ ಅದೇ ಭಾಷಣದಲ್ಲಿ ಹೇಳಿದರು.

ಅವರು ಅಲ್ಲಿ ಭಾಷಣದ ಪ್ರಾರಂಭದಲ್ಲಿಯೇ 'ಇಂದು ಹಿಂದಿನಲ್ಲಿಯೇ ಭಾಷಣ ಮಾಡಲು ಮತ್ತು ಸಮ್ಮೇಳನದ ಕೆಲಸವನ್ನು ಹಿಂದಿಯಲ್ಲಿಯೇ ನಡೆಸಲು ಅನುಮತಿ ನೀಡಿ, ನನ್ನ ಬಗ್ಗೆ ಪ್ರೀತಿ ತೋರಲಾಗಿದೆ. ಈ ಸಮ್ಮೇಳನದ ಕಾರ್ಯಗಳನ್ನು ಪ್ರಾಂತೀಯ ಭಾಷೆಯಲ್ಲಿ ಅದು ರಾಷ್ಟ್ರಭಾಷೆಯೂ ಹೌದು, ಮಾಡುವ ನಿಶ್ಚಯ ಮಾಡಿರುವುದು ದೂರದರ್ಶಿಯಾದ ಕೆಲಸ. ಇದಕ್ಕಾಗಿ ನಾನು ನಿಮಗೆ ಅಭಿನಂದನೆ ಹೇಳುತ್ತೇನೆ. ಈ ಪದ್ಧತಿಯನ್ನು ನೀವು ಮುಂದುವರೆಸಿಕೊಂಡು ಹೋಗುವಿರಾಗಿ ನಂಬಿದ್ದೇನೆ' ಎಂದು ತಿಳಿಸಿದರು.

ಭಾಗಲಪುರ ಇದ್ದ ಬಿಹಾರ ಪ್ರಾಂತವಾಗಲಿ, ಪಕ್ಕದ ಉ.ಪ್ರದೇಶವಾಗಲಿ ಹಿಂದಿ ಭಾಷಿಕ ಜನರು ಇರುವ ಪ್ರದೇಶಗಳು. ಆದ್ದರಿಂದ ಗಾಂಧೀಜಿ ಅಂದು ಹಿಂದಿ ಭಾಷೆಯ ಬಗ್ಗೆ ಮಾತನಾಡಿದರು. ಇದರ ಅರ್ಥ ಇಂದು ಕೂಡ ಇಡೀ ಭಾರತದಲ್ಲಿ ಹಿಂದಿ ಜಾರಿಗೊಳಿಸಬೇಕು ಎಂಬುದಲ್ಲ. ಗಾಂಧೀಜಿ ಅರ್ಥ ಇದಾಗಿರಲೇ ಇಲ್ಲ. ಆದ್ದರಿಂದ, ಈಗ ಕೆಲವರು ಗಾಂಧೀಜಿ ಅವರನ್ನೇ ಉದಾಹರಿಸುತ್ತಾ, ಹಿಂದಿ ಪರ ವಕಾಲತ್ತು ವಹಿಸುವುದು ಸರಿಯಲ್ಲ. ಗಾಂಧೀಜಿ ಪ್ರತಿಪಾದಿಸಿದ್ದು ಮಾತೃಭಾಷೆಯ ಹಿರಿಮೆಯನ್ನು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

20 ಅಕ್ಟೋಬರ್ 1917ರಲ್ಲಿ ಗುಜರಾತಿನ ಭಡೋಚದಲ್ಲಿ ಗುಜರಾತದ ಎರಡನೆಯ ಶಿಕ್ಷಣ ಸಮ್ಮೇಳನದಲ್ಲಿಯೂ ಗಾಂಧೀಜಿ ಶಿಕ್ಷಣದ ಮಾಧ್ಯಮ ಹಾಗೂ ಭಾಷಾ ಸಂಬಂಧಿ ದೃಷ್ಟಿಕೋನವನ್ನು ಸ್ಪಷ್ಟಪಡಿಸಿದ್ದು ಹೀಗೆ: "ನಮ್ಮ ಮೊದಲ ಕೆಲಸ ಶಿಕ್ಷಣದ ಮಾಧ್ಯಮವನ್ನು ಸಾಕಷ್ಟು ವಿಚಾರ ಮಾಡಿ ನಿಶ್ಚಯ ಮಾಡುವುದು, ಅದಿಲ್ಲದೆ ಮಾಡುವ ಕೆಲಸಗಳೆಲ್ಲ ವ್ಯರ್ಥವಾದಾವು. ಶಿಕ್ಷಣದ ಮಾಧ್ಯಮವನ್ನು ಕುರಿತು ವಿಚಾರ ಮಾಡದೇ ಶಿಕ್ಷಣ ನೀಡುವುದು, ಗಟ್ಟಿ ನೆಲಗಟ್ಟಿಲ್ಲದೆ ಕಟ್ಟಡವನ್ನು ಕಟ್ಟುವ ಪ್ರಯತ್ನ ಮಾಡಿದ ಹಾಗೆ. ಈ ವಿಚಾರವಾಗಿ ಎರಡು ಅಭಿಪ್ರಾಯಗಳು ಕಾಣುತ್ತವೆ. ಒಂದು ಕಡೆಯವರು ಹೇಳುತ್ತಾರೆ: ಶಿಕ್ಷಣವು ಮಾತೃಭಾಷಾ (ಗುಜರಾತಿ) ಮಾಧ್ಯಮದಲ್ಲಿಯೇ ಕೊಡಬೇಕು ಎಂದು. ಇನ್ನೊಂದು ಕಡೆಯವರು ಹೇಳುತ್ತಾರೆ: ಶಿಕ್ಷಣವನ್ನು ಇಂಗ್ಲೀಷ್ ಮಾಧ್ಯಮದ ಮೂಲಕವೇ ಕೊಡಬೇಕು ಎಂದು. ಎರಡೂ ಪಕ್ಷದವರ ಉದ್ದೇಶ ಪವಿತ್ರವಾದದ್ದೇ. ಇಬ್ಬರೂ ದೇಶದ ಹಿತವನ್ನು ಬಯಸುತ್ತಾರೆ, ಅದರ ಪವಿತ್ರವಾದ ಉದ್ದೇಶವಷ್ಟೇ ಸಿದ್ದಿಗೆ ಸಾಕಾಗದು. ಯಾಕೆಂದರೆ ಪವಿತ್ರ ಉದ್ದೇಶವನ್ನಿಟ್ಟುಕೊಂಡು ಅನೇಕ ಬಾರಿ

ಅಪವಿತ್ರ ಹೊಂಡಕ್ಕೆ ಬಂದಿದ್ದಿದೆ. ಆದ್ದರಿಂದ ನಾವು ಎರಡೂ ಅಭಿಪ್ರಾಯಗಳ ಗುಣ-ದೋಷಗಳನ್ನು ಪರೀಕ್ಷಿಸಿ, ಸಾಧ್ಯವಾದರೆ ಏಕಮತದಿಂದ ಈ ಪ್ರಶ್ನೆಯನ್ನು ಬಿಡಿಸಬೇಕು."

ಗಾಂಧೀಜಿ, ಪ್ರಜಾಸತ್ತಾತ್ಮಕ ಮೌಲ್ಯಗಳ ಪರವಾಗಿದ್ದವರು. ವಿರೋಧಿ ಗುಂಪಿನ ಅಭಿಪ್ರಾಯವನ್ನು ಸಾರಾಸಗಟು ತಳ್ಳಿಹಾಕುವ ಸ್ವಭಾವ-ಆಚರಣೆ ಅವರದಾಗಿರಲಿಲ್ಲ. ಆದ್ದರಿಂದ ತರ್ಕಸಂಗತವಾಗಿ ಮಾತನಾಡಿ, ಅಸಮ್ಮತಿಯನ್ನು ನಿವಾರಣೆ ಮಾಡುವ ಪ್ರಯತ್ನ ಅವರು ಮಾಡುತ್ತಿದ್ದರು. ಎರಡೂ ಅಭಿಪ್ರಾಯಗಳ ಗುಣ-ದೋಷಗಳನ್ನು ವಿಚಾರ ಮಾಡುತ್ತ, ಮಾತೃಭಾಷೆಯನ್ನೇ ಶಿಕ್ಷಣ ಮಾಧ್ಯಮ ಮಾಡುವ ಪರವಾಗಿ ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

ಗಾಂಧೀಜಿ ತಮ್ಮ ಚಿಂತನೆಯನ್ನು ವಾಸ್ತವ ಸಂಗತಿಗಳೊಂದಿಗೆ ತೌಲನಿಕವಾಗಿ ಮಂಡಿಸಿ, ವಿವರವಾದ ತಿಳಿವಳಿಕೆಯನ್ನು ಕೊಡುತ್ತಿದ್ದರು. ವಂಗ-ಭಂಗದ ಕಾಲದಲ್ಲಿ (1905) ಸ್ವದೇಶೀಯ ಉತ್ಸಾಹ ಉಕ್ಕಿತ್ತು. ಬಂಗಾಲದಲ್ಲಿ ಬಂಗಾಲಿ ಭಾಷೆಯ ಮೂಲಕ ಶಿಕ್ಷಣ ಕೊಡುವ ಪ್ರಯತ್ನ ನಡೆದಿತ್ತು. ರಾಷ್ಟ್ರೀಯ ಪಾಠಶಾಲೆಗಳು ಸ್ಥಾಪನೆಯಾದವು. ಹಣದ ಸುರಿಮಳೆಯಾಯಿತು. ಆದರೆ ಈ ಪ್ರಯೋಗ ವ್ಯರ್ಥವಾಯಿತು.

ಇದನ್ನು ಪ್ರಸ್ತಾಪಿಸುತ್ತಾ ಗಾಂಧೀಜಿ "ವ್ಯವಸ್ಥಾಪಕರಿಗೆ ಅದರಲ್ಲಿ ಆಸ್ಥೆ ಇರಲಿಲ್ಲ. ಇದು ನನ್ನ ನಮ್ರ ಅಭಿಪ್ರಾಯ. ಅಲ್ಲದೆ, 'ಬಂಗಾಲಿ ಜನಕ್ಕೆ ಇಂಗ್ಲೀಷ್ ಭಾಷೆ ಮತ್ತು ಸಾಹಿತ್ಯದ ಮೇಲೆ ಪ್ರಭುತ್ವ ಇದ್ದುದರಿಂದಲೇ ಬಂಗಾಲಿ ಸಾಹಿತ್ಯದಲ್ಲಿ ಪ್ರಗತಿಯಾಯಿತು' ಎಂಬುದು ಸರಿಯಲ್ಲ. ಏಕೆಂದರೆ, ತಥ್ಯವು ಈ ತರ್ಕಕ್ಕೆ ವಿರುದ್ಧ ವಾಗಿದೆ. ರವೀಂದ್ರನಾಥರ ಚಮತ್ಕಾರೀ ಬಂಗಾಲಿ ಭಾಷೆ ಇಂಗ್ಲೀಷ್‌ಗೆ ಋಣಿ ಯಾದದ್ದಲ್ಲ. ಸ್ವಭಾಷೆಯ ಮೇಲಿನ ಅಭಿಮಾನವೇ ಅವರ ಭಾಷಿಕ ಚಮತ್ಕಾರಕ್ಕೆ ಕಾರಣ. ಅವರು ತಮ್ಮ ವಿಚಾರವನ್ನು ಇಂಗ್ಲೀಷ್‌ನಿಂದ ತೆಗೆದುಕೊಳ್ಳಲಿಲ್ಲ. ಈ ದೇಶದ ವಾತಾವರಣದಿಂದ ತಗೊಂಡರು. ಉಪನಿಷತ್ತುಗಳಿಂದ ಸ್ವೀಕರಿಸಿದರು. ಅವರ ಮೇಲೆ ವಿಚಾರಗಳ ಸುರಿಮಳೆ ಭಾರತದ ಆಕಾಶದಿಂದ ಆದದ್ದು. ಮಾತೃಭಾಷೆಯ ವಿಕಾಸವು ಅದರ ಬಗ್ಗೆ ಉತ್ಕಟವಾದ ಪ್ರೇಮ, ನಿಜವಾದ ಶ್ರದ್ಧೆ ಇದ್ದಾಗಲೇ ಸಾಧ್ಯ" ಎಂದರು. ಜೊತೆಗೆ, "ಭಾಷೆಗಳು ಅದನ್ನು ಆಡುವವರ ಚಾರಿತ್ರ್ಯದ ಪ್ರತಿಬಿಂಬಗಳು. ದಕ್ಷಿಣ ಆಫ್ರಿಕಾದ ಹಬಶಿಗಳ ಭಾಷೆ ಅರಿತುಕೊಳ್ಳುವುದ ರಿಂದ, ನಾವು ಅವರ ರೀತಿ-ರಿವಾಜುಗಳನ್ನು ಅರಿತುಕೊಳ್ಳಬಹುದು" ಎಂದೂ ಅವರು ಹೇಳಿದರು.

ಶಿಕ್ಷಣದ ಸ್ವದೇಶೀಕರಣ

ವಿದೇಶಿ ಭಾಷೆಯಲ್ಲಿ ಶಿಕ್ಷಣ ನೀಡುವುದರ ಕುರಿತು ಗಾಂಧೀಜಿ ಬಹಳ ಆಳವಾಗಿ ಅದರ ಬೇರೆ ಬೇರೆ ಮಗ್ಗಲುಗಳನ್ನು ಶೋಧಿಸಿದ್ದರು. ಈ ಸಂಬಂಧವಾದ ಅವರ ಅನುಭವಜನ್ಯ ವಿಚಾರ ಹೀಗಿತ್ತು. ಅವರು, "ಜಗದೀಶಚಂದ್ರ ಬೋಸ (ವಿಜ್ಞಾನಿ, 1858-1937) ಪ್ರಫುಲ್ಲ ಚಂದ್ರ ರಾಯ್ (1861-1944) ಮಾತೃಭಾಷೆಯಲ್ಲಿ ಶಿಕ್ಷಣ

ಪಡೆದರು. ಮಾತೃಭಾಷೆಯಲ್ಲಿ ಶಿಕ್ಷಣ ದೊರಕಿದರೆ, ನಮ್ಮಲ್ಲಿ ಎಷ್ಟೋ ಬೋಸ್, ರಾಯ್‌ಗಳು ಆಗಿರುತ್ತಿದ್ದರು" ಎಂದೂ ಅಭಿಪ್ರಾಯಪಟ್ಟಿದ್ದರು.

"ತಾಯಿಯ ಮೊಲೆಹಾಲಿನೊಂದಿಗೆ ಎಂಥ ಸಂಸ್ಕಾರ ಹಾಗೂ ಮಧುರವಾದ ಶಬ್ದಗಳು ದೊರೆಯುತ್ತವೋ ಅವುಗಳ ಮತ್ತು ಶಾಲೆಯ ನಡುವೆ ಹೊಂದಾಣಿಕೆ ಇರಬೇಕು. ಅದು ವಿದೇಶಿ ಭಾಷೆಯಲ್ಲಿ ಶಿಕ್ಷಣ ಪಡೆಯುವುದರಿಂದ ಮುರಿದು ಹೋಗುತ್ತದೆ. ನಾವು ಈ ಬಗೆಯ ಶಿಕ್ಷಣ ನೀಡಿ ಮಾತೃದ್ರೋಹ ಮಾಡುತ್ತಿದ್ದೇವೆ. ಸಾಮಾನ್ಯರು ಇಂಗ್ಲೀಷ್ ಮಾತನಾಡುವವರನ್ನು ಸಾಹೇಬರು ಎಂದು ತಿಳಿಯುತ್ತಾರೆ ಮತ್ತು ಅವರಿಗೆ ಹೆದರುತ್ತಾರೆ" ಎಂದು ಹೇಳಿದ ಗಾಂಧೀಜಿ, ಇಂಗ್ಲಿಷ್ ಭಾಷೆ ಮತ್ತು ಶಿಕ್ಷಣದ ಮೂಲಕ ಹೊಸ ಭಾರತದ ನಿರ್ಮಾಣ ಮಾಡಬೇಕೆಂಬ ಅಭಿಪ್ರಾಯವನ್ನು ಬೆಂಬಲಿಸಲಿಲ್ಲ.

ಗಾಂಧೀಜಿ, ದೇಶೀ ಭಾಷೆಗಳು, ಪರಂಪರೆ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಆಧರಿಸಿದ ಶಿಕ್ಷಣ ಪದ್ಧತಿಯನ್ನು ಬಯಸಿದ್ದರು. ಜೊತೆಗೆ, ತಮ್ಮ ಭಾಷೆ ಹಾಗೂ ಸಾಹಿತ್ಯದ ಬಗ್ಗೆ ಇರುವ ಹೀನ ಭಾವನೆಯನ್ನು ಬಿಟ್ಟು, ರಾಷ್ಟ್ರೀಯ ಸ್ವಾಭಿಮಾನ ಮೂಡಿಸಿಕೊಳ್ಳುವಂತೆ ಅವರು ಭಾರತೀಯರಿಗೆ ಕರೆ ನೀಡಿದರು.

01–04–1920ರ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಗಾಂಧೀಜಿ 'ದೇಶೀ ಭಾಷೆಗಳ ಹಿತ' ಎಂಬ ಲೇಖನ ಪ್ರಕಟಿಸಿದರು. ಪ್ರಾರಂಭದಲ್ಲಿ ಕೆಲವು ಶಿಕ್ಷಣ ತಜ್ಞರ ಹೇಳಿಕೆಗಳನ್ನು (ಉದಾ: ಸೈಂಟ್ ಪಾಲ್ ಕೆಥಿಡ್ರಲ್ ಕಾಲೇಜ್ ಕಲಕತ್ತಾದ ಪ್ರಿನ್ಸಿಪಾಲ್ ರೆವರೆಂಡ್ ಡಬ್ಲ್ಯೂ.ಇ.ಎಸ್.ಹಾಲೆಂಡ್ ಅವರ 'ಜಪಾನ್ ರೂಪಿಸಿರುವ ಮಾತೃಭಾಷೆ ಮಾಧ್ಯಮದ ಶಿಕ್ಷಣ ಪದ್ಧತಿಯನ್ನು ಪಾಶ್ಚಾತ್ಯ ಜಗತ್ತು ಗೌರವಿಸುತ್ತಿದೆ' ಎಂಬ ಮಾತು, 'ಮಾರ್ಡನ್ ರಿವ್ಯೂ' ಸಂಪಾದಕ ಬಾಬೂ ರಮಾನಂದ ಚಟರ್ಜಿ ಅವರ 'ವಿಶ್ವವಿದ್ಯಾಲಯಗಳ ಎಲ್ಲ ಹಂತಗಳಲ್ಲಿ ದೇಶೀ ಭಾಷೆಗಳ ಪ್ರಯೋಗ ಅನಿವಾರ್ಯ. ಇದರ ವಿರುದ್ಧ ಏನೆಲ್ಲ ತೊಂದರೆಗಳಿದ್ದರೂ ಅವು ಶಾಶ್ವತವಲ್ಲ. ಯಾಕೆಂದರೆ ಅತ್ಯಂತ ವಿಕಸಿತ ಆಧುನಿಕ ಭಾಷೆಗಳು ಮತ್ತು ಸಾಹಿತ್ಯ ಸತತ ಪ್ರಯೋಗದಿಂದ ಶ್ರೇಷ್ಠವಾಗಬಲ್ಲವು' ಎಂಬ ಮಾತು) ಉಲ್ಲೇಖಿಸಿ, ಮಾತೃಭಾಷಾ ಮಾಧ್ಯಮದ ಶಿಕ್ಷಣ ಹೆಚ್ಚುಗಾರಿಕೆಯನ್ನು ಮನವರಿಕೆ ಮಾಡಿಕೊಟ್ಟರು.

ಗಾಂಧೀಜಿ, ವಸಾಹತುಶಾಹಿಯನ್ನು ಕೇವಲ ರಾಜಕೀಯ ಕಾರಣದಿಂದಷ್ಟೇ ಅಲ್ಲದೆ, ಭಾಷೆ ಮತ್ತು ಶಿಕ್ಷಣದ ದೃಷ್ಟಿಯಿಂದಲೂ ವಿರೋಧಿಸಿದರು. ಅವರು, ಶಿಕ್ಷಣ ಮತ್ತು ಭಾಷಾ ಕ್ಷೇತ್ರದಿಂದ ವಿದೇಶಿ ಪ್ರಭುತ್ವವನ್ನು ದೂರ ಸರಿಸುವುದು ಅವಶ್ಯಕವೆಂದು ತಿಳಿದಿದ್ದರು. ವಸಾಹತುಶಾಹಿಯ ಹಿತವನ್ನು ಬಲಪಡಿಸು ವುದಕ್ಕಾಗಿಯೇ ಭಾರತೀಯರಿಗೆ ಇಂಗ್ಲಿಷ್ ಶಿಕ್ಷಣ ನೀಡಲಾಗುತ್ತಿದ್ದುದನ್ನು ಅವರು ಎತ್ತಿ ಹೇಳಿದರು. ಈ ಮೂಲಕ ಅವರು ಜನಪರ ಶಿಕ್ಷಣವನ್ನು ಪ್ರತಿಪಾದಿಸಿದರು.

ಎಲ್ಲ ಜನರಿಗೂ ಶಿಕ್ಷಣ ದೊರಕಬೇಕು. ದೇಶೀ ಶಿಕ್ಷಣಕ್ಕೆ ಆದ್ಯತೆ ದೊರೆಯಬೇಕು. ಜನರಿಗೆ ಶಿಕ್ಷಣ ಜನತೆಯ ಭಾಷೆಯಲ್ಲಿಯೇ ದೊರಕಬೇಕು ಎಂದ ಅವರು, ಅದಕ್ಕಾಗಿ ಮಾತೃಭಾಷೆಯನ್ನು ಮುಕ್ತವಾಗಿ ಸಮರ್ಥಿಸಿದರು. ಆಗ, ಪ್ರಾಂತೀಯ ಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕೆಂಬ ಬೇಡಿಕೆಯು, ರಾಷ್ಟ್ರೀಯ ಸ್ತರದಲ್ಲಿ ಬಂಗಾಲ-ಮಹಾರಾಷ್ಟ್ರ ಮುಂತಾದ ಒಂದೆರಡು ಕಡೆ ಅಷ್ಟೇ ಕೇಳಿ ಬರುತ್ತಿತ್ತು. ಅಂಥ ಪರಿಸ್ಥಿತಿಯಲ್ಲಿ 'ಶಿಕ್ಷಣವನ್ನು ಮಾತೃಭಾಷೆಯ ಮೂಲಕ ಶ್ರೀಮಂತ-ಬಡವ, ಕಾರ್ಮಿಕ-ರೈತ, ಸ್ತ್ರೀ-ಪುರುಷ, ಎಲ್ಲರಿಗೂ ಒದಗಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಅಭಿಯಾನವನ್ನು ನಡೆಸಿ, ವಸಾಹತುಶಾಹಿ ವರ್ಚಸ್ಸನ್ನು ದೂರ ಮಾಡಿ, ಸ್ವದೇಶಿ ಪರಂಪರೆಗೆ ಅನುಗುಣವಾಗಿ ಜನರನ್ನು ಬೆಸೆಯುವ ಪ್ರಯತ್ನ ಮಾಡಿದವರಲ್ಲಿ ಗಾಂಧಿ ಮೊದಲಿಗರಾದರು.

ಉಪಸಂಹಾರ

ಆದರೆ ದುರ್ಭಾಗ್ಯವೆಂದರೆ, ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಸ್ವದೇಶಿ ಸಮಗ್ರ ಸಿದ್ಧಾಂತ ಗೇಲಿ ಮಾಡುವ ವಿಷಯವಾಗಿದೆ. ಗಾಂಧೀಜಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ವ್ಯಕ್ತಪಡಿಸಿದ ವಿಚಾರಗಳು ತಿರಸ್ಕರಿಸಲ್ಪಟ್ಟಿವೆ. ಧರ್ಮಪಾಲ್ ಅವರು "ದೌರ್ಭಾಗ್ಯವಶಾತ್ ಸ್ವತಂತ್ರ ಭಾರತದಲ್ಲಿ ಬ್ರಿಟಿಷ್ ರಾಜ್ಯದ ವ್ಯವಹಾರದ ಕ್ರಮವನ್ನೇ ಅನುಸರಿಸಲಾಯಿತು. ಅವರ ಮೇಲೆ ಬಹುಶ: ಬ್ರಿಟಿಷ್ ಶಿಕ್ಷಣ ಮತ್ತು ತರಬೇತಿಯ ಪ್ರಭಾವವು ಗಾಂಧಿ ಅವರ ಪ್ರಭಾವಕ್ಕಿಂತ ಪ್ರಬಲವಾಗಿತ್ತು. ಸೋವಿಯತ್ ಒಕ್ಕೂಟ ಆಗಿರಲಿ, ಅಮೆರಿಕಾ ಅಥವಾ ಯುರೋಪಿನ ಔದ್ಯೋಗಿಕ ಕ್ರಾಂತಿಯಾಗಿರಲಿ, ಅವರ ದೃಷ್ಟಿಯಲ್ಲಿ ಮುಖ್ಯವಾಗಿತ್ತು. ಆದ್ದರಿಂದಲೇ, ಅವರಿಗೆ ಭಾರತದ ಪ್ರತಿಯೊಂದು ವಸ್ತುವೂ ಹಳೆಯ ಕಾಲದ್ದಾಗಿ, ಅಪರಿಷ್ಕೃತವಾಗಿ, ಸಂಕೀರ್ಣವಾಗಿ, ಅಂಧವಿಶ್ವಾಸವಾಗಿ ಕಾಣುತ್ತಿತ್ತು. ವಿದೇಶಗಳನ್ನು ಅನುಕರಿಸುವುದೇ ಭಾರತದ ಹೆಮ್ಮೆ ಅಥವಾ ಪ್ರಗತಿ ಎಂದು ತಿಳಿದಿದ್ದರು. ಅವರ ದೃಷ್ಟಿಯಲ್ಲಿ ಭಾರತದ ಜನರು ಅವರ ದಾರಿಗೆ ಅಡ್ಡಗಾಲು ಆಗಿದ್ದರು. ಇದು ಸಾರ್ವಜನಿಕ ರೂಪದಲ್ಲಿ ವ್ಯಕ್ತವಾಗದಿದ್ದರೂ, ದೃಷ್ಟಿ ಅದೇ ಆಗಿತ್ತು. ಈ ರೀತಿಯ ದೃಷ್ಟಿಯುಳ್ಳವರಿಗೆ ತಾವೂ ಭಾರತೀಯರು ಎಂಬುದು ನೆನಪಿರಲಿಲ್ಲ" ಎಂದು ದಾಖಲಿಸಿದ್ದಾರೆ.

ಸ್ವತಂತ್ರ ಭಾರತದ ಎಪ್ಪತ್ತು ವರ್ಷಗಳ ವಾಸ್ತವವನ್ನು ನೋಡಿದಾಗ, ಧರ್ಮಪಾಲರು ಹೇಳಿದ್ದು ಅಕ್ಷರಶ: ಸತ್ಯ ಎಂದು ತೋರುತ್ತದೆ. ವಸಾಹತುಶಾಹಿ ಆಡಳಿತವು ತಂತ್ರದ ಮೂಲಕ ಜನತೆಯಲ್ಲಿ ಒಡಕು ಹುಟ್ಟಿಸುವಲ್ಲಿ ಸಫಲವಾಗಿತ್ತು. ಸಮಾಜದಲ್ಲಿ ಅಂತರ ಉಂಟು ಮಾಡಲು ಮೊದಲಿನಿಂದ ನಡೆಸುತ್ತಿದ್ದ ಪಬ್ಲಿಕ್ ಸ್ಕೂಲ್‌ಗಳು ಸ್ವತಂತ್ರ ಭಾರತದಲ್ಲೂ ಉಳಿದವು. ಕ್ರಮೇಣ ಅವುಗಳು ಹೆಚ್ಚುತ್ತಲೇ ಹೋದವು.

ಇಂದು ಪರಿಸ್ಥಿತಿ ಏನಾಗಿದೆ? ನಗರಗಳಿಂದ ಹಿಡಿದು ಕಸಬಾ(ಹೋಬಳಿ) ವರೆಗೆ ಇಂಗ್ಲಿಷ್ ಸ್ಕೂಲಿನ ಬಲೆ ಹರಡಿಕೊಂಡಿದೆ. ಈ ವಸಾಹತುಶಾಹಿ ಶಿಕ್ಷಣ ಪದ್ಧತಿಯ ಶಿಲುಬೆಯನ್ನು ಹೊರುತ್ತಿರುವ ಕಾರಣದಿಂದಲೇ, ವಿದ್ಯಾವಂತ ಸಮುದಾಯವು ಸಾಮಾನ್ಯ ಮನುಷ್ಯ, ಕಾರ್ಮಿಕ, ರೈತರಿಂದ ಬೇರೆಯಾಗಿಯೇ ಉಳಿದಿದ್ದಾರೆ. ಇಂದು ಶಿಕ್ಷಣ ಪಡೆಯುವವರ ಎಲ್ಲ ಗಮನವು, ತಮ್ಮ ಕರಿಯರ್(ವೃತ್ತಿ) ಭದ್ರತೆಯ ಕಡೆಗೆ ಇದೆ. ಜನತೆಯ ಬೇಕು-ಬೇಡಗಳು, ದು:ಖ-ಕಷ್ಟಗಳು, ಆತಂಕ-ಕಳವಳಗಳ ಬಗ್ಗೆ ಅವರು ತಮಗೇನೂ ಸಂಬಂಧ ಇರದವರಂತೆ ನಡೆದುಕೊಳ್ಳುತ್ತಿದ್ದಾರೆ. ಡಾಕ್ಟರ್, ಇಂಜಿನಿಯರ್, ಅಧ್ಯಾಪಕ, ಶಾಸಕ, ವಿಜ್ಞಾನಿ, ನೌಕರ, ಬ್ಯಾಂಕ್ ಆಫೀಸರ್, ಇತ್ಯಾದಿ ಹುದ್ದೆಗಳನ್ನು ಪಡೆದುಕೊಳ್ಳುವುದೇ ಇಂದು ಶಿಕ್ಷಣದ ಗುರಿಯಾಗಿದೆ. ಪ್ರತಿಯೊಬ್ಬರನ್ನೂ ಅವರವರ ವೃತ್ತಿಗತ ಸ್ವಾರ್ಥ ಆವರಿಸಿಕೊಂಡಿದೆ. ಪ್ರತಿಯೊಬ್ಬರೂ ತಮ್ಮದೇ ಸಂಘ-ಸಂಘಟನೆ ಮಾಡಿಕೊಂಡಿದ್ದಾರೆ. ಅವುಗಳ ಮೂಲಕ ಸೌಲಭ್ಯಗಳಲ್ಲಿ ಹೆಚ್ಚಳ ಪಡೆದುಕೊಳ್ಳುತ್ತಾರೆ.

ಆದರೆ ಸಾಮಾನ್ಯ ಜನರನ್ನು ನಾಶ ಮಾಡುವ ಭ್ರಷ್ಟಾಚಾರ, ನಿರುದ್ಯೋಗ, ಬೆಲೆ ಏರಿಕೆ, ಮಾಲಿನ್ಯ ಇತ್ಯಾದಿಗಳಿಗೂ ತಮಗೂ ಸಂಬಂಧವೇ ಇಲ್ಲ; ರೈತರು ಆತ್ಮಹತ್ಯೆ ಮಾಡಿಕೊಳ್ಳಲಿ, ಅಣೆಕಟ್ಟು ಕಾರ್ಖಾನೆಗಳ ನಿರ್ಮಾಣದಿಂದ ಸಾಮಾನ್ಯ ಜನ ನೆಲೆ ಕಳೆದುಕೊಳ್ಳಲಿ, ಇಂಥವುಗಳ ಬಗ್ಗೆ ಅವರಿಗೇನೂ ಚಿಂತೆಯಿಲ್ಲ. ತಮ್ಮ ವೇತನ ಏರಿಕೆ, ಬಡ್ತಿ, ವರ್ಗಾವಣೆ, ಭತ್ಯೆ ಏರಿಕೆ ಮುಂತಾದವುಗಳತ್ತಲೇ ಅವರ ಗಮನ. ಇಂಥದನ್ನು ಆಗು ಮಾಡಿರುವುದು ಇಂದು ಅವರಿಗೆ ದೊರಕಿರುವ ಶಿಕ್ಷಣ. ಅದರಿಂದಾಗಿಯೇ ಇಲ್ಲಿ ಕಂದರ ನಿರ್ಮಾಣ ಆಗಿದೆ. ಸ್ವಹಿತಕೇಂದ್ರಿತ, ಸ್ವಾರ್ಥಿ ಜನವಿಮುಖಿ ಬದುಕನ್ನು ರೂಪಿಸುವ ಶಿಕ್ಷಣ ಪದ್ಧತಿಯನ್ನು ಮೊದಲು ಬದಲಿಸಬೇಕಿದೆ. ಈ ವಿಷಯದಲ್ಲಿ ನಾವು ಗಾಂಧೀಜಿ ಕಡೆಗೆ ನೋಡುವುದು ಅನಿವಾರ್ಯವಾಗಿದೆ.

ಗ್ರಂಥ ಋಣ

- ಗಾಂಧಿ ಒಂದು ಶೋಧ (ಶ್ರೀ ಭಗವಾನ್ ಸಿಂಗ್)
  ಅನುವಾದ ಆರ್.ಪಿ. ಹೆಗಡೆ
- ಅಮೋಘ ನಾಯಕ್-ಗಾಂಧಿ-ಪಾಸ್ಕಲ್ ಅಲೆನ್ ನಜರತ್
- ಮಹಾತ್ಮಾಗಾಂಧಿ ಅಂತಿಮ ಹಂತ-ಸಂಪುಟ 1 ಮತ್ತು 2
  ಮೂಲ ಪ್ಯಾರೆಲಾಲ್-ಅನುವಾದ ಕೆ.ಎ.ಶಂಕರಗೌಡ
- **M.K.Gandhi an Auto Biography- Mahadev desai**

ನಂಜನಗೂಡು ತಾಲ್ಲೂಕಿನಲ್ಲಿ ಗಾಂಧೀಜಿ ನಾಯಕತ್ವದ ರಚನಾತ್ಮಕ ಕಾರ್ಯಗಳು

ಡಾ.ಎಸ್. ಶಿವರಾಮು

ಭಾರತ ರಾಷ್ಟ್ರೀಯ ಆಂದೋಲನದಲ್ಲಿ ದೇಶಿ ಸಂಸ್ಥಾನಗಳಲ್ಲಿ ನಡೆದ ಚಳುವಳಿಗಳು ಅತಿಮುಖ್ಯವಾದವು. ರಾಷ್ಟ್ರೀಯ ಚಳುವಳಿಯ ಜೊತೆಯಲ್ಲಿ ಭಾರತೀಯ ಸಮಾಜವನ್ನು ಆವರಿಸಿದ್ದ ಹಲವು ಅನಿಷ್ಟ ಆಚರಣೆಗಳನ್ನು ತೊಡೆದುಹಾಕಲು ಚಳುವಳಿಗಾರರು ಹೋರಾಡಿದರು. ಮಹಾತ್ಮಾ ಗಾಂಧೀಜಿ ನಾಯಕತ್ವದಲ್ಲಿ ಭಾರತದಾದ್ಯಂತ ರಚನಾತ್ಮಕ ಕಾರ್ಯಕ್ರಮಗಳು ನಡೆದವು.

ಮೈಸೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು 1938ರ ಫೆಬ್ರವರಿ 28ರ ಮಹಾಶಿವರಾತ್ರಿಯಂದು ಸಭೆ ಸೇರಿ 'ಮೈಸೂರು ಕಾಂಗ್ರೆಸ್' ಸ್ಥಾಪಿಸಿದರು. ಟಿ.ಸಿದ್ದಲಿಂಗಯ್ಯನವರು ಪ್ರಥಮ ಅಧ್ಯಕ್ಷರಾಗಿ ಆಯ್ಕೆಯಾದರು. ಮೈಸೂರು ಕಾಂಗ್ರೆಸ್ ಸ್ಥಾಪನೆಯ ನಂತರ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ನೇತೃತ್ವದ ರಾಜಕೀಯ ಹಾಗೂ ರಚನಾತ್ಮಕ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ನಡೆಯಲಾರಂಭಿಸಿದವು. ಈ ಸಂಶೋಧನಾ ಲೇಖನದಲ್ಲಿ ಮೈಸೂರು ಸಂಸ್ಥಾನದ ನಂಜನಗೂಡು ತಾಲ್ಲೂಕಿನಲ್ಲಿ ಗಾಂಧೀಜಿ ಅವರ ನಾಯಕತ್ವದಲ್ಲಿ ನಡೆದ ರಚನಾತ್ಮಕ ಕಾರ್ಯಕ್ರಮಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

ತಗಡೂರು ಖಾದಿ ಕೇಂದ್ರ

1919ರಲ್ಲಿ ಮೈಸೂರು ಸಂಸ್ಥಾನದಲ್ಲಿಯೇ ಪ್ರಥಮ ಬಾರಿಗೆ ನಂಜನಗೂಡು ತಾಲ್ಲೂಕು ತಗಡೂರಿನಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಹುಟ್ಟುಹಾಕಿದ ಕೀರ್ತಿ ತಗಡೂರು ರಾಮಚಂದ್ರರಾಯರಿಗೆ ಸಲ್ಲುತ್ತದೆ. ಅವರ ಸಂಸ್ಥೆಯೇ ಖಾದಿ ಮತ್ತು ಗ್ರಾಮೋದ್ಯೋಗ, ಅಸ್ಪೃಶ್ಯತಾ ವಿರೋಧಿ ಆಂದೋಲನ, ರಾಷ್ಟ್ರೀಯ ಶಿಕ್ಷಣ ಮತ್ತು ಗ್ರಾಮ ನೈರ್ಮಲ್ಯಗಳ ಬಗ್ಗೆ ಮೊಟ್ಟ ಮೊದಲು ಸಮಾಜ ಸೇವಾ ಕಾರ್ಯ ಕೈಗೊಂಡರು. ಗಾಂಧೀಜಿ ಅವರ "ಹಿಂದ್ ಸ್ವರಾಜ್" ಗ್ರಂಥದಿಂದ ಪ್ರಭಾವಿತರಾಗಿದ್ದ ಅವರು, ಸ್ವದೇಶಿ ತತ್ವದತ್ತ ವಾಲಿದರು. ತಳ್ಳುವ ಗಾಡಿಯ ಮೇಲೆ ಖಾದಿ ಟೋಪಿಗಳನ್ನು ಇಟ್ಟುಕೊಂಡು, ಮೈಸೂರಿನ ಬೀದಿ-ಬೀದಿಗಳಲ್ಲಿ ಅವುಗಳನ್ನು ಮಾರುತ್ತಾ, ಜನರಲ್ಲಿ ಸ್ವದೇಶಿ ಪ್ರೇಮವನ್ನು ಬಿತ್ತಿದರು.

(1) ಕಿರುಗುಂದದ ಮತ್ತು ಸುತ್ತ ಮುತ್ತಲಿನ ಹರಿಜನರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳಲು ಕಾರಣವಾಗಿದ್ದ ಅಂಶಗಳನ್ನು ರಾಮಚಂದ್ರರಾಯರು ಕಂಡುಹಿಡಿದರು; ಹರಿಜನರಿಗೆ ಇದ್ದ ತೊಂದರೆಗಳ ಪರಿಹಾರಕ್ಕೆ ಶ್ರಮಿಸಿದರು. ಇದಕ್ಕಾಗಿ ಅವರು ಪ್ರತಿನಿತ್ಯ 40–50 ಕಿ.ಮೀ. ದೂರ ನಡೆಯುತ್ತಿದ್ದರು. ಹರಿಜನರ ಸಮಸ್ಯೆಗಳನ್ನು ವಿಚಾರಿಸಿ, ಅವುಗಳಿಗೆ ಸೂಕ್ತ ಪರಿಹಾರ ದೊರಕಿಸಿದರು. ಮತಾಂತರಕ್ಕೆ ಪ್ರಬಲ ಕಾರಣ ಆರ್ಥಿಕವಾಗಿ ಹಿಂದುಳಿದಿರುವಿಕೆ, ಗಾಂಧೀಜಿ ಅವರ ರಚನಾತ್ಮಕ ಕಾರ್ಯಕ್ರಮದ ಅಂಶಗಳಾಗಿದ್ದ ಖಾದಿ–ಗ್ರಾಮೋದ್ಯೋಗ, ಪಾನನಿರೋಧ, ರಾಷ್ಟ್ರೀಯ ಶಿಕ್ಷಣ, ಗ್ರಾಮಸ್ವರಾಜ್ಯ ಮತ್ತು ಇನ್ನಿತರ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅವರು ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಚಿಂತಿಸಿದರು.

(2) ಅವರು ತಗಡೂರಿನಲ್ಲಿ 1919ರ ಏಪ್ರಿಲ್ 1ರಂದು 'ಸ್ವರಾಜ್ಯ ಮಂದಿರ'ವನ್ನು ಸ್ಥಾಪಿಸಿದರು. ಅದು ಮೈಸೂರು ಸಂಸ್ಥಾನದ ಪ್ರಥಮ ಸ್ವತಂತ್ರ ಸಂಸ್ಥೆ ಆಗಿತ್ತು.

(3) ಅವರು ತಮ್ಮ ಮಿತ್ರರ ಜೊತೆಗೂಡಿ, ಗಾಂಧೀಜಿ ಅವರು ತಿಳಿಸಿದ್ದಂತಹ ರಚನಾತ್ಮಕ ಕಾರ್ಯಗಳನ್ನು ಅನುಷ್ಠಾನಕ್ಕೆ ತರತೊಡಗಿದರು. ಧರಿಸುವ ಬಟ್ಟೆ ಸ್ವದೇಶಿ ಆಗಿರಬೇಕು ಎಂದು ಅವರು ನಿಶ್ಚಯಿಸಿದರು. ರಾಟೆಯಿಂದ ದಾರವನ್ನು ತೆಗೆದು, ಅದರಿಂದ ಖಾದಿ ಬಟ್ಟೆಯನ್ನು ತಯಾರಿಸುವ ಅವಶ್ಯಕತೆಯ ಬಗ್ಗೆ ಅವರು ಜನರಿಗೆ ತಿಳಿ ಹೇಳಿದರು

(4). ನೂಲುವವರ ಸಂಖ್ಯೆಯನ್ನು ವೃದ್ಧಿಗೊಳಿಸಲು ಊರಿನ ಮನೆ ಗೋಡೆಗಳ ಮೇಲೆ ರಾಟೆಯ ಚಿತ್ರಗಳನ್ನು ಬರೆಸಿದರು. ಪರಿಣಾಮವಾಗಿ, ನೂಲುವ ಕಾರ್ಯ ಆರಂಭವಾಯಿತು. ಅನಂತರ ನೂಲುವವರ ಸಂಖ್ಯೆ 70–80ಕ್ಕೆ ಏರಿ, ಸಾಕಷ್ಟು ನೂಲು ಸಂಗ್ರಹವಾಯಿತು.

(5) ನೂಲೇನೋ ಉತ್ಪಾದಿಸಲ್ಪಟ್ಟಿತು. ಅದನ್ನು ನೇಕಾರರಿಂದ ಕೊಳ್ಳುವವರು ಬೇಕಿತ್ತು. ಇದನ್ನು ಅವರು ಉಪಾಧ್ಯಾಯರಾಗಿದ್ದ ಬಾಲಚಂದ್ರಯ್ಯನವರಲ್ಲಿ ಪ್ರಸ್ತಾಪಿಸಿದರು. ಅವರೂ ಖಾದಿಪ್ರಚಾರವನ್ನು ಮಾಡಿದರು. ಪ್ರೋತ್ಸಾಹವಾಗಿ ಜನರು ಹಣವನ್ನು, ದವಸ ಧಾನ್ಯಗಳನ್ನು ಕೊಟ್ಟರು. ಈ ಹಣ ಮತ್ತು ದವಸ ಧಾನ್ಯಗಳಿಂದ ತಗಡೂರಿನಲ್ಲಿ ನೂಲನ್ನು ಅವರು ಖರೀದಿಸಿದರು. ಆದರೂ, ಖಾದಿ ಬಟ್ಟೆಯ ಮಾರಾಟ ಸಮರ್ಪಕವಾಗಿ ಆಗದೇ ಹೋದಾಗ, ಅವರು ತಮ್ಮ ಮಿತ್ರರಾದ ವಿ.ಎಸ್. ನಾರಾಯಣರಾವ್ ಸಲಹೆಯಂತೆ ಮಹಾತ್ಮಾ ಗಾಂಧೀಜಿ ಭಾವಚಿತ್ರವಿರುವ ಟಿಕೇಟ್‌ಗಳನ್ನು ಮುದ್ರಿಸಿ, ಅವುಗಳನ್ನು ಮಾರತೊಡಗಿದರು. ಇದರಿಂದ ಖಾದಿ ಉತ್ಪಾದನೆ ದ್ವಿಗುಣವಾಯಿತು.

1925ರ ಮೇ 12ರಂದು ತೆರೆಯಲಾದ ಅದಕ್ಕೆ 'ಕರ್ನಾಟಕ ಖದ್ದರ್ ಪರಸ್ಪರ ಸಹಾಯಕ ಸಂಘ' ಎಂದು ಹೆಸರು ಇಡಲಾಯಿತು.

(6) ಅನಂತರ 1925ರ ನವೆಂಬರ್ 26ರಂದು ಖಾದಿಯ ಹುಟ್ಟುವಳಿಗಾಗಿ ರಾಮಚಂದ್ರರಾಯರು ತಗಡೂರಿನಲ್ಲಿ "ಕರ್ನಾಟಕ ಖದ್ದರ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ತಗಡೂರು" ಎಂಬುದನ್ನು ಸ್ಥಾಪಿಸಿದರು. ಈ ಖಾದಿ ಕೇಂದ್ರಕ್ಕೆ ದಿವಾನ್ ಮಿರ್ಜಾ ಇಸ್ಮಾಯಿಲ್ ಹಾಗೂ ಗರುಡಾಚಾರ್ಯರಿಂದ ಧನಸಹಾಯವನ್ನು ಪಡೆದು ಅಭಿವೃದ್ಧಿಪಡಿಸಿದರು. ರಾಜಾರಾಮ ಅಯ್ಯಂಗಾರರು ಸ್ವಯಂ ಪ್ರೇರಣೆಯಿಂದ ಸುಮಾರು ಒಂದೂವರೆ ಎಕರೆ ಜಾಗವನ್ನು ಕೊಟ್ಟರು. ಮುಂದೆ ಈ ಜಾಗದಲ್ಲಿ ಊರ ಜನಗಳ ಬೆಂಬಲದಿಂದ ಈಗಿರುವ ಸ್ವಂತ ಖಾದಿ ಕಟ್ಟಡವನ್ನು ರಾಮಚಂದ್ರರಾಯರು ನಿರ್ಮಿಸಿದರು. 1930ರಲ್ಲಿ ಈ ಹೊಸ ಖಾದಿ ಕಟ್ಟಡದ ಆರಂಭೋತ್ಸವ ವನ್ನು ವೃದ್ಧ ಪಿತಾಮಹ ಎಂ.ವೆಂಕಟಕೃಷ್ಣಯ್ಯ ನೆರವೇರಿಸಿದರು.

(7) ರಾಮಚಂದ್ರರಾಯರು ಸ್ವರಾಜ್ಯ ಮಂದಿರವನ್ನು ಕೇವಲ ಖಾದಿ ಉತ್ಪಾದನೆ, ಹರಿಜನರ ಅಭಿವೃದ್ಧಿ ಕಾರ್ಯಗಳಿಗಷ್ಟೇ ಮೀಸಲಾಗಿರಿಸದೆ, ಅದನ್ನು ಗ್ರಾಮೀಣ ಕೈಗಾರಿಕೆಗಳನ್ನು ಬೆಳೆಸಲೂ ಬಳಸಿದರು. 1933ರಲ್ಲಿ ಚಾಪೆ ನೇಯುವುದು, ಸುಣ್ಣದ ತಯಾರಿಕೆ, ಭತ್ತ ಕುಟ್ಟುವುದು, ಹಗ್ಗ ತಯಾರಿಕೆ, ಎಣ್ಣೆ ತೆಗೆಯುವುದು ಮುಂತಾದ ಗುಡಿಕೈಗಾರಿಕೆಗಳನ್ನು ಸಹ ಅಭಿವೃದ್ಧಿಪಡಿಸಿದರು.

ಹೀಗೆ ಮೈಸೂರು ಸಂಸ್ಥಾನದಲ್ಲಿಯೇ ಪ್ರಥಮ ಬಾರಿಗೆ ಖಾದಿ ಸಂಸ್ಥೆಯನ್ನು ಹುಟ್ಟುಹಾಕಿ ಅದರ ಬೆಳವಣಿಗೆ ಮತ್ತು ಪ್ರಚಾರ ಕಾರ್ಯದಲ್ಲಿ ಅಪಾರ ನಷ್ಟಗಳನ್ನು ಅನುಭವಿಸಿದರೂ, ಗ್ರಾಮೀಣ ಜನತೆಯ ಬದುಕನ್ನು ಹಸನಾಗಿಸುತ್ತಾ ಖಾದಿಗೆ ಮೈಸೂರು ಸಂಸ್ಥಾನದಲ್ಲಿಯೇ ಪ್ರಮುಖ ಸ್ಥಾನವನ್ನು ಕಲ್ಪಿಸಿಕೊಟ್ಟರು.

ಬದನವಾಳು ಖಾದಿ ಕೇಂದ್ರ

1927ರಲ್ಲಿ ಮಹಾತ್ಮಾ ಗಾಂಧೀಜಿ ತಮ್ಮ ಆರೋಗ್ಯ ಸುಧಾರಣೆಗಾಗಿ ಬೆಂಗಳೂರಿನ ಬಳಿಯಿರುವ ನಂದಿಬೆಟ್ಟದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಆಗ ಮೈಸೂರು ಸಂಸ್ಥಾನದ ಹಲವರಿಗೆ ರಚನಾತ್ಮಕ ಕಾರ್ಯಗಳ ಬಗ್ಗೆ ತಿಳಿ ಹೇಳಿ, ಸರ್ಕಾರದ ವತಿಯಿಂದ ಒಂದು ಖಾದಿ ಕೇಂದ್ರವನ್ನು ತೆರೆಯುವ ಪ್ರಸ್ತಾಪವನ್ನು ಮಾಡಿದರು. ಇದಕ್ಕೆ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಅಂದಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರ ಸಮ್ಮತಿಯೂ ದೊರಕಿದ್ದಿತು. ಮೈಸೂರು ಜಿಲ್ಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದಾಗ, ಬದನವಾಳು ಗ್ರಾಮವು ಸೂಕ್ತವಾಗಿ ಕಂಡುಬಂದಿತು. ಏಕೆಂದರೆ ಆಗತಾನೆ ನಂಜನಗೂಡು ಮತ್ತು ಚಾಮರಾಜನಗರದ ನಡುವೆ ರೈಲು ಮಾರ್ಗ ನಿರ್ಮಾಣವಾಗಿ ಬದನವಾಳು (ನರಸಾಂಬೂದಿ) ಗ್ರಾಮವು ನಿಲ್ದಾಣ ಕೇಂದ್ರವಾಗಿದ್ದಿತು.

ಇದರಿಂದ ಸರಕು ಸಾಗಾಣಿಕೆಯನ್ನು ಬಹು ಸುಲಭವಾಗಿ ಸಾಗಿಸುವುದಕ್ಕೂ, ಜನರ ಸಂಚಾರಕ್ಕೂ ಸುಗಮವೆಂದು ಕಂಡುಬಂತು.

ನೂಲುವ ಪ್ರಾಂತ್ಯ ಪ್ರಾರಂಭ

ಬದನವಾಳು (ನರಸಾಂಬೂದಿ) ಬಳಿ ಶ್ಯಾನುಭೋಗರಿಂದ ಅಲ್ಲಿನ ರೈಲ್ವೇ ನಿಲ್ದಾಣದ ಎದುರು ಭಾಗದಲ್ಲಿ 5.10 ಎಕರೆಯಷ್ಟು ಜಮೀನನ್ನು ತೆಗೆದುಕೊಂಡು ಖಾದಿ ಉದ್ಯಮ ಪ್ರಾರಂಭಿಸಲು 2.3 ಶೆಡ್‌ಗಳನ್ನು ಹಾಕಲಾಯಿತು. ದಿನಾಂಕ : 01.11.1927ರಲ್ಲಿ ಬದನವಾಳು ನೂಲುವ ಪ್ರಾಂತ್ಯ ಪ್ರಾರಂಭವಾಯಿತು.

ನಂದಿ ಬೆಟ್ಟದಲ್ಲಿ ಗಾಂಧೀ ಅವರ ಸೇವೆಯಲ್ಲಿದ್ದ ಶ್ರೀ ಎನ್.ವಿ.ರಾಮಗೋಪಾಲ್ ಅಯ್ಯಂಗಾರ್ ಅವರನ್ನು ಬದನವಾಳು ಖಾದಿಕೇಂದ್ರಕ್ಕೆ ಮುಖ್ಯ ವ್ಯವಸ್ಥಾಪಕರನ್ನಾಗಿ ಗಾಂಧೀಜಿ ಅವರು ನೇಮಿಸಿದರು. 1919ರಿಂದಲೂ ತಗಡೂರು ರಾಮಚಂದ್ರರಾಯರ ನೇತೃತ್ವದಲ್ಲಿ ಖಾದಿ ಕೆಲಸದಲ್ಲಿ ನಿರತರಾಗಿದ್ದ ಟಿ.ಎಸ್.ವೆಂಕಟಗಿರಿ ಹಾಗೂ ಟಿ.ಎಸ್. ವೆಂಕಟನಾರಾಯಣಪ್ಪ, ನೇರಳೆ ಗ್ರಾಮದ ಪಿ.ರಂಗಶೆಟ್ಟರು, ಕಬ್ಬಹಳ್ಳಿಯ ಬಸವಯ್ಯ, ರಂಗಸ್ವಾಮಿ ಮುಂತಾದವರು ಈ ಖಾದಿ ಕೇಂದ್ರಕ್ಕೆ ಸೇರ್ಪಡೆಯಾಗಿ, ಖಾದಿ ಉತ್ಪಾದನೆ ಭರದಿಂದ ನಡೆಯುವಂತಾಯಿತು. ಪರಿಣಾಮವಾಗಿ, ನಂಜನಗೂಡು ತಾಲ್ಲೂಕಿನ ದೇವನೂರು, ಅಳಗಂಜಿ, ಅಳಗಂಜಿಪುರ, ಬಸವಟಿಗೆ, ನೇರಳೆ ಮುಂತಾದ ಗ್ರಾಮಗಳಲ್ಲದೆ, ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಈ ಖಾದಿ ಉದ್ಯಮ ನೆಲೆಯಾಯಿತು. ಅಲ್ಲಿ ತಯಾರಾದ ಬಟ್ಟೆ ಹಾಗೂ ಖಾದಿ "ಬದನವಾಳು ಖಾದಿ" ಎಂದು ಪ್ರಸಿದ್ಧಿಯಾಯಿತು.

ಬದನವಾಳುವಿನ ಖಾದಿ ಕೇಂದ್ರದಲ್ಲಿ ನೂಲನ್ನು ತೆಗೆದುಕೊಂಡು ಕಿರಗುಂದದಲ್ಲಿ ಬಟ್ಟೆ ನೇಯ್ಗೆ ಮಾಡಲಾಗುತ್ತಿತ್ತು. ಬದನವಾಳು ಖಾದಿ ಕೇಂದ್ರ ಸ್ಥಾಪನೆಯಾದ 2 ತಿಂಗಳ ಅವಧಿಯಲ್ಲೇ ಅದರ ಖಾದಿ ಉತ್ಪಾದನಾ ಕಾರ್ಯದಲ್ಲಿ ಗಣನೀಯ ಪ್ರಗತಿಯನ್ನು ಕಂಡಿತು. 1927ರ ನವೆಂಬರ್ 1ರಿಂದ ಡಿಸೆಂಬರ್ 26ರೊಳಗೆ ಬದನವಾಳು ಖಾದಿ ಉತ್ಪಾದನಾ ಕೇಂದ್ರಕ್ಕೆ ಒಳಪಟ್ಟ ಸುತ್ತಮುತ್ತಲಿನ ಗ್ರಾಮಗಳ ಸಂಖ್ಯೆ 40 ಆಗಿದ್ದು, ನೂಲುವವರ ಸಂಖ್ಯೆ 400, ನೂಲು ತಯಾರಾದದ್ದು 502 ರುಪಾಯಿಗಳಷ್ಟು (715ಪೌಂಡ್) ಬಟ್ಟೆ ತಯಾರಾಗಿದ್ದು 445 ರೂಪಾಯಿಗಳಷ್ಟು ಅಂದರೆ 825 ಗಜದಷ್ಟು ನೂಲುವವರ ತಿಂಗಳ ಆದಾಯ0.9 ಆಣೆ, ನೇಯುವವರ ತಿಂಗಳ ವರಮಾನ 3.6 ಆಣೆಗಳಾಗಿದ್ದಿತು. ಅನಂತರ 1928ರ ಜೂನ್ ತಿಂಗಳ ಕೊನೆಯ ವೇಳೆಗೆ ಒಟ್ಟು ಗ್ರಾಮಗಳಲ್ಲಿನ ನೂಲುವ ರಾಟೆಗಳ ಸಂಖ್ಯೆ 1000ಕ್ಕೇರಿತು. 1928ರ ಆಗಸ್ಟ್ ತಿಂಗಳ ಅಂತ್ಯಕ್ಕೆ 7744 ಪೌಂಡುಗಳಷ್ಟು ನೂಲು ತಯಾರಾಯಿತು. ಅಂದರೆ 6711 ರೂಪಾಯಿಗಳಷ್ಟು. ಹೀಗೆ ತಯಾರಾದ ನೂಲಿನಿಂದ ಪ್ರಾರಂಭದಲ್ಲಿ ಟವಲ್ಲುಗಳನ್ನು, ತೆಳ್ಳನೆಯ ನೂಲಿನಿಂದ ಷರ್ಟ್, ಕೋಟು, ರುಮಾಲುಗಳನ್ನು ಮತ್ತು ಎಲ್ಲಾ ತರಹದ ಬಟ್ಟೆಗಳನ್ನು ತಯಾರಿಸುವಂತಾಯಿತು. 1928ರ ಕೊನೆಯ ವೇಳೆಗೆ ತಿಂಗಳಿಗೆ ಸರಾಸರಿ

1686 ರೂಪಾಯಿಗಳ ಖಾದಿ ಬಟ್ಟೆಯನ್ನು ಬದನವಾಳು ಖಾದಿ ಉತ್ಪಾದನಾ ಕೇಂದ್ರ ತಯಾರಿಸು ವಂತಾಗಿದ್ದಿತು. ತಗಡೂರು ರಾಮಚಂದ್ರರಾಯರ ಕಾರ್ಯವೈಖರಿಯಿಂದ ತಗಡೂರು, ಬದನವಾಳು ಪ್ರದೇಶಗಳಲ್ಲಿ ನೂಲುವುದು ಮತ್ತು ನೇಯುವುದು ಬಹಳ ಜನಪ್ರಿಯವಾಯಿತು. 1931ರ ಜನಗಣತಿ ವರದಿ ಬದನವಾಳು ಕೇಂದ್ರವನ್ನು "Good Angel"ಎಂದು ತಿಳಿಸಿದೆ.

ಬದನವಾಳುಗೆ ಗಾಂಧೀಜಿ ಭೇಟಿ

ಮಹಾತ್ಮಗಾಂಧೀಜಿ ಹರಿಜನಾಭಿವೃದ್ದಿಗಾಗಿ ದೇಶಪರ್ಯಟನೆ ಮಾಡಿಕೊಂಡು ನಿಧಿ ಸಂಗ್ರಹಿಸುವ ಕಾರ್ಯದ ನಿಮಿತ್ತ ಕರ್ನಾಟಕ್ಕೆ ಭೇಟಿ ನೀಡಿದಾಗ ತಗಡೂರಿಗೆ ಬರಬೇಕೆಂದು ರಾಮಚಂದ್ರರಾಯರು ಆಹ್ವಾನವಿತ್ತರು. ಅದರಂತೆ ದಿನಾಂಕ 05.01.1934 ರಂದು ಬೆಳಿಗ್ಗೆ 6 ಗಂಟೆಗೆ ತಗಡೂರು, 7 ಗಂಟೆಗೆ ನಂಜನಗೂಡು, 8 ಗಂಟೆಗೆ ಬದನವಾಳುಗೆ ಗಾಂಧೀಜಿ ಭೇಟಿ ನೀಡುವರು ಎಂದು ನಿಗದಿಯಾಯಿತು. ಎಲ್ಲಾ ಕಡೆ ಸುಮಾರು ಒಂದೂವರೆ ಗಂಟೆಕಾಲ ಗಾಂಧೀಜಿ ತಂಗಿ, ಮಾತನಾಡಿದರು. ಗಾಂಧೀ ಅವರ ಭಾಷಣಕ್ಕೆ ಮಾರು ಹೋದ ಪ್ರೊ. ಎ.ರಾಜಾರಾಮ ಅಯ್ಯಂಗಾರ್ ಪತ್ನಿ ಪಂಕಜಮ್ಮ, ತಾವು ಧರಿಸಿದ್ದ ಚಿನ್ನಾಭರಣ ಹಾಗೂ ನಗದನ್ನು ಗಾಂಧೀಜಿಯವರಿಗೆ ಒಪ್ಪಿಸಿದರು. ನಂತರ ಗಾಂಧೀಜಿ ಅವರು ಹರಿಜನಕೇರಿಗೆ ಭೇಟಿ ನೀಡಿದರು.

ಗಾಂಧೀಜಿ ಜನರನ್ನು ಉದ್ದೇಶಿಸಿ,"ದುಶ್ಚಟಗಳನ್ನು ತಗ್ಗಿಸಿ, ಗಳಿಕೆಯ ಸ್ವಲ್ಪ ಭಾಗವನ್ನು ಉಳಿತಾಯ ಮಾಡಿ, ಅದನ್ನು ಕಾಯ್ದುಕೊಳ್ಳಿ" ಎಂದು ನೀಡಿದ ಕರೆಯನ್ನು ಬದನವಾಳಿನ ನೂಲುವವರು ಮತ್ತು ನೇಕಾರರು ಅಕ್ಷರಶಃ ಪಾಲಿಸಿದರು. ಮೈಸೂರು ಸಂಸ್ಥಾನದ ಸರ್ಕಾರ ನೂಲುವುದಕ್ಕೆ ನೀಡಿದ್ದ ಪ್ರೋತ್ಸಾಹ ಕುರಿತು ಗಾಂಧೀಜಿ ತಮ್ಮ 'ಯಂಗ್ ಇಂಡಿಯಾ' (1928 ನವೆಂಬರ್ 20ರ ಸಂಚಿಕೆ) ಪತ್ರಿಕೆಯಲ್ಲಿ ವಿಸ್ತೃತ ಲೇಖನ ಬರೆದು ಪ್ರಕಟಿಸಿದರು. ಮೈಸೂರು ಸರ್ಕಾರ ಕಡುಬಡ ಜನರನ್ನು ಆರ್ಥಿಕವಾಗಿ ಮೇಲೆತ್ತಲು ತೋರುತ್ತಿರುವ ಉತ್ಸಾಹಕ್ಕೆ ಅಭಿನಂದಿಸುತ್ತಾ, "ಮೈಸೂರಿನ ಶ್ರೀಮಂತರು ಮತ್ತು ಅಧಿಕಾರಿಗಳು ಖಾದಿಬಟ್ಟೆ ಬಳಸದಿದ್ದರೆ, ಮೈಸೂರು ನಗರದ ಮನೆಗಳಲ್ಲಿ ಖಾದಿ ಶಾಶ್ವತವಾಗಿ ನೆಲೆಸಲಾರದು. ಉತ್ತಮ ವರ್ಗದವರು ಎಂದು ಹೇಳಿಕೊಳ್ಳುವವರು ನುಡಿದಂತೆ ನಡೆಯುವವರಲ್ಲವೆಂದು ಸರಳ ಹಳ್ಳಿಗರು ಬಲ್ಲರು, ಅವರನ್ನು ಗೊಂದಲಕ್ಕೆ ಗುರಿಪಡಿಸಬೇಡಿ" ಎಂದು ಗಾಂಧೀಜಿ ಹೇಳಿದರು.

1939ರಲ್ಲಿ ಬದನವಾಳುನಲ್ಲಿ ಖಾದಿ ಉತ್ಪಾದನಾ ಕಾರ್ಯದ ಜೊತೆಗೆ ಹಲವು ಗ್ರಾಮಮೋದ್ಯೋಗಗಳನ್ನು ಸಹ ಸ್ಥಾಪಿಸಲಾಗಿದ್ದಿತು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಕೈಕಾಗದ, ಚಾಪೆ, ಪಾದರಕ್ಷೆ, ಬೆಂಕಿಪೊಟ್ಟಣ, ಎಣ್ಣೆ ತಯಾರಿಕೆ ಮತ್ತು ನೂಲುಗಾರಿಕೆ ಮುಖ್ಯವಾದವು. 21.12.1943ರಂದು ಬದನವಾಳು ನೂಲುವ ಕೇಂದ್ರಕ್ಕೆ ಮಹಾರಾಜರಾದ ಜಯಚಾಮರಾಜ ಒಡೆಯರ್‌ರವರು ಭೇಟಿ ನೀಡಿದ್ದರು.

ಮಹಾರಾಜರು ಖಾದಿ ಗ್ರಾಮೋದ್ಯೋಗಗಳನ್ನು ಪರಿಶೀಲಿಸಿ, ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು.

ನಂಜನಗೂಡಿನಲ್ಲಿ ಅಸ್ಪೃಶ್ಯರ ದೇವಸ್ಥಾನ ಪ್ರವೇಶ ಚಳುವಳಿ

ಮಹಾತ್ಮ ಗಾಂಧೀಜಿ ಅವರು 1934 ಮತ್ತು 1936ರಲ್ಲಿ ಎರಡು ಬಾರಿ ಕರ್ನಾಟಕಕ್ಕೆ ಬಂದು, ಅಸ್ಪೃಶ್ಯತಾ ವಿರೋಧಿ ಆಂದೋಲನಕ್ಕೆ ಚಾಲನೆ ನೀಡಿದರು. ಹಿಂದೂ ದೇವಾಲಯಗಳಿಗೆ ಅಸ್ಪೃಶ್ಯರಿಗೆ ಪ್ರವೇಶವಿಲ್ಲದಿರುವುದನ್ನು ಗಾಂಧೀಜಿ ಟೀಕಿಸಿದರು. ಅಲ್ಲದೇ ತಮ್ಮ ಅನುಯಾಯಿಗಳೊಡನೆ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ಕಲ್ಪಿಸಲು ಚಳುವಳಿಯನ್ನು ಹಮ್ಮಿಕೊಂಡರು. ಇದರ ಫಲವಾಗಿ ಮೈಸೂರು ಸಂಸ್ಥಾನದಲ್ಲಿ ದೇವಾಲಯ ಪ್ರವೇಶ ಚಳುವಳಿ ಆರಂಭವಾಯಿತು. ಇದರ ಮೂಲಕ ಅಸ್ಪೃಶ್ಯರ ಸಾಮಾಜಿಕ ಹಾಗೂ ಧಾರ್ಮಿಕ ಬದಲಾವಣೆ ಪ್ರಕ್ರಿಯೆ ಆರಂಭಗೊಂಡಿತು. ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳುವಳಿಯಲ್ಲಿ ತಗಡೂರು ರಾಮಚಂದ್ರರಾಯರ ಪ್ರಯತ್ನ ಅವಿಸ್ಮರಣೀಯವಾದುದು. ಇವರು 1932ರ ಡಿಸೆಂಬರ್ 4ರಂದು ಮೈಸೂರು ಜಿಲ್ಲೆಯ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಅಸ್ಪೃಶ್ಯರಿಗೆ ಪ್ರವೇಶಾವಕಾಶವನ್ನು ದೊರಕಿಸಿ ಕೊಡುವುದಾಗಿ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದರು. ಅಂದು ಅವರು, ಹಲವು ಅಸ್ಪೃಶ್ಯರೊಡಗೂಡಿ ಶ್ರೀಕಂಠೇಶ್ವರ ದೇವಾಲಯಕ್ಕೆ ಒಳಪ್ರವೇಶಿಸುವ ಮುನ್ನ ದೇವಾಲಯದ ಹೊರಪ್ರದಕ್ಷಿಣೆ ಮಾಡುತ್ತಿದ್ದ ಸಮಯದಲ್ಲಿ, ಹಲವು ಸವರ್ಣೀಯರು ಅವರ ಮೇಲೆ ಸಗಣಿಯನ್ನು ಮತ್ತು ಕಲ್ಲುಗಳನ್ನು ಎರಚಿ ಹೊಡೆದು, ಹಿಂಸೆಗೀಡು ಮಾಡಿದರು. ಇದರಿಂದ ರಾಮಚಂದ್ರರಾಯರ ತಲೆಗೆ ಅಪಾರಪೆಟ್ಟು ಬಿದ್ದು ರಕ್ತಸ್ರಾವವಾಗತೊಡಗಿತು. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ನೀಡಲಾಯಿತು.

ಅಂದು ರಾಮಚಂದ್ರರಾಯರು ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ದೊರಕಿಸಿ ಕೊಡಲು ನಡೆಸಿದ ಪ್ರಯತ್ನವು ವಿರೋಧಿಗಳ ದುಷ್ಕೃತ್ಯದಿಂದ ವಿಫಲಗೊಂಡರೂ, ಅವರು ಅಸ್ಪೃಶ್ಯರಿಗೆ ದೇವಾಲಯ ಪ್ರವೇಶಾವಕಾಶ ಮಾಡಿಕೊಡಲು ನಡೆಸಿದ ಹೋರಾಟ ಮೈಸೂರು ನ್ಯಾಯ ವಿಧಾಯಕ ಸಭೆಯಲ್ಲಿ ಚರ್ಚೆಗೆ ಬಂತು. ನ್ಯಾಯ ವಿಧಾಯಕ ಸಭೆಯ ಸದಸ್ಯರು ಹರಿಜನ ದೇವಾಲಯ ಪ್ರವೇಶವನ್ನು ಒಪ್ಪಿಕೊಂಡರೂ, ಮಸೂದೆಗೆ ಮಹಾರಾಜರು ತಮ್ಮ ನಿಲುವನ್ನು ಸ್ಪಷ್ಟಪಡಿಸದ ಕಾರಣ, ಅಸ್ಪೃಶ್ಯರಿಗೆ ದೇವಾಲಯ ಪ್ರವೇಶಾವಕಾಶಕ್ಕೆ ಅನುಮತಿ ದೊರೆಯಲಿಲ್ಲ.

ಮೈಸೂರು ಸರ್ಕಾರದ ಈ ನಿಲುವಿನಿಂದ ಬೇಸರಗೊಂಡ ರಾಮಚಂದ್ರ ರಾಯರು, ಅಸ್ಪೃಶ್ಯರಿಗಾಗಿಯೇ ತಗಡೂರಿನಲ್ಲಿ 13.10.1933ರಂದು ಪ್ರತ್ಯೇಕ ಗಣಪತಿ ದೇವಾಲಯವೊಂದನ್ನು ಕಟ್ಟಿಸಿ, ಅವರು ತಮ್ಮ ಪೂಜಾ ಕೈಂಕರ್ಯಗಳನ್ನು ನಡೆಸಿಕೊಂಡು ಹೋಗಲು ಅವಕಾಶ ಮಾಡಿಕೊಟ್ಟರು.

ಮಹಾತ್ಮಾಗಾಂಧೀಜಿ ತಮ್ಮ ಸಂಗಡಿಗರೊಂದಿಗೆ ಪರಿಶಿಷ್ಟ ಜನಾಂಗದವರ ಏಳಿಗೆಗಾಗಿ 1934ರಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡಿದ್ದರು. ಜನವರಿ 5ರಂದು ತಗಡೂರು ಹಾಗೂ ಬದನವಾಳು ಗ್ರಾಮದಲ್ಲಿನ ಖಾದಿ ಸಂಸ್ಥೆಗಳಿಗೂ ಭೇಟಿ ನೀಡಿದ್ದರು. ನಂಜನಗೂಡಿನ ಪುರನಿವಾಸಿಗಳು ಮಾನಪತ್ರವನ್ನು ಭಕ್ತಿ ಪೂರ್ವಕವಾಗಿ ಅರ್ಪಿಸಿದ ನಂತರ ಮಕ್ಕಳೂ, ಮಹಿಳೆಯರೂ ಸೇರಿದಂತೆ ಇನ್ನೂ ಅನೇಕರು ಚಿನ್ನ ಹಾಗೂ ಬೆಳ್ಳಿಯ ಒಡವೆಗಳನ್ನು ಮತ್ತು ಇತರೆ ವಸ್ತುಗಳನ್ನು ಕಾಣಿಕೆಯಾಗಿ ಅರ್ಪಿಸಿದರು. ಚಂದ್ರಸಿಂಗ್ ಎಂಬ ಬಡವನೊಬ್ಬ ನಾಲ್ಕು ಆಣೆ ಎರಡು ಕಾಸನ್ನು ಕಾಣಿಕೆಯಾಗಿ ನೀಡಿದನು. ತರುವಾಯ ಮಹಾತ್ಮರು ಅಲ್ಲಿಯ ಜನರನ್ನುದ್ದೇಶಿಸಿ "ಈ ಕ್ಷೇತ್ರವು ಪುಣ್ಯಸ್ಥಳವಾಗಿದೆ. ದೊಡ್ಡ ದೇವಾಲಯವಿದೆ ಎಂಬುದು ನನಗೆ ಗೊತ್ತು. ಪರಿಶಿಷ್ಟ ಜನಾಂಗದ ಜನರಿಗೆ ದೇವಸ್ಥಾನದ ಬಾಗಿಲು ತೆಗೆಯಬಾರದೆಂದು ಯಾವ ವೇದವೂ ಹೇಳುವುದಿಲ್ಲ. ದೇವಾಲಯದೊಳಕ್ಕೆ ಹೋಗಬೇಕು ಎಂಬ ಅಪೇಕ್ಷೆ ಅವರಿಗೇ ಇಲ್ಲದಿರುವಾಗ ಒಳಕ್ಕೆ ಹೋಗಿ ಎಂದು ಹೇಳುವುದು ಸರಿಯಲ್ಲವೆಂದು ಕೆಲವರು ಅಭಿಪ್ರಾಯ ಪಡುವರು. ಇದು ಸರಿಯಾದುದಲ್ಲ. ಜೀವನದ ಯಾವ ಭಾಗದಲ್ಲಿಯೂ ನಮಗೆ ಇರುವ ಹಕ್ಕು ಪರಿಶಿಷ್ಟರಿಗೂ ಇರುತ್ತದೆ. ಪರಿಶಿಷ್ಟ ಜಾತಿಯ ಜನರನ್ನು ದೇವಸ್ಥಾನದ ಒಳಕ್ಕೆ ಕರೆದುಕೊಳ್ಳುವ ಏರ್ಪಾಟನ್ನು ಸವರ್ಣೀಯರು ಮಾಡದೇ ಹೋದರೆ, ಅವರನ್ನು ಸಂಪೂರ್ಣವಾಗಿ ಸಂಪರ್ಕಕ್ಕೆ ತಂದುಕೊಳ್ಳದೆ ಹೋದರೆ, ಹಿಂದೂ ಧರ್ಮವೇ ನಾಶಹೊಂದುವುದು" ಎಂದು ಎಚ್ಚರಿಕೆ ನೀಡಿದರು. ಗಾಂಧೀಜಿ ಅವರ ಈ ಕರೆಯಿಂದ ಸ್ಫೂರ್ತಿಗೊಂಡ ಜನರು, 'ದೇವಾಲಯ ಪ್ರವೇಶ ಚಳುವಳಿ'ಯನ್ನು ಮತ್ತಷ್ಟು ಚುರುಕುಗೊಳಿಸಿದರು. ಈ ಪ್ರಯತ್ನಗಳು ಮೈಸೂರು ಸಂಸ್ಥಾನದಾದ್ಯಂತ ನಿರಂತರ ವಾಗಿ ನಡೆಯಲು ಗಾಂಧೀಜಿ ಅವರ ಸ್ಫೂರ್ತಿಯೇ ಕಾರಣ ಎನ್ನಬಹುದು.

ನಂಜನಗೂಡಿನಲ್ಲಿ ಹರಿಜನೋದ್ಧಾರ ಕಾರ್ಯಗಳು

ರಾಮಚಂದ್ರರಾಯರು ಕ್ರೈಸ್ತ ಧರ್ಮಕ್ಕೆ ಸೇರಿದ್ದ ಹರಿಜನರನ್ನು ಶುದ್ಧಿ ಕ್ರಮದ ಮೂಲಕ ಪುನಃ ಅವರನ್ನು ಹಿಂದೂ ಧರ್ಮಕ್ಕೆ ಸೇರಿಸುವ ಪ್ರಯತ್ನ ಮಾಡಿದರು. ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ್ದ ಕುಟುಂಬವೊಂದನ್ನು ಮತ್ತೆ ಹಿಂದೂಗಳನ್ನಾಗಿ ಮಾಡಿದ ತಮ್ಮ ಪ್ರಥಮ ಪ್ರಯೋಗವೊಂದನ್ನು 1935–36ರಲ್ಲಿ ತಗಡೂರಿನ ಸಮೀಪದ ಕಿರಗುಂದ ಗ್ರಾಮದಲ್ಲಿ ನಡೆಸಿದರು. ಮತಾಂತರ ಹೊಂದಿದ್ದ ಕ್ರೈಸ್ತ ಕುಟುಂಬವನ್ನು, ಆ ಊರಿನ ಮುಖಂಡರನ್ನೂ, ಕಿರಗುಂದದ ಸುತ್ತ ಮುತ್ತಲಿನ ಮೂವತ್ತು ಮೂರು ಗ್ರಾಮಗಳ ಹರಿಜನರನ್ನೂ ತಮ್ಮ ಕುಲದ ಲಾಂಛನಗಳೊಡನೆ ಕಿರಗುಂದದಲ್ಲಿ ಸಭೆ ಸೇರುವಂತೆ ಏರ್ಪಾಡು ಮಾಡಿದರು. ಮತಪರಿವರ್ತನೆಗೆ ಸಿದ್ಧರಾಗಿದ್ದ ಆ ದಂಪತಿಗಳು ಯಜ್ಞಕುಂಡಕ್ಕೆ ಫಲಪುಷ್ಪ ಸಮರ್ಪಿಸಿ ಹಿಂದೂ ಪೂಜಾವಿಧಿಗಳನ್ನು ಮಾಡಿದರು. ಮೆರವಣಿಗೆಯಲ್ಲಿ ವಾದ್ಯಗಳ ಸಮೇತ ಆ ದಂಪತಿಗಳು ಅಲ್ಲಿನ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸಿದರು. ಈ ಕ್ರಮದಿಂದ ಊರಿನ ಸವರ್ಣೀಯರು ಹರ್ಷಿತರಾದರು. ಹರಿಜನರು ಸಾರ್ವಜನಿಕ ಕೆರೆ–ಬಾವಿಗಳಲ್ಲಿ ನೀರನ್ನು ಉಪಯೋಗಿಸುವಂತೆ ಅವರಲ್ಲಿ ಧೈರ್ಯವನ್ನು ತುಂಬುವ

ಮತ್ತು ಜಾಗೃತಿಯನ್ನುಂಟು ಮಾಡುವುದಕ್ಕೆ ರಾಮಚಂದ್ರರಾಯರು ತಗಡೂರಿನಲ್ಲಿ 1931ರ ಜುಲೈ 26ರಂದು ಸತ್ಯಾಗ್ರಹ ಆಶ್ರಮವನ್ನು ಸ್ಥಾಪಿಸಿದರು. ತಗಡೂರಿನ ಹರಿಜನ ಕೇರಿಯಲ್ಲಿ ಗಣಪತಿ ದೇವಾಲಯವೊಂದನ್ನು 1933ರ ಅಕ್ಟೋಬರ್ 13ರಂದು ನಿರ್ಮಿಸಿದರು.

ಹರಿಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಲು ಅಪಾರ ಆರ್ಥಿಕ ತೊಂದರೆ ಅನುಭವಿಸುತ್ತಿದ್ದುದನ್ನು ಮನಗಂಡ ರಾಮಚಂದ್ರರಾಯರು, ತಗಡೂರಿನಲ್ಲಿಯೇ 1934ರ ಮೇ 20ರಂದು ಹರಿಜನ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯವೊಂದನ್ನು ಸ್ಥಾಪಿಸಿದರು. ಅದನ್ನು ನಡೆಸಲು ರಾಮಚಂದ್ರರಾಯರು ಸಾರ್ವಜನಿಕರಿಂದ 5000 ರೂಪಾಯಿಗಳನ್ನು ಸಂಗ್ರಹಿಸಿದರು. ಈ ಹಣವನ್ನು ಬಡಹರಿಜನರಿಗೆ ಸಾಲವಾಗಿ ಕೊಟ್ಟು, ಬಡ್ಡಿ ರೂಪದಲ್ಲಿ ಬಂದ ಧಾನ್ಯದಲ್ಲಿ ವಿದ್ಯಾರ್ಥಿನಿಲಯವನ್ನು ನಡೆಸುತ್ತಿದ್ದರು.

ನಂಜನಗೂಡಿನಲ್ಲಿ ಮದ್ಯಪಾನ ನಿರೋಧ ಚಳುವಳಿ

ಮೈಸೂರು ಸಂಸ್ಥಾನದಲ್ಲಿ ಗಾಂಧೀಜಿ ನಾಯಕತ್ವದಲ್ಲಿ ಖಾದಿ ಗ್ರಾಮೋದ್ಯೋಗ, ಅಸ್ಪೃಶ್ಯತಾ ನಿವಾರಣೆ ಕಾರ್ಯ ಚಟುವಟಿಕೆಗಳು ನಡೆದವಲ್ಲದೆ, ಪಾನನಿರೋಧ ಚಳುವಳಿ ವ್ಯಾಪಕವಾಗಿ ನಡೆದಿರಲಿಲ್ಲ. ಬಾಲಗಂಗಾಧರ ತಿಲಕರ ಪಾನನಿರೋಧದ ಚಳುವಳಿಯಿಂದ ಪ್ರೇರಿತರಾದ ಗೋವಿಂದರಾವ್ ಯಾಳಗಿ, ಡಾ.ಜೋಷಿ ಮುಂತಾದವರು ಮೈಸೂರು ಸಂಸ್ಥಾನದಲ್ಲಿ ಪ್ರಥಮವಾಗಿ ಪಾನನಿರೋಧ ಚಳುವಳಿಯನ್ನು ನಡೆಸಿದರು. ಸರ್ಕಾರವು ಇವರನ್ನು ಬಂಧಿಸಿ ಇವರಿಂದ ದಂಡವನ್ನೂ ವಸೂಲಿ ನಾಡಿತು ಮತ್ತು ಅವರಿಗೆ ಸೆರೆಮನೆವಾಸ ಶಿಕ್ಷೆ ನೀಡಿತು.

1938ರಲ್ಲಿ ನಂಜನಗೂಡಿನಲ್ಲಿ ಕೆಲವು ಪರಿಶಿಷ್ಟ ಜನಾಂಗದವರು ಕುಡಿತದ ಚಟಕ್ಕೆ ಬಲಿಯಾಗಿ ಜೀವನವನ್ನು ಹಾಳು ಮಾಡಿಕೊಂಡಿದ್ದರು. ಅವರ ಕುಟುಂಬಗಳು ದಾರುಣ ಸ್ಥಿತಿ ತಲುಪಿದ್ದವು. ಇಂತಹ ಸಮಯದಲ್ಲಿ, ನಂಜನಗೂಡು ಯುವಕರ ಸಂಘದ ಕಾರ್ಯದರ್ಶಿ ಆಗಿದ್ದ ಶ್ರೀನಿವಾಸಯ್ಯ ಮತ್ತು ಮೈಸೂರಿನ ಟಿ.ರಾಜನ್ ಸಭೆ ನಡೆಸಿದರು. ಅಲಿಸಿ ಕೆಳಗಿನ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1) ಯಾರೂ ಮದ್ಯಪಾನ ಮತ್ತು ಮಾಂಸಹಾರವನ್ನು ಮಾಡಬಾರದು. ತಪ್ಪಿದರೆ ಪ್ರತಿಯೊಬ್ಬರೂ 5 ರೂ. ದಂಡ ತೆರಬೇಕು.

2) ಪ್ರತಿಯೊಂದು ಮನೆಯವರು ತಮ್ಮ ಜೀವನಾಭಿವೃದ್ದಿಗಾಗಿ ಕೈರಾಟೆಯಿಂದ ನೂಲನ್ನು ತೆಗೆಯಬೇಕು.

3) ಎಲ್ಲರೂ ಒಗ್ಗಟ್ಟಿನಿಂದ ಮತ್ತು ಒಮ್ಮನಸ್ಸಿನಿಂದ ದುಡಿದು, ಸಂಪಾದನೆಯನ್ನು ಮಾಡಿ, ಕುಟುಂಬದ ಸುಭದ್ರತೆಗೆ ಶ್ರಮಿಸಬೇಕು.

ನಂಜನಗೂಡಿನಲ್ಲಿ ರಾಷ್ಟ್ರೀಯ ಶಿಕ್ಷಣ ಪ್ರಚಾರ

ಮೈಸೂರು ಸಂಸ್ಥಾನದಾದ್ಯಂತ ಗಾಂಧೀಜಿ ಅವರ ಪ್ರಭಾವದಿಂದ ರಾಷ್ಟ್ರೀಯ ಶಿಕ್ಷಣ ಕುರಿತು ಪ್ರಚಾರ ಮಾಡಲಾಯಿತು. ಕೆಲವು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. 1938ರ ಅಕ್ಟೋಬರ್ ತಿಂಗಳಿನಲ್ಲಿ ಮೈಸೂರು ವಾರ್ಧಾ ಶಿಕ್ಷಣ ಸಮಿತಿಯೊಂದನ್ನು ತಗಡೂರು ರಾಮಚಂದ್ರರಾಯರು ರಚಿಸಿದರು. ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ಅಧ್ಯಕ್ಷರಾಗಿಯೂ, ನವರತ್ನ ರಾಮರಾಯರು ಉಪಾಧ್ಯಕ್ಷರಾಗಿಯೂ, ಅಗರಂ ಸೂರ್ಯನಾರಾಯಣ ಪಂಡಿತ್ ಮತ್ತು ಜಿ.ಆರ್. ರಂಗಸ್ವಾಮಿ ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟರು. ತಗಡೂರು ರಾಮಚಂದ್ರರಾಯರೇ ಈ ಶಿಕ್ಷಣ ಪ್ರಚಾರ ಸಮಿತಿಯ ಮುಖ್ಯ ಪ್ರಚಾರಕರಾಗಿದ್ದರು.

ರಾಮಚಂದ್ರರಾಯರು ಈ ಶಿಕ್ಷಣ ಸಮಿತಿಯ ಉದ್ದೇಶವನ್ನು ಜಾರಿಗೆ ತರುವ ದೃಷ್ಟಿಯಿಂದ 1938ರ ನವೆಂಬರ್‌ನಲ್ಲಿ ತಗಡೂರಿನಲ್ಲಿ ಪ್ರಥಮವಾಗಿ ರಾಷ್ಟ್ರೀಯ ಶಿಕ್ಷಣ ಶಾಲೆಯೊಂದನ್ನು ತೆರೆದರು. ಇದರ ಪ್ರಾರಂಭೋತ್ಸವವನ್ನು ನೆರವೇರಿಸಲು ವಾರ್ಧಾದಿಂದ ಮಹಾತ್ಮ ಗಾಂಧೀಜಿ ಅವರ ಶಿಷ್ಯರಾದ ಆರ್ಯ ನಾಯಕಂ ಆಗಮಿಸಿದ್ದರು. ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಶಾಲೆಯನ್ನು ಉದ್ಘಾಟಿಸಿದ ಆರ್ಯನಾಯಕಂ, ತಮ್ಮ ಭಾಷಣದಲ್ಲಿ ಆಧುನಿಕ ಶಿಕ್ಷಣ ಪದ್ಧತಿಯು ದೇಶದ ಅವನತಿಗೆ ಮೂಲ ಕಾರಣವಾಗಿದೆ; ಇದರಿಂದ ಮಕ್ಕಳಿಗೆ ಯಾವುದೇ ಭವಿಷ್ಯವಿಲ್ಲದಂತಾಗುತ್ತದೆ. ಈ ನಿಟ್ಟಿನಲ್ಲಿ ಗಾಂಧೀಜಿ ಅವರ ವಾರ್ಧಾ ಮಾದರಿಯ ಶಿಕ್ಷಣ ದೇಶಕ್ಕೆ ಅತ್ಯಂತ ಅವಶ್ಯಕವಾದುದ್ದಾಗಿದೆ. ಆದ್ದರಿಂದ ಇಡೀ ಮೈಸೂರು ಸಂಸ್ಥಾನದಾದ್ಯಂತ ರಾಷ್ಟ್ರೀಯ ಶಿಕ್ಷಣ ನೀಡುವ ಶಾಲೆಗಳು ಹೆಚ್ಚಬೇಕು ಎಂದು ಕರೆ ನೀಡಿದರು. ನಂಜನಗೂಡಿನ ಶ್ರೀ ಕೆ.ವಿಶ್ವೇಶ್ವರಗೌಡರು ಈ ಶಾಲೆಗೆ 100 ರೂಪಾಯಿಗಳ ಧನಸಹಾಯವನ್ನು ಮಾಡುವುದಾಗಿ ಈ ತಿಳಿಸಿದರು. ಪ್ರಥಮ ವರ್ಷದ ತಗಡೂರಿನ ರಾಷ್ಟ್ರೀಯ ಶಿಕ್ಷಣ ಶಾಲೆಗೆ ಸುಮಾರು 30 ಜನ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿದ್ದರು.

ಮೈಸೂರಿನ ರಾಷ್ಟ್ರೀಯ ಸೇವಾದಳ ಮತ್ತು ಹಿಂದಿ ಪ್ರಚಾರ ಸಭೆ ನೀಡಿದ ಪ್ರೇರಣೆಯಿಂದ ನಂಜನಗೂಡಿನ ಹಿಂದಿ ಪ್ರಚಾರ ಸಭಾದವರೂ ಬೇಸಿಗೆ ಶಿಬಿರ ನಡೆಸಿದರು. ಹಿಂದಿ ಶಿಕ್ಷಣವನ್ನು ಪುರುಷರಿಗೆ ಅಲ್ಲಿನ ಸಭಾಭವನದಲ್ಲಿಯೂ, ಮಹಿಳೆಯರಿಗೆ ಮಹಿಳಾ ಸಭಾಭವನದಲ್ಲಿಯೂ ಪ್ರತಿದಿನ ಸಾಯಂಕಾಲ 5.30 ರಿಂದ 7.00 ಗಂಟೆಯವರೆಗೆ ಬೋಧಿಸುತ್ತಿದ್ದರು. ಇದರಿಂದ ನಂಜನಗೂಡಿನ ನೂರಾರು ಪುರುಷರು ಮತ್ತು ಮಹಿಳೆಯರು ಹಿಂದಿಯನ್ನು ಕಲಿಯುವಂತಾ ಯಿತು.

ನಂಜನಗೂಡಿನ ಮಾಧ್ಯಮಿಕ ಶಾಲೆಯಲ್ಲಿ 1947ರ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸುಮಾರು 80 ಬಡ ವಿದ್ಯಾರ್ಥಿಗಳಿಗೆ 27-10-1947ರಿಂದ ಉಪಹಾರವನ್ನು

ಒದಗಿಸಲಾಯಿತು. ಇದರ ವ್ಯವಸ್ಥೆಗಾಗಿ ಎ.ವೆಂಕಟರಮಣಪ್ಪ, ಎಸ್.ಸುಬ್ಬಯ್ಯ, ಹುಚ್ಚಯ್ಯ ಬಿ.ಎ.ಪಂಡಿತ್ ತಲಾ 100 ರೂ., ಪುರಸಭೆ ಅವರು 60 ರೂ. ಮತ್ತು ಜಮೀನು ಅಡಮಾನ ಸಹಕಾರ ಸಂಘದವರು 50 ರೂ. ದಾನವಾಗಿ ನೀಡಿದರು.

ನಂಜನಗೂಡಿನಲ್ಲಿ ಗ್ರಾಮಾಭಿವೃದ್ಧಿ ಕಾರ್ಯಗಳು

ನಂಜನಗೂಡಿನಲ್ಲಿ ಮಹಾತ್ಮಗಾಂಧೀಜಿ ಪ್ರಭಾವದಿಂದ ಗ್ರಾಮ ನೈರ್ಮಲೀಕರಣ ಮುಂತಾಗಿ ವಿವಿಧ ಗ್ರಾಮಾಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲಾಯಿತು.

12.03.1948ರಂದು ನಂಜನಗೂಡಿನಲ್ಲಿ ಕುರುಬ ಜನಾಂಗದ ಸಮ್ಮೇಳನ ಮತ್ತು ಸಂಘದ ವಿದ್ಯಾರ್ಥಿನಿಲಯದ ಉದ್ಘಾಟನೆಯ ಸಮಾರಂಭ ಜರುಗಿತು. ಸಮಾರಂಭವನ್ನು ಉದ್ಘಾಟಿಸಲು ಅಂದಿನ ಗೃಹಮಂತ್ರಿಗಳಾದ ಶ್ರೀ ಟಿ.ಮರಿಯಪ್ಪನವರು ಮತ್ತು ಕಂದಾಯ ಸಚಿವರಾದ ಶ್ರೀ ಸಿದ್ದಯ್ಯನವರು ಆಗಮಿಸಿದ್ದರು. ಈ ಸಮಯದಲ್ಲಿ ಮಂತ್ರಿಗಳಿಗೆ ಪುರಸಭಾಧ್ಯಕ್ಷರಾದ ಶ್ರೀ ಬಿ.ಎನ್.ಎಸ್.ಆರಾಧ್ಯರವರು ನಂಜನಗೂಡಿನ ನಗರಾಭಿವೃದ್ಧಿಗೆ ಸಂಬಂಧಿಸಿ ಭಿನ್ನವತ್ತಳೆ ಸಲ್ಲಿಸಿ, 'ಶ್ರೀಕಂಠೇಶ್ವರ ದೇವರ ರಥವು ಜಾತ್ರಾ ಸಮಯದಲ್ಲಿ ಚಲಿಸಲು ಸರಿಯಾದ ರಸ್ತೆಯಿಲ್ಲ. ನಗರದ ಜನರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂಬುದನ್ನು ತಿಳಿಸಲಾಯಿತು. ಈ ಸಮಸ್ಯೆಗಳ ಪರಿಹಾರಕ್ಕಾಗಿ, ಸರ್ಕಾರದ ವತಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲು 2 ಲಕ್ಷ ರೂ.ಗಳನ್ನು ನೀಡುವುದಾಗಿ ಭರವಸೆ ಕೊಟ್ಟು, ಈ ಹಣದಲ್ಲಿ ಅರ್ಧಭಾಗವನ್ನು ಅನುದಾನದ ರೂಪದಲ್ಲಿಯೂ ಉಳಿದರ್ಧ ಹಣವನ್ನು ಸಾಲದ ರೂಪವಾಗಿ ಪುರಸಭೆಯವರಿಗೆ ನೀಡುವುದಾಗಿ, ದೇವರ ರಥ ಚಲಿಸಲು ಉತ್ತಮ ಸಿಮೆಂಟ್ ರಸ್ತೆ ನಿರ್ಮಿಸಿ ಕೊಡುವುದಾಗಿ ಕಂದಾಯ ಮಂತ್ರಿ ಶ್ರೀ ಸಿದ್ದಯ್ಯ ಪ್ರಕಟಿಸಿದರು.

1948ರ ಏಪ್ರಿಲ್ ತಿಂಗಳಲ್ಲಿ ನಂಜನಗೂಡಿನ ಹತ್ತಿರದ ಪರಶುರಾಮಪುರದ ಗರಡಿಯ ಸದಸ್ಯರೆಲ್ಲ ಒಟ್ಟಾಗಿ ಸೇರಿ, ಗ್ರಾಮದ ನೈರ್ಮಲೀಕರಣದ ಕಾರ್ಯವನ್ನು ಪ್ರಾರಂಭಿಸಿದ್ದರು. ಅವರು ಪ್ರತಿ ಸೋಮವಾರ ಗ್ರಾಮದ ಸ್ವಚ್ಛತೆ ಮತ್ತು ಇನ್ನಿತರ ರಚನಾತ್ಮಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. 24.04.1948ರಂದು ಅವರು ಗ್ರಾಮದಲ್ಲಿ ಮುಚ್ಚಿಹೋಗಿದ್ದ ಬಾವಿಯನ್ನು ಮತ್ತೆ ತೆರೆದು ಅದನ್ನು ಬಳಕೆಗೆ ಯೋಗ್ಯವಾಗಿ ಮಾಡಿದರು.

ಸಮಾರೋಪ

ನಂಜನಗೂಡಿನಲ್ಲಿ ಗಾಂಧೀಜಿ ಪ್ರಭಾವದಿಂದ ಖಾದಿ, ಅಸ್ಪೃಶ್ಯತಾ ವಿರೋಧಿ ಆಂದೋಲನ, ಪಾನನಿರೋಧ, ರಾಷ್ಟ್ರೀಯ ಶಿಕ್ಷಣ ಹಾಗೂ ಗ್ರಾಮ ಸ್ವರಾಜ್ಯದ ಅಂಶಗಳ ಬಗ್ಗೆ ವ್ಯವಸ್ಥಿತ ಕಾರ್ಯಚಟುವಟಿಕೆಗಳು ನಡೆದವು. ಸಮಾಜದಲ್ಲಿ ಮನೆ ಮಾಡಿಕೊಂಡಿದ್ದ ಹಲವು ಅನಿಷ್ಟ ಆಚರಣೆಗಳಿಗೆ ಮುಕ್ತಿ ದೊರಕಿತು. ಸಮಾಜದಲ್ಲಿ ಸಮಾನತೆ ಸ್ಥಾಪಿಸುವ, ದುರ್ಬಲರಿಗೂ ಬದುಕುವ ಅವಕಾಶ ಒದಗಿಸುವ ನಿಟ್ಟಿನಲ್ಲಿ ಅಪೂರ್ವ ಪ್ರಯೋಗಗಳು ನಡೆದವು.

ಅಡಿ ಟಿಪ್ಪಣಿಗಳು

- ಜೋಯಿಸ್.ಎಂ.ಎನ್.(ಸಂ.) (1974) ಕರ್ಮಯೋಗಿ ತಗಡೂರು ರಾಮಚಂದ್ರರಾಯರ ಅಭಿನಂದನಾ ಗ್ರಂಥ, ಮೈಸೂರು.ಪು. 1.4.
- ಜೋಯಿಸ್ ಎಂ.ಎನ್.–ಸ್ವಾತಂತ್ರ್ಯದೆಡೆಗೆ, ಮೈಸೂರು.ಪು. 72–73
- ಜೋಯಿಸ್.ಎಂ.ಎನ್.(ಸಂ.)–ಪೂರ್ವೋಕ್ತ –ಪುಟ.41–42
- ಅದೇ ಪುಟ–43
- Srinivas.M.V.(ed.)(2013)-Studies in Karnataka History and culture, procedings Vol.XI. Karnataka History Congress, P.146.
- I bid-P.145
- I bid-P.149
- ಜನಪದ ಸಂಚಿಕೆ: ಅಕ್ಟೋಬರ್.1999. ಪುಟ.27
- ಶಿವರಾಮು. ಎಸ್.– ಗಾಂಧಿ ಕನಸು ಸಹಕಾರಗೊಳಿಸಿದ ಬದನವಾಳು ಖಾದಿಕೇಂದ್ರ, ಗಾಂಧೀಭವನ ವಾರ್ತಾ, ಗಾಂಧೀಭವನ ಮಂಡ್ಯ ಸಂ.10.ಸಂಚಿಕೆ.04.ಜೂನ್.2016.
- ನಂಜನಗೂಡು ತಾಲ್ಲೂಕು ಗ್ಯಾಸೆಟಿಯರ್ (2011).ಬೆಂಗಳೂರು.ಪು. 29
- ಸಿದ್ದವನಹಳ್ಳಿ ಕೃಷ್ಣಶರ್ಮ(ಸಂ.)(1970)–ಗಾಂಧೀ ಮತ್ತು ಕರ್ನಾಟಕ ಬೆಂಗಳೂರು.ಪು. 238–239
- ಪ್ರಜಾವಾಣಿ ದಿನಪತ್ರಿಕೆ : ಕರ್ನಾಟಕ ದರ್ಶನ. 13.10.2011
- ಸಾಧ್ವಿ ಪತ್ರಿಕೆ: 22.12.1943
- ಜೋಯಿಸ್.ಎಂ.ಎನ್.(ಸಂ.)–ಪೂರ್ವೋಕ್ತ. ಪು. 100–101
- ಅದೇ.ಪು. 102.103
- ವೇಮಗಲ್ ಸೋಮಶೇಖರ್–ನಂಜನಗೂಡಿನಲ್ಲಿ ಮಹಾತ್ಮಗಾಂಧೀಜಿ. ಜನಪದ ಮಾಸಿಕ ಸಂಚಿಕೆ.07.ಅಕ್ಟೋಬರ್.2011
- ನಂಜನಗೂಡು ತಾಲ್ಲೂಕು ಗ್ಯಾಸೆಟಿಯರ್ (2011) ಬೆಂಗಳೂರು – ಪು. 28–29
- ಜೋಯಿಸ್ ಎಂ.ಎನ್.(ಸಂ.)–ಪೂರ್ವೋಕ್ತ– ಪು. 108–109
- ಸಿದ್ದವನಹಳ್ಳಿ ಕೃಷ್ಣಶರ್ಮ(ಸಂ.)–ಪೂರ್ವೋಕ್ತ– ಪು. 10
- ಸಾಧ್ವಿ ಪತ್ರಿಕೆ : ದಿನಾಂಕ : 24.10.1938
- ಸಾಧ್ವಿ ಪತ್ರಿಕೆ : ದಿನಾಂಕ : 07.11.1938
- ಸಾಧ್ವಿ ಪತ್ರಿಕೆ : ದಿನಾಂಕ : 07.11.1938
- ಸಾಧ್ವಿ ಪತ್ರಿಕೆ : ದಿನಾಂಕ : 21.04.1946
- ಸಾಧ್ವಿ ಪತ್ರಿಕೆ : ದಿನಾಂಕ : 31.01.1947
- ಸಾಧ್ವಿ ಪತ್ರಿಕೆ : ದಿನಾಂಕ : 13.03.1948

ಗಾಂಧೀ–ಅಂಬೇಡ್ಕರ್ ಎರಡು ರೇಖೆಗಳು–ಒಂದು ಧ್ರುವ

ಡಾ. ಅಣ್ಣಯ್ಯ ತೈಲೂರು

ಭಾರತದ ಇತಿಹಾಸದ ಪುಟಗಳಲ್ಲಿ ಗಾಂಧೀ–ಅಂಬೇಡ್ಕರ್ ಅವರು ಪ್ರಮುಖ ಸ್ಥಾನ ಪಡೆದುಕೊಂಡಿದ್ದಾರೆ. ಗಾಂಧೀ–ಅಂಬೇಡ್ಕರ್ ಅವರ ತತ್ವ, ಜೀವನ, ಆದರ್ಶಗಳು 'ಹಳತು' ಎನಿಸಿದರೆ, ಅದು ಭ್ರಮೆ. ಗಾಂಧೀಜಿ ತ್ಯಾಗ ಪುರುಷ, ಭೋಗಿಯಲ್ಲ. ಸಮಗ್ರ ಮಾನವ ಕೋಟಿಯ ಅಭ್ಯುದ್ಯಯ ತ್ಯಾಗದ ಹಾದಿಯಲ್ಲಿ ಸಾಧ್ಯವಾಗಬಹುದೇ ವಿನಃ ಭೋಗದ ಹಾದಿಯಲ್ಲಲ್ಲ ಎಂದು ನಂಬಿದವರು. ಅಂಬೇಡ್ಕರ್. ಭಾರತದ ಬೆಳಕು, ದೇಶದ ಸಮಸ್ತ ಶೋಷಿತ ಸಮುದಾಯದ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತದ ಸಂವಿಧಾನ ಶಿಲ್ಪಿ. ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಹರಿಕಾರ. "ಕಲ್ಯಾಣ ರಾಜ್ಯವೇ" ಇವರಿಬ್ಬರ ಗುರಿ. ಗುರಿ ಒಂದೇ ಆದರೂ ಇಬ್ಬರ ದಾರಿಗಳು ಮಾತ್ರ ಬೇರೆ ಬೇರೆ.

ಗಾಂಧೀಜಿ–ಮಹಾಪುರುಷ

ಗಾಂಧೀಜಿ, ಅನೇಕ ವಿಚಾರಧಾರೆಗಳ, ದರ್ಶನಗಳ ಸಂಗಮ ರೂಪ. ನಾವು ಗಾಂಧೀಜಿ ಅವರ ಬಗ್ಗೆ ನೆನಪಿನ ಸುಳಿಯನ್ನು ಕೆದಕಿದಾಗ, ನಮ್ಮ ಕಣ್ಣ ಮುಂದೆ ನಿಲ್ಲುವ ಚಿತ್ರ, ಸರ್ವರಿಗೂ ಸುಪರಿಚಿತವಾದಂತಹ ಚಿತ್ರವೇ ಅಹುದು. ಮೊಣಕಾಲಿನ ಮೇಲೆ ಒಂದು ತುಂಡು ಪಂಚೆ ಸುತ್ತಿಕೊಂಡ ಆ ವ್ಯಕ್ತಿಯ ಬಾಹ್ಯರೂಪವನ್ನಷ್ಟೇ ನಾವು ಚಿತ್ರಿಸಿಕೊಂಡರೆ ಸಾಲದು. ಗಾಂಧೀಜಿಯ ಒಳರೂಪದ ಚಿತ್ರ ನಮ್ಮೆಲ್ಲರ ಮನೋಚಕ್ಷುವಿನ ಮುಂದೆ ನಿಲ್ಲಬೇಕು. ಆ ವ್ಯಕ್ತಿಯ ತತ್ವ ಕೇವಲ ಒಂದು ಕಾಲಕ್ಕಷ್ಟೇ ಅನ್ವಯವಾಗುವಂತಹದಲ್ಲ. ಅದು ಕಾಲ, ದೇಶ ಹಾಗೂ ಸ್ಥಳವನ್ನು ದಾಟಿರುವಂತಹದು. ಅಂತಹ ತತ್ವಗಳಲ್ಲಿ ಕೆಲವು: ಸತ್ಯ, ಅಹಿಂಸೆ, ಕಾಲ, ಸಂಯಮ ಹಾಗೂ ಕರ್ತವ್ಯ ಪಾಲನೆ.

ಈ ಗುಣಗಳು ಎಲ್ಲರಿಗೂ ತಿಳಿದಂಥವೇ, ಆದರೆ ಸತ್ಯ, ಅಹಿಂಸೆ ಎಂದು ಕೇವಲ ಹೇಳಿದರೆ ಸಾಲದು; ಅದು ಆಚರಣೆಯಲ್ಲಿ ಇರಬೇಕು. ಸತ್ಯ ಎನ್ನುವುದು ಸತತವಾಗಿ ಸ್ವಾರ್ಥರಹಿತವಾದುದು. "ಸತ್ಯ" ಎಂದರೆ ಗಾಂಧೀಜಿಯ ಮಾತಿನಲ್ಲಿ "ಅಂತರ್ವಾಣಿ". ಮನುಷ್ಯ ತಾನು ಪ್ರತಿಯೊಂದು ಕಾರ್ಯ ಮಾಡುವಾಗಲೂ ತನ್ನ ಅಂತರಾತ್ಮದಿಂದ ಹೊರಡುವ ವಾಣಿಯನ್ನು ಕೇಳಿಸಿಕೊಳ್ಳಬೇಕು. ಅದು ಪ್ರತಿಯೊಂದನ್ನು ಸರಿ ಅಥವಾ ತಪ್ಪು ಎಂದು ತಿಳಿಸುತ್ತದೆ. ಸರಿ ಎಂಬ ನಿರ್ಣಯ ಬಂದಾಗ, ಅದನ್ನು ಅನುಸರಿಸಬೇಕು.

ಆದರೆ, ಅಂತರ್ವಾಣಿಯು ನೈಜವಾಗಿ ಸತ್ಯದ ರೂಪವನ್ನು ತಳೆಯಬೇಕಾದಲ್ಲಿ, ಅದು ಸುಜ್ಞಾನದ ಬೇರಿನಿಂದ ಹೊರಟದ್ದಾಗಿರ ಬೇಕು. ಆಗಲೇ ಅದು ಸತ್ಯ ಹಾಗೂ ಸತ್ವಯುಕ್ತವಾದ ಅಂತರ್ವಾಣಿಯಾಗಬಲ್ಲುದು.

"ಸತ್ಯವನ್ನು ಅಹಿಂಸೆಯೊಂದಿಗೆ ಸೇರಿಸಿದ್ದೇ ಆದರೆ, ನೀವು ವಿಶ್ವವನ್ನೇ ನಿಮ್ಮ ಪಾದದಡಿಯಲ್ಲಿ ತರಿಸಬಹುದು. ಸತ್ಯಾಗ್ರಹ ಎನ್ನುವುದು ರಾಜಕೀಯ ಹಾಗೂ ರಾಷ್ಟ್ರೀಯ ಜೀವನದಲ್ಲಿ ಅಳವಡಿಸಬಹುದಾದಂಥ ಮಹತ್ತರವಾದ ನೀತಿ". ಅಹಿಂಸೆಗೂ ಅಧಿಕಾರಮೋಹಕ್ಕೂ ಸಂಬಂಧವೇ ಇರದು. ಅಹಿಂಸೆಯ ಗುರಿ ಅಧಿಕಾರ ಎಂದಿಗೂ ಅಲ್ಲ; ಅದರ ಬಲದಿಂದ ಅಧಿಕಾರವನ್ನು ಹಿಡಿತದಲ್ಲಿ ಇಟ್ಟುಕೊಳ್ಳಬಹುದು ಮತ್ತು ಅಧಿಕಾರಮುದ್ರೆಯುಳ್ಳ ಸರ್ಕಾರವನ್ನು ಸೇರದೆಯೇ ಅಹಿಂಸೆಯ ಪ್ರಭಾವವನ್ನು ಬೀರಬಹುದು. ಇದು ಅಹಿಂಸೆಯ ಔಚಿತ್ಯ !

ಗಾಂಧೀಜಿ ಜೀವನದಲ್ಲಿ ಶೀಲಕ್ಕೆ ಬಹಳ ಪ್ರಾಧಾನ್ಯತೆ ಕೊಟ್ಟಿದ್ದರು. ಹಾಗೆಯೆ "ಶಿಸ್ತು" ಗಾಂಧೀಜಿಯ ಜೀವಾಳ ಎನ್ನಬಹುದು. "ಸತ್ ಶೀಲವನ್ನು ಬೆಳೆಸಿಕೊಳ್ಳುವುದೇ ವಿದ್ಯಾಭ್ಯಾಸದ ಗುರಿ; ಧೈರ್ಯ, ಸಾಮರ್ಥ್ಯ, ಉನ್ನತ ಧ್ಯೇಯಕ್ಕಾಗಿ ಕೆಲಸ ಮಾಡುವುದರಲ್ಲಿ ತನ್ನತನವನ್ನೇ ಮರೆಯುವುದು, ಇವು ಮುಖ್ಯ. ಇದು ಸಾಕ್ಷರತೆಗಿಂತ ಬಹಳ ಮುಖ್ಯ. ವಿದ್ಯಾಭ್ಯಾಸ ಎಂಬುದು ಈ ಗುರಿಗಳನ್ನು ಮುಟ್ಟುವ ಕೇವಲ ಸಾಧನಮಾತ್ರವಾಗಬಲ್ಲದು."

ಗಾಂಧೀಜಿ ಮಾನವಪ್ರೇಮಿ. ಅವರು "ಈ ಬೃಹತ್ ವಿಶ್ವದಲ್ಲಿ ಮನುಷ್ಯ ಎನಿಸಿಕೊಳ್ಳುವ ಪ್ರಾಣಿ ಒಂದು ಸಣ್ಣ ಬಿಂದುವಿನ ಸ್ಥಾನವನ್ನಷ್ಟೆ ಆಕ್ರಮಿಸಿದ್ದಾನೆ. ಭೌತಿಕವಾಗಿ ಅವನು ಒಂದು ತಿರಸ್ಕಾರಯೋಗ್ಯವಾದ ಹುಳು. ಆದರೆ ದೇವರು ಅವನಿಗೆ ಬುದ್ಧಿ ಮತ್ತು ವಿಚಾರ ಮಾಡುವ ಶಕ್ತಿ ಕೊಟ್ಟಿದ್ದಾನೆ. ವಿಚಾರಶಕ್ತಿಯಿಂದ ಯಾವುದು ಒಳ್ಳೆಯದು, ಯಾವುದು ಕೆಟ್ಟದು ಎಂಬುದನ್ನು ಆತ ತಿಳಿಯಬಹುದು. ಈ ಕಲೆಯನ್ನು ಆತ ದೈವವನ್ನು ನೋಡಲು ಉಪಯೋಗಿಸಿದ್ದೇ ಆದರೆ ಎಲ್ಲರಿಗೂ ಒಳಿತಾಗುತ್ತದೆ. ಈ ಕಲೆಯನ್ನು ನಾವು ದುರುಪಯೋಗಪಡಿಸಿಕೊಂಡದ್ದೇ ಆದರೆ ಕೆಡುಕು ಉಂಟಾಗುತ್ತದೆ. ಪ್ಲೇಗು ಮುಂತಾದ ಸಾಂಕ್ರಾಮಿಕ ರೋಗಕ್ರಿಮಿಗಳಲ್ಲದೆ, ಈ ಪ್ರಪಂಚದಲ್ಲಿ ಕಲಹ, ಕೊಲೆ, ಅಸಂತೋಷ ಮತ್ತು ದುಃಖ ನೆಲೆಸುತ್ತವೆ" ಎಂದರು.

ಗಾಂಧೀಜಿ ಪ್ರಜಾಪ್ರಭುತ್ವವಾದಿಯೇನೋ ಅಹುದು. ಆದರೆ ಅವರಿಗೆ ಪ್ರಜಾಪ್ರಭುತ್ವದ ಮೂಲ ತತ್ವವಾದ **Majority** (ಬಹುಸಂಖ್ಯಾಬಲ) ಹಿಡಿಸುತ್ತಿರಲಿಲ್ಲ. "ಸರ್ವೇ ಜನಾಃ ಸುಖಿನೋ ಭವಂತು" ಎಂಬ ಆರ್ಯರ ಪಡಿನೆಳಲನ್ನು ಅನುಸರಿಸಿದವರು ಅವರು. "ಹೆಚ್ಚು ಜನಕ್ಕೆ ಅಲ್ಲ; ಎಲ್ಲರಿಗೂ ಒಳಿತಾಗಬೇಕು" ಎಂಬುದು ಅವರ ಧ್ಯೇಯ. ಪ್ರಜಾಪ್ರಭುತ್ವ ಕೇವಲ ಸರ್ಕಾರದ ಅಧಿಕಾರಿಗಳು ನಡೆಸುವಂಥದಲ್ಲ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಅಧಿಕಾರಮೋಹ, ಪದವಿಯ ಮೋಹದಿಂದ ದೂರವಾಗಿರಬೇಕು. "ನಾನು 'ಎಲ್ಲ ಸನ್ನಿವೇಶಗಳಲ್ಲೂ, ಸತತವೂ ಒಳ್ಳೆಯದನ್ನೇ ಮಾಡಬೇಕು' ಎನ್ನುವವರು ಅಧಿಕಾರವನ್ನು

ಹೊಂದಲೇಬಾರದು" ಎಂಬುದು ಗಾಂಧೀಜಿ ಅವರ ಅಭಿಮತ. ಆದ್ದರಿಂದಲೇ, ಗಾಂಧೀಜಿ ಅವರು "ಕಾಂಗ್ರೆಸ್ ಪಕ್ಷವನ್ನು 'ಲೋಕ ಸೇವಕ' ಸಂಘವನ್ನಾಗಿ ಮಾರ್ಪಡಿಸಿ ಅದರ ಸದಸ್ಯರು ಜನತೆಯ ಸೇವೆಮಾಡಲಿ" ಎಂಬ ಅಭಿಪ್ರಾಯ ಹೊಂದಿದ್ದರು.

ಗಾಂಧೀಜಿ ತತ್ವ: ಆಗ–ಈಗ

"ಗಾಂಧೀಜಿ" ಎಂದೊಡನೆ ಸತ್ಯ, ಅಹಿಂಸೆ, ಶಿಸ್ತು, ಸಂಯಮ, ಸಹಿಷ್ಣುತೆ ಈ ಗುಣಗಳೂ ನೆನಪಾಗುತ್ತವೆ. ಸೂರ್ಯನನ್ನು ಬಿಟ್ಟು ಕಿರಣಗಳಿಗೆ ಬೇರೆ ಅಸ್ತಿತ್ವ ಹೇಗೆ ಇರದೋ, ಹಾಗೆ ಗಾಂಧೀಜಿಯವರೊಂದ ಈ ಗುಣಗಳು ಬೇರೆ ಇಲ್ಲ. ಅರವತ್ತೊಂಬತ್ತು ವರ್ಷಗಳ ಹಿಂದೆ, ತಲೆತಿರುಕನೊಬ್ಬ ಗಾಂಧೀಜಿಯ ಭೌತಿಕ ಶರೀರವನ್ನು ಕೊನೆಗಾಣಿಸಿದ. ಆ ತಲೆತಿರುಕ ಗಾಂಧೀಜಿ ಅವರ ದೇಹವನ್ನು ಕೊಂದ; ನಾವು ಈಗ ಗಾಂಧೀಜಿ ಅವರ ತತ್ವಗಳ ಕೊಲೆ ಮಾಡುತ್ತಿದ್ದೇವೆ.

ಅಂದು 'ಗಾಂಧೀಜಿ ಎಂದರೆ ಕಾಂಗ್ರೆಸ್, ಕಾಂಗ್ರೆಸ್ ಎಂದರೆ ಗಾಂಧೀಜಿ' ಎಂಬ ನಂಬಿಕೆ ಇತ್ತು. ಆದರೆ, ನಂಬಿಕೆಗೆ ಪೂರ್ಣ ದ್ರೋಹವನ್ನು ಈ ದಶಕಗಳಲ್ಲಿ ಮಾಡಲಾಗಿದೆ. ಈಗ, ಗಾಂಧೀಜಿ ಅವರ ಪ್ರಮುಖ ತತ್ವಗಳಾದ ಸತ್ಯ–ಅಹಿಂಸೆಯನ್ನು ಗಾಳಿಗೆ ತೂರಿಯಾಗಿದೆ. ಹಿಂದೂ–ಮುಸ್ಲಿಂ ಐಕ್ಯತೆಗೆ ಶ್ರಮಿಸಿದರು ಅವರು ಪ್ರತಿಕ್ಷಣವೂ ಶ್ರಮಿಸಿದ್ದರು; ಆದರೆ, ಅವರ ಜನ್ಮಸ್ಥಳದ ರಾಜ್ಯದಲ್ಲೇ ವರ್ಣಿಸಲು ಘೋರವಾದ ಹಿಂಸೆ ನಡೆದು ಹೋಯಿತು.

ಅವರು 'ಅಧಿಕಾರ ಮೋಹಸಲ್ಲದು' ಎಂದರು. ಆದರೆ ಈಗ ಎಲ್ಲರಿಗೂ ಬೇಕಿರುವುದು ಕೇವಲ ಅಧಿಕಾರ. ಅಧಿಕಾರ ಹಿಡಿಯುವುದು ಮತ್ತು ಸುಖೀಜೀವನ ನಡೆಸುವುದೇ ಬಹುತೇಕ ಮುಖಂಡರ ಜೀವನದ ಧ್ಯೇಯವಾಗಿದೆ. ಗಾಂಧೀಜಿ ಅವರ ಜನ್ಮದಿನ ಇತ್ಯಾದಿ ಆಚರಣೆ ಕೇವಲ ಕಾಟಾಚಾರದ ಕಾರ್ಯಕ್ರಮವಾಗಿ ಹೋಗಿದೆ.

ಗಾಂಧೀಜಿಯ ಅಹಿಂಸಾ ತತ್ವ ಇಂದಿನ ವಿಶ್ವಕ್ಕೆ ಬಹಳ ಮಟ್ಟಿಗೆ ಅನ್ವಯವಾಗುತ್ತದೆ. ಮಾನವಕೋಟಿಯ ಕಲ್ಯಾಣ ಕೂಡಿ ಬಾಳುವುದರಲ್ಲಿಯೇ ವಿನಾ ದ್ವೇಷಿಸುವುದರಲ್ಲಿಲ್ಲ. ಆದರೆ, ಇಂದು ವಿಶ್ವದ ಬೃಹತ್ ಶಕ್ತಿಗಳು ಅಹಿಂಸೆಯ ದಾರಿಯಿಂದ ನೂರು–ಸಾವಿರ ಮೈಲು ದೂರ ಹೋಗಿವೆ. ಅವುಗಳು ಇಚ್ಛಿಸಿದರೆ, ಅಣುಶಕ್ತಿಯ ಪ್ರಯೋಗದಿಂದಾಗಿ ಇಡೀ ವಿಶ್ವವನ್ನೇ ನಾಶಮಾಡಬಲ್ಲವು.

ಮಾನವ ಇನ್ನಾದರೂ ಮನುಷ್ಯತ್ವವನ್ನು ಅರಿಯಬೇಕು. ಮೃಗೀಯ ಪ್ರವೃತ್ತಿಯನ್ನು ತಡೆಹಿಡಿದು, ದೇವತ್ವಕ್ಕೆ ಏರುವುದರತ್ತ ಪ್ರಯತ್ನಿಸಬೇಕು. ಇದು, ಗಾಂಧೀಜಿ ತೋರಿದ ಸತ್ಯ–ಅಹಿಂಸೆ–ಶಿಸ್ತು ಈ ತ್ರಿಗುಣಗಳನ್ನು ಕಾರ್ಯಗತ ಗೊಳಿಸುವುದರಿಂದ ಮಾತ್ರ ಸಾಧ್ಯ. ಆಗ ಮಾತ್ರ ಮಾನವಕೋಟಿಯ ಕಲ್ಯಾಣ ಸಾಧ್ಯ. ಹಾಗಾದಾಗಲೇ ಗಾಂಧೀಜಿಯ ಆತ್ಮಕ್ಕೆ ತೃಪ್ತಿ. ಇದು ಸತ್ಯ; ಸರ್ವರಿಗೂ ಪಥ್ಯ.

ಅಂಬೇಡ್ಕರ್ ನಮ್ಮ ಸಮುದಾಯದ ಸಮಷ್ಠಿ ಪ್ರಜ್ಞೆ

ಅಂಬೇಡ್ಕರ್ ಅವರು ನಮ್ಮ ನಾಡಿನ, ನಮ್ಮ ಸಮುದಾಯದ ಅಂತ:ಸಾಕ್ಷಿಯನ್ನು ಬಡಿದೆಚ್ಚರಿಸಿದರು. ಅವರ ಸ್ಥಾನವನ್ನು ತುಂಬಲು ಯಾರಿಗೂ ಸಾಧ್ಯವಿಲ್ಲ.

ಅಂಬೇಢ್ಕರ್‌ಗೆ ಸ್ವಂತ ನೆಲದಲ್ಲಿ ಸವರ್ಣೀಯರಿಂದ ಬಾಲ್ಯದಿಂದಲೇ ಅಪಮಾನ ಆಗುತ್ತಾ ಬಂತು. ಸ್ವದೇಶಿಯರಿಂದಲೇ ಆಗುವ ಅಪಮಾನ ಭಯಾನಕ. ಆಗಿನ್ನೂ ಅವರು ಹೈಸ್ಕೂಲ್ ವಿದ್ಯಾರ್ಥಿ. ರೈಲು ನಿಲ್ದಾಣದಿಂದ ಹೋಗುವಾಗ ಎತ್ತು-ಗಾಡಿಗೆ ಮೈಲಿಗೆಯಾಗುತ್ತದೆ ಎಂದು ಅವರಿಗೆ ಅಪಮಾನ ಮಾಡಲಾಗುತ್ತದೆ; ಕುಡಿಯಲು ನೀರು ಕೂಡ ಅವರಿಗೆ ಸಿಕ್ಕುವುದಿಲ್ಲ. ಕ್ಷೌರಿಕ ಕೂಡ ಅವರನ್ನು ಮುಟ್ಟುವುದಿಲ್ಲ. ತರಗತಿಯಲ್ಲಿ ಪ್ರತ್ಯೇಕವಾಗಿ ಕುಳಿತುಕೊಳ್ಳಬೇಕಾದ ಪರಿಸ್ಥಿತಿ. ಇವೆಲ್ಲವೂ ಕಲ್ಪಿತ ಕಪೋಲ ಕಥೆಗಳಲ್ಲ. 20ನೇ ಶತಮಾನದ ಆದಿ ಭಾಗದಲ್ಲಿ ಪ್ರತಿಭಾವಂತ ದಲಿತನೊಬ್ಬ ಅನುಭವಿಸಿದ ದಾರುಣ ವಾಸ್ತವ ಸತ್ಯ. ಇಂಥ ಘೋರ ಅಪಮಾನಗಳಿಗೆ ತುತ್ತಾದವರು ಅಂಬೇಡ್ಕರ್. ಆದಾಗ್ಯೂ, ಈ ಎಲ್ಲಾ ಅಪಮಾನಗಳನ್ನು ಮೆಟ್ಟಿನಿಂತವರು, ಇಡೀ ದೇಶದಿಂದ ಜಾತೀಯತೆಯನ್ನು ಹೊಡೆದೋಡಿಸಲು ಅಪೂರ್ವ ಪರಿಹಾರ ವನ್ನು ಅವರು ನೀಡಿದರು.

ಅಂಬೇಡ್ಕರ್ ಚಿಂತನೆಯನ್ನು ರೂಪಿಸಿದ್ದು ಅವರ ಅಪಮಾನಗಳೇ ಆದರೂ ಅದಕ್ಕೆ ಹಲವಾರು ಪೂರಕ ಚಾರಿತ್ರಿಕ ಸಂಗತಿಗಳಿವೆ. ಜಾತಿ ವಿನಾಶ ಚಳುವಳಿಯು ಬಸವಣ್ಣನವರ ನಾಯಕತ್ವದಲ್ಲಿ 12ನೇ ಶತಮಾನದಲ್ಲಿಯೂ ಆಗಿ ಹೋಗಿತ್ತು. 14ನೇ ಶತಮಾನದ ಸಂತ ಕಬೀರರ ಪ್ರಭಾವವೂ ಅಂಬೇಡ್ಕರ್ ಮೇಲೆ ಆಗಿತ್ತು. ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ಅವರಿಂದ 19ನೇ ಶತಮಾನದಲ್ಲಿ ದೊಡ್ಡ ರೀತಿಯಲ್ಲಿ ರಕ್ತರಹಿತ ಕ್ರಾಂತಿ ಸಂಭವಿಸಿತ್ತು.

ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದುಕೊಳ್ಳಬೇಕೆಂಬ ಅಂಬೇಡ್ಕರ್ ಕನಸಿಗೆ ಬರೋಡಾ ಮಹಾರಾಜರು ನೀರೆರೆದರು. ಅಮೇರಿಕಾದ ಕಪ್ಪು ಜನರ ಸ್ವಾತಂತ್ರ್ಯದ ಅಭೀಪ್ಸೆಗಳು ಅಂಬೇಡ್ಕರ್ ಚಿಂತನೆಗೆ ಹೊಸ ರೂಪ ಕೊಟ್ಟವು; ಹೊಸ ದಿಕ್ಕು ತೋರಿದವು. ಅವರು ಭಾಗವಹಿಸಿದ ಸಮಾವೇಶಗಳು, ಮಾಡಿದ ಭಾಷಣಗಳು, ಬರೆದ ಅಸಂಖ್ಯಾತ ಪುಸ್ತಕಗಳು ಅವರನ್ನು ಮಹಾ ವ್ಯಕ್ತಿಯನ್ನಾಗಿ, ದೊಡ್ಡ ಸಂಘಟನಾಕಾರರನ್ನಾಗಿ ಮಾಡಿದ್ದವು.

ತಳಸ್ಪರ್ಶಿ ಅಧ್ಯಯನ, ಪ್ರಖರವಾದ ವೈಚಾರಿಕತೆ, ಸಾಮಾಜಿಕ ಪಿಡುಗುಗಳ ಮೂಲವನ್ನು ಶೋಧಿಸಿ, ಪರಿಹಾರವನ್ನು ಹುಡುಕುವ ಅನ್ವೇಷಕ ಪ್ರವೃತ್ತಿ ಮತ್ತು ಸೂಕ್ಷ್ಮ ಒಳನೋಟಗಳಿಂದ ಅಂಬೇಡ್ಕರ್ ಅವರು ಚಲನರಹಿತ ಸಮಾಜವು ಸಮಾನತೆಯತ್ತ ಚಲಿಸುವುದಕ್ಕೆ ಚಾಲನೆ ನೀಡಿದರು. ಜಗತ್ತೇ ನಿಬ್ಬೆರಗಾಗುವಂತೆ ತಮ್ಮ ಪಾಂಡಿತ್ಯ ಮತ್ತು ಹೋರಾಟಗಳ ಮೂಲಕ ಮೂಕ ಸಮುದಾಯವನ್ನು ಮುನ್ನಡೆಸಿದರು.

ಅಂಬೇಡ್ಕರ್ ತಮ್ಮ ಜೀವನದಲ್ಲಿ ಎಲ್ಲಾ ಬಗೆಯ ನೋವು ಮತ್ತು ಶೋಷಣೆಗಳನ್ನು ಅನುಭವಿಸಿದರು. ಅವರದು ಅಮಿತ ಜ್ಞಾನದಾಹ. ಅವರು ನ್ಯಾಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರಗಳನ್ನು ಆಳವಾಗಿ ಅಭ್ಯಸಿಸಿದರು. ಭಾರತದ ಪ್ರಾಚೀನ ಮತ್ತು ಶಾಸ್ತ್ರೀಯ ಗ್ರಂಥಗಳನ್ನು ಅವರು ವಿಶ್ಲೇಷಣೆಗೆ ಒಳಪಡಿಸಿದರು. ಜ್ಞಾನಾರ್ಜನೆಯ ಜೊತೆಗೆ ಅವರು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿದರು. ಸಮಾನತೆಯ ತಳಹದಿಯ ಮೇಲೆ ಸಮಾಜ ರಚನೆಯಾಗಲು ನಿರಂತರ ಹೋರಾಟ, ಸಂಘರ್ಷ, ಜಿಜ್ಞಾಸೆ, ಇತ್ಯಾದಿಗಳ ಮೂಲಕ ಜನರಲ್ಲಿ ಜಾಗೃತಿಯನ್ನು ತುಂಬಿದರು. ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕವೇ ಶೋಷಿತ ಜನಾಂಗ ಉದ್ಧಾರವಾಗಬಲ್ಲದು; ತನ್ನ ವಿಮೋಚನೆಗೆ ಸಮುದಾಯವು ಮಹಾತ್ಮರ ಬರುವಿಕೆಯನ್ನು ಕಾಯಬಾರದು ಎಂದು ಅಂಬೇಡ್ಕರ್ ಎಚ್ಚರಿಸಿದರು. ಶೋಷಿತ ಜನಾಂಗದ ವಿಮೋಚನಾ ಗುರಿಯನ್ನು ಮತ್ತು ಅದನ್ನು ಸಾಧಿಸಲು ಮಾರ್ಗಗಳನ್ನು ಹಾಕಿ ಕೊಟ್ಟರು.

ಡಾ॥ ಬಾಬಾ ಸಾಹೇಬ್‌ರನ್ನು ಸಂವಿಧಾನ ಶಿಲ್ಪಿಯೆಂದು, ಭಾರತದ ಸಂವಿಧಾನಕ್ಕೆ ಅವರು ನೀಡಿದ ಕೊಡುಗೆ ಬಹುದೊಡ್ಡದೆಂದು ಎಲ್ಲರೂ ಶ್ಲಾಘಿಸುವರು. ಆಧುನಿಕ ಭಾರತಕ್ಕೆ ಅವರು ಕೊಟ್ಟ ದೊಡ್ಡ ಕೊಡುಗೆ ಎಂದರೆ "ಸಾಮಾಜಿಕ ನ್ಯಾಯದ ಪರಿಕಲ್ಪನೆ" ಕುರಿತು ಅವರು ನೀಡಿದ ಮೂರ್ತ ರೂಪ. "ಸಾಮಾಜಿಕ ನ್ಯಾಯ" ಎಂದರೆ ಸಮಾಜದಲ್ಲಿ ಇದುವರೆಗೆ ನಡೆದು ಬಂದ ಸಂಪ್ರದಾಯ, ಪರಂಪರೆ ಮತ್ತು ರೀತಿ ನೀತಿಗಳಿಂದ ಉಂಟಾದ ಅಸಮಾನತೆಯನ್ನು, ಅನಿಷ್ಟಗಳನ್ನು ತೊಡೆದು ಹಾಕುವುದು. ಇದನ್ನು ಅಂಬೇಡ್ಕರ್ ಆಗು ಮಾಡಿ ತೋರಿದರು.

ಜಡ್ಡುಗಟ್ಟಿದ ಸಮಾಜದಲ್ಲಿ ಮೂಕ ಜನತೆಯ ತೊದಲು ನುಡಿಯೂ ವಿಪ್ಲವದ ಕಹಳೆಯಂತೆ ಪ್ರತಿಧ್ವನಿಸುವುದದು ಸಹಜ. ಅಂಥ ವಾತಾವರಣದಲ್ಲಿ ಹಾಹಾಕಾರ, ಸಂಘರ್ಷಗಳು ಏರ್ಪಡುವುದೂ ಸಹಜ. ಆಗ ಸಮಗ್ರತೆಗೆ ಧಕ್ಕೆಯಾಗುವ ಭೀತಿ ಕಂಡು ಬರುವುದೂ ಸಹಜ. ಆದಾಗ್ಯೂ, ಇಂಥ ಸಂಧರ್ಭಗಳನ್ನು ನಿಭಾಯಿಸುವುದು, ಹಳೇ ಪದ್ಧತಿಗಳು ಮತ್ತೆ ತಲೆಯೆತ್ತದಂತೆ ಬದಲಾವಣೆಯನ್ನು ತರುವುದು ಮುಖ್ಯವಾಗುತ್ತದೆ. ರಾಷ್ಟ್ರದ ಸಮಗ್ರತೆ ಮತ್ತು ಬೆಳವಣಿಗೆಯ ದೃಷ್ಟಿಯಿಂದ "ಸಾಮಾಜಿಕ ನ್ಯಾಯ" ಜಾರಿಯಾಗಬೇಕಾಗುತ್ತದೆ. ಇದುವರೆಗೂ ಧಾರ್ಮಿಕ ಪಾವಿತ್ರ್ಯದ ಹೆಸರಿನಲ್ಲಿ ಅಂತಸ್ತು, ಸವಲತ್ತುಗಳನ್ನು ಅನುಭವಿಸಿದ ಜನ "ತ್ಯಾಗ"ಕ್ಕೆ ಸಿದ್ಧರಾಗಬೇಕಾಗುತ್ತದೆ ಎಂಬುದು ಅಂಬೇಡ್ಕರ್‌ರ ಮಾತು. ಹಾಗಾಗಿ ಅಂಬೇಡ್ಕರ್ ಚಿಂತನೆ, ಆದರ್ಶ ಸದಾ ಹಸಿರು.

ಗಾಂಧೀ-ಅಂಬೇಡ್ಕರ್ ಇಬ್ಬರಲ್ಲಿ ಒಬ್ಬರನ್ನು ನಾಯಕರನ್ನಾಗಿ ಮಾಡಿ, ಮತ್ತೊಬ್ಬರನ್ನು ಖಳನಾಯಕರನ್ನಾಗಿ ನೋಡುವುದು ನೋವಿನ ಸಂಗತಿ. ನಮ್ಮ ಚರಿತ್ರೆಯ ಚಲನೆಗೆ ಇವರಿಬ್ಬರೂ ತಮ್ಮದೇ ಆದ ರೀತಿಯಲ್ಲಿ ಅಪೂರ್ವ ಕೊಡುಗೆ ಕೊಟ್ಟಿದ್ದಾರೆ. ಭಿನ್ನಾಭಿಪ್ರಾಯಗಳ ನಡುವೆಯೂ ಅಹಿಂಸೆಯನ್ನು ಪ್ರತಿಪಾದಿಸಿದ್ದಾರೆ ಮತ್ತು ಆಚರಣೆಗೆ ತಂದಿದ್ದಾರೆ. ಇಬ್ಬರ ಜೀವನವೂ ಅಹಿಂಸೆಯನ್ನು ಎತ್ತಿ ಹೇಳುತ್ತದೆ. ಭಿನ್ನಾಭಿಪ್ರಾಯಕ್ಕೆ

ಹಿಂಸೆಯ ರೂಪ ಕೊಡದೇ, ಪ್ರತಿರೋಧದ ಪ್ರತೀಕವಾಗಿ ನಿಂತ ಅಂಬೇಡ್ಕರ್‌ರು ಗಮನಾರ್ಹರಾಗುತ್ತಾರೆ. ಭಿನ್ನಾಭಿಪ್ರಾಯವನ್ನು ಕೇಳಿಸಿಕೊಳ್ಳಲು ಮತ್ತು ಅದಕ್ಕೆ ಪ್ರತಿಸ್ಪಂದನ ನೀಡಲು ಗಾಂಧೀಜಿ ಸದಾ ಸಿದ್ಧರಿರುತ್ತಾರೆ. ಇಬ್ಬರೂ ಎತ್ತಿ ಹಿಡಿದಿರುವುದು ಬಹುತ್ವವನ್ನು.

ಗಾಂಧೀಜಿ–ಅಂಬೇಡ್ಕರ್ ಇಬ್ಬರ ದಾರಿಗಳು ಬೇರೆ ಬೇರೆ. ಆದರೆ, ಇಬ್ಬರ ಗುರಿ ಒಂದೇ. ಇಬ್ಬರೂ ಸಮಾನಾಂತರ ರೇಖೆಗಳಂತೆ ಸಾಗುತ್ತಾರೆ. ಇಬ್ಬರದು ಅಖಂಡ ಬದ್ಧತೆ, ಧೃಡತೆ. ಗಾಂಧೀಜಿಗಿಂತ ಅಂಬೇಡ್ಕರ್ 22 ವರ್ಷ ಚಿಕ್ಕವರು. ಇಬ್ಬರ ಹಿನ್ನೆಲೆ, ಬೆಳೆದ ರೀತಿ, ಚಿಂತನೆ ಹಾಗೂ ದೊರೆತ ಬೆಂಬಲ ಎಲ್ಲವುಗಳು ಭಿನ್ನ. ಇಬ್ಬರೂ ಬೇರೆ ಬೇರೆ ಪಥಗಳಲ್ಲಿ ಸಾಗಿ, ಇತಿಹಾಸದ ಮುಖ್ಯ ಅಧ್ಯಾಯ ಗಳಾಗಿದ್ದಾರೆ; ಮುಂದಿನ ತಲೆಮಾರಿಗೆ, ಜನಾಂಗಕ್ಕೆ ದಾರಿದೀಪವಾಗಿದ್ದಾರೆ. ಈ ಸಮಯದಲ್ಲಿ ಮತ್ತೆ ಮತ್ತೆ ನೆನಪಾಗುತ್ತವೆ ಕವಿಯೊಬ್ಬರ ಕವನದ ಸಾಲುಗಳು.

ನಿಮ್ಮ ಹೆಸರಿಡುವುದು ಬೀದಿ ಬೀದಿಗೆ ಸುಲಭ
ನಿಮ್ಮಂತೆ ಬದುಕುವುದು ದುರ್ಲಭ
ನಿಮ್ಮ ಹೆಸರೆತ್ತಿದರೆ ನಿಮ್ಮ ಬಗ್ಗೆ ಮಾತಾಡಿದರೆ
ನಿಮ್ಮ ವೈರಿಗೂ ಕೂಡ ಲಾಭ.

ಗ್ರಂಥಋಣ

- ವಿಚಾರವಾದಿ ಡಾ॥ ಅಂಬೇಡ್ಕರ್/ದೇ.ಜ.ಗೌ 2013
- ಪ್ರಬುದ್ಧ ಕರ್ನಾಟಕ ಗಾಂಧೀ ಸಂಚಿಕೆ ಸಂಪುಟ 51, ಸಂಚಿಕೆ 4 ಡಾ॥ ಹೆಚ್. ತಿಪ್ಪೇಸ್ವಾಮಿ 1970
- ಜನಪದ ಡಾ॥ ಬಿ. ಆರ್. ಅಂಬೇಡ್ಕರ್ ವಿಶೇಷಾಂಕ 2013
- ಬೆತ್ತಲೆ ಜಗತ್ತು/ಪ್ರತಾಪ ಸಿಂಹ 2008
- ಪ್ರಜಾವಾಣಿ/03–07–2014
- ಉದಯವಾಣಿ/28–9–2014
- ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್/1991
- ಪ್ರಜಾವಾಣಿ/30–1–2015

ಬಸವಣ್ಣನವರ ಸಾಮಾಜಿಕ ಚಿಂತನೆಗಳು

ಡಾ. ಡಿ.ಕೆ. ಅಂಜನಪ್ಪ

ಸುಮಾರು ಒಂದೂವರೆ ಸಾವಿರ ವರ್ಷಗಳ ಇತಿಹಾಸ ಹೊಂದಿದ ಕನ್ನಡ ಸಾಹಿತ್ಯವು ವಿವಿಧ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಾದ ಸ್ಥಿತ್ಯಂತರಗಳ ದಾಖಲೆಗಳನ್ನು ಒಳಗೊಂಡಿದೆ. ಹತ್ತನೆಯ ಶತಮಾನದಲ್ಲಿದ್ದ ಪಂಪ, ಪೊನ್ನ, ರನ್ನ, ದುರ್ಗಸಿಂಹ ಮೊದಲಾದ ಕವಿಗಳು ರಾಜಾಶ್ರಯದಲ್ಲಿದ್ದರೂ, ಪ್ರಭುತ್ವದ ವಿರುದ್ಧ ಮಾತನಾಡಿದ ಉದಾಹರಣೆಗಳು ಕಂಡುಬರುತ್ತವೆ. ಇವರ ತರುವಾಯ ಬಂದ ವಚನಕಾರರಂತೂ ಪ್ರಭುತ್ವದ ವಿರುದ್ಧ ಧ್ವನಿ ಎತ್ತುವ ಮೂಲಕ ಸಂಘಟನಾತ್ಮಕ ಸಾಮಾಜಿಕ ಕಾರ್ಯಗಳಿಂದ ರಾಜಕೀಯ, ಸಾಮಾಜಿಕವಾಗಿ ತಲ್ಲಣಗಳನ್ನು ಸೃಷ್ಟಿಸಿದರು. ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಾನತೆಯ ಚಿಂತನೆಯನ್ನು ಮಂಡಿಸಿ, ಸಾಮಾಜಿಕವಾಗಿ ಶೋಷಣೆಗೊಳಗಾದವರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರಯತ್ನಿಸಿದ್ದಾರೆ.

ಹೀಗೆ ಸಾಮಾಜಿಕ ನ್ಯಾಯದ ಚಿಂತನೆಯನ್ನು ತಮ್ಮ ವಚನಗಳ ಮೂಲಕ ಕ್ರಾಂತಿಕಾರಿ ಬಸವಣ್ಣನವರು ಮುಂದಿಟ್ಟ ಬಗ್ಗೆ ಈ ಅವಲೋಕನ. ಬಸವಣ್ಣನವರ ಕಾಲದ ಸಮಕಾಲೀನ ಸಮಾಜದಲ್ಲಿ ಕುಲ-ಜಾತಿಗಳ ಹೆಸರಲ್ಲಿ, ಭಕ್ತಿಯ ಹೆಸರಲ್ಲಿ ಎಲ್ಲೆಡೆಯಲ್ಲಿಯೂ ಅಜ್ಞಾನ, ಮೂಢನಂಬಿಕೆ, ಸ್ವಾರ್ಥ, ಗುಂಪುಗಾರಿಕೆ, ಸ್ವಪ್ರತಿಷ್ಠೆಗಳು ತಾಂಡವಾಡುತ್ತಿದ್ದವು. ಇವುಗಳನ್ನು ಕಂಡ ಬಸವಣ್ಣ, ಸಾಮಾಜಿಕ ಸುಧಾರಣೆಗಾಗಿ ವಚನಗಳ ಮುಖಾಂತರ ವಿಡಂಬನೆ ಮಾರ್ಗವನ್ನು ಬಳಸಿಕೊಂಡ. ಈ ವಚನಗಳು ಸಮಕಾಲೀನ ಸಮಾಜವನ್ನು ಸುಧಾರಿಸುವ ಉದ್ದೇಶವನ್ನು ಹೊಂದಿದ್ದವು. ಹೀಗೆ, ಬಸವಣ್ಣನನ್ನು ಸಾಮಾಜಿಕ ಕ್ರಾಂತಿಯ, ಹರಿಕಾರ ಎಂದು ಕರೆಯುತ್ತಾರೆ. ಬಸವಣ್ಣ ತನ್ನ ವಚನಗಳ ಮೂಲಕ ಸಾಮಾಜಿಕ ಸಮಾನತೆ ತರಲು ಚಿಂತಿಸಿದ್ದಾರೆ. ವ್ಯಕ್ತಿಗಳ ಸುಧಾರಣೆ ಕುರಿತು ಅವರು ತಮ್ಮ ವಚನಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಅವರ ವಚನವೊಂದು ಹೀಗಿದೆ.

"ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆ ಅವರ ದು;ಖಕ್ಕೆ ಅಳುವವರ
ಮೆಚ್ಚ ಕೂಡಲಸಂಗಮದೇವ"

ಇಲ್ಲಿ ಮೊದಲು ನಿಮ್ಮ ವ್ಯಕ್ತಿತ್ವವನ್ನು ತಿದ್ದಿಕೊಳ್ಳಿ ಎಂದು ಅವರು ಕರೆಕೊಡುತ್ತಾರೆ. ಮನುಷ್ಯನ ವ್ಯಕ್ತಿತ್ವದ ಅವನತಿಗೆ ಪಂಚೇಂದ್ರಿಯಗಳು ಕಾರಣ. ಅವು ಯಾವಾಗಲೂ ವಿಷಯಾಸಕ್ತಿಯನ್ನು ಅಪೇಕ್ಷಿಸುತ್ತವೆ. ಹೀಗಾಗಿ ಅವು ತನ್ನನ್ನು ಕಾಡದಂತಿರಲು ಬಸವಣ್ಣನವರು ಮಾಡಿಕೊಂಡ ಆರ್ತ ಭಾವದ ಪ್ರಾರ್ಥನೆ ಹೀಗಿದೆ.

"ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧನ ಮಾಡಯ್ಯ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ
ನಿಮ್ಮ ಕೂಡಲ ಸಂಗನ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಳಸದಂತೆ
ಇರಿಸೋ ಕೂಡಲಸಂಗಮದೇವ"

ಎಂದು ಅಂತರಂಗ-ಬಹಿರಂಗ ಶುದ್ಧಿಗಾಗಿ ತನ್ನ ಇಷ್ಟದೈವದ ಬಳಿ ಅವರು ಬೇಡಿಕೆಯನ್ನು ಇಡುತ್ತಾರೆ. ಮನುಷ್ಯ ಮೊದಲು ತನ್ನನ್ನು ತಾನು ತಿದ್ದಿಕೊಂಡರೆ, ಅರ್ಧ ಸಮಾಜವನ್ನೆ ತಿದ್ದಿದಂತೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಬಸವಣ್ಣನವರು ಮಾನವ ಸಂಬಂಧಗಳನ್ನು ಉತ್ತಮಪಡಿಸುವ ಚಿಂತನೆಯನ್ನು ತಮ್ಮ ವಚನಗಳಲ್ಲಿ ಮಾಡಿದ್ದಾರೆ. ವ್ಯಕ್ತಿ ಸಂಬಂಧಗಳು ಬಡತನ, ಸಿರಿತನದ ಮೂಲಕ ಶ್ರೇಷ್ಠ-ಕನಿಷ್ಠವಾಗಲಾರವು ಎಂಬುದನ್ನು ಹೇಳುವುದು ಹೀಗೆ.

"ಏನು ಬಂದಿರಿ ಹದುಳವಿದ್ದಿರೆ ಎಂದರೆ
ನಿಮ್ಮ ಮೈಸಿರಿ ಹಾರಿಹೋಹುದೆ
ಕುಳ್ಳಿರೆಂದರೆ ನೆಲ ಕುಳಿಹೋಹುದೆ.
ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೆ
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದೊಡೆ
ಕೆಡಹಿ ಮೂಗ ಕೊಯ್ಯದೆ ಮಾಳ್ಪನೆ ಕೂಡಲಸಂಗಮದೇವನು?

ಎಂದು ನಮ್ಮ ಬಳಿ ಬಂದವರನ್ನು ಮೃದು ಮಾತುಗಳಿಂದ ಮಾತನಾಡಿಸುವುದು, ಅವರ ಕ್ಷೇಮ-ಸಮಾಚಾರ ವಿಚಾರಿಸುವ ಮೂಲಕ ಮಾನವ ಸಂಬಂಧಗಳನ್ನು ಉತ್ತಮಪಡಿಸುವ ಚಿಂತನೆ ಮಾಡಿರುವುದನ್ನು ಕಾಣುತ್ತೇವೆ.

ಸಂಪತ್ತು ಸಂಗ್ರಹಗೊಂಡಂತೆಲ್ಲ ವ್ಯಕ್ತಿಪ್ರತಿಷ್ಠೆ ಮತ್ತು ಅಹಂಕಾರ ಹೆಚ್ಚುತ್ತದೆ. ಇದರಿಂದ ಮಾಜದಲ್ಲಿ ಅಸಮಾನತೆ ಹೆಚ್ಚಾಗಿ, ಕ್ಷೋಭೆ ಉಂಟಾಗಲು ಕಾರಣವಾಗಬಹುದು ಂಬುದನ್ನು ಬಸವಣ್ಣನವರು ವಿಡಂಬಿಸುವುದು ಹೀಗೆ.

"ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯ
ಬಡತನವೆಂಬ ಮಂತ್ರವಾದಿ ಬರಲು ಒಡನೆ ನುಡಿವರು ಕೂಡಲಸಂಗಮದೇವಾ"

ಸಿರಿವಂತರ ದರ್ಪ ನಾಶವಾಗುವುದು ಅವರಿಗೆ ಬಡತನ ಪ್ರಾಪ್ತವಾದಾಗ ಎಂಬ ಾವದೊಂದಿಗೆ ಸಮಾಜದಲ್ಲಿನ ಅಸಮಾನತೆಯನ್ನು ಹೊಡೆದೋಡಿಸುವ ಬಗ್ಗೆ ೇಳಿರುವುದು ಕಂಡುಬರುತ್ತದೆ.

ಅಂದಿನ ಸಮಾಜದಲ್ಲಿ ಅಸ್ಪೃಶ್ಯತೆ ಪರಾಕಾಷ್ಠ ಸ್ಥಿತಿಯನ್ನು ಮುಟ್ಟಿತ್ತು. ಈ ್ಯವಸ್ಥೆಯನ್ನು ಬಸವಣ್ಣ ತನ್ನ ವಚನಗಳ ಮೂಲಕ ಖಂಡಿಸುತ್ತಾನೆ. ಅಲ್ಲದೆ ಕುಲ-ಜಾತಿಗಳ ಬಗೆಗಿನ ಬಸವಣ್ಣನವರ ನಿರ್ಣಯ ಹೀಗಿದೆ.

"ಕುಲವೇನೊ ಅವಂದಿರ ಕುಲವೇನೋ?
ಸಕಲ ಜೀವತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲ ಸಂಗನ ಶರಣರೆ ಕುಲಜರು"

ಈ ವಚನದ ಮೂಲಕ ಸಕಲ ಜೀವಗಳಿಗೆ ಒಳ್ಳೆಯದನ್ನು ಬಯಸುವಂತವರೇ ಶ್ರೇಷ್ಠ ಕುಲಜರೆಂದು ನಿರ್ಣಯವ ನೀಡುವ ಮೂಲಕ ಸಮಾಜವನ್ನು ಸಮಾನತೆಯ ಕಡೆಗೆ ಕೊಂಡೊಯುವ ಪ್ರಯತ್ನವನ್ನು ಬಸವಣ್ಣನವರು ಮಾಡಿದ್ದಾರೆ.

ಅಂದಿನ ಸಮಾಜದಲ್ಲಿ ಜಾತಿಯ ಆಧಾರದಲ್ಲಿ ಮೇಲು ಕೀಳು ಎಂಬ ತಾರತಮ್ಯ ತಾಂಡವವಾಡುತ್ತಿತ್ತು. ಈ ಹಿನ್ನೆಲೆಯಲ್ಲಿ ಜಾತಿಯ ಹುಟ್ಟು ಕುರಿತು ಬಸವಣ್ಣನವರು ತಮ್ಮ ವಚನವೊಂದರಲ್ಲಿ ಹೇಳುವುದು ಹೀಗಿದೆ.

"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರವನಾದ
ಕರ್ಣದಲಿ ಜನಿಸಿದವರುಂಟೆ ಜಗದೊಳಗೆ
ಇದು ಕಾರಣ ಕೂಡಲಸಂಗಮ ದೇವ
ಲಿಂಗಸ್ಥಳವನು ಅರಿದವನೆ ಕುಲಜನು"

ಈ ವಚನದಲ್ಲಿ ವೃತ್ತಿಗನುಗುಣವಾಗಿ ಜಾತಿಗಳು ನಿರ್ಮಾಣಗೋಂಡಿವೆ. ಆದ್ದರಿಂದ., ಜಾತಿಯನ್ನು ಆಧರಿಸಿ ಮೇಲು-ಕೀಳು ಎಂದು ತಾರತಮ್ಯ ಮಾಡಬಾರದು ಎಂಬ ಸಾಮಾಜಿಕ ನ್ಯಾಯದ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ.

ಜಾತಿವ್ಯವಸ್ಥೆಗೆ ಪ್ರಾಚೀನ ಇತಿಹಾಸವಿದೆ. ಅದು ದಿನದಿಂದ ದಿನಕ್ಕೆ ಮತ್ತಷ್ಟು ಗಟ್ಟಿಗೊಳ್ಳುತ್ತಾ ಇಂದು ಸಮಾಜದಲ್ಲಿ ಗಟ್ಟಿಯಾಗಿ ನೆಲೆಗೊಂಡಿದೆ. ಬಸವಣ್ಣನವರು ಹುಟ್ಟುತ್ತಾ ಬ್ರಾಹ್ಮಣನಾದರೂ ಜಾತಿಯ ಮೇಲರಿಮೆಯನ್ನು ಒಪ್ಪಿಕೊಂಡವರಲ್ಲ. ಯಾರನ್ನೂ ತಮಗಿಂತ ಕೀಳೆಂದು ತಿಳಿದವರಲ್ಲ. ಜಾತಿ ಪರಿಗಣಿಸಿ ಯಾರನ್ನೂ ಸಂಭೋದಿಸಿದವರಲ್ಲ; ಯಾರನ್ನೂ ಗುರುತಿಸಿದವರಲ್ಲ. ಇದಕ್ಕೆ ಮುಂದಿನ ವಚನವನ್ನು ನೋಡಬಹುದು.

"ಸೆಟ್ಟಿಯೆಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ?
ಡೋಹರನೆಂಬೆನೆ ಕಕ್ಕಯ್ಯನ?
ಮಾದಾರನೆಂಬೆನೆ ಚೆನ್ನಯನ?
ಆನು ಹಾರುವನೆಂದೆಡೆ ಕೂಡಲಸಂಗಯ್ಯ ನಗುವನಯ್ಯ"

ಸಮಾಜದಲ್ಲಿ ಬೇರೆ ಬೇರೆ ವೃತ್ತಿಗನುಗುಣವಾಗಿ ಜಾತಿಗಳನ್ನು ಗುರುತಿಸ ಲಾಗಿದೆ; ಆದರೆ, ಎಲ್ಲರನ್ನೂ ಸಮಾನತೆಯಿಂದ ಕಾಣುವುದು ಅವಶ್ಯ. ಹೀಗೆ ಬಸವಣ್ಣನವರು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದ್ದಾರೆ. ಜಾತಿ ಎಂಬುದು ಮನುಷ್ಯ-ಮನುಷ್ಯರ ನಡುವಿನ ಗೋಡೆಯಿದ್ದಂತೆ, ಅದನ್ನು ಕಿತ್ತೊಗೆದಾಗ ಮಾತ್ರ ಸಾಮಾಜಿಕ ಸಮಾನತೆ ಸಾಧಿಸಬಹುದು ಎಂಬುದು ಬಸವಣ್ಣನವರ ವಿಚಾರ.

ಬಸವಣ್ಣನವರ ಮತ್ತೊಂದು ವಿಚಾರ ಸ್ತ್ರೀ ಸಮಾನತೆ. ಬಸವಣ್ಣನವರಿಗಿಂತ ಪೂರ್ವದ ಸಮಾಜದಲ್ಲಿ ಸ್ತ್ರೀಯರು ಶೂದ್ರರಿಗಿಂತಲೂ ಹೆಚ್ಚು ಶೋಷಣೆಗೊಳಗಾಗಿದ್ದರೆಂಬುದು ತಿಳಿದುಬರುತ್ತದೆ. "ಮನುಸ್ಮೃತಿ"ಯಲ್ಲಿ ಸ್ತೀಯರ ಕುರಿತು ಈ ಹೇಳಿಕೆ ಇದೆ.

"ಸ್ತ್ರೀಯರು, ಹಗಲು-ರಾತ್ರಿ ಪುರುಷರ ಅಧೀನದಲ್ಲಿರಬೇಕು. ಪುರುಷರು ಅವರನ್ನು ಸದಾ ಕಾಲ ರಕ್ಷಿಸುತ್ತಾರೆ. ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ"

ಈ ಹೇಳಿಕೆ ಸ್ತ್ರೀಯರನ್ನು ಶೋಷಣೆ ಮಾಡುವ ಪರಿಸ್ಥಿತಿಯನ್ನು ಎತ್ತಿ ಹಿಡಿಯುವಂತಿವೆ. ಇಂತಹ ಸಮಾಜವನ್ನು ಕಂಡ ಬಸವಣ್ಣನವರು ಸ್ತ್ರೀಯರ ವಿಮೋಚನೆಯ ಬಗೆಗೆ ಹೆಚ್ಚಿನ ಆಸಕ್ತಿ ಹೊಂದಿದ್ದರು ಎಂಬುದಕ್ಕೆ ಅವರ ವೈಯಕ್ತಿಕ ಮತ್ತು ಸಾಮಾಜಿಕ ಜೀವನ ನಿದರ್ಶನವಾಗಿವೆ. ಗಂಗಾಂಬಿಕೆ ಮತ್ತು ನೀಲಾಂಬಿಕೆಯ ಜೊತೆಯಲ್ಲಿ ಬಸವಣ್ಣನವರದು ಆದರ್ಶ ದಾಂಪತ್ಯ ಎನ್ನಬಹುದು.

ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ ಮತ್ತು ಇತರ ಅನೇಕ ಅನುಭಾವಿ ವಚನಕಾರ್ತಿಯರು ಸದಸ್ಯರಾಗಿದ್ದರು. ಅನುಭವ ಮಂಟಪದ ಗೋಷ್ಠಿಗಳಲ್ಲಿ ಅನೇಕ ಶಿವಶರಣೆಯರು ಮುಕ್ತವಾಗಿ ಪಾಲ್ಗೊಳ್ಳುತ್ತಿದ್ದರು. ಅಕ್ಕಮಹಾದೇವಿಯಂತೂ ಸ್ತ್ರೀಯರ ವ್ಯಕ್ತಿತ್ವವನ್ನು ಹೊಸ ನೆಲೆಯಲ್ಲಿ ಅರ್ಥೈಸಲು ಪ್ರಯತ್ನಿಸಿದ್ದಾಳೆ.

ಬಸವಣ್ಣನವರ ವಚನಗಳಲ್ಲಿ ಆದರ್ಶ ದಾಂಪತ್ಯ ಚಿತ್ರಣ ಕಂಡುಬರುತ್ತದೆ.

"ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲನೆಂಬ
ಛಲಬೇಕು ಶರಣಂಗೆ ಪರದೈವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗಜಂಗಮವನೊಂದೆಂಬ
ಛಲಬೇಕು ಶರಣಂಗೆ ಪ್ರಸಾದ ದಿಟನೆಂಬ
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ"

ಈ ಒಂದೇ ವಚನದಲ್ಲಿ ಬಸವಣ್ಣನವರು ಪರಧನ, ಪರಸತಿ, ಪರದೈವಗಳ ಬಗ್ಗೆ ತಮ್ಮ ಪ್ರತಿರೋಧವನ್ನು ಅವರು ಮನಸ್ಸಿಗೆ ನಾಟುವಂತೆ ದಾಖಲಿಸಿದ್ದಾರೆ.

ಬಸವೇಶ್ವರರ ಮತ್ತೊಂದು ಸಾಮಾಜಿಕ ಚಿಂತನೆ ಕಾಯಕದ ಮಹತ್ವವನ್ನು ಸಾರುವುದು. ಕಾಯಕದ ಮೂಲಕ ಸಮಾಜದಲ್ಲಿ ಸಾಮಾಜಿಕ ನ್ಯಾಯ ತರಲು ಸಾಧ್ಯ ಎಂಬ ಅಭಿಪ್ರಾಯವನ್ನು ಅವರು ಹೊಂದಿದ್ದರು. ಪ್ರತಿಯೊಬ್ಬ ಶರಣನು ಕಾಯಕ ಮಾಡುತ್ತ ಬದುಕಬೇಕು. ಈ ಕಾಯಕ ತನ್ನೊಬ್ಬರ ಸಲುವಾಗಿಯಲ್ಲ. ಅದು ಸಾಮಾಜಿಕ ಸಮಾನತೆ ಸ್ಥಾಪಿಸಲು ನೆರವಾಗಬೇಕು ಎಂಬುದು ಅವರ ವಚನವೊಂದರಿಂದ ತಿಳಿಯುತ್ತದೆ. ಆ ವಚನ ಇಂತಿದೆ.

"ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ
ಎನ್ನ ಒಡಲಿಂಗೆ ಎನ್ನ ಒಡವೆಗೆಂದು ಎನ್ನ ಮಡದಿ ಮಕ್ಕಳಿಗೆಂದು
ಕುದಿದೆನಾದೊಡೆ ಎನ್ನ ಮನಕ್ಕೆ ಮನವೆ ಸಾಕ್ಷಿ"

ಕಾಯಕವು ಕೇವಲ ಹೊಟ್ಟೆಪಾಡಿಗಾಗಿ ಮಾಡುವಂಥದ್ದಾಗಿರದೆ ಅದು ಆಧ್ಯಾತ್ಮಿಕ ವಿಕಾಸಕ್ಕೆ ಮತ್ತು ಸಾಮಾಜಿಕ ಹಿತಕ್ಕೆ ಪೂರಕವಾಗಿರಬೇಕು ಎಂಬುದು ಬಸವಣ್ಣನವರ ಆಶಯವಾಗಿರುವುದು ಇಲ್ಲಿ ಕಂಡುಬರುತ್ತದೆ.

ಬಸವಣ್ಣನವರು ರಾಜಕೀಯ ಸಮಾನತೆಯ ಕುರಿತು ಚಿಂತಿಸಿರುವುದು ಅವರ ವಚನಗಳಲ್ಲಿ ಕಂಡು ಬರುತ್ತದೆ. 12ನೆಯ ಶತಮಾನದ ಶಿವಶರಣರು ಕಾಯಕ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಬಸವಣ್ಣನವರು ಬಿಜ್ಜಳನ ರಾಜ್ಯದಲ್ಲಿ ಮಂತ್ರಿಯಾಗಿದ್ದರು. ಆದರೆ, ಅವರು ಅರಸನಿಂದ ದೊರಕುವ ಯಾವ ಸಿರಿ-ಸಂಪತ್ತುಗಳಿಗೂ ಆಸೆಪಟ್ಟವರಲ್ಲ. ಬಸವಣ್ಣ ಅವರು ಅಧಿಕಾರ ತ್ಯಜಿಸಿ, ಕಲ್ಯಾಣ ಬಿಡುವಾಗ ತಾನು ಮಂತ್ರಿಯಾಗಿದ್ದುದಕ್ಕೆ ಪಶ್ಚಾತಾಪ ಪಟ್ಟಿದ್ದಾರೆ. ಇದಕ್ಕೆ ನಿದರ್ಶನ ಈ ವಚನ.

"ಅರಸು ವಿಚಾರ, ಸಿರಿಯ ಶೃಂಗಾರ ಸ್ಥಿರವಲ್ಲ ಮಾನವ
ಕೆಟ್ಟಿತ್ತು ಕಲ್ಯಾಣ ಹಾಳಾಯಿತು ನೋಡು
ಒಬ್ಬ ಜಂಗಮನ ಅಭಿಮಾನದಿಂದ
ಚಾಲುಕ್ಯರಾಯನ ಆಳ್ವಿಕೆ ತೆಗೆಯಿತ್ತು
ಸಂದಿತ್ತು ಕೂಡಲ ಸಂಗಮದೇವಾ ನಿಮ್ಮ ಕವಳಿಗೆಣೆ"

ಬಿಜ್ಜಳನಲ್ಲಿ ಆಶ್ರಯ ಪಡೆದಿದ್ದರೂ, ರಾಜ ಮತ್ತು ಪ್ರಭುತ್ವದ ಬಗೆಗೆ ಅವರಲ್ಲಿ ನಿರಾಕರಣೆ ತೋರಿರುವ ಭಾವನೆ ಈ ವಚನದಲ್ಲಲ್ಲದೆ, ಇನ್ನೂ ಅನೇಕ ವಚನಗಳಲ್ಲಿ ಕಂಡುಬರುತ್ತದೆ.

ಒಟ್ಟಾರೆ, ಬಸವಣ್ಣನವರು ತಮ್ಮ ವಚನಗಳ ಮೂಲಕ ಅಂದಿನ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಯ ವಿರುದ್ಧ ಗಟ್ಟಿ ಧ್ವನಿಯನ್ನು ಎತ್ತಿರುವುದು ಸುಸ್ಪಷ್ಟ. ಸಾಮಾಜಿಕ ನ್ಯಾಯಪರ ಚಿಂತನೆಯ ಮೂಲಕ ಸಮಾಜವನ್ನು ತಿದ್ದಲು ಪ್ರಯತ್ನಿಸಿರುವುದು ಸುಸ್ಪಷ್ಟ. ಹೀಗಾಗಿ, ಅವರ ವಿಚಾರಧಾರೆ ಚಿರಕಾಲ• ಅನುಕರಣಾರ್ಹ.

ಅಡಿ ಟಿಪ್ಪಣಿ

- ಭೂಸನೂರ ಮಠ ಸಂ.ಶಿ. (ಸಂ): ವಚನಸಾಹಿತ್ಯ ಸಂಗ್ರಹ, ಪು. ಸಂ.220
- ಬಸವರಾಜ ಎಲ್: ಬಸವ ವಚನಾಮೃತ
- ಭೂಸನೂರಮಠ, ಸಂ.ಶಿ.: ವಚನ ಸಾಹಿತ್ಯ ಸಂಗ್ರಹ, ಪು. ಸಂ.211
- ಭೂಸನುರಮಠ, ಸಂ.ಶೀ: ವಚನ ಸಾಹಿತ್ಯ ಸಂಗ್ರಹ, ಪು. ಸಂ.216
- ಬಸವರಾಜ ಎಲ್. ವಚನಾಮೃತ
- ಬಸವನಾಳ ಶಿ.ಶಿ. : ಬಸವಣ್ಣನವರ ಷಟ್‌ಸ್ಥಲದ ವಚನಗಳು ವಚನ ಸಂಖ್ಯೆ–592
- ಕಲಬುರ್ಗಿ ಎಂ.ಎಂ.: ಬಸವಣ್ಣನವರ ವಚನ ಸಂಪುಟ, ವಚನ ಸಂಖ್ಯೆ–345 ಪು. ಸಂ. 83.
- ಮನುಸ್ಮೃತಿ ಶ್ಲೋಕಗಳು: ಉಲ್ಲೇಖ: ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ.3 1994 ಪು. ಸಂ–461
- ಕಲಬುರ್ಗಿ ಎಂ.ಎಂ: ಬಸವಣ್ಣನವರ ವಚನ ಸಂಪುಟ ವಚನ ಸಂಖ್ಯೆ–677
- ಕಲಬುರ್ಗಿ ಎಂ.ಎಂ: ಬಸವಣ್ಣನವರ ವಚನ ಸಂಪುಟ ವಚನ ಸಂಖ್ಯೆ–178

ಸಾಮಾಜಿಕ ನ್ಯಾಯ ಮತ್ತು ಬಸವ ಚಿಂತನೆ

ಡಾ. ಎಲ್.ಎಂ. ವೆಂಕಟೇಶ್
ಡಾ. ಹೊನ್ನಾಂಜಿನಯ್ಯ ಡಿ. ಆರ್.
ಪ್ರೊ. ಚಿಕ್ಕಹೆಗ್ಗಡೆ ಎಂ. ಆರ್.

ಸಾಮಾಜಿಕ ನ್ಯಾಯದ ಪರಿಕಲ್ಪನೆಯು ಸಾಂವಿಧಾನಿಕ ತತ್ವಕ್ಕೆ ಸಂಬಂಧ ಪಟ್ಟಿದ್ದಾಗಿದೆ. ಸಾಮಾಜಿಕ ನ್ಯಾಯವು ಸಮಾಜದ ಹುಟ್ಟುವಿಕೆಯ ಆರಂಭಿಕ ದಿನಗಳಿಂದಲೂ ಇದೆ. ಭಾರತದಲ್ಲಿ ಎಂದಿನಿಂದಲೂ ವಿವಿಧ ಭಾಷೆ, ಜಾತಿ, ಉಪಜಾತಿ ಜನಾಂಗ, ಕುಲಪರಂಪರೆ, ವಂಶಾವಳಿ, ಸಂಸ್ಕೃತಿ, ಉಪಸಂಸ್ಕೃತಿಗಳಿವೆ. ಸಾವಿರಾರು ವರ್ಷಗಳ ಇತಿಹಾಸವಿರುವ ದೇಶವು ಹಲವಾರು ಸಂತರು, ಋಷಿಗಳು, ಅನುಭಾವಿಗಳು, ವಿಚಾರವಂತರು, ಚಿಂತಕರು, ಹೋರಾಟಗಾರರು, ಕ್ರಾಂತಿವೀರರು, ಸಮಾಜ ಸುಧಾರಕರನ್ನು ಕಂಡಿದೆ. ಭಾರತದ ಭಾಗವಾಗಿರುವ ಕನ್ನಡ ನಾಡಿಗೆ ತನ್ನದೇ ಆದ ಹಿರಿಮೆ-ಗರಿಮೆಗಳಿವೆ. ಇಲ್ಲಿ ರಾಜ, ಧರ್ಮ ಗುರುಗಳು, ಮಠಗಳು, ವಚನಕಾರರು, ದಾಸರು, ಕವಿಗಳು, ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಅಪೂರ್ವ ಕೊಡುಗೆಯನ್ನು ನೀಡಿದ್ದಾರೆ. ವಿವಿಧತೆಯಲ್ಲಿ ಏಕತೆಯನ್ನು ಕಾಣಲು ಎಲ್ಲಾ ವರ್ಗಗಳ ಪ್ರಗತಿಪರರು ಪ್ರಯತ್ನಿಸಿದ್ದಾರೆ; ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಸಮ ಸಮಾಜ ನಿರ್ಮಾಣ ಮಾಡಲು ಪ್ರಾಮಾಣಿಕವಾಗಿ ಶ್ರಮಿಸಿದ್ದಾರೆ. ಇಂಥ ಪ್ರಮುಖರಲ್ಲಿ ಬಸವಣ್ಣನವರೂ ಒಬ್ಬರಾಗಿದ್ದಾರೆ.

ಅನಾದಿಕಾಲದಿಂದ ಭಾರತೀಯ ಪರಂಪರೆಯು ವರ್ಣಾಶ್ರಮದ ತತ್ವಗಳ ಅಡಿಯಲ್ಲಿ ರಚನೆಯಾದ ಕಾರಣ ವರ್ಣ ತಾರತಮ್ಯ, ಅಸಮಾನತೆ, ಅಸ್ಪೃಶ್ಯತೆ, ಜಾತೀಯತೆ, ಸಾಮಾಜಿಕ ಶೋಷಣೆ, ಮೂಢನಂಬಿಕೆ, ಲಿಂಗಭೇದ, ದೇವರು-ದೇವಾಲಯಗಳ ಜಡತ್ವವು ಸಮಾಜದಲ್ಲಿ ನೆಲೆಯೂರಿದ್ದವು. ಅಂದಿನ ಮೇಲು-ಕೀಳು ಎಂಬ ನೀತಿ ಹಾಗೂ ಕೆಳವರ್ಣದವರನ್ನು ಮನುಷ್ಯರನ್ನಾಗಿ ನೋಡುವ ದೃಷ್ಟಿಯೇ ಇರಲಿಲ್ಲ. ನಾಗರಿಕ ಪ್ರಪಂಚವು ಶೋಷಿತ ಸಮುದಾಯಗಳಿಗೆ ಮುಚ್ಚಿ ಹೋಗಿತ್ತು. ಅವರು ಸಾಮಾಜಿಕ ಸವಲತ್ತುಗಳಿಂದ ಶತಮಾನಗಳಿಂದಲೂ ವಂಚಿಸಲ್ಪಟ್ಟಿದ್ದರು.

ಇಂತಹ ಜಡ್ಡುಗಟ್ಟಿದ ಸಾಮಾಜಿಕ ಸನ್ನಿವೇಶದಲ್ಲಿ ಬಸವಣ್ಣನವರ ಚಿಂತನೆ ಮೂಡಿಬಂತು. ಅದು ಹೊಸ ಸಮಾಜದ ನಿರ್ಮಾಣಕ್ಕೆ ಮಾರ್ಗದರ್ಶಿ ಆಯಿತು.

ಹನ್ನೆರಡನೆ ಶತಮಾನದಲ್ಲಿ ಬಸವಣ್ಣನವರು ಎಲ್ಲಾ ಜಾತಿಯ ವರ್ಣ-ವರ್ಗಗಳ ಜನರನ್ನು ಒಗ್ಗೂಡಿಸಿ, ಅವರಲ್ಲಿ ಅಡಗಿದ್ದ ಸುಪ್ತಪ್ರತಿಭೆಗೆ ಅವಕಾಶಗಳನ್ನಿತ್ತರು. ಅಂದಿನ ಕಾಲದಲ್ಲೇ ಅವರಿಗಿದ್ದ ಚಿಂತನೆ ಪ್ರಮುಖ ವಿಚಾರಧಾರೆಗಳನ್ನು ಈ ಕೆಳಕಂಡಂತೆ ಗುರುತಿಸಬಹುದು.

1. ಪ್ರತಿಯೊಬ್ಬರು ಕಾಯಕ ಜೀವಿಗಳಾಗಬೇಕು.
2. ಧರ್ಮವನ್ನು ಎಲ್ಲರೂ ಆಚರಿಸಬೇಕು.
3. ದೇವರು ಮತ್ತು ದೇವಾಲಯಗಳಿಗೆ ಹೊಸ ರೂಪ ಬರಬೇಕು.
4. ಪ್ರಜಾಪ್ರಭುತ್ವ ಮಾದರಿಯ ವಿಚಾರಗಳ ವಿನಿಮಯ ಇರಬೇಕು.
5. ಶಿಕ್ಷಣ ವಂಚಿತ ಸಮುದಾಯಗಳಿಗೆ ಶಿಕ್ಷಣ ಕೊಡಿಸುವುದು.
6. ಸಮಾಜದಲ್ಲಿ ಲಿಂಗ ತಾರತಮ್ಯ ಇರಬಾರದು.
7. ಸಮಾನತೆಯ ಪ್ರತಿಪಾದನೆ ಮಾಡುವುದು.
8. ದುಡಿಯುವವರು ಫಲಾನುಭವಿಗಳಾಗಬೇಕು.
9. ಹಲವು ದೈವಗಳನ್ನು ನಿರಾಕರಿಸಿ, ಏಕದೇವೋಪಾಸನೆಯ.
10 ಭಾಷೆ ಸರಳವಾಗಿರಬೇಕು.
11. ನುಡಿದಂತೆ ನಡೆದು, ನಡೆದಂತೆ ನುಡಿಯುಬೇಕು.

ಈ ಅಂಶಗಳು ಬಸವಣ್ಣನವರ ಚಿಂತನೆಗಳಾಗಿದ್ದು, ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಮೂಡಿದಂಥವುಗಳಾಗಿವೆ. ಅಂದಿನ ಕಾಲಘಟ್ಟದಲ್ಲಿದ್ದ ರಾಜಪ್ರಭುತ್ವ, ಪುರೋಹಿತಶಾಹಿಯ ದಬ್ಬಾಳಿಕೆ, ಮೂಢನಂಬಿಕೆಗಳ ಕೂಪವಾಗಿದ್ದ ಸಮಾಜವನ್ನು ಸರಿದಾರಿಗೆ ತರಲು ಬಸವಣ್ಣನವರು ಆಲೋಚಿಸಿದ ಕ್ರಮ ಇದಾಗಿದೆ. ಸಮಾಜದಲ್ಲಿ ಎಲ್ಲಾ ವರ್ಣ-ವರ್ಗದೊಳಗಿದ್ದ ಕಂದಾಚಾರ, ಆರ್ಥಿಕ ಅಸಮಾನತೆ, ಮೇಲು-ಕೀಳೆಂಬ ಭೇದ-ಭಾವಗಳನ್ನು ಹೋಗಲಾಡಿಸಲು ಬಸವಣ್ಣ ಅವರು ಶ್ರಮಿಸಿದರು. 'ದೀನ ದಲಿತ ಉದ್ಧಾರವೇ ಸಾಮಾಜಿಕ ನ್ಯಾಯ' ಎಂಬುದನ್ನು ಅವರು ಪ್ರತಿಪಾದಿಸಿದರು.

ಅವರ ಒಂದು ವಚನ ಇದನ್ನು ಮಾರ್ಮಿಕವಾಗಿ ಹೇಳುತ್ತದೆ. ನಿರ್ಲಕ್ಷ್ಯಕ್ಕೊಳಗಾದ ಸಮಾಜದ ಜನರನ್ನು ಮುಖ್ಯದಾರಿಗೆ ತರಲು ತಮ್ಮ ವಚನಗಳನ್ನು ಮಾಧ್ಯಮ ವನ್ನಾಗಿಸಿಕೊಂಡು ಬಸವಣ್ಣನವರು ಕಾರ್ಯಪ್ರವೃತ್ತರಾಗಿದ್ದನ್ನು ಈ ವಚನವು ತಿಳಿಸುತ್ತದೆ.

"ಇವನಾರವ ಇವನಾರವ, ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದಿನಿಸಯ್ಯ
ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ"

ಅಂದಿನ ಕಾಲದ ವರ್ಣಾಶ್ರಮದ ಪದ್ಧತಿಯನ್ನು ಸುಭದ್ರಗೊಳಿಸಲು ಸ್ವಹಿತಾಸಕ್ತಿಯ ಜನರು ಸಾಂಸ್ಥಿಕವಾಗಿ ರಚಿಸಿಕೊಂಡ ದೇವಾಲಯದ ಸ್ವರೂಪವನ್ನು ಬಸವಣ್ಣನವರು ತಿರಸ್ಕರಿಸಿದರು.

"ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡುವೆ ಬಡವನಯ್ಯ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರವೇ ಹೊನ್ನ ಕಳಸವಯ್ಯ
ಕೂಡಲ ಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ!"

ಅಸ್ಪೃಶ್ಯರನ್ನು ವಂಚಿಸಿದ್ದ, ಉಳ್ಳವರ ಸ್ವತ್ತಾಗಿದ್ದ, ಜಡತ್ವಗೊಂಡಿದ್ದ ದೇವಾಲಯ ಸಂಸ್ಕೃತಿಯನ್ನೇ ಬಸವಣ್ಣನವರು ತಿರಸ್ಕರಿಸಿದ್ದರು. ಇದಕ್ಕೆ ಪರ್ಯಾಯವಾಗಿ, ಮನುಷ್ಯ ದೇಹವನ್ನು ಅಪವಿತ್ರವೆಂದು ಭಾವಿಸಿದ್ದ ಅಂದಿನ ಕಾಲದ ಜನತೆಗೆ, ತಮ್ಮ ದೇಹವೇ ಪವಿತ್ರ ದೇಗುಲವಾಗಿದೆ. ನಮ್ಮೊಳಗೆ ದೇವರು ವಾಸವಾಗಿದ್ದಾನೆ. ಅದನ್ನು ಕಾಣುವ ಬಗೆಯನ್ನು ವಿವರಿಸಿ, ಜಡ್ಡುಗಟ್ಟಿದ ಸಾಂಸ್ಕೃತಿಕ ಬದಲಾವಣೆಗೆ ಅವರು ಪ್ರಯತ್ನಿಸಿದರು. ಭಿನ್ನ-ಭೇದ ಮಾಡುವುದನ್ನು ಮತ್ತು ಚಲನರಹಿತ ಸಾಂಸ್ಕೃತಿಕ ರೂಪವನ್ನು ಅವರು ತಿರಸ್ಕರಿಸಿದರು. ಅನಾದಿಕಾಲದಿಂದ ಪುರೋಹಿತಶಾಹಿಯ ವಂಚನೆಗೊಳಗಾದ ಶ್ರಮಿಕ ವರ್ಗಕ್ಕೆ ನ್ಯಾಯ ದೊರಕುವುದಕ್ಕೆ ಅವರು ನಿಮಿತ್ತವಾದರು. ಆರ್ಥಿಕ ಅಸಮಾನತೆಯಿಂದ ದೇವಾಲಯ ನಿರ್ಮಾಣ ಸಾಧ್ಯವಿಲ್ಲದುದನ್ನು ಅವರು ಪ್ರಸ್ತಾಪಿಸಿ, ಜನ ಸಮೂಹಗಳಿಗೆ ಹೊಸ ಚೈತನ್ಯವನ್ನು ನೀಡಿದರು.

ರಾಜಪ್ರಭುತ್ವದಲ್ಲಿ ಸಾಮಾಜಿಕ ನ್ಯಾಯ ಒದಗಿಸುವುದು ಕಷ್ಟ. ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ತತ್ವದ ಪ್ರತಿಪಾದನೆ ಸಂದರ್ಭದಲ್ಲಿ ಪ್ರಭುತ್ವವನ್ನು ಧಿಕ್ಕರಿಸುವುದು ಅನಿವಾರ್ಯವಾಗುತ್ತದೆ. ಬಸವಣ್ಣನವರ ಸಾಮಾಜಿಕ ಚಿಂತನೆಯ ಪ್ರಭಾವಕ್ಕೆ ಬಂದ ಜನರು, ಪ್ರಭುತ್ವವನ್ನು ಎದುರು ಹಾಕಿಕೊಳ್ಳುವಂತಹ ಶಕ್ತಿ ಪಡೆದರು. ಆಗ ರಾಜ ಬಿಜ್ಜಳನ ಬಳಿ ಬಸವಣ್ಣನವರು ಮಂತ್ರಿಯಾಗಿದ್ದರು. ಆದರೂ, ಅವರು ಪ್ರಭುತ್ವಕ್ಕೇ ಪ್ರತಿರೋಧ ಒಡ್ಡುವ ಮಾತುಗಳನ್ನಾಡುತ್ತಾರೆ.

"ಆನೆ ಅಂಕುಶಕ್ಕಂಜುವುದೆ ಅಯ್ಯಾ
ಮಾಣದೆ ಸಿಂಹದ ನಕವೆಂದು ಅಂಜುವುದಲ್ಲದೆ
ಆನು ಈ ಬಿಜ್ಜಳಂಗೆ ಅಂಜುವೆನೆ, ಅಯ್ಯಾ"

ಎಂಬ ಸಾಲುಗಳಲ್ಲಿ ಸಮಾಜದ ಏಳಿಗೆಗಾಗಿ ಶ್ರಮಿಸುವ ವ್ಯಕ್ತಿ ತಾವಾಗಿದ್ದು, ಯಾರಿಗೂ ಅಂಜುವವರು ತಾವಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಿದವರು ಬಸವಣ್ಣನವರು. ಸ್ವಾರ್ಥ ತ್ಯಜಿಸಿದಾಗ, ಯಾರಿಗೂ ಹೆದರುವ ಅವಶ್ಯಕತೆ ಇಲ್ಲವೆಂದು ಅವರು ತಮ್ಮ ನುಡಿ ಮತ್ತು

ನಡೆಯಲ್ಲಿ ತೋರಿಸಿದರು. ಪ್ರಭುತ್ವದ ವಿರುದ್ಧ ನಿಂತು, ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದ್ದಾರೆ. ಸರ್ವರಿಗೂ ನ್ಯಾಯ ಒದಗಿಸುವ ಮತ್ತು ತುಳಿತಕ್ಕೊಳಗಾದ ಕಟ್ಟಕಡೆಯ ವ್ಯಕ್ತಿಗೆ ಆದ್ಯತೆ ಕೊಡುವ ಸಂದರ್ಭದಲ್ಲಿ ಯಾರನ್ನಾದರೂ ಎದುರು ಹಾಕಿಕೊಳ್ಳಲು ಹಿಂಜರಿಯುವುದಿಲ್ಲ ಎಂಬುದನ್ನು ಈ ವಚನ ಸಾಬೀತು ಪಡಿಸುತ್ತದೆ.

ಆರು ಮುನಿದು ನಮ್ಮನೇನು ಮಾಡುವರು?
ಯಾರು ಮುನಿದು ನಮ್ಮನೆಂತು ಮಾಡುವರು?
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲದೇ?
ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನ್ನಕ್ಕ?

ಎಂದು ಹೇಳುವ ಮೂಲಕ, ಸಾಮಾಜಿಕ ಬದಲಾವಣೆಯಲ್ಲಿ ತೊಡಗಿದವರಿಗೆ ನೆರೆ-ಹೊರೆಯವರಿಂದ ಅಡ್ಡಿ ಆತಂಕಗಳು ಬರುವುದು ಸಹಜ, ಆದ್ದರಿಂದ ಸವಾಲುಗಳು ಬಂದರೆ ಎದೆಗುಂದದೆ ಮುಂದೆ ಸಾಗುವ ರೀತಿಯನ್ನು ಹೇಳಿದ್ದಾರೆ. ಸಾಮಾಜಿಕ ನ್ಯಾಯವನ್ನು ಪಾಲಿಸುವ ಅಗತ್ಯ ಬಂದಾಗ ಕೆಲವು ಸಮಸ್ಯೆಗಳುಂಟಾದರೆ, ಅವುಗಳನ್ನು ನಿವಾರಿಸುವ ಬಗ್ಗೆ ಹಲವು ಮಾರ್ಗೋಪಾಯಗಳನ್ನು ಈ ವಚನ ತಿಳಿಸುತ್ತದೆ. ಅಂದಿನ ಕಾಲದಲ್ಲಿ ಧರ್ಮದ ಪ್ರಭುತ್ವವನ್ನು ಕೂಡ ನಯವಾಗಿ ನಿರಾಕರಿಸಿದ ಬಸವಣ್ಣನವರು ಸರ್ವರಿಗೂ ಧರ್ಮದ ಸಾರವನ್ನು ಬೋಧಿಸಿದ್ದಾರೆ.

"ದಯವಿಲ್ಲದ ಧರ್ಮವ್ಯಾವುದಯ್ಯಾ?
ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ"

ಧರ್ಮವು ಎಲ್ಲರನ್ನೂ ಮನುಷ್ಯರಾಗಿ ಕಾಣುವ ನಡೆಯನ್ನು ಬೆಳೆಸಿಕೊಳ್ಳ ಬೇಕು; ಧರ್ಮ ಉಳ್ಳವರಿಗಾಗಿ ಮಾತ್ರ ಇರದೆ, ಸರ್ವಜನರ ಹಿತಾಸಕ್ತಿ ಕಾಪಾಡುವ ರೀತಿ ಇರಬೇಕೆಂಬುದು ಈ ವಚನದ ಆಶಯವಾಗಿದೆ.

ಬಸವಣ್ಣನವರ ಚಿಂತನೆಯು ನಾಡ ಭಾಷೆಯ ಪರವಾಗಿ ಇದ್ದುದು ಸಹಜವಾಗಿದೆ; ದೇವಭಾಷೆ ಸಂಸ್ಕೃತದ ಮೇಲುಗೈ ಆಗಿದ್ದ ದಿನಗಳಲ್ಲಿ ಕನ್ನಡ ಭಾಷೆಯನ್ನು 'ಆನು ಒಲಿದಂತೆ ಹಾಡುವೆ' ಎಂದು ಅವರು ಹೇಳಿದ್ದುದು ಗಮನಾರ್ಹ. ಈ ವಚನದ ಮೂಲಕ, ಪುರೋಹಿತರ ಭಾಷೆಯಾಗಿದ್ದ ಸಂಸ್ಕೃತವನ್ನು ತಿರಸ್ಕರಿಸಿ, ಜನರ ಭಾಷೆಯಾದ ಕನ್ನಡವನ್ನು ಸರಳವಾಗಿ ಮುಂದಿಟ್ಟು, ಜನರ ಮಧ್ಯೆ ತಮ್ಮ ವಚನಗಳನ್ನು ಕೊಂಡೊಯ್ದ ಅವರ ಪ್ರಯತ್ನ ಎಂದೆಂದಿಗೂ ಆದರ್ಶ. ಈ ಮೂಲಕ ಅವರು ಬಹುಜನರನ್ನು ಆಕರ್ಷಿಸಿದ್ದು ಮಾರ್ಗದರ್ಶಿಯಾಗಿದೆ. ಸಾಮಾಜಿಕ ನ್ಯಾಯದ ಜೊತೆಗೆ ಅವರು ಭಾಷಾ ನ್ಯಾಯ ಒದಗಿಸುವ ಬಗ್ಗೆಯೂ ಗಂಭೀರ ಕಾಳಜಿ ವಹಿಸಿದ್ದರು.

'ಸಾಮಾಜಿಕ ನ್ಯಾಯ ಮತ್ತು ಬಸವ ಚಿಂತನೆ' ಎಂಬ ವಿಷಯವು ಆಗಾಧ ವಿಸ್ತಾರವನ್ನು ಹೊಂದಿರುವಂಥದ್ದು. ಇದರಲ್ಲಿ ಸಾಸುವೆಯಷ್ಟು ವಿಷಯವನ್ನು ಪ್ರಸ್ತಾಪ ಮಾಡುವ ನಮ್ರ ಪ್ರಯತ್ನ 12ನೇ ಶತಮಾನದಲ್ಲಿ ಜನಶಕ್ತಿಯನ್ನು ಪ್ರಜಾಪ್ರಭುತ್ವದ ಸ್ವರೂಪದಲ್ಲಿ ಸಂಘಟಿಸಿ, ವಚನರೂಪಿ ಸಂವಿಧಾನದ ಮೂಲಕ ಸಮಾನತೆ, ಸಹೋದರತೆ, ಜಾತ್ಯಾತೀತತೆ, ಸಾಮಾಜಿಕ ನ್ಯಾಯ ಎಂಬ ಮೌಲ್ಯಗಳನ್ನು ಪ್ರತಿಪಾದಿಸುವಲ್ಲಿ ಬಸವಣ್ಣನವರ ವಚನಗಳು ಸಫಲವಾಗಿದೆ. ಜಾಗತೀಕರಣ ಉದಾರೀಕರಣ ಮತ್ತು ಖಾಸಗೀಕರಣಗಳ ಹಾವಳಿ ತುಂಬಿರುವ ಇಂದಿನ ದಿನಗಳಲ್ಲಿ, ಬಸವಣ್ಣನ ಚಿಂತನೆಯು ಅತಿ ಪ್ರಸ್ತುತವಾಗಿದೆ.

ಆಕರಗ್ರಂಥಗಳು

- ಶ್ರೀ ಬಸವೇಶ್ವರರು : ದೇಜಗೌ
- ವಚನ ಕಮ್ಮಟ : ಸಂ. ಕೆ. ಮರುಳಸಿದ್ದಪ್ಪ, ಕಿ.ರಂ. ನಾಗರಾಜ್
- ವಚನ ಸಾಹಿತ್ಯ : ಎಂ. ಚಿನಾದಂದಮೂರ್ತಿ,
- ಬಸವೇಶ್ವರ ವಚನ ಸಂಗ್ರಹ : ಎಲ್. ಬಸವರಾಜು
- ವಚನ ಧರ್ಮಸಾರ : ಎಂ.ಆರ್. ಶ್ರೀನಿವಾಸಮೂರ್ತಿ
- ಭಕ್ತಿ ಭಂಡಾರಿ ಬಸವಣ್ಣ : ಎಂ.ಆರ್. ಶ್ರೀನಿವಾಸಮೂರ್ತಿ
- ಶ್ರೀ ಬಸವೇಶ್ವರರು : ಬಸವ ಸಮಿತಿ, ಬೆಂಗಳೂರು
- ಬಸವಣ್ಣನವರು : ಒಂದು ಜೀವನ ಚಿತ್ರ ಎಂ.ಚಿದಾನಂದಮೂರ್ತಿ

ಆರೋಗ್ಯಕರ ಸಮಾಜಕ್ಕೆ
ಗಾಂಧೀ ಮತ್ತು ಅಂಬೇಡ್ಕರ್ ಕೊಡುಗೆ

ಡಾ. ಎಂ.ಎಸ್. ಪಾಟೀಲ

126 ನೇ ಅಂಬೇಡ್ಕರ್ ಜಯಂತಿಯನ್ನು ಆಚರಿಸುವ "ಆರೋಗ್ಯಕರ ಸಮಾಜಕ್ಕೆ ಗಾಂಧೀ/ ಅಂಬೇಡ್ಕರ್ ಕೊಡುಗೆ " ಎಂಬ ಶೀರ್ಷಿಕೆ ಕುರಿತು ಕೆಲವೊಂದು ವಿಷಯಗಳ ಬಗೆಗಿನ ಚರ್ಚೆ ಇಲ್ಲಿದೆ.

ಗಾಂಧೀ-ಅಂಬೇಡ್ಕರ್ ಇಬ್ಬರೂ ಅಪಮಾನ ಅನುಭವಿಸಿದವರು. ದಕ್ಷಿಣ ಆಫ್ರಿಕಾದ ರೈಲಿನಲ್ಲಿ ಮೊದಲನೇ ದರ್ಜೆ ಟಿಕೆಟ್ ಪಡೆದಿದ್ದರೂ, ಪ್ರಯಾಣಿಸಲು ಅನರ್ಹನೆಂಬ ಕಾರಣಕ್ಕೆ ಹೊರದೂಡಲ್ಪಟ್ಟ ಗಾಂಧಿ ಒಂದು ಕಡೆ ಕಂಡರೆ, ಇತರರಂತೆ ಸಮಾನವಾಗಿ ಬದುಕಲು ಅನರ್ಹನೆಂಬ ಕಾರಣಕ್ಕೆ ತಿರಸ್ಕರಿಸಲ್ಪಟ್ಟ ಅಂಬೇಡ್ಕರ್ ಇನ್ನೊಂದು ಕಡೆ ಕಾಣುತ್ತಾರೆ. ಈ ಇಬ್ಬರೂ ವ್ಯವಸ್ಥೆಯಿಂದ ತಿರಸ್ಕರಿಸಲ್ಪಟ್ಟವರೇ. ಇಬ್ಬರ ನೋವೂ ಒಂದೇ, ಆ ನೋವೇ ಅವರನ್ನು ಪ್ರಗತಿ ಮಾರ್ಗದೆಡೆಗೆ ಕೊಂಡೊಯ್ಯಿತು.

ಈ ಜಗದ ಪ್ರತಿ ಜೀವಿಯೂ ಸಹ ಬದುಕಲು ಹೋರಾಟ ನಡೆಸಲೇಬೇಕು. ಅದರಲ್ಲಿ ಮನುಷ್ಯನೂ ಒಬ್ಬ. ಪ್ರತಿಯೊಬ್ಬರೂ ಒಂದಿಲ್ಲೊಂದು ಸಂದರ್ಭದಲ್ಲಿ ತಿರಸ್ಕರಿಸಲ್ಪಡುವವರೇ, ಹಾಗೆಂದಾಕ್ಷಣ ಸುಮ್ಮನಿರಲಾಗುವುದೇ? ಇಲ್ಲ, ಮರಳಿ ಪ್ರಯತ್ನಿಸಿ, ಪ್ರಯತ್ನಿಸಿ, ಎಲ್ಲರಿಂದ ಪುರಸ್ಕರಿಸಲ್ಪಡುವ ಮಾರ್ಗ ಕಂಡುಕೊಳ್ಳುತ್ತೇವೆ. ಗಾಂಧೀ-ಅಂಬೇಡ್ಕರ್ ಇಬ್ಬರೂ ಇದೇ ಮಾರ್ಗ ಹಿಡಿದರು; ಅಪಮಾನ ಎದುರಿಸಿಯೇ ಇಬ್ಬರೂ ಮೇಲೇರಲು ಅಹರ್ನಿಸಿ ಪ್ರಯತ್ನಿಸಿದರು; ಇಬ್ಬರೂ ಸಫಲರಾದರು. ಎದುರಾಗುವ ಎಲ್ಲಾ ಅಪಮಾನ, ಸವಾಲು, ಅಸಹಕಾರಗಳನ್ನು ಮೆಟ್ಟಿ ನಿಂತು, ಪ್ರಯತ್ನಶೀಲರಾಗುವ ಎಲ್ಲರಲ್ಲೂ ಗಾಂಧೀ-ಅಂಬೇಡ್ಕರ್ ಇದ್ದಾರೆ. ಈ ಜಗದ ಪ್ರತಿ ಜೀವಿಯಲ್ಲಿಯೂ ದೈವಿಶಕ್ತಿ ಇದ್ದೇ ಇದೆ. ಅದನ್ನು ಕಾಣುವ ತವಕ ಕೂಡ ಇರುತ್ತದೆ. ಇದಕ್ಕಾಗಿ ಪ್ರಯತ್ನ ಬೇಕು. ಆ ಪ್ರಯತ್ನವೇ ನಮ್ಮನ್ನು ನಾವು ತಿಳಿಯಲು ಸಹಾಯಕವಾಗುವುದು. ಈ ಸೂಕ್ಷ್ಮತೆಯನ್ನು ಎಲ್ಲಾ ದಾರ್ಶನಿಕರ, ಮಹಾತ್ಮರ ನೇತಾರರ ಬದುಕಿನಲ್ಲಿ ಕಾಣುತ್ತೇವೆ. ಗಾಂಧೀ-ಅಂಬೇಡ್ಕರ್ ಇವರೂ ತಮ್ಮನ್ನು ತಾವು

ರಿಯಲು, ತಮ್ಮ ಸಾಮರ್ಥ್ಯವನ್ನು ತಾವು ಅರಿಯಲು ಪ್ರಯತ್ನ ಪಟ್ಟಿದ್ದರಿಂದಲೇ ವರ ಬದುಕು ಇತರರಿಗೆ ಮಾದರಿಯಾಗುತ್ತದೆ.

ಈ ಜಗತ್ತಿನಲ್ಲಿ ಅದೆಷ್ಟೋ ಜನರು ತಮ್ಮ ಜೀವನದಲ್ಲಿನ ಒಂದು ಅಥವಾ ಕೆಲವು ಟನೆಗಳ ಬಳಿಕ ತಮ್ಮ ಜೀವನದ ದಿಕ್ಕನ್ನೇ ಬದಲಿಸಿಕೊಂಡಿರುವುದನ್ನು ಕಾಣಬಹುದು. ಾಲ್ಮೀಕಿಯನ್ನೊ, ಅಶೋಕ ಚಕ್ರವರ್ತಿಯನ್ನೊ, ಚಂಬಲ್ ಡಕಾಯಿತರನ್ನೋ ೋಡಿ. ಅವರು ತಮ್ಮ ಬದುಕನ್ನೇ ಅವಲೋಕಿಸಿಕೊಂಡ ಬಳಿಕ, ಪರಿವರ್ತನೆಯನ್ನು ಾಡಿಕೊಂಡರು. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಮುಂದಾದರು. ಸತ್ಯ, ್ಯಾಯ, ನೀತಿ, ಸಮಾನತೆಗಾಗಿ ಗಾಂಧೀ-ಅಂಬೇಡ್ಕರ್‌ರಂತವರು ಸಾಮಾಜಿಕ ೌಲ್ಯಗಳಿಗಾಗಿಯೇ ಬದುಕಿ, ಜಾತಿ-ಮತ-ಕುಲ-ಗೋತ್ರವೆಂಬ ಗೋಡೆಗಳನ್ನು ಡೆದು ಹಾಕಿದರು; ಸಮಾಜದ ಆರೋಗ್ಯವನ್ನು ಕಾಪಾಡಿದರು.

ಇಂಥವರ ತತ್ವಗಳನ್ನು ನಾವು ಪಾಲಿಸಬೇಕು; ಪ್ರಸಾರ ಮಾಡಬೇಕು; ಇದು ಬಿಟ್ಟು, ್ರಚಾರಕ್ಕಾಗಿ, ನಾಯಕತ್ವದ ಆಶೆಗಾಗಿ ಸ್ವ-ಹಿತಾಸಕ್ತಿಗಾಗಿ, ಸಮಾಜದ ಕೆಲವು ವರ್ಗದವರ ಲೈಕೆಗಾಗಿ, ಸವಲತ್ತುಗಳಿಗಾಗಿ ಗಾಂಧೀ-ಅಂಬೇಡ್ಕರ್‌ರನ್ನು ಬಳಸಿಕೊಳ್ಳುವುದು ರಿಯಲ್ಲ. ಗಾಂಧೀ-ಅಂಬೇಡ್ಕರ್ ನಡೆಸಿದ ಹೋರಾಟ, ನೀಡಿದ ಸಂದೇಶಗಳು ಮಗೆ ಮಾರ್ಗದರ್ಶಕಗಳಾಗಿವೆ. ಸಮಾಜದ ಎಲ್ಲ ವರ್ಗದವರ ಸರ್ವತೋಮುಖ ಭ್ಯುದಯಕ್ಕಾಗಿ ನಾವು ಶ್ರಮಿಸಿದಾಗ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ. ್ರತಿಯೊಬ್ಬರೂ ತಮ್ಮ ಇತಿ-ಮಿತಿಗಳನ್ನು ಅರಿತು, ತಮ್ಮ ಪ್ರಾವೀಣ್ಯತೆಯ ಕೌಶಲ್ಯಗಳನ್ನು ೃದ್ಧಿಸಿಕೊಂಡು, 'ಈ ಜಗದಲ್ಲಿ ಎಲ್ಲರೂ ಆ ಭಗವಂತನ ಮಕ್ಕಳೇ' ಎಂದು ತಿಳಿದು, ಸರ್ವರಲ್ಲೂ ದೇವರಿದ್ದಾನೆ' ಎಂಬ ಸನಾತನ ಪ್ರಜ್ಞೆಯೊಂದಿಗೆ, ಪರಸ್ಪರರಲ್ಲಿ ಗೌರವಾದರ ೊಂದಿ, ಶರಣ ಸಂಸ್ಕೃತಿಯನ್ನು ಅಪ್ಪಿಕೊಂಡು, ತಮ್ಮನ್ನು ತಾವರಿಯುವ ದಿಕ್ಕಿನಲ್ಲಿ ದುಕು ಮುನ್ನಡೆಸಿಕೊಂಡು ಹೋಗುವುದೇ ಆರೋಗ್ಯಕರ ಬದುಕು. ಇದೇ ಬದುಕನ್ನು ಂಬಲಿಸುವ ನಮಗೆ ಹತ್ತಿರವಾಗುವವರು ಗಾಂಧೀ-ಅಂಬೇಡ್ಕರ್. ಇವರು ಬದುಕಿದ ಮಾರ್ಗವನ್ನು ಗೌರವಿಸಿ ಅನುಸರಿಸುವುದರಲ್ಲೇ ಸಮಾಜದ ಆರೋಗ್ಯ ಇದೆ.

ಇತ್ತೀಚಿನ ದಿನಗಳಲ್ಲಿ ಸಮಾಜದ ಆರೋಗ್ಯ ಹದಗೆಡುತ್ತಿರುವುದಕ್ಕೆ ಜನರಲ್ಲಿ ಸಂಕುಚಿತ ಮನೋಭಾವ ಹೆಚ್ಚುತ್ತಿರುವುದೂ ಕಾರಣ. ಜಾತಿಭಾವನೆ ಕೂಡ ಒಂದು ಸಂಕುಚಿತ ಭಾವನೆಯೇ. ಸಂಕುಚಿತತೆಯು ಶಾಂತಿ-ಸಹನೆ-ತಾಳ್ಮೆ-ಪ್ರೀತಿ-ವಿಶ್ವಾಸ-ಕರುಣೆ-ಅನುಕಂಪ ಎಲ್ಲವುಗಳನ್ನು ಹೊಡೆದು ಅಟ್ಟಿ ಬಿಡುತ್ತದೆ. ಇದಕ್ಕೆ ನಾವು ಬಲಿಯಾದರೆ, ಸಮಾಜದ ಆರೋಗ್ಯ ಕೆಡುವಲ್ಲಿ ನಮ್ಮ ಪಾಲೂ ಸೇರಿಸುತ್ತಿದ್ದೇವೆ ಎಂಬುದು ನಿಚ್ಚಳ. ಮಾನವ ಶಿಲಾಯುಗದಿಂದ ಹಂತ ಹಂತವಾಗಿ ಹೊಸ-ಹೊಸ ಅನುಭವಗಳೊಂದಿಗೆ ತನ್ನನ್ನು ತಾನು ಅರಿಯುತ್ತ ಹೊಸ-ಹೊಸ ಅನ್ವೇಷಣೆಗಳೊಂದಿಗೆ ಇಂದಿನ ಆಧುನಿಕ ಯುಗಕ್ಕೆ ತಲುಪುವ ಪ್ರಯತ್ನದಲ್ಲಿ ಇದ್ದಾನೆಂದು ಒಮ್ಮೆ ಅನಿಸಿದರೂ, ಅವನು ಹೆಚ್ಚು ಸ್ವಾರ್ಥಿಯಾಗುತ್ತ ವಿನಾಶದ ಅಂಚಿಗೆ ಹೋಗುತ್ತಿದ್ದಾನೆ ಎಂದು ಕೂಡ ಅನಿಸುತ್ತಿದೆ.

ಪ್ರತಿಯೊಂದು ಮನೆ/ಕುಟುಂಬದಲ್ಲಿ ತಾಯಿ–ತಂದೆ, ಮಕ್ಕಳು, ಹಿರಿಯರು (ಅಜ್ಜ-ಅಜ್ಜಿ) ಇರುತ್ತಾರೆ. ಸಂಕುಚಿತತೆ ಇಲ್ಲದಿದ್ದಾಗ ಶಾಂತಿ–ಸಹನೆ–ತಾಳ್ಮೆ–ಪ್ರೀತಿ–ವಿಶ್ವಾಸ-ಕರುಣೆ–ಅನುಕಂಪ ಪರಸ್ಪರರ ಹೃದಯಗಳನ್ನು ಬೆಸೆಯುವುದು ಖಚಿತ. ಸಮಾಜವೂ ಮನೆ/ಕುಟುಂಬದ ರೀತಿಯೇ. ಇಲ್ಲೂ ಎಲ್ಲರೂ ಸಾಮರಸ್ಯದ ಭಾವನೆ ಹೊಂದಿದ್ದರೆ ಗೌರವಾದರಗಳು ಮೂಡುತ್ತವೆ; ಆರೋಗ್ಯಕರ ವಾತಾವರಣ ನಿರ್ಮಾಣವಾಗುತ್ತದೆ. ಇದನ್ನೇ ಗಾಂಧೀ–ಅಂಬೇಡ್ಕರ್ ಬಯಸಿದ್ದು. ಇವುಗಳನ್ನು ಸಮಾಜದಲ್ಲಿ ಮೂಡಿಸುವುದಕ್ಕೇನೆ ಇಬ್ಬರೂ ಮಾತನಾಡಿದ್ದು, ಹೋರಾಡಿದ್ದು. ಅಂಬೇಡ್ಕರ್ ಕಡು ಬಡತನದಲ್ಲಿ ಹುಟ್ಟಿದ್ದರೂ, ತಮ್ಮ ಸತತ ಪರಿಶ್ರಮದ ಮೂಲಕ ವಿದ್ಯಾಸಂಪನ್ನರಾಗಿ ಭಾರತದ ಸಂವಿಧಾನಶಿಲ್ಪಿ ಎಂಬ ಹೆಗ್ಗಳಿಕೆಗೆ ಕಾರಣರಾಗುವಷ್ಟು ಜ್ಞಾನಾರ್ಜನೆ ಮಾಡಿದರು. ಇದು ಸಾಧ್ಯವಾಗಿದ್ದು ಅವರಲ್ಲಿದ್ದ ಆತ್ಮಬಲದಿಂದಾಗಿ. ಅವರು ಯಾವ ಒಂದು ಜಾತಿಯ ಪರವಾಗಿ ಮಾತನಾಡಿಲ್ಲ; ಹೋರಾಡಿಲ್ಲ; ಹಕ್ಕೊತ್ತಾಯ ಮಂಡಿಸಿಲ್ಲ. ಸಮಸ್ತ ಶೋಷಿತರ ಪರವಾಗಿ ಅವರು ಧ್ವನಿ ಎತ್ತಿದರು. ಆದರೆ, ಇದನ್ನು ನಾವು ಮರೆತು ಅಥವಾ ಮುಚ್ಚಿಟ್ಟು, ಅವರನ್ನು ಒಂದು ಜಾತಿಯಲ್ಲಿ ಬಂಧಿಸಿ ಇಟ್ಟು, ಸಮಾಜದ ಆರೋಗ್ಯವನ್ನು ಕೆಡಿಸುತ್ತಿದ್ದೇವೆ.

ಇತ್ತ ಗಾಂಧೀಜಿ ಅವರನ್ನು ಸಹ ನಾವು ಅಪಾರ್ಥ ಮಾಡಿಕೊಂಡಿದ್ದೇವೆ. ಅವರು ದೇಶ ವಿಭಜನೆಗೆ ಕಾರಣರಾದರೆಂಬ ತಪ್ಪು ತಿಳುವಳಿಕೆಯನ್ನು ನಾವು ಹೊಂದಿದ್ದೇವೆ. ಈ ಕುರಿತು ಹೆಚ್ಚಿನ ಚಿಂತನೆಗೆ ನಾವು ಮುಂದಾಗುತ್ತಿಲ್ಲ. ಇದು ನಿಜಕ್ಕೂ ದುರದೃಷ್ಟಕರ. ಗಾಂಧೀಜಿ ರಾಮರಾಜ್ಯದ ಕನಸನ್ನು ಹೊತ್ತು, ಫಕೀರನ ಹಾಗೆ ದೇಶದಾದ್ಯಂತೆಲ್ಲಾ ಸುತ್ತಿ, ದ್ವೇಷಿಸುವವರನ್ನು ಪ್ರೀತಿಸುವ ಮನೋಬಲದೊಂದಿಗೆ, ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದುದನ್ನು ನಾವು ಗಮನಿಸಬೇಕು. ಈ ಇಬ್ಬರೂ ಸಮಾಜದ ಒಳಿತಿಗಾಗಿ ಬದುಕಿದರು. ಮನುಕುಲದ ಏಳ್ಗೆಗಾಗಿ ಶ್ರಮಿಸಿದರು. ಅವರ ಈ ಮುಂದಿನ ಸಂದೇಶಗಳನ್ನು ನಾವು ಸಮಾಜದಲ್ಲಿ ಪ್ರಸಾರ ಮಾಡುವುದು ಸೂಕ್ತ.

1. ಗಾಂಧೀ–ಅಂಬೇಡ್ಕರ್ ಅವರನ್ನು ಯಾವೊಂದು ಜಾತಿ–ಜನಾಂಗ–ಪಂಗಡ–ದೇಶ–ಭಾಷೆಗೆ ಸೀಮಿತಗೊಳಿಸಬಾರದು.

2. ಇವರ ಜಯಂತಿಯನ್ನು ಸರಳವಾಗಿ, ಎಲ್ಲಾ ಜಾತಿ–ಧರ್ಮ–ಭಾಷೆ–ಪ್ರದೇಶಗಳವರು ಸೇರಿ ಮಾಡಬೇಕು. ಆಗ ಇವರ ವಿಚಾರ, ಜೀವನ, ಆದರ್ಶಗಳನ್ನು ತಿಳಿಸುವ, ತಿಳಿದುಕೊಳ್ಳುವ ಕೆಲಸ ಆಗಬೇಕು. ಇದಕ್ಕಾಗಿ ಭಾಷಣ, ಚರ್ಚೆ, ವಿಚಾರ ವಿನಿಮಯ, ರೂಪಕ, ದೃಶ್ಯಮಾಧ್ಯಮ ಎಲ್ಲವುಗಳನ್ನು ಬಳಸಬೇಕು.

3. ಸಮಾಜದಲ್ಲಿ ಸಮಾನತೆಯನ್ನು ಸ್ಥಾಪಿಸಬೇಕು. ನಿರ್ಲಕ್ಷಕ್ಕೊಳಗಾದ ಜನರಿಗೆ ವಿಶೇಷ ಅವಕಾಶ ಒದಗಿಸಬೇಕು.

ಸರ್ವಧರ್ಮ ಪ್ರಾರ್ಥನಾ ಮಂದಿರಗಳಿಗೆ ಹೆಚ್ಚು ಒತ್ತು ಕೊಡಬೇಕು.

ಸಮಾಜದಲ್ಲಿ ಸ್ವಚ್ಚತೆಯನ್ನು, ಸುಸಂಸ್ಕೃತಿಯನ್ನು, ಸೇವಾಮನೋಭಾವವನ್ನು, ಸಚ್ಚಾರಿತ್ರ್ಯವನ್ನು ಪಾಲಿಸಲು ಅವಕಾಶ, ನೆರವು, ಪ್ರೋತ್ಸಾಹ ದೊರಕಬೇಕು.

ಮಾನವೀಯ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. 'ನಾವೆಲ್ಲರೂ ಒಂದು, ನಾವೆಲ್ಲರೂ ಬಂಧು' ಎಂಬ ಸಮಭಾವವನ್ನು ರೂಢಿಸಿಕೊಳ್ಳಬೇಕು.

ಗಾಂಧೀ-ಅಂಬೇಡ್ಕರ್‌ರು ಆಧ್ಯಾತ್ಮಿಕತೆಯನ್ನು ಅನುಭವಿಸಿದವರು, ಹೀಗಾಗಿ, ಅವರ ಸಂದೇಶಗಳನ್ನು ಪಾಲಿಸಲು ಪ್ರಪ್ರಥಮವಾಗಿ ನಮ್ಮಲ್ಲಿ ಪ್ರಜ್ಞೆಯನ್ನು ಜಾಗೃತವಾಗಿಸಿಕೊಂಡು, ಆರೋಗ್ಯಕರ ಸಮಾಜ ನಿರ್ಮಿಸಲು ಆಧ್ಯಾತ್ಮಿಕತೆಯತ್ತ ವಾಲುವುದು ಅವಶ್ಯ.

ಒಟ್ಟಿನಲ್ಲಿ ಗಾಂಧೀ-ಅಂಬೇಡ್ಕರ್ ಚಿಂತನೆಯನ್ನು ಶಾಂತಚಿತ್ತದಿಂದ ಸ್ವೀಕರಿಸಿ, ಅವರ ತತ್ವಸಿದ್ಧಾಂತಗಳನ್ನು ಸಮಾಜದಲ್ಲಿ ಬೇರೂರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಾಗಿದೆ.

ಗಾಂಧಿತತ್ವದ ಪ್ರಸ್ತುತತೆ

ಡಾ. ದಿವ್ಯ. ಹೆಚ್.ಎಲ್.

ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಸಕಾರಾತ್ಮಕ ಸ್ವಾತಂತ್ರ್ಯ ಅಗತ್ಯ. ಸ್ವಾತಂತ್ರ್ಯವು ವ್ಯಕ್ತಿಯ ಹಕ್ಕುಗಳಲ್ಲೆಲ್ಲಾ ಪ್ರಧಾನವಾದ ಹಕ್ಕಾಗಿದ್ದು, ವ್ಯಕ್ತಿಯು ತನ್ನ ಉತ್ತಮ ಜೀವನವನ್ನು ರೂಪಿಸಿಕೊಳ್ಳುವಲ್ಲಿ ಅದು ಸಹಕಾರಿ. ವ್ಯಕ್ತಿಗಳಿಗೆ ಸ್ವಾತಂತ್ರ್ಯ ಇಲ್ಲದಿದ್ದರೆ ಅವರು ಗುಲಾಮರಿದ್ದಂತೆ. ವ್ಯಕ್ತಿಗಳಿಗೆ ಪ್ರಾಣ ಹೇಗೆ ಮುಖ್ಯವೋ, ಹಾಗೆಯೇ ಸ್ವಾತಂತ್ರ್ಯ ಕೂಡ ಮುಖ್ಯ. ಸ್ವಾತಂತ್ರ್ಯವು ವ್ಯಕ್ತಿತ್ವ ವಿಕಾಸಕ್ಕೆ ಅತ್ಯಂತ ಅವಶ್ಯ. ವ್ಯಕ್ತಿಯ ಅರ್ಥಪೂರ್ಣ ಜೀವನಕ್ಕೆ ಅದು ಪೂರಕ. ಸ್ವಾತಂತ್ರ್ಯವು ಕೇವಲ ವ್ಯಕ್ತಿಯ ಅಭಿವೃದ್ಧಿಗೆ ಅಷ್ಟೇ ಅಲ್ಲದೆ, ಅದು ಸಮಾಜದ ಅಭಿವೃದ್ಧಿಗೆ ಮತ್ತು ರಾಜ್ಯದ ಅಭಿವೃದ್ಧಿಗೆ ಕೂಡ ಅತ್ಯವಶ್ಯ. ಎಲ್ಲ ಅಭಿವೃದ್ಧಿಗೂ ಸ್ವಾತಂತ್ರ್ಯವೇ ಮೂಲಾಧಾರವಾಗಿದ್ದು, ಅದು ವ್ಯಕ್ತಿಗಳು ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮೊದಲಾದ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಲು ಬೇಕಾದುದಾಗಿದೆ. ಆದ್ದರಿಂದಲೇ, ವ್ಯಕ್ತಿಗಳು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಬಂದಿರುವುದನ್ನು ಚರಿತ್ರೆಯಲ್ಲಿ ಕಾಣುತ್ತೇವೆ.

ಸ್ವಾತಂತ್ರ್ಯವೆಂದರೆ, ವ್ಯಕ್ತಿಗಳು ಶೋಷಣೆಯಿಂದ ಮುಕ್ತಗೊಳಿಸಿಕೊಳ್ಳಲು, ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋಗಲು ಮತ್ತು ಉತ್ತಮ ಜೀವನ ರೂಪಿಸಿಕೊಳ್ಳಲು ಅವಕಾಶವನ್ನು ಹೊಂದಿರುವುದೇ ಆಗಿದೆ. ವ್ಯಕ್ತಿಗಳು, ಸಮುದಾಯ ಗಳು, ದೇಶಗಳು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಾ ಬಂದಿರುವುದನ್ನು ಇತಿಹಾಸ ದಾಖಲಿಸಿದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ಅವರ ಕೊಡುಗೆ ಅನನ್ಯವಾದುದು. ಭಾರತವನ್ನು ಪಾಶ್ಚಾತ್ಯ ದಾಸ್ಯದಿಂದ ಮುಕ್ತಗೊಳಿಸಲು, ಅವರು ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಸತ್ಯಾಗ್ರಹ, ಉಪವಾಸ, ಸತ್ಯ, ಅಹಿಂಸೆಗಳ ಮೂಲಕ ಸ್ವಾತಂತ್ರ್ಯ ಪಡೆಯಲು ಅವರು ನಾಂದಿ ಹಾಡಿದರು.

ಗಾಂಧೀಜಿ ಅವರು ವಸಾಹತುಶಾಹಿ ಪ್ರಭುತ್ವದಿಂದ ದೇಶಕ್ಕೆ ಬಿಡುಗಡೆ ಪಡೆಯಲು ರೂಪಿಸಿಕೊಂಡ ರಾಜಕೀಯ, ಧಾರ್ಮಿಕವಾದ ಪ್ರಮುಖ ಅಸ್ತ್ರಗಳು ಸತ್ಯ, ಅಹಿಂಸೆ, ಸತ್ಯಾಗ್ರಹ. ಇವುಗಳನ್ನು ದೇಶೀಯ ನೆಲೆಯಲ್ಲಿ ಪ್ರಯೋಗ ಮಾಡುತ್ತಾ, ವಸಾಹತುಶಾಹಿ ಪ್ರಭುತ್ವದ ವಿರುದ್ಧ ಜಗತ್ತಿಗೆ ತಮ್ಮ ಅಹಿಂಸಾ ತತ್ವವನ್ನು ಪ್ರಯೋಗಕ್ಕೆ ಒಡ್ಡಿದರು.

ಹಾಗೆಯೇ, ರಾಷ್ಟ್ರೀಯತೆ ಮತ್ತು ದೇಶೀಯತೆಯ ಹಿನ್ನೆಲೆಯಲ್ಲಿ ನೋಡಿದಾಗ, ಗಾಂಧೀಜಿ ಅವರ ಚಿಂತನಾ ಕ್ರಮ ಮತ್ತು ಅವರು ಮಾಡಿದ ಸಾಧನೆ ಮಹತ್ವದ್ದಾಗಿ ಕಾಣುತ್ತದೆ. ಗಾಂಧಿ ಅವರ ಸತ್ಯ, ಅಹಿಂಸೆ, ಸತ್ಯಾಗ್ರಹಗಳ ಜೊತೆಗೆ ಗ್ರಾಮ ಸ್ವರಾಜ್ಯದ ಕಲ್ಪನೆ, ಸರ್ವೋದಯದ ತತ್ವಗಳು, ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳನ್ನೊಳಗೊಂಡ ಅಂಶಗಳು ಗಾಂಧೀವಾದದ ಚಿಂತನೆಯಲ್ಲಿ ಅಭಿವ್ಯಕ್ತಗೊಂಡಿವೆ.

ಗಾಂಧೀವಾದವು ರಾಜಕೀಯ ತತ್ವವಾಗಿ ರಾಷ್ಟ್ರೀಯತೆಯ ಪರಿಕಲ್ಪನೆಯ ಮೂಲಕ ವಸಾಹತುಶಾಹಿ ಪ್ರಭುತ್ವಕ್ಕೆ ಪ್ರತಿರೋಧನಾ ನೆಲೆಯನ್ನು ದೇಶೀಯ ನೆಲೆಗಟ್ಟಿನಲ್ಲಿ ರೂಪಿಸಿಕೊಂಡಿತ್ತು. ಗಾಂಧೀಜಿ ಅವರು ಹೂಡಿದ ಎಲ್ಲ ರಾಜಕೀಯ ತಂತ್ರಗಳು ದೇಶೀಯ ನೆಲೆಯಲ್ಲಿ ರೂಪುಗೊಂಡಿದ್ದವು. ವಸಾಹತುಶಾಹಿ ಆಡಳಿತ ಕ್ರಮವನ್ನು ವಿರೋಧಿಸುವುದಕ್ಕೆ ಗಾಂಧೀಜಿ ಅವರು ಅಹಿಂಸಾತ್ಮಕ ರಾಜಕೀಯ ತಂತ್ರಗಳನ್ನು ಬಳಸಿದರು; ಇದಕ್ಕಾಗಿ ರಾಷ್ಟ್ರೀಯತೆಯನ್ನು ಒಂದು ರಾಜಕೀಯ ಪರಿಭಾಷೆಯನ್ನಾಗಿ ಉಪಯೋಗಿಸಿದರು.

ಗಾಂಧೀಜಿ ಅವರು ಯೋಚನೆ, ಮಾತು ಮತ್ತು ಕೃತಿಗಳಲ್ಲಿ ಹಿಂಸೆಯನ್ನು ಬಯಸಿದವರಲ್ಲ. ಇವರು ಅಹಿಂಸೆ ಎಂಬ ಪದಕ್ಕೆ ಬಹಳ ವ್ಯಾಪಕವಾದ ಅರ್ಥವನ್ನು ಕೊಟ್ಟಿದ್ದರು. ಕೆಟ್ಟದ್ದನ್ನು ಯೋಚಿಸುವುದು, ದ್ವೇಷಿಸುವುದು, ಬೇರೆಯವರಿಗೆ ಕೇಡನ್ನು ಬಯಸುವುದು, ನಮ್ಮ ಅವಶ್ಯಕತೆಗಿಂತ ಹೆಚ್ಚಿಗೆ ಇಟ್ಟುಕೊಳ್ಳುವುದು ಈ ಎಲ್ಲವೂ ಹಿಂಸೆಯೇ ಎಂಬುದು ಗಾಂಧೀಜಿ ಅವರ ಅಭಿಪ್ರಾಯವಾಗಿತ್ತು. ಅಹಿಂಸೆಯು ಅಶಕ್ತರ, ಹೇಡಿಗಳ ಅಸ್ತ್ರ ಎಂಬ ಸಾಮಾನ್ಯ ಗ್ರಹಿಕೆಯನ್ನು ಗಾಂಧೀಜಿ ಒಪ್ಪಿರಲಿಲ್ಲ. ದಕ್ಷಿಣ ಆಫ್ರಿಕಾದಲ್ಲಿನ ಚಳುವಳಿ, ಅಸಹಕಾರ ಚಳುವಳಿ, ನಾಗರಿಕ– ಕಾನೂನುಭಂಗ ಚಳುವಳಿ, ಸತ್ಯಾಗ್ರಹ ಇವೆಲ್ಲವೂ ಗಾಂಧೀಜಿ ಅವರು ಅಹಿಂಸೆಯ ಮಾರ್ಗವನ್ನು ಜನಪ್ರಿಯವಾಗಿ ಉಪಯೋಗಿಸಿಕೊಂಡ ನಿದರ್ಶನಗಳಾಗಿವೆ. ಗಾಂಧೀಜಿ ಅವರು 'ಧ್ಯೇಯ ಎಷ್ಟು ಉತ್ತಮವಾಗಿರಬೇಕೆಂದು ತಿಳಿಸಿರುವರೋ ಆ ಧ್ಯೇಯವನ್ನು ಸಾಧಿಸಲು ಅನುಸರಿಸುವ ಮಾರ್ಗಗಳು ಸಹ ಅಷ್ಟೇ ಪರಿಶುದ್ಧವಾಗಿರಬೇಕೆಂದು ತಿಳಿಸಿದ್ದಾರೆ. ಧ್ಯೇಯಸಾಧನೆಯ ಮಾರ್ಗ ಕೂಡ ನ್ಯಾಯಯುತವಾಗಿ, ಪರಿಶುದ್ಧವಾಗಿ ಇರಬೇಕು. ನ್ಯಾಯ, ಧರ್ಮ, ಸಮಾನತೆ, ಸ್ವಾತಂತ್ರ್ಯ ಮುಂತಾದವುಗಳಿಂದ ಕೂಡಿದ ಕಲ್ಪನೆಯನ್ನು ಅವರು ಭಾರತಕ್ಕೆ ಹಾಗೂ ಇಡೀ ವಿಶ್ವಕ್ಕೆ ನೀಡಿದರು. ನಮ್ಮ ಸಂವಿಧಾನದ ರಚನಕಾರರು ಇವುಗಳಿಂದ ಪ್ರಭಾವಿತರಾಗಿ ರಾಜ್ಯನಿರ್ದೇಶಕ ತತ್ವಗಳು, ಮೂಲಭೂತ ಹಕ್ಕುಗಳು ಮುಂತಾದವುಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದಾರೆ.

ಹಿಂಸೆಯ ಇತಿಹಾಸ ಸುದೀರ್ಘ ಮತ್ತು ಗಾಢವಾದುದು. ಈ ಭೂಮಿಯು 20ನೆಯ ಶತಮಾನದಲ್ಲಿ ಕಂಡಷ್ಟು ಹಿಂಸೆಯನ್ನು ಎಂದೂ ಕಂಡಿರಲಿಲ್ಲ. ಜಗತ್ತನ್ನು ನಡುಗಿಸಿದ ಎರಡು ಜಾಗತಿಕ ಯುದ್ಧಗಳು, ರಷ್ಯಾ–ಅಮೇರಿಕಾಗಳು ತಮ್ಮ ಶೀತಲ

ಸಮರದಲ್ಲಿ ಇಡೀ ಜಗತ್ತನ್ನು ಇಬ್ಭಾಗ ಮಾಡಿ ನಡೆಸಿದ ಮೇಲಾಟಗಳು, ಮಿಲಿಟರಿ ಪ್ರಭುತ್ವದ ಪೈಪೋಟಿ, ಬಂಡವಾಳಶಾಹಿ ವ್ಯವಸ್ಥೆಯ ಹೆಸರಲ್ಲಿ ವಿಯೆಟ್ನಾಂನಲ್ಲಿ ಆದ ಹಿಂಸೆ, ನಾಜಿಸಂ ಫ್ಯಾಸಿಸಂ ಹೆಸರಲ್ಲಿ ಹಿಟ್ಲರ್, ಮುಸಲೋನಿಗಳು ಜಗತ್ತಿಗೆ ತಂದೊಡ್ಡಿದ ಸಾಮೂಹಿಕ ಜನಾಂಗೀಯ ಸಂಘರ್ಷಗಳು, ಕಮ್ಯುನಿಸಂ ಹೆಸರಲ್ಲಿ ಸ್ಟ್ಯಾಲಿನ್ ಕೈಗೊಂಡ ಹಿಂಸೆ, ಅಣುಬಾಂಬುಗಳ ಹಾವಳಿ, ಧರ್ಮದ ಹೆಸರಲ್ಲಿ, ಜನಾಂಗದ ಹೆಸರಲ್ಲಿ, ಸಿದ್ಧಾಂತದ ಹೆಸರಲ್ಲಿ, ರಾಷ್ಟ್ರೀಯವಾದದ ಹೆಸರಲ್ಲಿ, ಸ್ವಾತಂತ್ರ್ಯದ ಹೆಸರಲ್ಲಿ, ಅಭಿವೃದ್ಧಿ-ಪ್ರಗತಿಗಳ ಹೆಸರಲ್ಲಿ ನ್ಯಾಯಸಮ್ಮತವೆಂದೇ ಕಾಣುವಂತೆ ನಡೆಯುತ್ತಿರುವ ಹಿಂಸೆ-ಕೊಲೆಗಳು ನಾಗರಿಕ ಸಮಾಜದಲ್ಲಿ ಮನುಷ್ಯನ ಮನಸ್ಸಿನಲ್ಲಿ ಹುದುಗಿರುವ ಕ್ರೌರ್ಯವನ್ನು ಅನಾವರಣಗೊಳಿಸುತ್ತಿದೆ.

ಗಾಂಧೀಜಿಯನ್ನು ಜಗತ್ತಿಗೆ ಕೊಟ್ಟ ನಾಡಿಗೆ ಇಂದು ಗಾಂಧೀ ವಿಸ್ಮೃತಿ ಕವಿದಿದೆ. ಅಹಿಂಸೆಯನ್ನು ಪರಮ ಮೌಲ್ಯವೆಂದು ಕಂಡ ಬುದ್ಧ, ಮಹಾವೀರ, ಗಾಂಧಿ ಹುಟ್ಟಿದ ನೆಲದಲ್ಲಿ ಸ್ಪೈಲ್ ಅಣುಬಾಂಬ್ ಯೋಜನೆ ಅವತಾರ ತಾಳಿದೆ. ಇದು ಈ ದೇಶದ ಕ್ರೂರ ವ್ಯಂಗ್ಯವೆನ್ನದೆ ವಿಧಿಯಿಲ್ಲ. ಗಾಂಧೀಜಿ ಇಂದು ಇದ್ದಿದ್ದರೆ 'ಜಗತ್ತಿನ ಎಲ್ಲ ರಾಷ್ಟ್ರಗಳು ಅಣುಬಾಂಬ್ ತಯಾರಿಸುತ್ತಿದ್ದರೂ, ನನ್ನ ದೇಶ ಅಣು ಬಾಂಬ್ ತಯಾರಿಸುವ ಸಾಹಸಕ್ಕೆ ಕೈ ಹಾಕಬಾರದು' ಎಂದೇ ಹಟ ಹಿಡಿಯುತ್ತಿದ್ದರು. ಇಂಥ ನಿಲುವಿನಿಂದ ಭಾರತಕ್ಕೆ ಒದಗಿ ಬರುವ ನೈತಿಕ ಶಕ್ತಿ ನೂರಾರು ಅಣು ಬಾಂಬ್‌ಗಳ ಬಲವನ್ನು ಮೀರಿದ್ದು. ಅಣುಬಾಂಬ್ ಯುದ್ಧದಲ್ಲಿ ಯಾರೂ ಗೆಲ್ಲುವುದಿಲ್ಲ; ಎಲ್ಲರೂ ಸೋಲುವವರೇ; ಅಣುಬಾಂಬಿನ ಶಕ್ತಿಯ ಎದುರು ಗಾಂಧೀಜಿಯ ಅಹಿಂಸಾ ತತ್ವದ ನೈತಿಕ ಶಕ್ತಿ ಮಾತ್ರ ಗೆಲ್ಲಬಲ್ಲದು.

ಮದ್ದು, ಗುಂಡು, ತೋಪು, ತುಪಾಕಿಗಳಿಲ್ಲದೆ ಕೇವಲ ಅಹಿಂಸೆಯ ಮೂಲಕ, ಸತ್ಯಾಗ್ರಹದ ಮೂಲಕ ಸ್ವಾತಂತ್ರ್ಯ ಪಡೆಯಬಹುದೆಂಬ ಅಪರೂಪದ ಹಾಗೂ ವಿನೂತನವಾದ ಮಾರ್ಗವನ್ನು ವಿಶ್ವಕ್ಕೆ ತೋರಿಸಿಕೊಟ್ಟ ಅಸಾಮಾನ್ಯ ವ್ಯಕ್ತಿ ಗಾಂಧೀಜಿ. ಆದರೆ ಇಂದು ಸಮಾಜ ಹಿಂಸಾಕೂಪದಲ್ಲಿ ಒದ್ದಾಡುತ್ತಿದೆ. ಸ್ವಾರ್ಥ, ಕಲಹ, ಅಸೂಯೆ, ಹಣ, ಹೆಂಡ, ಹೆಣ್ಣು, ಮೋಜು-ಮಸ್ತಿ, ಆಚಾರ- ವಿಚಾರದಲ್ಲಿಯೂ ಸಾಕಷ್ಟು ಬದಲಾವಣೆ ಕಾಣುತ್ತಿದೆ. ನಮ್ಮ ಸಂತೋಷಕ್ಕಾಗಿ, ಸುಖಕ್ಕಾಗಿ ಅಹಿಂಸೆ ಮರೆಯಾಗಿ ಹಿಂಸೆ ಹರಿದಾಡುತ್ತಿದೆ. ಹಣ ಮಾಡುವ ಹಂಬಲ, ಶ್ರೀಮಂತಿಕೆಯ ಮೋಹ ಜನರನ್ನು ಆವರಿಸಿದೆ. ಇವುಗಳನ್ನು ಪಡೆಯಲು ಮಾನವ ಹಗಲಿರುಳು ದುಡಿಯುತ್ತಿದ್ದಾನೆ, ಸಂಬಂಧಗಳು ಸಡಿಲಗೊಂಡಿವೆ. ಗಾಂಧಿ ಕಂಡ ಕನಸು ಕನಸಾಗಿಯೇ ಉಳಿದಿದೆ.

ಇಂದೂ, ಗಾಂಧೀಜಿ ಅವರು ಹಾಕಿಕೊಟ್ಟ ಮಾರ್ಗ ಹೆಚ್ಚು ಉಪಯುಕ್ತ ವಾದದ್ದು. ಗಾಂಧೀಜಿ ಅವರ ತತ್ವಗಳು ಪ್ರಸ್ತುತ. ಜಗತ್ತಿಗೆ ತೀರಾ ಅನಿವಾರ್ಯ. ಇವುಗಳ ಅನುಷ್ಠಾನದ ಬಗ್ಗೆ ಸರ್ಕಾರ ಕಾನೂನು ಜಾರಿಗೊಳಿಸಬೇಕು. ಆಗ ನಮ್ಮ ನಾಡು ಶಾಂತಿಯ ನಾಡಾಗಲು ಸಾಧ್ಯವಿದೆ.

ಧಾರ ಗ್ರಂಥಗಳು

ಭಾರತ ಸಂವಿಧಾನ ಮಾನವ ಹಕ್ಕು ಮತ್ತು ಪರಿಸರ:ಡಾ. ಟಿ. ಡಿ. ದೇವೇಗೌಡ

ರಾಜಕೀಯ ಪರಿಕಲ್ಪನೆಗಳು:ಶ್ರೀ. ಕೆ. ಜಿ. ಸುರೇಶ್

ಪಾಶ್ಚಿಮಾತ್ಯ ರಾಜಕೀಯ ಚಿಂತಕರು:ಡಾ. ಟಿ. ಡಿ. ದೇವೇಗೌಡ

ಆಧುನಿಕ ರಾಜ್ಯಶಾಸ್ತ್ರ ವೈಚಾರಿಕರು:ಪ್ರೊ. ಸಾಲಿಮಠ

Political-Theory : Agarwal R.C

Political Theory : Guptha R.G

Western Political Thought : Bowle

ಗಾಂಧೀಜಿ ಅವರ ಆರ್ಥಿಕ ಚಿಂತನೆಯ ಪ್ರಸ್ತುತತೆ

ಡಾ. ಗಂಗಾಧರ ಪಿ.ಎಸ್.

ಗಾಂಧೀಜಿ ಅವರು ಒಬ್ಬ ಶಾಸ್ತ್ರೀಯ ಅರ್ಥಶಾಸ್ತ್ರಜ್ಞರಲ್ಲವಾದರೂ ಭಾರತದ ಆರ್ಥಿಕ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಅರ್ಥಮಾಡಿಕೊಂಡಿದ್ದರು. ಅವರು ಭಾರತದ ಆರ್ಥಿಕ ಸಮಸ್ಯೆಗಳನ್ನು ಗುರುತಿಸಿದ್ದಲ್ಲದೆ ಅವುಗಳಿಗೆ ಅತ್ಯಂತ ಪರಿಣಾಮ ಕಾರಿಯಾದ ಪರಿಹಾರಗಳನ್ನು ಸೂಚಿಸಿದರು. ಆದ್ದರಿಂದ ಡಾ॥ ಶೊಮ್ಯಾಚರ್ "ಗಾಂಧೀಜಿ ಅವರು ಜೆ.ಎಂ.ಕೀನ್ಸ್ ಅವರಿಗಿಂತ ಶ್ರೇಷ್ಠ ಅರ್ಥಶಾಸ್ತ್ರಜ್ಞರು ಮತ್ತು ಸರ್ವಶ್ರೇಷ್ಠ ಜನತಾ ಅರ್ಥಶಾಸ್ತ್ರಜ್ಞರಾಗಿದ್ದರು" ಎಂದು ಉದ್ಗರಿಸಿದ್ದಾರೆ.

ಬ್ರಿಟಿಷ್ ಅವಧಿಯಲ್ಲಿ ಭಾರತವು ಅನುಭವಿಸಿದ ಬಡತನವೆಂಬ ಸವಾಲಿಗೆ ಗಾಂಧೀಜಿ ಅವರ ಆರ್ಥಿಕತೆಯು ಒಂದು ಪ್ರತಿಕ್ರಿಯೆಯಾಗಿದೆ. ಭಾರತದ ಜನತೆಯು ಅನುಭವಿಸುತ್ತಿದ್ದ ಬಡತನವನ್ನು ಗುರುತಿಸಿ, ಅದನ್ನು ನಿವಾರಿಸಲು ಸತ್ಯ, ಅಹಿಂಸೆ, ಸರಳತೆ, ಸ್ವಾವಲಂಬನೆ ಮತ್ತು ಸ್ವಾಭಿಮಾನವನ್ನು ಆಧರಿಸಿದ ಹೊಸ ಆರ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂದು ಗಾಂಧೀಜಿ ಬಲವಾಗಿ ಪ್ರತಿಪಾದಿಸಿದರು. ಸರ್ವೋದಯ, ಆರ್ಥಿಕ ಸಮಾನತೆ, ನ್ಯಾಸಪದ್ಧತಿ, ಐಚ್ಛಿಕ ಬಡತನ, ಸ್ವದೇಶಿ, ವಿಜ್ಞಾನ ಮತ್ತು ತಂತ್ರಜ್ಞಾನ ಮುಂತಾದ ಗಾಂಧೀಜಿ ಅವರ ಆರ್ಥಿಕ ಚಿಂತನೆಗಳ ಪ್ರಸ್ತುತತೆಯನ್ನು ಇಲ್ಲಿ ಚರ್ಚಿಸಲಾಗಿದೆ.

ಸರ್ವೋದಯ

ಸರ್ವೋದಯವು ಗಾಂಧೀಜಿ ಅವರ ಆರ್ಥಿಕ ಮತ್ತು ರಾಜಕೀಯ ಚಿಂತನೆಯಾಗಿದೆ. ಇದು ಎಲ್ಲರ ಆಧ್ಯಾತ್ಮಿಕ ಮತ್ತು ಭೌತಿಕ ಕಲ್ಯಾಣವನ್ನು ಪ್ರತಿನಿಧಿಸುತ್ತದೆ. ಗಾಂಧೀಜಿ ಅವರ ಪ್ರಕಾರ, ಸರ್ವೋದಯವು "ಅರಸರು ಮತ್ತು ರೈತರು, ಹಿಂದೂಗಳು ಮತ್ತು ಮುಸ್ಲಿಮರು, ಸ್ಪೃಶ್ಯರು ಮತ್ತು ಅಸ್ಪೃಶ್ಯರು, ಬಿಳಿಯರು ಮತ್ತು ಕರಿಯರು, ಸಂತರು ಮತ್ತು ಪಾಪಿಗಳು" ಈ ಎಲ್ಲರನ್ನೂ ಒಳಗೊಳ್ಳುತ್ತದೆ. ಸರ್ವೋದಯ ಚಳವಳಿಯು 'ಯಾವುದೇ ವ್ಯಕ್ತಿಗೆ ನ್ಯಾಯಯುತವಾದ ಪಾಲನ್ನು ನಿರಾಕರಿಸಿ, ಸಮಾಜದ ಹಿತಾಸಕ್ತಿಯನ್ನು ಸಾಧಿಸಲು ಆಗುವುದಿಲ್ಲ' ಎಂಬ ಅಂಶಕ್ಕೆ ಒತ್ತು ನೀಡುತ್ತದೆ.

ಸರ್ವೋದಯವು ಮಾನವನ ಎಲ್ಲ ಚಟುವಟಿಕೆಗಳನ್ನು ಪ್ರತ್ಯೇಕವಾಗಿ ಪರಿಗಣಿಸದೆ, ಅವುಗಳನ್ನು ಅವಿಭಜಿತವಾಗಿ ಪರಿಗಣಿಸುತ್ತದೆ. ಸರ್ವೋದಯದ ಪ್ರಕಾರ ಕೃಷಿ,

ಕೈಗಾರಿಕೆ, ಗಣಿಗಾರಿಕೆ, ಸಾರಿಗೆ, ಶಿಕ್ಷಣ, ಸಮಾಜ ಕಲ್ಯಾಣ – ಇವುಗಳ ನಡುವೆ ಹಿತಾಸಕ್ತಿ ಸಂಘರ್ಷಗಳು ಏರ್ಪಡಲು ಸಾಧ್ಯವಿಲ್ಲ. ಎಲ್ಲರೂ ಸಮಾಜದಲ್ಲಿ ಸಮಾನ ಪ್ರಾಮುಖ್ಯತೆಯನ್ನು ಹೊಂದಿದ್ದಾರೆ. ಸರ್ವೋದಯವು ಎಲ್ಲರ ಹಿತಾಸಕ್ತಿಯನ್ನು ಪರಿಗಣಿಸುತ್ತದೆ ಹಾಗೂ ಅದು ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಎಂಬ ಪರಿಕಲ್ಪನೆಯನ್ನು ಒಪ್ಪುವುದಿಲ್ಲ. ಜಮೀನ್ದಾರರು ಮತ್ತು ಗೇಣಿದಾರರನ್ನು, ಬಂಡವಾಳಶಾಹಿ ಮತ್ತು ಕಾರ್ಮಿಕರನ್ನು ಜನರ ನ್ಯಾಸದಾರರು ಎಂದು ಪರಿಗಣಿಸುತ್ತದೆ ಮತ್ತು ಅವರ ಹಿತಾಸಕ್ತಿಗಳು ಪರಸ್ಪರ ಪೂರಕವೆಂದು ಪ್ರತಿಪಾದಿಸುತ್ತದೆ.

ಗಾಂಧೀಜಿ ಅವರು ಗ್ರಾಮೀಣ ಕೈಗಾರಿಕೆಗಳ ಮೂಲಕ ಉತ್ಪಾದನಾ ವಿಕೇಂದ್ರೀಕರಣವನ್ನು ಪ್ರತಿಪಾದಿಸಿದರು; ಸರ್ವೋದಯವು ಅವಶ್ಯಕತೆಗಳನ್ನು ಕನಿಷ್ಠಗೊಳಿಸುವುದರ ಮೂಲಕ ಆರ್ಥಿಕ ಸಂಘರ್ಷವನ್ನು ನಿವಾರಿಸಿ ಅನ್ಯಾಯವನ್ನು ತೊಡೆದುಹಾಕುವ ಗುರಿಯನ್ನು ಹೊಂದಿದೆ. ಸತ್ಯ ಮತ್ತು ಅಹಿಂಸೆಯನ್ನು ಆಧರಿಸಿರುವ ಸರ್ವೋದಯವು ಆಹಾರ ಶ್ರಮ [**Bread Labour**], ಸಮಾನತೆ ಮತ್ತು ಆರ್ಥಿಕ ವಿಕೇಂದ್ರೀಕರಣವನ್ನು ಮತ್ತು ಗ್ರಾಮೀಣ ಆಧಾರಿತ ಆರ್ಥಿಕತೆಯನ್ನು ಪ್ರತಿಪಾದಿಸುತ್ತದೆ.

ಸ್ವದೇಶಿ ಪರಿಕಲ್ಪನೆ

ಸ್ವದೇಶಿ ತತ್ತ್ವವು ಸರ್ವೋದಯದ ಆಧಾರ ಸ್ತಂಭ. ಗಾಂಧೀಜಿ ಅವರು ಗ್ರಾಮೀಣ ಭಾರತದ ಆರ್ಥಿಕ ವ್ಯವಸ್ಥೆಯನ್ನು ಸ್ವಾವಲಂಬಿ ಮತ್ತು ಸ್ವತಂತ್ರ್ಯವಾಗಿಸಲು ಸ್ವದೇಶಿ ಮಂತ್ರವನ್ನು ಪ್ರತಿಪಾದಿಸಿದರು. ಅವರ ಸ್ವತಂತ್ರ ಭಾರತದ ದೃಷ್ಟಿಯು ರಾಷ್ಟ್ರ–ರಾಜ್ಯ ವ್ಯವಸ್ಥೆಯ ಪರಿಕಲ್ಪನೆಯನ್ನು ಹೊಂದಿರಲಿಲ್ಲ. ಸ್ವಯಂ ಆಡಳಿತ, ಸ್ವಾವಲಂಬನೆ ಮತ್ತು ಸ್ವಯಂ ಉದ್ಯೋಗವನ್ನು ಹೊಂದಿದ್ದ ಜನರ ಒಕ್ಕೂಟವನ್ನು ದೃಷ್ಟಿಯಲ್ಲಿ ಇಟ್ಟುಕೊಂಡಿತ್ತು. 'ಯಾವ ವಸ್ತುಗಳನ್ನು ಹಳ್ಳಿಗಳಿಗೆ ಆಮದು ಮಾಡಿಕೊಳ್ಳಬೇಕು, ಯಾವ ವಸ್ತುಗಳನ್ನು ಹಳ್ಳಿಗಳಿಂದ ರಫ್ತು ಮಾಡಬೇಕು ಎಂಬ ನಿರ್ಧಾರವನ್ನು ಕೈಗೊಳ್ಳುವುದನ್ನು ಒಳಗೊಂಡಂತೆ, ಗರಿಷ್ಠ ಆರ್ಥಿಕ ಮತ್ತು ರಾಜಕೀಯ ಅಧಿಕಾರವು ಗ್ರಾಮ ಸಭೆಗಳಲ್ಲಿ ನೆಲೆಸಿರಬೇಕು" ಎಂಬ ಬಗ್ಗೆ ಗಾಂಧೀಜಿ ಅವರ ಸ್ವದೇಶಿ ಪರಿಕಲ್ಪನೆಯಲ್ಲಿ ಸ್ಪಷ್ಟತೆ ಇದೆ.

"ಹಳ್ಳಿಗಳಲ್ಲಿ ಉತ್ಪಾದನೆಯಾದ ವಸ್ತುಗಳನ್ನು ಹಳ್ಳಿಯ ಜನರು ತಾವೇ ಉಪಯೋಗಿಸಬೇಕು. ಹಳ್ಳಿ–ಹಳ್ಳಿಗಳ ನಡುವಣ ಹಾಗೂ ಹಳ್ಳಿಗಳು–ಪಟ್ಟಣಗಳ ನಡುವಣ ವ್ಯಾಪಾರವು ಅತ್ಯಂತ ಕನಿಷ್ಠ ಪ್ರಮಾಣದಲ್ಲಿರಬೇಕು. ಗ್ರಾಮೀಣ ಸಮುದಾಯದಲ್ಲಿ ಉತ್ಪಾದಿಸಲು ಸಾಧ್ಯವಾಗದ ಸರಕು ಮತ್ತು ಸೇವೆಗಳನ್ನು ಮಾತ್ರ ಆಮದು ಮಾಡಿಕೊಳ್ಳಬೇಕು. 'ಜನತೆಯಿಂದ ಉತ್ಪಾದನೆ' ಎಂಬ ತತ್ತ್ವವನ್ನು ಅಳವಡಿಸಿಕೊಳ್ಳುವುದರ ಮೂಲಕ, ಗ್ರಾಮೀಣ ಸಮುದಾಯಗಳಲ್ಲಿ ಮಾನವ ಪರಿಶ್ರಮದಿಂದ ಕೂಡಿದ ಕಾಯಕದ ಘನತೆಯನ್ನು ಪುನರ್ ಸ್ಥಾಪಿಸಬಹುದು. ಸ್ವ–ಹಸ್ತದಿಂದ ಮಾಡಲಾಗುವ ಯಾವುದೇ ಕಾಯಕಕ್ಕೆ ತನ್ನದೇ ಆದ ಅಂತರ್ಗತ ಮೌಲ್ಯವಿರುತ್ತದೆ. ಇದರ ಬದಲಾಗಿ, ಕೆಲಸವನ್ನು ಯಂತ್ರಗಳಿಗೆ ನಿಯೋಜಿಸಿದರೆ ಸ್ವ–ಹಸ್ತದಿಂದ ಮಾಡುವ ಕಾಯಕವು ವ್ಯಕ್ತಿಗಳಿಗೆ ದೊರಕಿಸಿ

ಕೊಡುವ ಆಧ್ಯಾತ್ಮಿಕ ಲಾಭಗಳನ್ನು ಕಳೆದುಕೊಳ್ಳಬೇಕಾಗುತ್ತದೆ" ಎಂದು ಗಾಂಧೀಜಿ ಪ್ರತಿಪಾದಿಸಿದರು.

ಗ್ರಾಮೀಣ ಸಮುದಾಯವನ್ನು ಅಸ್ಥಿರಗೊಳಿಸುವ ಬಾಹ್ಯ ಮಾರುಕಟ್ಟೆಯನ್ನು ಸ್ವದೇಶಿ ತತ್ತ್ವವು ನಗಣ್ಯಗೊಳಿಸುವ ಉದ್ದೇಶ ಹೊಂದಿದೆ. ಅದು ಯಾವುದೇ ಹಂತದಲ್ಲಿ ಆರ್ಥಿಕ ಅವಲಂಬನೆಯನ್ನು ತಡೆಗಟ್ಟುತ್ತದೆ. ಅಲ್ಲದೆ, ಅದು ಪರಿಸರ ವಿನಾಶಿ ಹಾಗೂ ಅನಾರೋಗ್ಯಕರ ಸಾರಿಗೆ ಸಂಪರ್ಕವನ್ನು ಕೂಡ ತಡೆಗಟ್ಟುತ್ತದೆ. 'ಹಳ್ಳಿಗಳು ತಮ್ಮ ಮೂಲಭೂತ ಅವಶ್ಯಕತೆಗಳನ್ನು ತಾವೇ ಪೂರೈಸಿಕೊಳ್ಳುವಷ್ಟು ಬಲವಾದ ಆರ್ಥಿಕ ಆಧಾರ ರೂಪಿಸಿಕೊಳ್ಳಬೇಕು ಮತ್ತು ಗ್ರಾಮೀಣ ಸಮುದಾಯದ ಎಲ್ಲಾ ಸದಸ್ಯರು ಸ್ಥಳೀಯತೆಗೇ ಪ್ರಾಮುಖ್ಯ ನೀಡಬೇಕು' ಎಂದು ಗಾಂಧೀಜಿ ಆಗ್ರಹಪಡಿಸಿದರು.

ಗ್ರಾಮೀಣ ಕೈಗಾರಿಕೆಗಳ ಪುನರುತ್ಥಾನ

ನೂಲುವಿಕೆ, ನೇಕಾರಿಕೆ ಮತ್ತು ಇತರ ಗ್ರಾಮೀಣ ಕೈಗಾರಿಕೆಗಳನ್ನು ಪುನರುತ್ಥಾನಗೊಳಿಸುವ ಚಳವಳಿಯು ಗಾಂಧೀಜಿ ಅವರ ಗ್ರಾಮೀಣ ರಚನಾತ್ಮಕ ಕಾರ್ಯಕ್ರಮಗಳ ಅತ್ಯಂತ ಪ್ರಮುಖ ಭಾಗವಾಗಿದೆ. ನೂಲುವಿಕೆ ಮತ್ತು ನೇಕಾರಿಕೆಯ ಪುನರುತ್ಥಾನವು ತನ್ನ ಮೂಲಭೂತ ಅವಶ್ಯಕತೆಗಳಾದ ಆಹಾರ ಮತ್ತು ಉಡುಪಿಗೆ ಸಂಬಂಧಿಸಿದಂತೆ ಭಾರತವನ್ನು ಖಂಡಿತವಾಗಿ ಸ್ವಾವಲಂಬಿಯಾಗಿಸುತ್ತದೆ ಎಂಬುದು ಗಾಂಧೀಜಿ ಅವರ ಅಚಲ ನಂಬಿಕೆಯಾಗಿತ್ತು. ಅವರ ದೃಷ್ಟಿಯಲ್ಲಿ, ಚರಕ ಮತ್ತು ಅದರ ಉತ್ಪಾದನೆಯಾದ ಖಾದಿಯು ಗ್ರಾಮೀಣ ಜನತೆಯ ಆರ್ಥಿಕ ಅಭಿವೃದ್ಧಿಗೆ ಒಂದು ಸಾರ್ವತ್ರಿಕ ಸಾಧನವಾಗಿದೆ. ಚರಕ ಮತ್ತು ಖಾದಿಯ ಪುನರುತ್ಥಾನವು ಭಾರತದ ಆರ್ಥಿಕ ಮತ್ತು ನೈತಿಕ ಪುನರುಜ್ಜೀವನಕ್ಕೆ ಅಗಾಧವಾದ ಕೊಡುಗೆಯನ್ನು ನೀಡುತ್ತದೆ. ಚರಕ ಮತ್ತು ಖಾದಿ ಆಯ್ಕೆಯು ಆರ್ಥಿಕ ದುಸ್ಥಿತಿಗೆ ಪರಿಹಾರ ಒದಗಿಸುತ್ತವೆ; ವಾಣಿಜ್ಯ ಶಾಂತಿಯನ್ನು ಖಾತ್ರಿಪಡಿಸುತ್ತವೆ.

ಗಾಂಧೀಜೀ ಅವರು ಚರಕ ಮತ್ತು ಖಾದಿಯನ್ನು ವಿದೇಶಿ ಉಡುಪು ಅಥವಾ ಯಂತ್ರದಿಂದ ಉತ್ಪಾದಿಸಲ್ಪಟ್ಟ ಉಡುಪಿಗೆ ಪರ್ಯಾಯವೆಂದಷ್ಟೇ ಪರಿಗಣಿಸಲಿಲ್ಲ. ಬದಲಾಗಿ 'ಖಾದಿ ಕೃಷಿಗೆ ಪೂರಕವಾದ ಕೈಗಾರಿಕೆ' ಎಂದು ಪರಿಗಣಿಸಿದರು. ಅದು ನಿರುದ್ಯೋಗಿಗಳಿಗೆ ಘನತೆಯಿಂದ ಕೂಡಿದ ಉದ್ಯೋಗವನ್ನು ನೀಡುವ, ನಿರುದ್ಯೋಗ ಸಮಸ್ಯೆಗೆ ಒಂದು ಪರಿಣಾಮಕಾರಿ ಪರಿಹಾರ; ಅದು, ಅನೇಕ ಬಡ ಮಹಿಳೆಯರಿಗೆ ನೆರವು ಒದಗಿಸಬಲ್ಲದು ಎಂದು ಗುರುತಿಸಿದರು. ಖಾದಿಯನ್ನು ಮಾರಾಟ ಮಾಡುವುದಕ್ಕಿಂತ ಗ್ರಾಮೀಣ ಸಮುದಾಯದ ಜನರು ತಾವೇ ಧರಿಸುವುದಕ್ಕೆ ಅವರು ಒತ್ತು ನೀಡಿದರು. ಖಾದಿ ಚಳವಳಿಯು ಗೃಹ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದಲ್ಲದೆ ಗ್ರಾಮೀಣ ಕೈಗಾರಿಕೆಗಳನ್ನು ನಾಶಪಡಿಸಲು ಬಯಸಿರುವ ಬ್ರಿಟಿಷ್ ಆರ್ಥಿಕ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಸಾಧನವೂ ಆಗಿತ್ತು. ಅದು ಬ್ರಿಟಿಷ್‌ರ ವಿರುದ್ಧದ ಆರ್ಥಿಕ ದಿಗ್ಬಂಧನ ಆಗಿತ್ತು.

ವಿಜ್ಞಾನ ಮತ್ತು ತಂತ್ರಜ್ಞಾನ

ಗಾಂಧೀಜಿ ಅವರು ವಿಜ್ಞಾನ ಮತ್ತು ತಂತ್ರಜ್ಞಾನ ಬಳಕೆಯ ವಿರೋಧಿ ಯಾಗಿರಲಿಲ್ಲ. ಆದರೆ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ರಾಜಕೀಯ, ಆರ್ಥಿಕ ಹಾಗೂ ಅಂತರರಾಷ್ಟ್ರೀಯ ಸ್ವರೂಪದ ಶೋಷಣೆಗೆ ಬಳಸುವುದನ್ನು ವಿರೋಧಿಸಿದರು. ವಿಕೇಂದ್ರಿಕೃತ ಅರ್ಥಿಕತೆ, ಸ್ಥಳೀಯ ಉತ್ಪಾದನೆ, ಪೂರ್ಣ ಪ್ರಮಾಣದ ಉದ್ಯೋಗ, ಸರ್ವೋದಯ ಮುಂತಾದ ಲಕ್ಷಣಗಳನ್ನೊಳಗೊಂಡ ಆರ್ಥಿಕ ವ್ಯವಸ್ಥೆಯನ್ನು ಸಾಕಾರಗೊಳಿಸಲು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕಿದೆ. 'ಎಲ್ಲರ ಒಳಿತಿಗಾಗಿ ನಡೆಯುವ ವೈಜ್ಞಾನಿಕ ಅನ್ವೇಷಣೆಯನ್ನು ಸ್ವಾಗತಿಸುತ್ತೇನೆ; ವಿಜ್ಞಾನವು ಕಾರ್ಮಿಕರ ಆಯಾಸವನ್ನು ಹೋಗಲಾಡಿಸಬೇಕು. ಆದರೆ ಕಾರ್ಮಿಕರ ಉದ್ಯೋಗವನ್ನು ಕಿತ್ತುಕೊಳ್ಳುವ ಹಾಗಾಗಬಾರದು' ಎಂದು ಅವರು ಹೇಳಿದ್ದಾರೆ.

ಗಾಂಧೀಜಿ ಅವರು, ಅಮಾನವೀಯತೆ ಮತ್ತು ಅನಪೇಕ್ಷಿತ ಸಾಮಾಜಿಕ ಮತ್ತು ಆರ್ಥಿಕ ಫಲಿತಾಂಶಗಳನ್ನು ಉಂಟುಮಾಡುವ ಎಲ್ಲಾ ಸಂಗತಿಗಳನ್ನು ವಿರೋಧಿಸಿದರು. ಅವರ ಚಿಂತನೆಗಳು ಮಾನವ ಕೇಂದ್ರಿತವಾಗಿದ್ದವು. ಯಂತ್ರವು ಮಾನವರ ವೈಯಕ್ತಿಕತೆಯ ಮೇಲೆ ದಾಳಿ ಮಾಡಬಾರದು ಮತ್ತು ನಿರುದ್ಯೋಗ ಸಮಸ್ಯೆಯನ್ನು ನಿರ್ಮಾಣ ಮಾಡಬಾರದು; ಪೂರ್ಣ ಪ್ರಮಾಣದ ಉದ್ಯೋಗ ಪ್ರತಿಯೊಬ್ಬರಿಗೆ ದೊರಕಬೇಕು. ಆಧುನಿಕ ವಿಜ್ಞಾನ-ತಂತ್ರಜ್ಞಾನವು ಎಲ್ಲರಿಗೂ ಉದ್ಯೋಗವನ್ನು ನೀಡಲು ಸಮರ್ಥವಾಗಿಲ್ಲ; ಹಾಗಾಗಿ, ನಾವು ಗೃಹಕೈಗಾರಿಕೆ, ಸಣ್ಣ ಕೈಗಾರಿಕೆಗಳನ್ನು ಅವಲಂಬಿಸುದೇ ದಾರಿ' ಎಂದು ಗಾಂಧೀಜಿ ಒತ್ತಿ ಹೇಳಿದರು.

ಗಾಂಧೀಜಿ ಅವರ ಪ್ರಕಾರ, ತಂತ್ರಜ್ಞಾನದ ಬಳಕೆ ಒಂದು ದೇಶದ ಸ್ಥಿತಿಗತಿಗಳಿಗೆ ಮತ್ತು ಅಗತ್ಯಗಳಿಗೆ ಹೊಂದಿಕೊಳ್ಳುವಂತಿರಬೇಕು. ಮಾನವ ಸಂಪನ್ಮೂಲ ಹೇರಳವಾಗಿ ಲಭ್ಯವಿರುವ ದೇಶಗಳಲ್ಲಿ, ಶ್ರಮಸಾಂದ್ರ ಚಟುವಟಿಕೆಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ ಎಂದು ಗಾಂಧಿ ಪ್ರತಿಪಾದಿಸಿದರು. ಸ್ವಾವಲಂಬನೆ, ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸುವ ಮಟ್ಟಿಗೆ ವಿಜ್ಞಾನ ಮತ್ತು ತಂತ್ರಜ್ಞಾನವು ಬಳಕೆಯಾಗಬೇಕು. ವಿಜ್ಞಾನ-ತಂತ್ರಜ್ಞಾನವು ವ್ಯಕ್ತಿಗಳನ್ನು ಗುಲಾಮರನ್ನಾಗಿ ಮಾಡುವುದಕ್ಕಾಗಲಿ, ಉದ್ಯೋಗಹೀನರನ್ನಾಗಿ ಮಾಡುವುದಕ್ಕಾಗಲಿ ಪರಿಸರವನ್ನು ನಾಶ ಮಾಡುವುದಕ್ಕಾಗಲಿ, ಆದಾಯದಲ್ಲಿ ವಿಪರೀರ ಅಸಮಾನತೆ ಉಂಟಾಗುವುದಕ್ಕಾಗಲಿ, ಸಂಪತ್ತು ಕೆಲವೇ ವ್ಯಕ್ತಿಗಳ ಕೈಯಲ್ಲಿ ಶೇಖರಣೆಯಾಗುವುದಕ್ಕಾಗಲಿ ಕಾರಣವಾಗಬಾರದು ಎಂದು ಗಾಂಧೀಜಿ ಪ್ರತಿಪಾದಿಸಿದರು.

ನ್ಯಾಸ ಪದ್ಧತಿ(ಟ್ರಸ್ಟೀಷಿಪ್)

ಬಂಡವಾಳವಾದ ಮತ್ತು ಸಮತಾವಾದ ಇವೆರಡರ ಅಪಾಯಗಳನ್ನು ನಿವಾರಿಸಲು ನ್ಯಾಸ ಪದ್ಧತಿಯನ್ನು ಗಾಂಧೀಜಿ ಪ್ರತಿಪಾದಿಸಿದರು. ನ್ಯಾಸ ಪದ್ಧತಿಯನ್ನು ಒಪ್ಪಿಕೊಂಡರೆ, ಕೃಷಿ ಮತ್ತು ಕೈಗಾರಿಕೆ ಈ ಎರಡೂ ಕ್ಷೇತ್ರಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯಿಂದ ಸೃಷ್ಟಿಸಲ್ಪಟ್ಟ ಅಸಮಾನತೆ ಎಂಬ ಶೋಷಣೆ ಮತ್ತು ಸಮತಾವಾದದಿಂದ ಸೃಷ್ಟಿಸಲ್ಪಟ್ಟ ಹಿಂಸೆಗಳೆರಡೂ ಏಕಕಾಲಕ್ಕೆ ಮರೆಯಾಗುತ್ತವೆ ಎಂಬುದು ಅವರ ಅಭಿಪ್ರಾಯ. ನ್ಯಾಸಪದ್ಧತಿ ಪರಿಕಲ್ಪನೆಯ ಮೂಲಕ, ಆರ್ಥಿಕ ಸಮಾನತೆಯನ್ನು ಮತ್ತು ಆರ್ಥಿಕ ಸಂಬಂಧಗಳಲ್ಲಿ ಸೌಹಾರ್ದತೆಯನ್ನು ತರಲು ಅವರು ಬಯಸಿದರು.

ಖಾಸಗಿ ಆಸ್ತಿಯನ್ನು ರದ್ದುಪಡಿಸುವುದು (ಸ್ವಾಮಿತ್ವವನ್ನು ಹೊಂದದಿರುವುದು) ಮತ್ತು ಕದಿಯದಿರುವುದು ಈ ಎರಡು ನೈತಿಕ ತತ್ತ್ವಗಳನ್ನು ಆರ್ಥಿಕ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವುದೇ ನ್ಯಾಸ ಪದ್ಧತಿ. ಇದು, ಸೌಲಭ್ಯರಹಿತ ವರ್ಗಗಳ ಸಬಲೀಕರಣದ ಒಂದು ಪರಿಣಾಮಕಾರಿ ಅಸ್ತ್ರವಾಗಿದೆ. ಇದರ ಪ್ರಕಾರ, ಶ್ರೀಮಂತರು ತಾವು ಗಳಿಸಿದ ಸಂಪತ್ತನ್ನು ಹೊಂದಬಹುದು; ಆದರೆ, ಅವರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಕಾಗುವಷ್ಟು ಸಂಪತ್ತನ್ನು ಮಾತ್ರ ಬಳಸಿಕೊಂಡು ಹೆಚ್ಚುವರಿ ಸಂಪತ್ತಿಗೆ ನ್ಯಾಸದಾರ(ಟ್ರಸ್ಟೀ) ಆಗಿರಬೇಕು. ಈ ಹೆಚ್ಚುವರಿ ಸಂಪತ್ತನ್ನು ಸಮಾಜದ ಒಳಿತಿಗೆ ಅವರು ಬಳಸಬೇಕು. ನ್ಯಾಸ ಪದ್ಧತಿಯ ಮೂಲಕ ಸಮಾಜದಲ್ಲಿ ಶಾಂತಿಯುತವಾಗಿ ಪರಿವರ್ತನೆಯನ್ನು ತರಲು ಗಾಂಧೀಜಿ ಉದ್ದೇಶಿಸಿದ್ದರು.

ನ್ಯಾಸಪದ್ಧತಿಯ ಅಡಿಯಲ್ಲಿ ಶ್ರೀಮಂತರ ಸಂಪತ್ತು ಕಾನೂನುಬದ್ಧವಾಗಿ ಅವರಿಗೇ ಸೇರಿದರೂ, ನೈತಿಕವಾಗಿ ಅದು ಇಡೀ ಸಮಾಜಕ್ಕೆ ಸೇರಿರುತ್ತದೆ. ನೈತಿಕ ಒಡೆತನದ ದೃಷ್ಟಿಯಿಂದ ರೈತರು ಮತ್ತು ಕಾರ್ಮಿಕರೂ ಜಮೀನ್ದಾರರು ಮತ್ತು ಬಂಡವಾಳಶಾಹಿಗಳ ಸಂಪತ್ತಿನ ಒಡೆಯರಾಗಿರುತ್ತಾರೆ. ಆದ್ದರಿಂದ, ಗಾಂಧೀಜಿ ಅವರ ಪ್ರಕಾರ, ರೈತರು ಮತ್ತು ಜಮೀನ್ದಾರರು ಹಾಗೂ ಕಾರ್ಮಿಕರು ಮತ್ತು ಮಾಲೀಕರು ಈ ಸಂಪತ್ತಿನ ಜಂಟಿ ಒಡೆಯರಾಗಿರುತ್ತಾರೆ.

ಗಾಂಧೀಜಿ ಪ್ರತಿಪಾದಿಸಿದಂತೆ, ನ್ಯಾಸ ಪದ್ಧತಿಯು ಕೈಗಾರಿಕಾ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಕಾರ್ಮಿಕರು ಮಾಲೀಕರಿಗಾಗಿ ದುಡಿಯುತ್ತಾರೆ ಮತ್ತು ಅದಕ್ಕೆ ಪ್ರತಿಫಲವಾಗಿ ಮಾಲೀಕರು ನಿರ್ಧರಿಸುವಷ್ಟು ವೇತನವನ್ನು ಪಡೆಯುತ್ತಾರೆ. ಇದರಿಂದ ಅವರಿಗೆ ಉತ್ತಮ ಆಹಾರ, ಬಟ್ಟೆ, ವಸತಿ ಹಾಗೂ ಶಿಕ್ಷಣವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಮಾಲೀಕರು ತಮ್ಮಲ್ಲಿನ ಹೆಚ್ಚುವರಿ ಸಂಪತ್ತನ್ನು ನ್ಯಾಸವೆಂದು ಪರಿಗಣಿಸಿ, ಅದನ್ನು ಸಂಪೂರ್ಣವಾಗಿ ಕಾರ್ಮಿಕರ ಒಳಿತಿಗಾಗಿ ಬಳಸಬೇಕು. ಆಗ ಮಾತ್ರ ಕಾರ್ಮಿಕರಿಗೆ ಉತ್ತಮ ಆಹಾರ, ಬಟ್ಟೆ, ವಸತಿ ಹಾಗೂ ಶಿಕ್ಷಣವನ್ನು ಪಡೆಯಲು ಸಾಧ್ಯವಾಗುತ್ತದೆ.

ಗಾಂಧೀಜಿ ಅವರು, ಕೈಗಾರಿಕೆಗಳ ಆಡಳಿತದಲ್ಲಿ ಕಾರ್ಮಿಕರಿಗೆ ಪಾಲು ಇರಬೇಕು ಎಂದು ಪ್ರತಿಪಾದಿಸಿದರು. ಮಾಲೀಕರು ಕಾರ್ಮಿಕರೊಂದಿಗೆ ಸರಿಯಾಗಿ ವರ್ತಿಸದೆ, ಅವರನ್ನು ಶೋಷಣೆಗೆ ಒಳಪಡಿಸಿದರೆ, ಕಾರ್ಮಿಕರು ಅಂಥ ಅನ್ಯಾಯದ ಬಗ್ಗೆ ಮಾಲೀಕರೊಂದಿಗೆ ಮಾತುಕತೆ, ಚರ್ಚೆ ನಡೆಸಬೇಕು. ಇದೂ ಫಲ ನೀಡದೇ ಇದ್ದಾಗ ಅಹಿಂಸಾತ್ಮಕವಾಗಿ ಮುಷ್ಕರ ನಡೆಸಿ, ಹೋರಾಡಬೇಕು. ಇದಕ್ಕಾಗಿ ಕಾರ್ಮಿಕರು ಸಂಘಗಳನ್ನು ರಚಿಸಿಕೊಳ್ಳಬೇಕು. ಆದರೆ, ಮುಷ್ಕರ ಮಾಲೀಕರನ್ನು ಶೋಷಿಸುವ ಉದ್ದೇಶ ಹೊಂದಿರಕೂಡದು.

ಚ್ಛಿಕ ಬಡತನ

ಗಾಂಧೀಜಿ ಅವರು ಐಚ್ಛಿಕ ಬಡತನವನ್ನು ಪ್ರತಿಪಾದಿಸಿದ್ದಾರೆ. ಇದರ ಮೂಲಕ ಹಿಂಸಾತ್ಮಕವಾಗಿ ಆರ್ಥಿಕ ಸಮಾನತೆಯನ್ನು ತರಲು ಅವರು ಬಯಸಿದರು. ವಿಧಿಸಲ್ಪಟ್ಟ ಡತನ ಮತ್ತು ಐಚ್ಛಿಕ ಬಡತನಗಳ ನಡುವೆ ಸ್ಪಷ್ಟವಾದ ವ್ಯತ್ಯಾಸವನ್ನು ಅವರು ರುತಿಸಿದ್ದಾರೆ. ವ್ಯಕ್ತಿಗೆ ಜೀವನಾವಶ್ಯಕ ಸೌಲಭ್ಯಗಳು ದೊರೆಯದಿದ್ದರೆ ಅದು ವಿಧಿಸಲ್ಪಟ್ಟ ಡತನವಾಗುತ್ತದೆ. ಆದರೆ, ವ್ಯಕ್ತಿಯೊಬ್ಬರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಳಿಸಿ, ಅವಶ್ಯವಿದ್ದಷ್ಟನ್ನು ತಾವು ಇಟ್ಟುಕೊಂಡು, ಅಂದರೆ ತಮ್ಮ ಆಸೆಗಳನ್ನು ಂತಿಗೊಳಿಸಿಕೊಂಡು ತ್ಯಾಗವೇ ಜೀವನ ಎಂದು ಅರಿತುಕೊಂಡು ಜೀವಿಸುವುದು ಚ್ಛಿಕ ಬಡತನವನ್ನು ಆಯ್ಕೆ ಮಾಡಿಕೊಳ್ಳುವ ರೀತಿ. ಗಾಂಧೀಜಿ ಅವರು ಸಂತನಂತೆ ೀವಿಸುವಂತೆ ಯಾರನ್ನೂ ಒತ್ತಾಯಿಸಲಿಲ್ಲ. ಬದಲಾಗಿ ಅವರು 'ವ್ಯಕ್ತಿಯೊಬ್ಬರು ೀವನಕ್ಕಾಗಿ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಪಡೆದಿರಬೇಕು. ಆದರೆ ವಿಲಾಸಿ ಜೀವನವನ್ನು ್ಯಜಿಸಬೇಕು' ಎಂದು ಅಪೇಕ್ಷಿಸಿದರು; 'ಅಗತ್ಯ ಸೌಲಭ್ಯಗಳನ್ನು ಪಡೆದುಕೊಳ್ಳುವುದು ುತ್ತು ವಿಲಾಸಿ ಜೀವನ ನಡೆಸುವುದು ಇವೆರಡರ ನಡುವಣ ವ್ಯತ್ಯಾಸವನ್ನು ಮನಗಾಣಲು ವರು ಆಗ್ರಹಪಡಿಸಿದರು.

ಮಾರೋಪ

'ವ್ಯಕ್ತಿಯು ಗಾಂಧೀಜಿ ಅವರ ಆರ್ಥಿಕ ಚಿಂತನೆಯ ಕೇಂದ್ರ ಬಿಂದು' ಎಂಬುದು ಳಿದು ಬರುತ್ತದೆ. ಅವರ ಆರ್ಥಿಕ ಚಿಂತನೆ ಸಮಾಜದಲ್ಲಿ ಮೌನ ಕ್ರಾಂತಿಯನ್ನುಂಟು ಮಾಡುವಂಥವು. ಬಡವರ ಮತ್ತು ಶ್ರೀಮಂತರ ನಡುವಣ ಅಸಮಾನತೆಯನ್ನು ಘರ್ಷಣೆಯಿಲ್ಲದೆ ನಿವಾರಿಸಲು ಬಯಸುವಂಥವು; ಗಾಂಧೀಜಿ ಅವರ ಆರ್ಥಿಕ ಚಿಂತನೆಗಳನ್ನು ಗಂಭೀರವಾಗಿ ಅಳವಡಿಸಿಕೊಂಡರೆ, ಇಂದು ಸಾಮಾನ್ಯವಾಗಿ ವಿಶ್ವದಾದ್ಯಂತ ಮತ್ತು ನಿರ್ದಿಷ್ಟವಾಗಿ ಭಾರತದಲ್ಲಿ ಅತ್ಯಂತ ಗಂಭೀರ ಚರ್ಚೆಗೆ ಒಳಗಾಗಿರುವ 'ಸುಸ್ಥಿರ ಅಭಿವೃದ್ಧಿ' ಎಂಬ ಪರಿಕಲ್ಪನೆಯನ್ನು ಸಾಧಿಸಲು ಸಾಧ್ಯವಾಗುತ್ತದೆ; ದೇಶದ ಎಲ್ಲರಿಗೂ ಮೂಲಸೌಲಭ್ಯಗಳನ್ನು ಗೌರವಯುತವಾಗಿ ಒದಗಿಸಲು ಬೇಕಾದ ಆರ್ಥಿಕ ವ್ಯವಸ್ಥೆಯನ್ನು ರೂಪಿಸಲು ಸಾಧ್ಯವಾಗುತ್ತದೆ. ಹೀಗಾಗಿ, ಅವರ ಆರ್ಥಿಕ ಚಿಂತನೆ 21ನೆಯ ಶತಮಾನಕ್ಕೆ ಕೂಡ ಪ್ರಸ್ತುತ ಎಂದು ಹೇಳಬಹುದು.

References

- Agarwal S.N., The Gandhian plan of Economic Development, Bombay, 1944
- Andrews, C.F., Mahatma Gandh's ideas, New York, 1949
- Datta. D.M., The philosophy of Mahatma Gandhi, Bombay, 1951
- Gandhi., M.K. Young India
- Radhakrishna. B.G., Gandhian Economic Thought, Prasararanga, UOM, Mysore, 1991
- Rajamanni M.B. Gandhian Social thought, Prasararanga, UOM, Mysore, 1997

ಸ್ವಸ್ಥ್ಯ ಸಮಾಜಕ್ಕೆ ಗಾಂಧಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳು

ಗೋಪಿ .ಎಸ್.ಎಂ

ಆಧುನಿಕ ಭಾರತದ ಇತಿಹಾಸದಲ್ಲಿ ಗಾಂಧೀ ಮತ್ತು ಅಂಬೇಡ್ಕರ್ ಇಬ್ಬರಿಗೂ ಪ್ರಮುಖ ಸ್ಥಾನವಿದೆ. ಸ್ವಾತಂತ್ರ್ಯ, ಸಮಾನತೆಗಾಗಿ ಅವಿರತವಾಗಿ ಹೋರಾಡಿದ ಇವರೀರ್ವರು ಸಮಾಜ ಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದವರು. ಇವರಿಬ್ಬರ ನಡುವೆ ಸೈದ್ಧಾಂತಿಕವಾಗಿ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಇವರ ಮುಖ್ಯ ಗುರಿ ಸ್ವಾತಂತ್ರ್ಯ ಹಾಗೂ ಮಾನವ ಕಲ್ಯಾಣವನ್ನು ಸಾಧಿಸುವುದೇ ಆಗಿತ್ತು. ವಸಾಹತುಶಾಹಿ ಸಂದರ್ಭದಲ್ಲಿ ಉಂಟಾದ ಹಲವಾರು ರಾಜಕೀಯ, ಸಾಮಾಜಿಕ, ಆರ್ಥಿಕ ಬಿಕ್ಕಟ್ಟುಗಳ ಪರಿಹಾರದಲ್ಲಿ ಇವರ ಚಿಂತನೆಗಳು, ಹೋರಾಟಗಳು ನಿರ್ಣಾಯಕ ಪಾತ್ರವನ್ನು ವಹಿಸಿದ್ದವು. ದಾಸ್ಯ ವಿಮೋಚನೆ, ಅಸ್ಪೃಶ್ಯತೆಯ ನಿರ್ಮೂಲನೆಯಲ್ಲಿ ಇವರಿಬ್ಬರ ನೇತೃತ್ವದಲ್ಲಿನ ಹೋರಾಟಗಳು ಪರಿಣಾಮಕಾರಿ ಯಾಗಿದ್ದವು; ಸಮಾನತೆಯ ಸಮಾಜ ನಿರ್ಮಾಣ ಹಾಗೂ ಪಾರತಂತ್ರ್ಯದಿಂದ ಬಿಡುಗಡೆ ಹೊಂದುವಲ್ಲಿ ಪ್ರಧಾನ ಪಾತ್ರ ವಹಿಸಿದವು. ಈ ಹಿನ್ನೆಲೆಯಲ್ಲಿ ಆರೋಗ್ಯಕರ ಸಮಾಜಕ್ಕೆ ಗಾಂಧೀ ಮತ್ತು ಅಂಬೇಡ್ಕರ್‌ರವರು ನೀಡಿರುವ ಕೊಡುಗೆಯನ್ನು ಗುರುತಿಸುವ ಹಾಗೂ ಅವರ ಹೋರಾಟಗಳ ಮುಖ್ಯ ಹೆಜ್ಜೆ ಗುರುತುಗಳನ್ನು ವಿಶ್ಲೇಷಿಸುವುದು ಪ್ರಸ್ತುತ ಲೇಖನದ ಆಶಯವಾಗಿದೆ.

ಗಾಂಧೀಜಿ

ಗಾಂಧೀಜಿ ತಮ್ಮ ಚಿಂತನೆ ಮತ್ತು ವ್ಯಕ್ತಿತ್ವದಿಂದ ಇಡೀ ವಿಶ್ವಕ್ಕೇ ಮಾದರಿ ಯಾಗಿದ್ದಾರೆ, ಸತ್ಯ, ಅಹಿಂಸೆ, ಸತ್ಯಾಗ್ರಹ ಎಂಬ ಮಂತ್ರಗಳನ್ನೇ ತಮ್ಮ ಹೋರಾಟದ ಆಯುಧಗಳನ್ನಾಗಿ ಮಾಡಿಕೊಂಡು, ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲರನ್ನೂ ಒಗ್ಗೂಡಿಸಿದ ಮಹಾನ್ ಮಾನವತಾವಾದಿ ಗಾಂಧೀಜಿ. ಇವರು ಮೊದಲು ದಕ್ಷಿಣ ಆಫ್ರಿಕಾದಲ್ಲಿ ತಮಗಾದ ಅವಮಾನಕ್ಕಾಗಿ ಹೋರಾಟ ಶುರು ಮಾಡಿ, ಅಲ್ಲಿನ ಕಪ್ಪುವರ್ಣೀಯರ ಮೇಲೆ ಬಿಳಿಯರು ಮಾಡುತ್ತಿದ್ದ ದೌರ್ಜನ್ಯವನ್ನು ಖಂಡಿಸಿ, ಅವರಿಗೆ ನ್ಯಾಯ ದೊರಕಿಸಿ ಕೊಡುವಲ್ಲಿ ಅಪಾರವಾಗಿ ಶ್ರಮಿಸಿದರು. ನಂತರ ಭಾರತಕ್ಕೆ ಬಂದ ಸಂದರ್ಭದಲ್ಲಿ ಇಲ್ಲಿ

ವಸಾಹತುಶಾಹಿಯ ದಬ್ಬಾಳಿಕೆ ಹಾಗೂ ಅಸ್ಪೃಶ್ಯತೆ ಆಚರಣೆಯನ್ನು ಹೋಗಲಾಡಿಸಲು ನಾಡಿನಾದ್ಯಂತ ಸಂಚರಿಸಿ, ಜನರನ್ನು ಸಂಘಟಿಸಿದರು. ಗಾಂಧೀಜಿ ಅವರ ವ್ಯಕ್ತಿತ್ವ ಹಾಗೂ ಹೋರಾಟದ ಕೆಲವು ಘಟ್ಟಗಳನ್ನು ಈ ರೀತಿ ಗುರುತಿಸಬಹುದು.

- ಗಾಂಧೀಜಿ ಭಾರತಕ್ಕೆ ಬಂದ ನಂತರ ಸಸ್ಯಾಹಾರ, ಪ್ರಕೃತಿ ಚಿಕಿತ್ಸೆ, ಲೈಂಗಿಕ ನಿಯಂತ್ರಣ ಮುಂತಾದ ಪ್ರಯೋಗಗಳ ಮೂಲಕ ಮತ್ತು ತಮ್ಮ ಸರಳತೆಯಿಂದಾಗಿ ಭಾರತದ ಜನಮಾನಸದಲ್ಲಿ ಸಂತನ ಸ್ಥಾನಮಾನವನ್ನು ಗಳಿಸಿದರು.
- ಖಾದಿ, ಗ್ರಾಮ ಸ್ವರಾಜ್ಯ, ಸರ್ವೋದಯ, ಹಿಂದೂ-ಮುಸ್ಲಿಂ ಏಕತೆ, ಹರಿಜನ ಕಲ್ಯಾಣ ಮುಂತಾದ ಕಾರ್ಯಕ್ರಮಗಳು ಅವರನ್ನು ರಾಜಕೀಯ ರಂಗದ ಜೊತೆಗೆ ಸಾಮಾಜಿಕ ಮತ್ತು ಧಾರ್ಮಿಕ ರಂಗದ ನಾಯಕನನ್ನಾಗಿಯೂ ಹೊರಹೊಮ್ಮಿಸಿ, ಭಾರತದ ಗ್ರಾಮೀಣ ಮತ್ತು ಕೆಳವರ್ಗದ ಜನರ ಆರಾಧ್ಯ ದೈವನನ್ನಾಗಿಸಿದವು.
- ಗಾಂಧೀಜಿ ಭಾರತದಲ್ಲಿ ಮೊಟ್ಟಮೊದಲು ಸತ್ಯಾಗ್ರಹ ನಡೆಸಿದ್ದು ಬಿಹಾರದ ಚಂಪಾರಣ್‌ದಲ್ಲಿ. 1917ರಲ್ಲಿ ಅಲ್ಲಿನ ಯೂರೋಪಿಯನ್ ಪ್ಲಾಂಟರ್‌ಗಳಿಂದ ಶೋಷಣೆಗೊಳಗಾಗಿದ್ದ ನೀಲಿ ಬೆಳೆಗಾರರ ಪರವಾಗಿ ಅವರು ಯಶಸ್ವಿಯಾಗಿ ಚಳುವಳಿಯನ್ನು ನಡೆಸಿದರು,
- 1918ರಲ್ಲಿ ಅಹಮದಾಬಾದ್‌ನ ಜವಳಿ ಗಿರಣಿಯಲ್ಲಿ ಮಾಲೀಕರು ಮತ್ತು ಕಾರ್ಮಿಕರ ನಡುವೆ ಉಂಟಾಗಿದ್ದ ವಿವಾದವನ್ನು ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳುವುದರ ಮೂಲಕ ಬಗೆಹರಿಸಿದರು.
- 1918ರಲ್ಲಿ ಗುಜರಾತ್‌ನ ಖೇಡಾದಲ್ಲಿ ಬರದಿಂದಾಗಿ ಕೃಷಿ ಉತ್ಪನ್ನ ಕುಸಿದುದರಿಂದ ರೈತರ ತೆರಿಗೆಯನ್ನು ಮನ್ನಾ ಮಾಡಬೇಕೆಂದು ಚಳುವಳಿಯನ್ನು ನಡೆಸಿದರು. ಈ ಮೂರೂ ಚಳುವಳಿಗಳು ಸ್ಥಳೀಯ ಸಮಸ್ಯೆಗಳನ್ನು ಕುರಿತ ಚಳುವಳಿಗಳಾಗಿವೆ,
- 1930ರ ಮಾರ್ಚ್ 12ರಂದು ಗಾಂಧೀಜಿ ತಮ್ಮ ಅನುಯಾಯಿಗಳೊಂದಿಗೆ ಸಬರಮತಿ ಆಶ್ರಮದಿಂದ ಗುಜರಾತ್‌ನ ಕಡಲ ತೀರದವರೆಗೆ ದಂಡಿಯಾತ್ರೆಯನ್ನು ಕೈಗೊಳ್ಳುವ ಮೂಲಕ, ಕಾನೂನುಭಂಗ ಚಳುವಳಿಯನ್ನು ಆರಂಭಿಸಿದರು.
- 1942ರಲ್ಲಿ ಬ್ರಿಟಿಷರ ವಿರುದ್ಧ 'ಭಾರತ ಬಿಟ್ಟು ತೊಲಗಿ ಚಳುವಳಿ'ಯನ್ನು ಆರಂಭಿಸಿದರು.

ದುಂಡು ಮೇಜಿನ ಸಮ್ಮೇಳನಗಳು ಹಾಗೂ ಪೂನಾ ಒಪ್ಪಂದ

1930-32ರ ಅವಧಿಯಲ್ಲಿ ಲಂಡನ್‌ನಲ್ಲಿ 3 ದುಂಡು ಮೇಜಿನ ಸಮ್ಮೇಳನಗಳು ನಡೆದವು. ಈ ಸಮ್ಮೇಳನಗಳಲ್ಲಿ ಕೋಮುವಾದಿ ಸಮಸ್ಯೆ ಮತ್ತು ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾಯಿತ ಕ್ಷೇತ್ರಗಳ ವಿಚಾರ ಕುರಿತು ಚರ್ಚಿಸಲಾಯಿತು. ಗಾಂಧೀಜಿ ಅವರು ಅಸ್ಪೃಶ್ಯರ ನಾಯಕರು ಎಂಬುದನ್ನು ಅಂಬೇಡ್ಕರರು ಒಪ್ಪಲಿಲ್ಲ. ಅಂಬೇಡ್ಕರ್ ದಲಿತರ

ನಾಯಕರಾಗಿ ಇಲ್ಲಿ ಭಾಗವಹಿಸಿ, 'ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರ ಬೇಕು' ಎಂದು ವಾದಿಸಿದರು. ಅಂಬೇಡ್ಕರ್ ಒಬ್ಬ ಕ್ರಾಂತಿಕಾರಿ ಹಾಗೂ ವ್ಯಕ್ತಿ ಪೂಜೆ ವಿರೋಧಿ ಆಗಿದ್ದರು. ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರವನ್ನು ಕೊಡಲು ದುಂಡು ಮೇಜಿನ ಸಮ್ಮೇಳನ ನಿರ್ಣಯಿಸಿತು. ಅಸ್ಪೃಶ್ಯರಿಗೆ ಬ್ರಿಟಿಷರು ಕೊಟ್ಟ ಪ್ರತ್ಯೇಕ ಮತಕ್ಷೇತ್ರವನ್ನು ವಿರೋಧಿಸಿ, ಪೂನಾದ ಯರವಡಾ ಜೈಲಿನಲ್ಲಿ ಗಾಂಧೀಜಿ 21 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿದರು. 1932ರ ಮೇ ತಿಂಗಳಿನಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್ ನಡುವೆ ಒಪ್ಪಂದವಾಗಿ, ಗಾಂಧೀಜಿ ಉಪವಾಸ ಕೈ ಬಿಟ್ಟರು. ಈ ಒಪ್ಪಂದದ ಪ್ರಕಾರ, ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರ ನೀಡದೆ, ಶಾಸನ ಸಭೆಯಲ್ಲಿ ಮೀಸಲು ಸ್ಥಾನಗಳನ್ನು ಒದಗಿಸಲಾಯಿತು. ಮೊದಲು ಇದ್ದ 78 ಸ್ಥಾನಗಳನ್ನು 148ಕ್ಕೆ ಏರಿಸಲಾಯಿತು. ಹೀಗೆ, ಇಬ್ಬರು ಮಹಾನ್ ನಾಯಕರು ಸೇರಿ, ದಲಿತರು ಹಿಂದೂ ಧರ್ಮದಿಂದ ಮತ್ತು ದೇಶದಿಂದ ಪ್ರತ್ಯೇಕವಾಗುವುದನ್ನು ತಪ್ಪಿಸಿದರು.

ಅಂಬೇಡ್ಕರ್

ಶತಮಾನಗಳಿಂದ ಅಸ್ಪೃಶ್ಯತೆ, ಶೋಷಣೆ, ಅವಮಾನಕ್ಕೆ ಒಳಗಾಗಿ, ಅಂಧಕಾರದಲ್ಲಿ ಮುಳುಗಿದ್ದ ಶ್ರಮಸಂಸ್ಕೃತಿಯ ಶೂದ್ರ ಜನರ ಬದುಕಿಗೆ ಆಶಾಕಿರಣ ವಾಗಿ ಬಂದವರು ಡಾ. ಬಿ.ಆರ್. ಅಂಬೇಡ್ಕರ್‌ರವರು. ಭಾರತದಲ್ಲಿ ವರ್ಣಾಶ್ರಮ ಪದ್ಧತಿಯ ಅನುಕರಣೆಯಿಂದಾಗಿ ಕೆಳವರ್ಗದ ಜನರನ್ನು ಪ್ರಾಣಿಗಳಿಗಿಂತಲೂ ಕಡೆಯಾಗಿ ನಡೆಸಿಕೊಳ್ಳಲಾಗುತ್ತಿತ್ತು. ಅವರ ಶ್ರೇಯೋಭಿವೃದ್ಧಿಗಾಗಿ ನಾಡಿನಾದ್ಯಂತ ಅನೇಕ ಸಂತರು, ಜ್ಞಾನಿಗಳು ಶ್ರಮಿಸಿದ್ದರು; ಹಾಗಿದ್ದಾಗ್ಯೂ ಈ ಜನರ ಜೀವನಮಟ್ಟ ಉತ್ತಮಪಡಿಸಲು ಕಾನೂನು ಆಗ್ರಹಿಸಿ, ಸಂವಿಧಾನಾತ್ಮಕ ಹಕ್ಕುಗಳನ್ನು ದೊರಕಿಸಿಕೊಟ್ಟವರು ಅಂಬೇಡ್ಕರ್.

20ನೇ ಶತಮಾನದಲ್ಲಿ ಮಹಾರಾಷ್ಟ್ರದ ಮಹರ್ ಸಮುದಾಯದಲ್ಲಿ ಜನಿಸಿದ ಇವರು, ಸ್ವತಃ ಅಸ್ಪೃಶ್ಯತೆಯ ಅನುಭವವನ್ನು ಅನುಭವಿಸಿದವರು. ಈ ಹಿನ್ನೆಲೆಯಲ್ಲಿ ತಮ್ಮ ಸಮುದಾಯದವರು ಕಳೆದುಕೊಂಡಿದ್ದ ಹಕ್ಕು, ಸುಖ-ನೆಮ್ಮದಿಗಳನ್ನು ಮರಳಿ ಪಡೆಯುವಂತೆ ಮಾಡಲು ಹಾಗೂ ತಮ್ಮ ಮೌಢ್ಯ, ಅಜ್ಞಾನವನ್ನು ತೊಡೆದು ಹಾಕಲು ಶಿಕ್ಷಣ ಬಹಳ ಮುಖ್ಯವೆಂದು ತೀರ್ಮಾನಿಸಿ, ಆ ನೆಲೆಯಲ್ಲಿ ದಿಟ್ಟ ಹೆಜ್ಜೆಗಳನ್ನು ಇಟ್ಟು, ಉನ್ನತ ಜ್ಞಾನವನ್ನು ತಮ್ಮ ಜನಾಂಗ ಗಳಿಸಿಕೊಳ್ಳುವಂತೆ ಮಾಡಲು ಸಾಕಷ್ಟು ಶ್ರಮಿಸಿದ್ದಾರೆ.

ಸಮಾನತೆಯ ಸಮಾಜ ನಿರ್ಮಾಣ ಹಾಗೂ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಅಂಬೇಡ್ಕರ್ ಹಲವು ಕ್ರಮಗಳನ್ನು ಸರಳವಾಗಿ ಎಲ್ಲರಿಗೂ ಅರ್ಥವಾಗುವಂತೆ ಹೇಳಿದ್ದಾರೆ. ಅವುಗಳಲ್ಲಿ ಈ ಕೆಳಕಂಡವು ಮುಖ್ಯವಾದವುಗಳಾಗಿವೆ.

- ಬಹಿಷ್ಕೃತರನ್ನು ಸಂಘಟಿಸಿ, ಮಾನವರೆಲ್ಲರಿಗೂ ದತ್ತವಾಗಿರುವ ನೈಸರ್ಗಿಕ ಹಕ್ಕುಗಳನ್ನು ಪ್ರತಿಪಾದಿಸುವಂತೆ ಪ್ರೇರೇಪಿಸುವುದು; ಅವುಗಳನ್ನು ಸಂರಕ್ಷಿಸಿಕೊಳ್ಳುವಂತೆ ಅಣಿಗೊಳಿಸುವುದು.
- ಸ್ವಾಭಿಮಾನದ ವ್ಯಕ್ತಿತ್ವ ಅಳವಡಿಸಿಕೊಳ್ಳಲು ಅಗತ್ಯವಾದ ವಿದ್ಯಾಭ್ಯಾಸ, ಬೌದ್ಧಿಕತೆ ಹಾಗೂ ಪರಿಶುದ್ಧ ಮಾನಸಿಕ ಸ್ಥಿತಿಗಳನ್ನು ರೂಢಿಸಿಕೊಳ್ಳುವಂತೆ ತರಬೇತಿ ನೀಡುವುದು.

ಶಿಕ್ಷಣವನ್ನು ಪ್ರೋತ್ಸಾಹಿಸಲು ವಸತಿ ನಿಲಯ ಹಾಗೂ ಶಾಲೆಗಳನ್ನು ತೆರೆಯುವುದು.

ಸಾಮಾಜಿಕ ಬದಲಾವಣೆ ತರಲು ಸಾಂಪ್ರದಾಯಿಕ ವೃತ್ತಿ,ಕಸುಬುಗಳನ್ನು ತ್ಯಜಿಸುವಂತೆ ಮಾಡುವುದು.

ಶೋಷಿತರ ಆಂತರಿಕ ಭಿನ್ನಾಭಿಪ್ರಾಯಗಳನ್ನು ನಿವಾರಿಸುವುದು.

ಸತ್ತ ಪ್ರಾಣಿಗಳನ್ನು ಸಾಗಿಸುವುದನ್ನು ನಿಲ್ಲಿಸುವುದು, ಅವುಗಳ ಮಾಂಸವನ್ನು ತಿನ್ನದಿರುವಂತೆ ಮನವೊಲಿಸುವುದು.

ಮಹಿಳೆಯರಿಗೆ ಮನೆ, ಮಕ್ಕಳ ಪಾಲನೆಯೊಂದಿಗೆ ಸಾಮಾಜಿಕ ಜವಾಬ್ದಾರಿಗಳನ್ನು ತಿಳಿಸಿಕೊಡುವುದು.

ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದು.

ಕಂದಾಚಾರ, ಬಾಲ್ಯವಿವಾಹ, ದೇವದಾಸಿ ಪದ್ಧತಿ ಮತ್ತು ಅನಾಗರಿಕ ಆಚರಣೆಗಳನ್ನು ಆಚರಿಸದಂತೆ ಮನವೊಲಿಸುವುದು.

ಈ ಧ್ಯೇಯಗಳ ಈಡೇರಿಕೆಗಾಗಿ ಡಾ॥ ಅಂಬೇಡ್ಕರ್ ಅವರು 'ಬಹಿಷ್ಕೃತ ಹಿತಕಾರಿಣಿ ಸಭಾ' ಎಂಬ ಸಂಘಟನೆಯನ್ನು ಕಟ್ಟಿ, ಅದರಲ್ಲಿ ನಿಮ್ನ ವರ್ಗಗಳವರನ್ನು ತೊಡಗಿಸಿದರು.

'ಬಹಿಷ್ಕೃತ ಹಿತಕಾರಿಣಿ ಸಭಾ'ದ ಮೂಲ ಉದ್ದೇಶಗಳೆಂದರೆ,

- ವಿದ್ಯಾರ್ಥಿ ನಿಲಯಗಳನ್ನು ತೆರೆಯುವ ಮೂಲಕ ಶೋಷಿತ ವರ್ಗಗಳಲ್ಲಿ ಶಿಕ್ಷಣದ ಪ್ರಸಾರವನ್ನು ಹೆಚ್ಚಿಸುವುದು ಮತ್ತು ಅಸಾಂಪ್ರದಾಯಕ ಉದ್ಯೋಗದಲ್ಲಿ ನಿಮ್ನ ವರ್ಗದವರು ತೊಡಗುವುದನ್ನು ಪ್ರೋತ್ಸಾಹಿಸುವುದು.
- ಅಸ್ಪೃಶ್ಯರಲ್ಲಿ ಸಂಸ್ಕೃತಿಯನ್ನು ಪ್ರಸಾರ ಮಾಡಲು ಗ್ರಂಥಾಲಯ, ವಾಚನಾಲಯ, ಅಧ್ಯಯನ ಕೇಂದ್ರಗಳನ್ನು ತೆರೆಯುವುದು.
- ಅಸ್ಪೃಶ್ಯರ-ಶೋಷಿತರ-ದಲಿತರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಕೈಗಾರಿಕಗಳ ಸ್ಥಾಪನೆ, ಕೈಗಾರಿಕಾ ತರಬೇತಿ ಶಾಲೆ ತೆರೆಯುವುದು.

ಅಂಬೇಡ್ಕರರ ಹೋರಾಟಗಳಲ್ಲಿ ಪ್ರಮುಖವಾದುದು ಚೌದಾರ್ ಕೆರೆಯ ಚಳುವಳಿ. ಇದೊಂದು ಅಪೂರ್ವ ಸಂದರ್ಭವಾಗಿದೆ. ಗುಲಾಮಗಿರಿ, ಜಾತಿಪದ್ಧತಿ, ಮತ್ತು ಪುರೋಹಿತಶಾಹಿಗಳ ವಿರೋಧಿ ಅಂಬೇಡ್ಕರ್ ಅವರು ಅಸ್ಪೃಶ್ಯರ ಅಪ್ರತಿಮ ಜಾಗೃತಿಯ ಸಂಕೇತವಾಗಿದ್ದರು. ಯಾವ ಕೆರೆಯ ನೀರನ್ನು ಹಿಂದೂ ಸವರ್ಣೀಯರು, ಮುಸ್ಲಿಮರು, ಕ್ರೈಸ್ತರು, ಅನ್ಯ ಧರ್ಮಿಯರು, ಪ್ರಾಣಿಪಕ್ಷಿಗಳು ಮುಟ್ಟಬಹುದಾಗಿತ್ತೋ ಆ ಕೆರೆಯ ನೀರನ್ನು ಅಸ್ಪೃಶ್ಯರು ಮುಟ್ಟುವ ಹಾಗಿರಲಿಲ್ಲ. ತಲೆಮಾರುಗಳಿಂದ ಅವಮಾನಿಸಲ್ಪಟ್ಟ ಅಸ್ಪೃಶ್ಯರು ತಮ್ಮ ನಾಗರಿಕ ಹಕ್ಕು ಚಲಾಯಿಸಲು ಹೊರಟಿದ್ದ ಆ ಗಳಿಗೆಯಲ್ಲಿ ಅವರಲ್ಲಿ ಅಪೂರ್ವ ಆತ್ಮಗೌರವ ರಾರಾಜಿಸುತ್ತಿತ್ತು. ಸನಾತನವಾದಿ ಕಟ್ಟುಕಟ್ಟಳೆಗಳ ಮೇಲೆ

ದಾಳಿ ಮಾಡಿ, ಅವುಗಳನ್ನು ಧ್ವಂಸ ಮಾಡಲು ಸಾಗುತ್ತಿದ್ದ ಪಡೆಯ ದಿಟ್ಟ ನೇತಾರರಾಗಿ ಅಂಬೇಡ್ಕರ್ ಕಂಗೊಳಿಸುತ್ತಿದ್ದರು.

ಶತಮಾನಗಳಿಂದ ದಮನಕ್ಕೊಳಗಾದ ಸಮುದಾಯಗಳ ಘನತೆಯ ಬದುಕಿಗಾಗಿ ಅಂಬೇಡ್ಕರರು ಭಾರತದಲ್ಲಿ ಸಾಮಾಜಿಕ ಪರಿವರ್ತನೆ ಆಂದೋಲನವನ್ನು ಕೈಗೊಂಡರು. ಅಂಬೇಡ್ಕರ್ ಮತ್ತು ಅವರ ಸಾವಿರಾರು ಅನುಯಾಯಿಗಳು ಕೆರೆಯ ನೀರನ್ನು ಮುಟ್ಟಿದ ನಂತರ, ಸವರ್ಣೀಯರು ಮತ್ತು ದಲಿತರ ನಡುವೆ ಗಲಭೆ ಸಂಭವಿಸಿ, ಅಪಾರ ಸಾವು ನೋವುಗಳಾದವು. ಇಂತಹ ಸಂದರ್ಭದಲ್ಲಿ ಅಂಬೇಡ್ಕರರು ಬಹಳ ತಾಳ್ಮೆಯಿಂದ ವರ್ತಿಸಿ, ಆಕ್ರೋಶಗೊಂಡ ತಮ್ಮ ಅನುಯಾಯಿಗಳನ್ನು ನಿಯಂತ್ರಿಸಿ, ಶಾಂತಿ ಮತ್ತು ಕಾನೂನಾತ್ಮಕ ಹೋರಾಟವನ್ನು ನಡೆಸುವಂತೆ ಪ್ರೇರೇಪಿಸಿದರು.

ಸಾಮಾಜಿಕ ಸಂಘಟನೆಯ ಬೆಂಬಲವಿಲ್ಲದೆ, ರಾಜಕೀಯ ಸಂಘಟನೆ ಹೆಚ್ಚು ಸಮಯದವರೆಗೆ ಬದುಕುಳಿಯುವುದಿಲ್ಲ ಎಂಬುದು ಅಂಬೇಡ್ಕರ್‌ರವರಿಗೆ ಗೊತ್ತಿತ್ತು. ದಲಿತರ ರಕ್ಷಣೆ, ಅಭಿವೃದ್ಧಿ ಮತ್ತು ಉನ್ನತಿಗಾಗಿ ಸಂಘಟನೆ ಅವಶ್ಯ. ಭಾರತದ ಪ್ರಗತಿಗಾಗಿ, ಬ್ರಿಟಿಷರ ದಾಸ್ಯದಿಂದ ಮುಕ್ತವಾಗುವುದು ಎಷ್ಟು ಅವಶ್ಯವೋ, ದಲಿತರು ಹಿಂದೂಗಳಿಗೆ ಸರಿಸಮಾನರೆಂದು ಭಾವಿಸಿಕೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಆಗುತ್ತಿರುವ ಅನ್ಯಾಯಗಳಿಗಾಗಿ ಹಿಂದೂ ಧರ್ಮದಿಂದ ವಿಮೋಚನೆ ಪಡೆಯುವುದೂ ಅಂಬೇಡ್ಕರ್ ದೃಷ್ಟಿಯಲ್ಲಿ ಅವಶ್ಯವಾಗಿತ್ತು. ಅಂಬೇಡ್ಕರ್‌ರವರು ಮೌಢ್ಯ, ಅಮಾನವೀಯ ಜಾತೀಯತೆ, ದಬ್ಬಾಳಿಕೆಗಳನ್ನು ಖಂಡಿಸಿ, ಸಮಾನತೆಯ ಸಮಾಜ ನಿರ್ಮಾಣ ಮಾಡಲು ಬೇಕಾದ ಅವಶ್ಯಕತೆಗಳನ್ನು ಸಂವಿಧಾನದ ಚೌಕಟ್ಟಿನಲ್ಲಿ ಕಾನೂನಾತ್ಮಕವಾಗಿ ಜಾರಿಗೆ ತರಲು ಶ್ರಮ ವಹಿಸಿದರು.

ಒಟ್ಟಾರೆ, ಆರೋಗ್ಯಕರ ಸಮಾಜದ ನಿರ್ಮಾಣಕ್ಕಾಗಿ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ನೀಡಿರುವ ಕೊಡುಗೆ ಅಸಾಧಾರಣ ವಾದುದು. ಈ ಇಬ್ಬರೂ ಮಹನೀಯರು ನೀಡಿರುವ ಕೊಡುಗೆ ಮೌಲಿಕವಾದುದು ಹಾಗೂ ಅನುಕರಣೀಯ ವಾದುದು.

ಪರಾಮರ್ಶನ ಗ್ರಂಥಗಳು

- ಕರ್ನಾಟಕ ದಲಿತ ಚಳುವಳಿ ಮತ್ತು ಅಂಬೇಡ್ಕರ್ : ಗಂಗಾರಾಂ ಚಾಂಡಾಳ
- ದಲಿತರ ಬದುಕು– ಮೆಲುಕು : ಡಾ. ಎನ್. ಚಿನ್ನಸ್ವಾಮಿ ಸೋಸಲೆ
- ಮಹಾಡ್ ಕೆರೆಯ ಪ್ರಸಂಗ : ಡಾ .ಬಿ.ಆರ್.ಅಂಬೇಡ್ಕರ್
- ಅಸ್ಪೃಶ್ಯರು : ಎಂ. ವೆಂಕಟಸ್ವಾಮಿ
- ದಲಿತರು ಮತ್ತು ಚರಿತ್ರೆ : ಸಂ. ಡಾ. ವಿರಾಪಾಕ್ಷಿ ಪೂಜಾರಹಳ್ಳಿ
- ಕದಡು : ಸಾಹಿತ್ಯ ಸಂಸ್ಕೃತಿ ವಿಮರ್ಶೆ : ಡಾ. ಬಿ. ಎಂ. ಪುಟ್ಟಯ್ಯ

ಸಮ ಸಮಾಜ ನಿರ್ಮಾಣಕ್ಕೆ ಅಂಬೇಡ್ಕರ್ ಅವರ ಸಿದ್ಧಾಂತಗಳು

ಇಂದಿರಾ

ಡಾ|| ಅಂಬೇಡ್ಕರ್ ಅವರು ಮಹಾನ್ ಮನವತಾವದಿ, ಮನುಕುಲ ವಿರೋಧಿಗಳು ತಮ್ಮ ಸ್ವಾರ್ಥಕ್ಕಾಗಿ ಸೃಷ್ಟಿಸಿ, ಬೆಳೆಸಿದ ಭಾರತದ ಶ್ರೇಣೀಕೃತ ಜಾತಿಪದ್ಧತಿ ವ್ಯವಸ್ಥೆಯ ನೋವು-ಸಂಕಟ ಉಂಡು, ಹೊರದೇಶಗಳಿಗೆ ಹೋಗಿ, ಅಪಾರ ವಿದ್ವತ್ ಸಂಪಾದಿಸಿ ಭಾರತದಲ್ಲಿ ಶತ-ಶತಮಾನಗಳಿಂದ ಬೇರುಬಿಟ್ಟಿದ್ದ ಎಲ್ಲ ತರಹದ ಅಸಮಾನತೆಗಳನ್ನು ಬುಡ ಸಮೇತ ಕಿತ್ತೊಗೆಯುವ ಐತಿಹಾಸಿಕ ಕೆಲಸಕ್ಕೆ ಕೈ ಹಾಕಿದ ಮಹಾನ್ ವ್ಯಕ್ತಿ.

ಕೆಲವು ಮಹಾನ್ ವ್ಯಕ್ತಿಗಳು ಇತಿಹಾಸ ಸೃಷ್ಟಿಸಿದರೆ, ಅಂಬೇಡ್ಕರ ಇತಿಹಾಸವನ್ನೇ ಬದಲಿಸಿದ ವ್ಯಕ್ತಿ ಆಗಿದ್ದಾರೆ. ಇವರು ರಚಿಸಿದ ಸಂವಿಧಾನ ವಿಶ್ವದ ಎಲ್ಲಾ ಸಂವಿಧಾನಗಳಿಗಿಂತ ಅತ್ಯುತ್ತಮವಾದುದ್ದಾಗಿದೆ. ಸಾವಿರಾರು ಜಾತಿಗಳನ್ನು, ಹತ್ತಾರು ಧರ್ಮಗಳನ್ನು, ನೂರಾರು ಸಂಸ್ಕೃತಿಗಳನ್ನು, ಬೃಹತ್ ಜನಸಮುದಾಯಗಳಾದ ಹೊಂದಿದ ಭಾರತದಲ್ಲಿ ಒಂದಾಗಿ ಬದುಕಲು ಸಾಧ್ಯವಾಗಿರುವುದು ಈ ಸಂವಿಧಾನದಿಂದಲೇ. ಭಾರತದ ಸಂವಿಧಾನದ ಗಟ್ಟಿ ಅಡಿಪಾಯದಿಂದಾಗಿ ಭಾರತದ ರಾಜಕೀಯ, ಆರ್ಥಿಕ ಹಾಗು ಸಾಮಾಜಿಕ ಪ್ರಗತಿಯನ್ನು ಇಡೀ ವಿಶ್ವ ಅಚ್ಚರಿಯಿಂದ ನೋಡುವಂತಾಗಿದೆ.

ಎಲ್ಲ ಗೊಡ್ಡು-ಸಂಪ್ರದಾಯಗಳನ್ನು ಮತ್ತು ಮೂಢನಂಬಿಕೆಗಳನ್ನು ಧಿಕ್ಕರಿಸಿ, ವೈಜ್ಞಾನಿಕ ಮಾರ್ಗದಲ್ಲಿ ನಡೆಯುವುದನ್ನು ಹೇಳಿಕೊಟ್ಟವರು ಅಂಬೇಡ್ಕರ್. ಈ "ಗುಣದಿಂದ ಮಾನವನನ್ನು ಗೌರವಿಸಬೇಕೆ ಹೊರತು ಅವನ ಹುಟ್ಟಿನಿಂದಲ್ಲ" ಎಂಬುದನ್ನು ಅವರು ಪ್ರತಿಪಾದಿಸಿದರು.

ಡಾ||ಅಂಬೇಡ್ಕರ್ ಅವರು ದೇಶವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಳುಗಿದ್ದಾಗ, ಭಾರತ ದೇಶದ ಸಮಸ್ತ ಜನಸಮುದಾಯಗಳ ಸ್ವಾತಂತ್ರ್ಯಕ್ಕಾಗಿ ಅವಿರತ ಹೋರಾಟ ನಡೆಸಿದವರಾಗಿದ್ದಾರೆ. ಇವರ ಬದುಕೇ ಒಂದು ಅದ್ಭುತ.

ಅಂಬೇಡ್ಕರ್ ಹೊಂದಿದ್ದ ಪ್ರತಿಭೆ, ಅಪಾರ ಪಾಂಡಿತ್ಯ, ಪ್ರಾಮಾಣಿಕತೆ, ಸ್ವಾಭಿಮಾನ ಹಾಗೂ ಸಚ್ಚಾರಿತ್ರ್ಯ, ಜೀವನ ಶೈಲಿಗಳಿಂದಾಗಿ ಅವರು ಜಗತ್ತಿನ ಒಬ್ಬ ಅಸಾಮಾನ್ಯ ವ್ಯಕ್ತಿ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಎಲ್ಲ ರೀತಿಯ ಶೋಷಣೆ ಮತ್ತು ಅಸಮಾನತೆಗಳ ವಿರುದ್ಧ ಚಂಡಮಾರುತವಾಗಿ ಬೀಸಿ, ಜ್ವಾಲಾಮುಖಿಯಾದರು. ಸಾವಿರಾರು

ವರ್ಷಗಳಿಂದ ಚಲನರಹಿತ ಭಾರತದ ಸಾಮಾಜಿಕ ವ್ಯವಸ್ಥೆಯ ದಿಕ್ಕನ್ನು ಬದಲಿಸಿ, ಅದು ಚಲನಶೀಲವಾಗುವಂತೆ ಮಾಡಿದರು.

ಸುಮಾರು 40 ವರ್ಷಗಳ ಕಾಲ ಸತತವಾಗಿ ಅಸಮಾನತೆಯ ವಿರುದ್ಧ ಹೋರಾಟವನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸಿ ಜಯಗಳಿಸುವಲ್ಲಿ ಅಂಬೇಡ್ಕರ್ ಯಶಸ್ವಿಯಾದರು. ಅವರು ಜಾತಿವಾದಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದರು. 'ಜಾತಿ ಅನಿಷ್ಟ ಪದ್ಧತಿಯಾಗಿ, ಈ ದೇಶದ ಏಳಿಗೆಗೆ ಅಡ್ಡಗೋಡೆಯಾಗಿ ಬೆಳೆದಿದೆ. ಇದನ್ನು ಪೂರ್ಣವಾಗಿ ಕಿತ್ತೊಗೆಯಬೇಕು' ಎಂಬುದು ಅಂಬೇಡ್ಕರ್ ಅವರ ಉದ್ದೇಶ ವಾಗಿತ್ತು. ಜಾತಿಪದ್ಧತಿಯ ಬೇರನ್ನು ನಾಶ ಪಡಿಸಿ, ನವಭಾರತ ಕಟ್ಟಲು ಅಂಬೇಡ್ಕರ್ ತಾವು ಬದುಕಿರುವವರೆಗೆ ಅವಿರತವಾಗಿ ಹೋರಾಡಿದರು.

ದೇಶ ಕಟ್ಟುವಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸಾಮಾಜಿಕ ಬದ್ಧತೆ ಇರಬೇಕು ಎಂದು ಪ್ರತಿಪಾದಿಸಿದ ಅಂಬೇಡ್ಕರ್ ವಿಶಾಲ ದೃಷ್ಟಿಕೋನದ, ಪ್ರಶ್ನಾತೀತ, ಅಪ್ಪಟ ದೇಶಪ್ರೇಮಿಯಾಗಿದ್ದರು. ಅವರು "ನಾನೋರ್ವ ಭಾರತೀಯ, ಹಾಗೂ ಭಾರತೀಯ ರಾಷ್ಟ್ರೀಯತೆಯ ಪ್ರತಿಪಾದಕ; ಭಾರತಕ್ಕೆ ಏಕಾತ್ಮ ಶಾಸನ ಬೇಕು ಎಂಬುದರಲ್ಲಿ ಬಲವಾದ ನಂಬಿಕೆ ಉಳ್ಳವನು" ಎಂದು ಸಾರಿದರು. ಅಂಬೇಡ್ಕರ್ ಎಲ್ಲಾ ಶೋಷಿತ ವರ್ಗಗಳನ್ನು ಜಾಗೃತಗೊಳಿಸಿ, ಅವರುಗಳನ್ನು ಸಮಾಜದ ಮುಖ್ಯವಾಹಿನಿಗೆ ಸೇರಿಸಿ, ಸಮ ಸಮಾಜವನ್ನು-ಜಾತ್ಯತೀತ ಅಖಂಡ ಭಾರತವನ್ನು ಕಟ್ಟಲು ತಮ್ಮ ಜೀವನವನ್ನು ಮುಡುಪಾಗಿಟ್ಟರು. ಅಂಬೇಡ್ಕರ್ ಬದುಕು ತೆರೆದ ಪುಸ್ತಕದಂತಿತ್ತು. ಅವರು ಎಂದೂ ದ್ವಂದ್ವ ನಿಲುವು ತಾಳುತ್ತಿರಲಿಲ್ಲ. ಪಾಂಡಿತ್ಯಪೂರ್ಣ ಚಿಂತನೆ ಮತ್ತು ಪ್ರಾಮಾಣಿಕ ಕಾರ್ಯಶೀಲತೆ ಇವೆರಡೂ ಅಂಬೇಡ್ಕರ್ ಬದುಕಿನಲ್ಲಿ ಹೆಣೆಯಲ್ಪಟ್ಟಿದ್ದವು.

ವಿದೇಶದಲ್ಲಿ ಶಿಕ್ಷಣ ಪಡೆದು ಸ್ವಾರ್ಥಿಯಾಗದೆ, ವೈಭೋಗದ ಜೀವನ ನಡೆಸದೆ, ಅಪರಿಮಿತ ಜ್ಞಾನ ಪಡೆದು ಭಾರತಕ್ಕೆ ವಾಪಸ್ಸು ಬಂದು, ಶೋಷಿತರ ಪರವಾಗಿ ನಿರಂತರ ಹೋರಾಟವನ್ನು ಹಮ್ಮಿಕೊಂಡರು. ಭಾರತದ ಸಂವಿಧಾನ ರಚಿಸುವ ಮುಖಾಂತರ, ಶತಮಾನಗಳಿಂದ ಶೋಷಣೆಗೆ ಒಳಪಟ್ಟಿದ್ದವರಿಗೆ ಕಾನೂನುಬದ್ಧವಾಗಿ ಹಕ್ಕುಗಳನ್ನು ಕೊಡಿಸುವಲ್ಲಿ ಸಫಲರಾದರು. ಸಮಾನತೆಯನ್ನು ಪ್ರತಿಪಾದಿಸಿದರೂ, ಶೋಷಿತರಿಗೆ ವಿಶೇಷ ಸವಲತ್ತುಗಳನ್ನು ನೀಡಿ, ಶೋಷಿತ ವರ್ಗವನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಬಲಿಷ್ಟಗೊಳಿಸುವುದೇ ಭಾರತ ಕಟ್ಟುವುದೇ ಡಾ॥ ಅಂಬೇಡ್ಕರ್ ಅವರ ಅಂತಿಮ ಗುರಿಯಾಗಿತ್ತು. ಅಂಬೇಡ್ಕರ್ ಈ ದೇಶದಲ್ಲಿ ಹುಟ್ಟದೇ ಇದ್ದಿದ್ದರೆ, ಜಾತೀಯತೆ ಮತ್ತು ಶೋಷಣೆಗಳ ರುದ್ರನರ್ತನ ಮುಂದುವರೆದು, ಶೋಷಿತರ ಬದುಕು ಮತ್ತಷ್ಟು ಬರ್ಬರವಾಗುತ್ತಿತ್ತು.

ಅವರು ಪ್ರತಿಪಾದಿಸಿದ 'ಪ್ರಜಾಸತ್ತಾತ್ಮಕ ಮಾರ್ಗ' ಯಾವುದೇ ಅಡ್ಡಮಾರ್ಗ ಅಥವಾ ಹಿಂಸಾಮಾರ್ಗ ಆಗಿರದೆ ಅದೊಂದು ನಾಗರೀಕಮಾರ್ಗ ಆಗಿದೆ. ಹೀಗಾಗಿ ಇಡೀ ವಿಶ್ವವೇ ಅದನ್ನು ಅನುಸರಿಸಲು ಮುಂದೆ ಬರುತ್ತಿದೆ. ಪ್ರಜಾಪ್ರಭುತ್ವ ಎಂದರೆ, ದೇಶದ ಎಲ್ಲ ಜನರ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಹಿಂಸಾತ್ಮಕ ಮಾರ್ಗದಲ್ಲಲ್ಲದೆ ಕಾನೂನಿನ ಮೂಲಕ ಬದಲಾವಣೆ ಮಾಡುವ ಕ್ರಮವಾಗಿದೆ.

"ನನ್ನ ವೈಯಕ್ತಿಕ ಹಿತ ಮತ್ತು ಸಮಾಜದ ಹಿತದ ನಡುವೆ ವಿರೋಧ ವುಂಟಾದರೆ, ನನ್ನ ವೈಯಕ್ತಿಕ ಹಿತ ಬಲಿ ಕೊಟ್ಟು ಸಮಾಜದ ಹಿತ ಕಾಪಾಡುತ್ತೇನೆ. ಸಮಾಜದ ಹಿತ ಮತ್ತು ರಾಷ್ಟ್ರದ ಹಿತದ ಸಂದರ್ಭದಲ್ಲಿ ಸಮಾಜದ ಹಿತ ಬಲಿ ಕೊಟ್ಟು ರಾಷ್ಟ್ರದ ಹಿತ ಕಾಪಾಡುತ್ತೇನೆ"ಎಂದು ಸಾರಿದ ಅಂಬೇಡ್ಕರ್, ಅದರಂತೆಯೇ ಬದುಕಿದರು. ಭಾರತಕ್ಕೆ ಸ್ವಾತಂತ್ರ್ಯ ಎಂದರೆ, ಇಲ್ಲಿನ ಎಲ್ಲರಿಗೆ ಧಾರ್ಮಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಸಮಾನತೆ ದೊರಕುವುದು ಎಂದು ಅವರು ಧೃಡವಾಗಿ ಹೇಳಿದರು. ಅಸ್ಪೃಶ್ಯತೆ ನಿವಾರಣೆಯಾಗದಿದ್ದರೆ, ದುರ್ಬಲ ವರ್ಗಗಳ ವಿಮೋಚನೆಯಾಗದಿದ್ದರೆ ದೇಶ ಸ್ವಾತಂತ್ರ್ಯ ಪಡೆದರೂ ಅರ್ಥಹೀನವಾಗುತ್ತದೆ ಎಂದ ಅವರು, ಶೋಷಿತರ ಏಳಿಗೆಯನ್ನು ಸ್ವಾತಂತ್ರ್ಯ ಹೋರಾಟ ಖಾತ್ರಿಪಡಿಸಬೇಕು ಎಂದು ಆಗ್ರಹಪಡಿಸಿದರು. ಅಲ್ಲದೆ. ಅವರು "ಈ ದೇಶದ ಅಧಿಕಾರದಿಂದ ವಂಚಿತರಾಗಿರುವ ಎಲ್ಲಾ ಶೋಷಿತರು ಇತರ ಎಲ್ಲರೊಂದಿಗೆ ಈ ದೇಶದ ಅಧಿಕಾರವನ್ನು ಸಮಾನವಾಗಿ ಹಂಚಿಕೊಂಡು ಆಳುವ ವರ್ಗವಾಗುವುದನ್ನು ಕಣ್ಣಾರೆ ಕಾಣಬೇಕೆಂಬುದೇ ನನ್ನ ಕೊನೆಯ ಆಸೆ" ಎಂಬ ಹಕ್ಕೊತ್ತಾಯವನ್ನು ಮಾಡಿದರು.

ಧರ್ಮದ ಬಗೆಗೂ ಅಂಬೇಡ್ಕರ್ ಖಚಿತ ನಿಲುವನ್ನು ಹೊಂದಿದ್ದರು. ಅವರ ಪ್ರಕಾರ, ಧರ್ಮದ ತಳಹದಿ ನೈತಿಕತೆಯಿಂದ ಕೂಡಿರಬೇಕು. ನೈತಿಕತೆ ಇಲ್ಲದಿದ್ದರೆ, ಧರ್ಮ ಕೇವಲ ಕ್ರೌರ್ಯ ಮತ್ತು ಅಜ್ಞಾನದ ಆಗರವಾಗುತ್ತದೆ. "ಧರ್ಮ ಎಂಬುದು ಬದುಕಿನ ಸತ್ಯ ಸಂಗತಿಗಳಿಗೆ ಸಂವಾದಿಯಾಗಿರಬೇಕೇ ಹೊರತು, ಸ್ವರ್ಗ-ನರಕ-ದೇವತೆ-ಆತ್ಮ ಮುಂತಾದವುಗಳ ಬಗ್ಗೆ ಹೇಳುವ ಕೃತಿಯಾಗಿರಬೇಕಿಲ್ಲ" ಎಂದರು.

ಅಂಬೇಡ್ಕರ್ ಕೋಟಿ ಕೋಟಿ ಶೋಷಿತರ ವೇದನೆಗೆ ಮತ್ತು ಆಶೋತ್ತರಗಳಿಗೆ ಧ್ವನಿಯಾದರು; ಶೋಷಿತರ ಜಡ ಜೀವನದಲ್ಲಿ ಚೈತನ್ಯ ತುಂಬಿದರು; ಅವರಿಗೆ ಊರುಗೋಲಾದರು. ಎಲ್ಲದಕ್ಕಿಂತ ಹೆಚ್ಚಾಗಿ ಮನುಕುಲದ ಸ್ವಾಭಿಮಾನದ, ಹೋರಾಟದ ಸಂಕೇತವಾದರು. ಅವರ ಜೀವನದಲ್ಲಿ ಆದರ್ಶ-ವಾಸ್ತವತೆಯ ಸಂಗಮವನ್ನು, ಚಿಂತನ-ಪಾಂಡಿತ್ಯ-ಕ್ರಿಯಾಶೀಲತೆಗಳ ಸಮ್ಮಿಲನವನ್ನು, ಧಾರ್ಮಿಕತೆ ಮತ್ತು ಕ್ರಾಂತಿ ಮನೋಧರ್ಮಗಳ ಸಮಾಗಮವನ್ನು ಕಾಣಬಹುದು. ಅವರ ಎಲ್ಲ ಯಶಸ್ಸಿಗೆ ಅವರ ಸ್ವಶಕ್ತಿ-ಪ್ರತಿಭೆಗಳೇ ಕಾರಣವಾಗಿದ್ದವು.

ಅಂಬೇಡ್ಕರ್, ಸ್ವಾತಂತ್ರ್ಯ-ಸಮಾನತೆ ಮತ್ತು ಸೋದರತ್ವಗಳ ಆಧಾರದ ಮೇಲೆ ನವಸಮಾಜ ನಿರ್ಮಾಣ ಆಗದಿದ್ದರೆ, ರಾಜಕೀಯ ಪ್ರಜಾಸತ್ತೆಯ ಜೊತೆಗೆ ಮತ್ತು ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ನೆಲೆಗೊಳ್ಳದಿದ್ದರೆ ಪ್ರಜಾಸತ್ತೆ ಎಂಬುದು ಕೇವಲ ಹೇಳಿಕೆಯಾಗುತ್ತದೆ ಎಂದು ಅವರು ಎಚ್ಚರಿಸಿದರು. ಅಸಮಾನತೆಯ ತಳಹದಿಯ ಮೇಲೆ ನಿಂತಿರುವ ಧರ್ಮವನ್ನು ಪ್ರಜಾಸತ್ತಾತ್ಮಕ ತತ್ವಗಳ ಆಧಾರದ ಮೇಲೆ ಅದನ್ನು ಪರಿಷ್ಕರಿಸದಿದ್ದರೆ, ಅದರ ಪತನ ಮಾತ್ರವಲ್ಲ, ಭಾರತದ ವಿನಾಶವೂ ಖಚಿತವೆಂದು ಅವರು ಸಾರಿ ಹೇಳಿದರು. ಪುರೋಹಿತ ಶಾಹಿಯ ಪ್ರಾಬಲ್ಯದಿಂದಾಗಿ ಜಾತಿ ಸಮಸ್ಯೆ ಉಲ್ಬಣಗೊಂಡಿತಲ್ಲದೆ, ಅನ್ಯಮತಗಳ ವಿಜೃಂಭಣೆ ಮತ್ತು ರಾಜಕೀಯ ದಾಸ್ಯ ಸಾಧ್ಯವಾಯಿತೆಂದು ಅವರು ಎತ್ತಿ ಹೇಳಿದರು. ಅಸ್ಪೃಶ್ಯರಿಗೆ ಮತ್ತು ಶೂದ್ರರಿಗೆ ಕೂಡ ಯೋಧರಾಗಿ ಯುದ್ಧದಲ್ಲಿ ದುಡಿಯುವ ಅವಕಾಶ ಇದ್ದಿದ್ದರೆ, ಪರರಾಜರ ಆಕ್ರಮಣ

ದುಸ್ಸಾಧ್ಯವಾಗುತ್ತಿತ್ತೆಂದು ಅವರು ಸ್ಪಷ್ಟೀಕರಿಸಿದ್ದಾರೆ. ಇಡೀ ಸಮಾಜದ ಮುಂದೆ ತಮ್ಮ ಅಭಿಮತವನ್ನು ಮಂಡಿಸುವ ಹೋರಾಟವನ್ನು ಅವರು ನಡೆಸಿದಾಗ, ಅವರಿಗೆ ಹಣದ ಬಲವಿರಲಿಲ್ಲ, ಬಲವಾದ ಪಕ್ಷವಿರಲಿಲ್ಲ. ಸತ್ಯವನ್ನು ಸಮಾಜಕ್ಕೆ ಮನಗಾಣಿಸಿ ಕೊಡಲು ಅವರು ತಮ್ಮ ವಿದ್ವತ್ ಮತ್ತು ಪ್ರತಿಭೆ-ಧೈರ್ಯಗಳನ್ನೇ ಬಳಸಿಕೊಂಡರು.

ಮಾನವರ ಶ್ರೇಯಸ್ಸಿಗೆ ಹಾಗೂ ಸಮಾಜದ ಭದ್ರತೆಗೆ ಧರ್ಮ ಅತ್ಯಗತ್ಯ ಎಂಬುದು ಅಂಬೇಡ್ಕರರ ಖಚಿತ ಅಭಿಪ್ರಾಯ. "ಧಾರ್ಮಿಕ ನಿರ್ಲಕ್ಷ್ಯ ನನ್ನ ಮನಸ್ಸಿಗೆ ನೋವುಂಟು ಮಾಡಿದೆ. ಕೆಲವರು ಹೇಳುವಂತೆ ಧರ್ಮ ಅಫೀಮಲ್ಲ. ನನ್ನಲ್ಲಿರುವ ಒಳ್ಳೆಯ ಗುಣಗಳಿಗೆ ಧಾರ್ಮಿಕ ಮನೋಭಾವವೇ ಕಾರಣ. ನನಗೆ ಧರ್ಮ ಬೇಕು. ಆದರೆ ಧರ್ಮದ ಹೆಸರಿನಲ್ಲಿ ನಡೆಯುವ ವಂಚನೆ-ದ್ರೋಹಗಳು ಬೇಡ. ಧರ್ಮ ಮನುಷ್ಯರಿಗೆ ಭರವಸೆ ನೀಡಿ, ಕ್ರೀಯಾಶೀಲರನ್ನಾಗಿ ಮಾಡುತ್ತದೆ" ಎಂಬ ನಿಲುವು ಅವರದಾಗಿತ್ತು.

ಬೌದ್ಧ ಧರ್ಮ ಸ್ವೀಕಾರದಿಂದ ಅಸ್ಪೃಶ್ಯರು ವಿಶ್ವಭ್ರಾತೃತ್ವದ ಕಡೆಗೆ ಹೆಜ್ಜೆ ಹಾಕುತ್ತಾರೆ ಎಂದ ಅವರು, ಆ ದಿಕ್ಕಿನಲ್ಲಿ ಮೊದಲು ತಾವೇ ಹೆಜ್ಜೆ ಇಟ್ಟರು. ಅತೃಪ್ತಿ-ನಿರಾಶೆಯಿಂದ ಅಥವಾ ಹಿಂದೂ ಮತದ ಮೇಲಣ ದ್ವೇಷದಿಂದ ಅವರು ಬೌದ್ಧ-ಧರ್ಮ ಸ್ವೀಕರಿಸಲಿಲ್ಲ.

ಅಂಬೇಡ್ಕರ್ ಕೇವಲ ಸಮಾಜ ಸುಧಾರಕರಲ್ಲ; ಕೇವಲ ಶಿಕ್ಷಣ ಪ್ರಸಾರಕರಲ್ಲ; ಕೇವಲ ರಾಜಕೀಯ ಮುತ್ಸದ್ದಿ ಅಲ್ಲ; ಅವರು ಈ ಎಲ್ಲವೂ ಆಗಿದ್ದರು; ಇಷ್ಟೇ ಅಲ್ಲದೆ, ಅವರು ಬಹುದೊಡ್ಡ ದಾರ್ಶನಿಕರಾಗಿದ್ದರು.

ಎತ್ತಿನ ಗಾಡಿ ಹತ್ತುವ ಹಕ್ಕು ನಿರಾಕರಿಸಲ್ಪಟ್ಟ, ಹೋಟೆಲ್ ಪ್ರವೇಶಕ್ಕೆ ನಿಷೇಧಿಸಲ್ಪಟ್ಟ, ಅಸ್ಪೃಶ್ಯ ವ್ಯಕ್ತಿಯೊಬ್ಬ ಭಾರತದ ಭವಿಷ್ಯವನ್ನು ರೂಪಿಸುವಂಥ ಮಹಾಪಾತ್ರ ನಿರ್ವಹಿಸಲು ಆಯ್ಕೆಯಾಗಿದ್ದು ಒಂದು ಮಹೋನ್ನತ ಘಟನೆಯಾಗಿದೆ. ಬುದ್ಧ-ಬಸವರ ನಂತರ, ಭರತ ಖಂಡದಲ್ಲಿ ಬಿರುಗಾಳಿಯಾಗಿ ಬೀಸಿ, ಸಿಡಿಲಾಗಿ ಸಿಡಿದು, ಎಲ್ಲರಿಗೆ ಸಮಾನ ರಾಜಕೀಯ ಹಕ್ಕು ನೀಡಿ, ಶೋಷಿತರಿಗೆ ವಿಶೇಷ ಅವಕಾಶಗಳನ್ನು ಒದಗಿಸಿ, ಭಾರತಕ್ಕೊಂದು ಹಿರಿಮೆಯನ್ನು ತಂದು ಕೊಟ್ಟ ಚೇತನ, ಅಂಬೇಡ್ಕರ್ ಅವರಾಗಿದ್ದಾರೆ.

ಈಗ ನಮ್ಮ ಮುಂದಿರುವುದು ಈ ಮಹಾ ಪುರುಷನ ದಿವ್ಯ ಚೇತನ. ಅವರ ನುಡಿ ನಮ್ಮ ಉಸಿರಾಗಿ, ಅವರ ನಡೆ ನಮ್ಮ ಬದುಕಾಗಿ, ಅವರ ಭೋಧನೆ ನಮಗೆ ದಾರಿ ದೀಪವಾಗಬೇಕು.

ಅಹಿಂಸಾ ತತ್ವ: ಬುದ್ಧ ಮತ್ತು ಗಾಂಧೀ ದೃಷ್ಟಿಯಲ್ಲಿ

ಕೃಪ ಎ.

ದಯವಿಲ್ಲದ ಧರ್ಮವಾವುದಯ್ಯಾ?

ದಯವೇ ಬೇಕು ಸಕಲ ಪ್ರಾಣಿಗಳಲ್ಲಿಯೂ

ದಯವೇ ಧರ್ಮದ ಮೂಲವಯ್ಯಾ

ಇಂದ್ರಿಯಾನುಭವವಿರುವ ಎಲ್ಲಾ ಜೀವಿಗಳು ಹಿಂಸೆಯಿಂದ ಮುಕ್ತವಾಗ ಬೇಕೆಂಬ ಮಹದೋದ್ದೇಶವನ್ನು ಅಹಿಂಸಾತತ್ವ ಸಾರುತ್ತದೆ. ದಯೆ, ಅನುಕಂಪ, ಕರುಣೆ, ಅನುಗ್ರಹವು ವಿವೇಚನೆಯುಳ್ಳ ಎಲ್ಲಾ ಜೀವಿಗಳಲ್ಲೂ ಇರಬೇಕಾದ ಮೂಲ ಅಂಶಗಳಾಗಿವೆ. ಧರ್ಮ ಆಚರಿಸುವ ಭೂಮಿಯಲ್ಲಿ ಅಹಿಂಸಾತತ್ವ ತಾನೇ ರೂಢಿಯಲ್ಲಿ ಬರುತ್ತದೆ. ಹಿಂಸೆ ಹಿಂದೆ ಸರಿದು, ಅಹಿಂಸೆ ನೆಲೆಸುತ್ತದೆ.

ಜಗತ್ತಿನ ದುಃಖಕ್ಕೆ ಕಾರಣವನ್ನು ಕಂಡು ಹಿಡಿಯಲು, ಹೊಸ ಮಾರ್ಗ ಕಂಡುಕೊಂಡವನು ಸಿದ್ಧಾರ್ಥ ಗೌತಮ. ಕ್ಲೇಶಗಳಿಂದ ತುಂಬಿದ ಮಾನವ ಸಮುದಾಯದ ಬಿಡುಗಡೆಯ ಹಾದಿಯನ್ನು ತೋರುವ ಜ್ಞಾನಿಯಾಗಿದ್ದ ಬುದ್ಧ.

ಅಹಿಂಸಾ ತತ್ವಕ್ಕೆ ತಳಹದಿ ಸಿದ್ಧಾರ್ಥನಿಗೆ ಬಾಲ್ಯದಲ್ಲೇ ದೊರಕಿತ್ತು. ಸಿದ್ಧಾರ್ಥನ ತಂದೆ ಶುದ್ಧೋದನ ಒಮ್ಮೆ 'ಉಳುಮೆ ಉತ್ಸವ' ಏರ್ಪಡಿಸಿದ್ದರು. ಭೂಮಿ ಉಳುವಾಗ ಬಹಳ ಚಿಕ್ಕ ಹುಳು ಸಾಯುವುದನ್ನು ಗಮನಿಸಿದ್ದ ಆತನು ನೊಂದುಕೊಂಡ. ಅಂದು ಉಳುವವರಿಗೆ ಸಾಕಷ್ಟು ಅರಿವೆ-ಹಚ್ಚಡಗಳಿರಲಿಲ್ಲ. ಬಿಸಿಲಿನಿಂದ ತಪ್ಪಿಸಿಕೊಳ್ಳಲು ಅವರು ಹರಿದ ತೊಗಟೆ ಚರ್ಮ ಹೊದಿಕೆ ಹೊದೆದಿದ್ದರು. ಕೆಲಸಗಾರರ ಕಷ್ಟದಿಂದ ಮಾಲಿಕರು ಬದುಕಬೇಕೆ? ಯಾಕೆ ಅವರಿಗೆ ಕನಿಷ್ಟ ಸೌಲಭ್ಯಗಳು ಇಲ್ಲ? ಎಂದು ಆತ ಚಿಂತಿಸಿದ.

ಸಿದ್ಧಾರ್ಥನಿಗೆ ಬೇಟೆಯೂ ಇಷ್ಟವಿರಲಿಲ್ಲ. ಕ್ಷತ್ರಿಯರು ಬೇಟೆಗೆ ಹೋಗಬೇಕು ಎಂದು ತಾಯಿ ಹೇಳಿದರೂ, ಬಾಲಕ ಸಿದ್ಧಾರ್ಥನನ್ನು ಪ್ರಶ್ನೆಗಳು ಕಾಡಿದ್ದವು. ಯಾಕೆ ನಾವು ಪ್ರಾಣಿಯನ್ನು ಕೊಲ್ಲಬೇಕು? ಯಾಕೆ ನಾವೆಲ್ಲ ಶಾಂತಿಯಿಂದ ಇರುವುದಿಲ್ಲ? ಯಾವ ಹೋರಾಟ-ಕದನವಿಲ್ಲದೆ ದೇಶವನ್ನು ರಕ್ಷಿಸುವುದಾಗದೆ? ಹೀಗೆ ಬಾಲ್ಯದಲ್ಲಿ ಬುದ್ಧನಲ್ಲಿ ಮೂಡಿದ ಅಹಿಂಸಾ ಮನೋಭಾವ-ಚಿಂತನೆ ಹಲವು ಸ್ವರೂಪಗಳಲ್ಲಿ ಸ್ಮರಣೀಯವಾಗಿ ಅನುಸರಣೀಯವಾಗಿದೆ.

ಬುದ್ಧ ಯುದ್ಧವನ್ನು ವಿರೋಧಿಸಿದ. 'ಶತೃತ್ವವನ್ನು ಶತೃತ್ವದಿಂದ ಜಯಿಸಲಾಗದು.

ಪ್ರೀತಿಯಿಂದ ಮಾತ್ರ ಗೆಲ್ಲಲು ಸಾಧ್ಯ' ಎಂದು ಬುದ್ಧ ತಿಳಿಸಿದ. ಶಾಂತಿ-ಅಹಿಂಸಾ ಮನೋಧರ್ಮದ ಗಂಭೀರ ಚಿಂತನೆಯನ್ನು ಬಾಲ್ಯದಲ್ಲೇ ಮೈಗೂಡಿಸಿಕೊಂಡು, ಆ ಮೂಲಕ ವಿಶ್ವಮಾನ್ಯ ತತ್ವವನ್ನು ಬೆಳೆಸಿದ. ಬುದ್ಧನ ತತ್ವವನ್ನು ಈ ಸಾಲುಗಳ ಮೂಲಕ ಉದಾಹರಿಸಬಹುದಾಗಿದೆ.

"ಮಿತ್ರತ್ವದಿಂದ ಈ ವಿಶ್ವ ತುಂಬಿರಲಿ;
ಸಣ್ಣ ಪುಟ್ಟ ಜೀವಿಗಳು ಹಾಗೂ ಬಲಿಷ್ಠ ಪ್ರಾಣಿಗಳು
ತಮಗೆ ಹಾನಿಯನ್ನುಂಟು ಮಾಡುವಂತಹ
ಯಾವುದೇ ಸಂಗತಿಯನ್ನು ಅವು ಕಾಣದಿರಲಿ
ಆಗ ಅವು ಶಾಂತಿಯ ಪಥವನ್ನು ಅರಿತುಕೊಳ್ಳುತ್ತವೆ"

ಎಲ್ಲಾ ಅತಿರೇಕಗಳನ್ನು ತ್ಯಜಿಸಿದ ಬುದ್ಧನು ಮಧ್ಯಮ ಮಾರ್ಗವನ್ನು ಕಂಡುಕೊಂಡು, ನೋವಿನ ಉದಾತ್ತ ಸತ್ಯಗಳನ್ನು ಭಿಕ್ಕುಗಳಿಗೆ ಉಪದೇಶಿಸಿದ್ದ. ನೋವು ಹಿಂಸೆಯ ಮೂಲ. ಹಿಂಸೆಯ ನಾಲ್ಕು ಮಾರ್ಗಗಳನ್ನು ಬೌದ್ಧ ಧರ್ಮ ಹೀಗೆ ವಿವರಿಸುತ್ತದೆ.

1. ಕಠಿಣ ತಪಶ್ಚರ್ಯ (ಸ್ವಹಿಂಸೆ)
2. ಬೇರೆಯವರನ್ನು ಹಿಂಸಿಸುವುದು (ಕಟುಕ)
3. ಸ್ವ ದಂಡನೆ-ಪರ ದಂಡನೆ (ಸಂತ-ರಾಜ)
4. ಬೇರೊಬ್ಬರನ್ನೂ ಹಿಂಸಿಸದೆ ತನ್ನನ್ನೂ ಹಿಂಸಿಸಿಕೊಳ್ಳದಿರುವುದು.

ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ಮೀರುವ ಮಾರ್ಗವನ್ನು ಬೌದ್ಧಧರ್ಮ ಸಾರುತ್ತದೆ. ಎಲ್ಲ ಅತಿರೇಕಗಳನ್ನು ತ್ಯಜಿಸುವ ಜ್ಞಾನಮಾರ್ಗವನ್ನು ಬೌದ್ಧ ಧರ್ಮ ಸಾರಿತು. ದಯೆ ಮತ್ತು ಕರುಣೆಯ ಶಕ್ತಿ ನಮ್ಮನ್ನು ಮಾನಸಿಕವಾಗಿ ಬಿಡುಗಡೆಗೊಳಿಸುತ್ತದೆ ಎನ್ನುವುದಕ್ಕೆ ಅಂಗುಲಿಮಾಲನ ಉದಾಹರಣೆಯನ್ನು ನೆನಪಿಸಿ ಕೊಳ್ಳಬಹುದು.

ಕೆಲವೊಂದು ಪ್ರಾಣಿಗಳು ಬಲದಿಂದ ಶರಣಾಗುತ್ತದೆ
ಕೆಲವರು ಏಟುಗಳಿಗೆ ಬಗ್ಗುತ್ತಾರೆ
ನಾನು ಅವನ ಮೃದು ಮಾತುಗಳಿಗೆ ಶರಣಾದೆ
ಅವನು ಯಾವುದೇ ಕತ್ತಿ, ಬಲ ಬಳಸಲಿಲ್ಲ

ಎಂದು ತನ್ನ ಶರಣಾಗತಿ ಬಗ್ಗೆ ಅಂಗುಲಿಮಾಲ ಹೇಳಿದ. ದ್ವೇಷದಿಂದ, ಹಿಂಸೆಯಿಂದ ಜಗತ್ತಿನಲ್ಲಿ ಯಾವುದನ್ನೂ ಗೆಲ್ಲಲು ಸಾಧ್ಯವಿಲ್ಲ ಎಂಬ ಪರಮ ಸತ್ಯವನ್ನು ಬೌದ್ಧ ಧರ್ಮ ಪಸರಿಸಿತು.

'ಪ್ರಾಣಿಹಿಂಸೆ ಮಹಾಪಾಪ' ಎಂಬುದನ್ನು ಬೌದ್ಧ ಧರ್ಮಾವಲಂಬಿಗಳು ನಂಬಿದ್ದರು. ಶ್ರೀಲಂಕಾದ ಕೀರ್ತಿ ಶ್ರೀ ನಿಸ್ಸಂಕಮಲ್ಲರ ಶಾಸನವೊಂದು ತಿಳಿಸುವಂತೆ ಅಲ್ಲಿನ ಏಳು ನಗರಗಳಲ್ಲಿ ಪ್ರಾಣಿವಧೆಯನ್ನು ನಿಷೇದಿಸಲಾಗಿತ್ತು; ಪ್ರಾಣಿಬಲಿಯನ್ನು ಬೌದ್ಧಧರ್ಮ ಖಂಡಿಸಿತು.

ಬುದ್ಧನ ಅಹಿಂಸಾ ತತ್ವವನ್ನು ಡಾ. ಬಾಬಾಸಾಹೇಬ ಅಂಬೇಡ್ಕರರು ಸಂಪೂರ್ಣವಾಗಿ ಒಪ್ಪಿಕೊಂಡರು. ಅವರು ಅಹಿಂಸಾ ತತ್ವವನ್ನು ವಿವರಿಸುತ್ತಾ "Love all so that you

nay not wish to kill any one" ಎನ್ನುತ್ತಾರೆ.

'ಯುದ್ಧ ಜೀವನದಲ್ಲಿ ಅನಿವಾರ್ಯ' ಎಂಬುದನ್ನು ವಿರೋಧಿಸುವ ಬುದ್ಧನು, ಕೊಲೆ, ಯುದ್ಧ, ಶಿಕ್ಷೆ ಇತ್ಯಾದಿ ಯಾವುದನ್ನೂ ಒಪ್ಪಲಿಲ್ಲ.

ಕಾಶ್ಮೀರದ ಚರಿತ್ರಕಾರರಾದ ಕಲ್ಹಣನ ಪ್ರಕಾರ, ಅಶೋಕ ಮೊದಲಿಗೆ ಶಿವಭಕ್ತನಾಗಿದ್ದ. ಳಿಂಗ ಯುದ್ಧಾನಂತರ ಈತನ ಮನಸ್ಸು ಬೌದ್ಧ ಮತದತ್ತ ಹರಿಯಿತು. ಯುದ್ಧ-ಹಿಂಸೆ, ಾವು-ನೋವಿನಿಂದ ಬಿಡುಗಡೆಯ ಬಯಸಿ, ಅಶೋಕನು ಬುದ್ಧನ ಉಪಾಸಕನಾದ. ೌದ್ಧ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ.

ಪಂಚಶೀಲದಲ್ಲಿ ಐದು ತತ್ವಗಳಿವೆ. ಕೊಲ್ಲದಿರುವುದು ಎಂಬುದು ಮೊದಲನೆಯದು, ಂಸೆಗೆ ಪ್ರತಿಯಾಗಿ ಅಹಿಂಸಾ ತತ್ವ ವಿಶ್ವವಿಖ್ಯಾತವಾಯಿತು. ಅಷ್ಟಾಂಗ ಮಾರ್ಗಗಳ ಮೂಲಕ ಬೌದ್ಧ ಧರ್ಮ ಪ್ರಖ್ಯಾತಿ ಪಡೆಯಿತು. ಶಾರೀರಿಕ ಮತ್ತು ಮಾನಸಿಕ ನೋವು ೇಹದ ಪ್ರಕೃತಿಗೆ ಸಾಮಾನ್ಯವಾದುದು. ಅಂತೆಯೇ ಜೀವಿಯಲ್ಲಿರುವ ತೃಷ್ಣೆಯೇ ಹಿಂಸೆಗೆ ಾರಣವಾಗುತ್ತದೆ. ಬುದ್ಧನು ಬೋಧಿಸಿದ್ದು ನಾಲ್ಕು ಆರ್ಯ ಸತ್ಯಗಳನ್ನು. ನೋವು-ನರಳಾಟ- ಂಕಟದಿಂದ ಬಿಡುಗಡೆಯ ತತ್ವ. ಸಾಂಪ್ರದಾಯಿಕ ಆಚಾರ ಕರ್ಮಗಳನ್ನು ಬಹಿಷ್ಕರಿಸಿ ಿಶೇಷತಃ ಪ್ರಾಣಿ ಬಲಿಯನ್ನು ಅಲ್ಲಗಳೆದು, ದೇವರ ಅಸ್ತಿತ್ವವನ್ನೇ ಪ್ರಶ್ನೆ ಮಾಡುವ ಮೂಲಕ, ಹೊಸ ತತ್ವ ಉದಯವಾಯಿತು.

ಪ್ರಾಣಿವಧೆಗೆ ಬೌದ್ಧಧರ್ಮದಲ್ಲಿ ವಿರೋಧವಿತ್ತು. ಅಂಬೇಡ್ಕರ್‌ರವರು 'ಶಾಂತಿ ಮಂತ್ರದ ತಳಹದಿಯ ಮೇಲೆ ಅಹಿಂಸಾ ತತ್ವವು ಬೆಳೆದಿದೆ. ಬದುಕಿನಲ್ಲಿ 'ಅಹಿಂಸೆ' ಎಂಬುದು ನಿಯಮವಾಗಿರಬೇಕು; ಅದೇ ಬದುಕಿನ ಮಾರ್ಗವಾಗಬೇಕು. ಭಾರತೀಯ ಸಮಾಜ ವ್ಯವಸ್ಥೆಯ ಸಂದರ್ಭದಲ್ಲಿ 'ಅಹಿಂಸಾ ಮಾರ್ಗ' ಬಹು ಮುಖ್ಯ; ಎಲ್ಲರ ಬಿಡುಗಡೆಗೆ ಇದುವೆ ಉತ್ತಮ ಮಾರ್ಗ. ಸೃಷ್ಟಿಯ ಎಲ್ಲಾ ಜೀವಿಗಳಲ್ಲಿ ಪ್ರೇಮ ಮತ್ತು ಕರುಣೆಯನ್ನು ಬೆಳೆಸಿಕೊಳ್ಳಬೇಕು' ಎಂದು ತಿಳಿಸಿದರು.

ಗಾಂಧೀಜಿ ಕೂಡ ಅಹಿಂಸಾ ತತ್ವವನ್ನು ಪ್ರತಿಪಾದಿಸಿದರು. 'ಅಹಿಂಸೆ ಎಂಬುದು ಸಾಧು-ಸಂತರಿಗೆ ಮಾತ್ರ ಸಂಬಂಧಿಸಿದ್ದಲ್ಲ; ಇದು ಎಲ್ಲಾ ಮನುಷ್ಯರು ಅನುಸರಿಸಬೇಕಾದ ನಿಯಮ' ಎಂದು ಸಾರಿದ್ದರು. ಪ್ರಾಣಿಗಳ ಬದುಕು ಕೇವಲ ಶಾರೀರಿಕ ಬಲದ ಮೇಲೆ ನಿಂತಿದೆ. ಆದರೆ ಮಾನವರ ಆತ್ಮವು ಹಿರಿಮೆಯಿಂದ ಕೂಡಿದೆ. ಶಸ್ತ್ರಪ್ರಯೋಗವು ಮುಕ್ತಿಮಾರ್ಗ ಅಲ್ಲ' ಎಂಬ ಪರಮ ಸತ್ಯವನ್ನು ಒತ್ತಿ ಹೇಳಿದವರು ಗಾಂಧಿ. ಮಾನವ ಕುಲವನ್ನು ಸಂಕಟದಿಂದ ಬಿಡುಗಡೆಗೊಳಿಸುವ ಮಾರ್ಗವೇ ಅಹಿಂಸಾ ಮಾರ್ಗ. ಅದು ಕೇವಲ ಒಬ್ಬ ವ್ಯಕ್ತಿಗೆ ಆದರ್ಶವಲ್ಲ; ಅದು ಇಡೀ ಸಮಾಜಕ್ಕೆ ಆದರ್ಶ. ಅದು ಸಮಾಜದಲ್ಲಿ ಸದ್ಗುಣವನ್ನು ಸ್ಥಾಪಿಸುವ ಶಕ್ತಿ' ಎಂದು ಗಾಂಧೀ ಬಲವಾಗಿ ನಂಬಿದ್ದರು.

ಬುದ್ಧ, ಗಾಂಧೀ, ಅಂಬೇಡ್ಕರ್ ಮೊದಲಾದ ಮಹಾನುಭಾವರು ತಿಳಿಸಿದಂತೆ ಅಹಿಂಸೆಯ ಮಾರ್ಗ ಸಮಾಜದ ಆರೋಗ್ಯಕರ ಬೆಳವಣಿಗೆಗೆ ಪೂರಕ ಎಂಬುದು ನಿರ್ವಿವಾದ.

ಗಾಂಧಿ ಮತ್ತು ಅಂಬೇಡ್ಕರ್ ದೃಷ್ಟಿಯಲ್ಲಿ ಶಿಕ್ಷಣ

ಮಧು ಎಂ. ಎಸ್.

"ಆಹಾರ ನಿದ್ರಾ ಭಯ ಮೈಥುನಂ ಚ
ಸಾಮ್ಯಮೇತತ್ ಪಶುಭಿಃ ನರಾಣಾಂ।
ಧರ್ಮೋಹಿ ತೇಷಾಂ ಅಧಿಕೋ ವಿಶೇಷಃ
ಧರ್ಮೇಣ ಹೀನಾಃ ಪಶುಭಿಃ ಸಮಾನಃ॥"

ಆಹಾರ, ನಿದ್ರೆ, ಭಯ, ಕಾಮಪ್ರವೃತ್ತಿಗಳು ಪ್ರಾಣಿಗಳಿಗೂ ಮಾನವರಿಗೂ ಸಮಾನ. ಆದರೆ, ಮಾನವರಲ್ಲಿ ಧರ್ಮ ಎಂಬುದು ಪ್ರಧಾನ ಪಾತ್ರ ವಹಿಸುತ್ತದೆ. ಈ ಧರ್ಮಪ್ರಜ್ಞೆಯ ಫಲವಾಗಿ ಮಾನವರಲ್ಲಿ ವಿವೇಚನೆ, ಸರಿ-ತಪ್ಪುಗಳ ತಿಳುವಳಿಕೆ ಉಂಟಾಗುತ್ತದೆ. ಈ ಧರ್ಮಪ್ರಜ್ಞೆಗೆ ಪೋಷಕ ಸಾಧನವೇ ಶಿಕ್ಷಣ,

ಶಿಕ್ಷಣದ ಕುರಿತು ಸಂಸ್ಕೃತ ಕವಿ ಭರ್ತೃಹರಿ ಈ ಕೆಳಗಿನಂತೆ ಹೇಳುತ್ತಾನೆ.

"ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ
ಪಾತ್ರತ್ವಾತ್ ಧನಮಾಪ್ನೋತಿ ಧನಾತ್ ಧರ್ಮಂ ತತಸ್ಸುಖಂ॥"

ವಿದ್ಯೆಯಿಂದ ವಿನಯವೂ, ವಿನಯದಿಂದ ವ್ಯಕ್ತಿತ್ವವೂ, ಉತ್ತಮ ವ್ಯಕ್ತಿತ್ವದಿಂದ ಧರ್ಮಶ್ರದ್ದೆ ಮತ್ತು ಸೌಖ್ಯವು ಮಾನವರಿಗೆ ಉಂಟಾಗುತ್ತದೆ ಎನ್ನುತ್ತಾನೆ.

ಪ್ರತಿಯೊಬ್ಬ ಪ್ರಜೆಗೂ ಕೂಡ ಶಿಕ್ಷಣವು ಪ್ರಮುಖವಾಗಿ ಜೀವನದ ಬಹು ಮುಖ್ಯ ಅಂಗವೇ ಆಗಿದೆ. ವೇದಗಳ ಕಾಲದಿಂದ ಹಿಡಿದು ಪ್ರಸ್ತುತ ಆಧುನಿಕ ಕಾಲದವರೆಗೂ ಶಿಕ್ಷಣವೆಂಬುದು ಮನುಷ್ಯರ ಜೀವನದಲ್ಲಿ ಮಹತ್ವವನ್ನು ಪಡೆದುಕೊಂಡಿದೆ. ಒಟ್ಟಾರೆಯಾಗಿ "ಮಾನವನ ಪುರೋಭಿವೃದ್ಧಿಗೆ ಸಹಾಯಕ ವಾಗುವ ಸಾಧನವೇ ಶಿಕ್ಷಣ". ಶಿಕ್ಷಣದ ಬಗ್ಗೆ ಈ ಕೆಳಗಿನ ವ್ಯಾಖ್ಯಾನಗಳಿವೆ.

ಋಗ್ವೇದ : "ವ್ಯಕ್ತಿಯನ್ನು ಸ್ವಾವಲಂಬಿಯನ್ನಾಗಿಯೂ, ನಿಸ್ವಾರ್ಥಿಯನ್ನಾಗಿಯೂ ಮಾಡುವುದು ಶಿಕ್ಷಣ".

ಯಾಜ್ಞವಲ್ಕ : "ಶಿಕ್ಷಣವು ಸಚಾರಿತ್ರ್ಯಾಭಿವೃದ್ಧಿಯ, ವ್ಯಕ್ತಿಯ ಉಪಯುಕ್ತತೆಯ ಸಾಧನ".

ಮಹಾತ್ಮ ಗಾಂಧಿ : "ಸತ್ಯ, ಸೌಂದರ್ಯ, ಸಭ್ಯತೆಗಳ ಪ್ರಜ್ಞೆಯೇ ಶಿಕ್ಷಣ".

ಡಾ. ರಾಧಾಕೃಷ್ಣನ್ : "ಮಕ್ಕಳು ಮಾನವರಾಗಿ–ನಾಗರಿಕರಾಗಿ ಬಾಳಿ,

ಮತ್ತೊಬ್ಬರೊಡನೆ ಮಮತೆ–ಮೈತ್ರಿ–ಗೌರವ ಘನತೆಗಳಿಂದ ನಡೆದುಕೊಳ್ಳುವಂತೆ ಮಾಡುವುದೇ ಶಿಕ್ಷಣ".

ಅರಿಸ್ಟಾಟಲ್ : "ಸಧೃಢ ದೇಹದಲ್ಲಿ ಸಬಲ ಮನಸ್ಸನ್ನುಂಟು ಮಾಡುವುದೇ ಶಿಕ್ಷಣ".

ಗಾಂಧೀಜಿ ಅವರ ದೃಷ್ಟಿಯಲ್ಲಿ ಶಿಕ್ಷಣ

ಮಹಾತ್ಮ, ಬಾಪು, ಅರೆಬೆತ್ತಲೆ ಫಕೀರ ಎಂದೇ ಖ್ಯಾತರಾದ ಮಹಾತ್ಮ ಗಾಂಧೀಜಿ ವಿದ್ಯಾಭ್ಯಾಸಕ್ಕಾಗಿ ಮೆಟ್ರಿಕ್ ನಂತರ 1887ರಲ್ಲಿ ಇಂಗ್ಲೆಂಡಿಗೆ ತೆರಳಿ, ವಿದ್ಯಾಭ್ಯಾಸ ಮುಗಿಸಿ, 1891ರಲ್ಲಿ ಭಾರತಕ್ಕೆ ಹಿಂದಿರುಗಿದರು. ಕೆಲವು ಕಾಲ ವಕೀಲರಾಗಿದ್ದ ಅವರು ದಕ್ಷಿಣ ಆಫ್ರಿಕಾಕ್ಕೆ ಹೋದಾಗ, ಭಾರತೀಯರ ಹಿತ ಸಾಧನೆ, ಮಾನವೀಯ ಹಕ್ಕುಗಳು ಹಾಗೂ ಆತ್ಮ ಗೌರವಗಳ ಪಾಲನೆಗಾಗಿ 'ಸತ್ಯಾಗ್ರಹ' ಮಾರ್ಗದಲ್ಲಿ ಹೋರಾಡಿ ಜಯಶೀಲರಾದರು. ಅಲ್ಲಿದ್ದಾಗ "ಟಾಲ್‌ಸ್ಟಾಯ್ ಫಾರಂ" ಎಂಬುದನ್ನು ಸ್ಥಾಪಿಸಿ, ಮಕ್ಕಳಿಗೆ ವ್ಯವಸಾಯ, ಚರ್ಮದ ಕೆಲಸ ಮುಂತಾದವುಗಳ ಮೂಲಕ ಸ್ವಾವಲಂಬನಕ್ಕೆ ಸಹಾಯಕವಾದ ಮೂಲ ಶಿಕ್ಷಣವನ್ನು ಪ್ರೋತ್ಸಾಹಿಸಿದರು.

ಆದರ್ಶ ಶಿಕ್ಷಣ ತತ್ವಗಳ ಮೂಲಕ, ಭಾರತೀಯರನ್ನಲ್ಲದೇ ಸಮಸ್ತ ಮಾನವ ಕುಲವನ್ನು ಅಭಿವೃದ್ಧಿಪಡಿಸಲು ಯತ್ನಿಸಿದರು. ಗಾಂಧೀಜಿ ಶಿಕ್ಷಣ ಪ್ರಪಂಚಕ್ಕೆ ನೀಡಿದ ಕೊಡುಗೆ ಎಂದರೆ, ಅವರ ಸಮಾಜ ಸುಧಾರಣ ಕಾರ್ಯ. ಇದು ಅವರು ನಡೆಸಿದ ರಾಜಕೀಯ ಚಟುವಟಿಕೆಗಳಿಗಿಂತ ಯಾವ ವಿಧದಲ್ಲೂ ಕಡಿಮೆಯಲ್ಲ. ಅವರ ಜೀವನ ತತ್ವದ ಪಡಿಯಚ್ಚು ಅವರ ಶಿಕ್ಷಣ ತತ್ವ. ಗಾಂಧೀಜಿ 'ನಮ್ಮ ಶಿಕ್ಷಣ ಪದ್ಧತಿ ಭಾರತೀಯ ಮೂಲಸೆಲೆಯ ನೆಲಗಟ್ಟನ್ನು ಹೊಂದಿಲ್ಲ; ಪಠ್ಯಕ್ರಮದಲ್ಲಿ ಆಂಗ್ಲ ಭಾಷೆಗೆ ಪ್ರಾಮುಖ್ಯತೆ ಇದೆ. ಅದು ಯಾಂತ್ರಿಕ–ಪುಸ್ತಕೀಯವಾಗಿದೆ; ಭಾರತೀಯರ ಸರ್ವತೋ ಮುಖ ವಿಕಾಸಕ್ಕೆ ಅದು ಪೋಷಕವಾಗಿಲ್ಲ. ಸಮರಸ, ಕರ, ಶಿರ, ಮನ, ಆರೋಗ್ಯ ಗುಣಗಳಿಗೆ ಅಲ್ಲಿ ಅವಕಾಶವಿಲ್ಲ. ಮಾನವರ ಹೃದಯವಂತಿಕೆ ಈ ಶಿಕ್ಷಣದಲ್ಲಿ ಅಪವ್ಯಯವಾಗುತ್ತಿದೆ. ಈ ಶಿಕ್ಷಣ ದುಬಾರಿ, ಅದು ಮಕ್ಕಳ ಅವಶ್ಯಕತೆ ಪೂರೈಸುವುದಿಲ್ಲ. ಭಾರತ ಹಳ್ಳಿಗಳ ನಾಡು. ಯಾವುದೇ ಶಿಕ್ಷಣ ಪದ್ಧತಿಯಾಗಲೀ ಗ್ರಾಮೀಣ ಶಿಕ್ಷಣವನ್ನು ಅವಲಂಬಿಸಿರಬೇಕು. ಭಾರತಕ್ಕೆ ಮೂಲ ಶಿಕ್ಷಣವೇ ಅತ್ಯುತ್ತಮ' ಎಂದು ಶಿಕ್ಷಣ ಪದ್ಧತಿಯ ದೋಷಗಳನ್ನು ಪಟ್ಟಿ ಮಾಡುವುದಲ್ಲದೆ, ಶಿಕ್ಷಣದ ಅವಶ್ಯಕತೆ ಎಂಬುದನ್ನು ವಿವರಿಸಿದರು.

ಗಾಂಧೀಜಿ ಅವರು ಶಿಕ್ಷಣ ಪ್ರಪಂಚಕ್ಕೆ ಕೊಟ್ಟಿರುವ ಅತಿ ಹೆಚ್ಚಿನ ಕಾಣಿಕೆ ಯೆಂದರೆ ಅವರು ಪ್ರತಿಪಾದಿಸಿದ ಮೂಲ ಶಿಕ್ಷಣ. ಶಿಕ್ಷಣವು 'ಮಕ್ಕಳ ಮೊತ್ತ ಮೊದಲ ನುಡಿಯಾದ ಮಾತೃ ಭಾಷೆಗೆ ಪ್ರಾಮುಖ್ಯತೆ ಕೊಡುವಂಥದ್ದಾಗಿರಬೇಕು. ಮಕ್ಕಳ ಮತ್ತು

ಸಮಾಜದ ಮೂಲಭೂತ ಅಗತ್ಯಗಳನ್ನು ಪೂರೈಸುವಂಥದ್ದಿರಬೇಕು. ನಮ್ಮ ಸಾಂಸ್ಕೃತಿಕ ಪರಂಪರೆಗೆ ಪೋಷಕವಾಗಿರಬೇಕು. ನಮ್ಮ ನಾಡು, ನುಡಿ, ಸಾಹಿತ್ಯದ ಬಗ್ಗೆ ಅಭಿಮಾನ ಮೂಡಿಸುವಂಥದ್ದಿರಬೇಕು. ಕಲಿಕೆ ಮತ್ತು ಗಳಿಕೆ ಏಕಕಾಲದಲ್ಲಿ ಏರ್ಪಟ್ಟು, ವ್ಯಕ್ತಿ ತನ್ನ ಕಾಲ ಮೇಲೆ ತಾನು ನಿಲ್ಲಬಲ್ಲ ಸಾಮರ್ಥ್ಯವನ್ನು ಒದಗಿಸಬೇಕು. ಆಗ ನಿರುದ್ಯೋಗ ನಿರ್ಮೂಲನೆಯಾಗಿ, ಸ್ವಾವಲಂಬನೆ ಸಾಧ್ಯವಾಗುತ್ತದೆ' ಎಂದು ಮನವರಿಕೆ ಮಾಡಿಕೊಟ್ಟರು.

ಮೂಲ ಶಿಕ್ಷಣವು ಆಧುನಿಕ ಮನೋವಿಜ್ಞಾನದ ಎಲ್ಲಾ ತತ್ವಗಳನ್ನು ಒಳಗೊಂಡಿದೆ. ಈ ಯೋಜನೆಯಲ್ಲಿ ಮಗುವೇ ಪ್ರಧಾನ. 'ಮಾಡಿ ಕಲಿ' ಎಂಬುದು ಶಿಕ್ಷಣದ ಮೂಲಧ್ಯೇಯ. ಈ ಯೋಜನೆಯು ಶಿಕ್ಷಣ ಮತ್ತು ಜೀವನ ಎರಡನ್ನೂ ಏಕರೂಪವಾಗಿ ಹೊಂದಿಸಿದೆ. ಮೂಲ ಶಿಕ್ಷಣದಲ್ಲಿ ಗಾಂಧೀಜಿ ಅವರ ಬಹುತತ್ವಗಳಾದ ಆಧ್ಯಾತ್ಮಿಕ, ಸ್ವಾಭಾವಿಕ, ಉಪಯುಕ್ತ ಹಾಗೂ ಮಾನವೀಯತಾ ತತ್ವಗಳ ಸಮಾವೇಶ ಏರ್ಪಟ್ಟಿದೆ. ಆದುದರಿಂದ ಗಾಂಧೀಜಿ ಅವರ ಶಿಕ್ಷಣ ತತ್ವವು ಪ್ರಕೃತಿ ಆಧಾರ ಹೊಂದಿರುವಂಥದ್ದೂ, ಧ್ಯೇಯದಲ್ಲಿ ಆದರ್ಶಾತ್ಮಕವಾಗಿಯೂ ವಿಧಾನ ಮತ್ತು ಕಾರ್ಯರೂಪದಲ್ಲಿ ಉಪಯುಕ್ತತೆ ಹೊಂದಿರುವಂಥದ್ದೂ ಇದೆ. ಅಲ್ಲದೆ, ಅವರ ಶಿಕ್ಷಣದ ಧ್ಯೇಯ ವೃತ್ತಿಪರ ಶಿಕ್ಷಣದ ಅಭಿವೃದ್ಧಿ, ವ್ಯಕ್ತಿಯ ಸಮಗ್ರ ಅಭಿವೃದ್ಧಿ ಮೇಲೆ ಗಮನವನ್ನು ಕೇಂದ್ರೀಕರಿಸಿರುವಂಥದ್ದು. ಅಲ್ಲದೆ, ಶಿಕ್ಷಣದ ಅಂತಿಮ ಗುರಿ 'ಆತ್ಮ ಸಾಕ್ಷಾತ್ಕಾರ' ಎಂದೂ ಅವರು ಒತ್ತಿ ಹೇಳುತ್ತಾರೆ.

ಒಂದು ದೇಶವು ಸಾಮಾಜಿಕ, ಆರ್ಥಿಕ ಹಾಗೂ ನೈತಿಕ ಪ್ರಗತಿ ಹೊಂದಬೇಕಾದರೆ, ಬಹು ಎಚ್ಚರಿಕೆಯಿಂದ ಕೆಲಸ ಮಾಡುವ ಪ್ರಜಾ ಸರ್ಕಾರದ ಸ್ಥಾಪನೆ ಅಗತ್ಯ. ಅದಕ್ಕೆ ಸೂಕ್ತ ಶಿಕ್ಷಣವೇ ಮುಖ್ಯ ಅಧಾರ ಎಂಬುದನ್ನು ಗಾಂಧೀಜಿ ಅವರು ತಿಳಿದಿದ್ದರು. ಅಹಿಂಸೆಯೇ ಪರಮಧರ್ಮ ಎಂಬ ಭಾವನೆ ಜನತೆಯ ಮನೋಮಂದಿರದಲ್ಲಿ ಮೂಡುವಂತಾಗುವ ನಿಟ್ಟಿನಲ್ಲಿ ಶಿಕ್ಷಣವು ಸಾರ್ಥಕ ಪ್ರಯತ್ನ ಮಾಡಬೇಕು ಎಂಬುದು ಅವರ ಧ್ಯೇಯವಾಗಿತ್ತು. ಶಿಶುವಿನಲ್ಲಿ ಆತ್ಮ, ದೇಹ, ಮನಸ್ಸು ಈ ಮೂರೂ ಅತ್ಯುತ್ತಮ ಸ್ವರೂಪದಲ್ಲಿ ವಿಕಸನಗೊಳ್ಳುವಂತೆ ಮಾಡುವುದೇ ಶಿಕ್ಷಣ; ಧರ್ಮದಲ್ಲಿ. ಗುರು–ಹಿರಿಯರಲ್ಲಿ ಶ್ರದ್ಧಾ–ಭಕ್ತಿ, ಗೌರವ–ಅಭಿಮಾನ, ವ್ಯಕ್ತಪಡಿಸುವುದನ್ನು ಕಲಿಸುವುದೇ ಶಿಕ್ಷಣ; ಸಾಂಸ್ಕೃತಿಕ ತತ್ವ–ಮೌಲ್ಯಗಳನ್ನು ರಕ್ಷಿಸುವುದಲ್ಲದೇ, ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡಿ, ಸಹೃದಯತೆ ಇರುವ ಸುಖೀಸಮಾಜ ಸ್ಥಾಪನೆಗೆ ಪೂರಕವಾಗುವುದೇ ಶಿಕ್ಷಣ ಎಂದು ಗಾಂಧೀಜಿ ಹೇಳಿದರು.

ಗಾಂಧೀಜಿ ಪ್ರತಿಪಾದಿಸಿದ ಶಿಕ್ಷಣವು ವ್ಯಕ್ತಿಗಳ ವೈಯಕ್ತಿಕ ಹಿತವನ್ನು ಹಾಗೂ ಸಮಾಜದ ಹಿತವನ್ನು ಪರಿಗಣಿಸುವಂಥದ್ದು. ಅವರು, ಶಿಕ್ಷಣವು 7 ರಿಂದ 14 ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯವಾಗಿ ದೊರಕಬೇಕು; ಮಕ್ಕಳ ಪರಿಪೂರ್ಣ ವ್ಯಕಿತ್ವವನ್ನು ರೂಪಿಸಬೇಕು; ವೃತ್ತಿಪರ ಕೌಶಲ್ಯವನ್ನು ಉನ್ನತೀಕರಿಸಬೇಕು. ಅಂದರೆ, ನೂಲುವುದು, ನೇಯುವುದು, ಕೃಷಿ ಮುಂತಾದ ವಿಷಯಗಳ ಬಗ್ಗೆ ತಿಳುವಳಿಕೆ, ಪ್ರಾತ್ಯಕ್ಷಿಕಗಳು ಇರಬೇಕು. ಭೂಮಿಯ ಅಧ್ಯಯನ, ವ್ಯವಸಾಯದ ಇತಿಹಾಸ, ಭೂ ಸಂರಕ್ಷಣೆ ಮುಂತಾದವುಗಳ

ಗ್ಗೆ ಶಿಕ್ಷಣ ನೀಡಬೇಕು ಎಂದ ಅವರು ಶಿಕ್ಷಣದ ಯಶಸ್ಸು ಮುಖ್ಯವಾಗಿ ಅಧ್ಯಾಪಕರನ್ನು ವಲಂಬಿಸಿದ್ದು, ಅಧ್ಯಾಪಕರಿಗೆ ವೃತ್ತಿಯ ಬಗ್ಗೆ ಪರಿಪೂರ್ಣ ಜ್ಞಾನ ಇರಬೇಕು ಎಂದು ಒತ್ತಿ ೇಳಿದರು. ಅಧ್ಯಾಪಕರು ವಿದ್ಯಾರ್ಥಿಗಳಿಗೆ ದಾರ್ಶನಿಕ, ಸ್ನೇಹಿತ, ಮಾರ್ಗದರ್ಶಕರಂತೆ ರ್ತಿಸಬೇಕು ಎಂದು ಗಾಂಧೀಜಿ ಆಶಿಸಿದರು.

ಂಬೇಡ್ಕರ್‌ರವರ ದೃಷ್ಟಿಯಲ್ಲಿ ಶಿಕ್ಷಣ

ಸ್ವತಂತ್ರ ಭಾರತದ ಸಂವಿಧಾನ ಶಿಲ್ಪಿ, ಆಧುನಿಕ ಮನು, ದಲಿತರ ಆಶಾಜ್ಯೋತಿ, ಮಾನತೆಯ ಹರಿಕಾರರಾದ ಡಾ. ಭೀಮ್ ರಾವ್ ರಾಮ್‌ಜೀ ಅಂಬೇಡ್ಕರ್ 20ನೆಯ ತಮಾನದ ಸರ್ವಶ್ರೇಷ್ಠ ರಾಷ್ಟ್ರನಾಯಕರು. ಮಿತವಾದ ಆಹಾರ, ಅತ್ಯಂತ ಕಡಿಮೆ ರ್ಚು, ಅಮಿತವಾದ ಓದು ಅವರ ಮೂರು ಧ್ಯೇಯಗಳಾಗಿದ್ದವು. 'ವಿದೇಶಿ ಶಿಕ್ಷಣ ಡೆದ ಪ್ರಪ್ರಥಮ ಅಸ್ಪೃಶ್ಯ ಭಾರತೀಯ' ಎಂಬ ಕೀರ್ತಿಗೆ ಅಂಬೇಡ್ಕರ್ ಪಾತ್ರರಾಗಿದ್ದರು. ಕ್ಷಣದ ಮೂಲಕವೇ ಸಮಾಜದ ಉದ್ಧಾರ ಎಂದು ಅವರು ಗಟ್ಟಿಯಾಗಿ ಹೇಳಿದರು.

ಸಮಾಜದ ಎಲ್ಲಾ ಸಮಸ್ಯೆಗಳಿಗೆ ಶಿಕ್ಷಣವೇ ಸಂಜೀವಿನಿ; ದಲಿತರ ಸಬಲೀಕರಣಕ್ಕೆ ಅಂಬೇಡ್ಕರ್ ಸೂಚಿಸಿದ ಮಾರ್ಗೋಪಾಯ ಶಿಕ್ಷಣ. ಯಾವ ಜಾತಿ ಜನಾಂಗವೇ ಆಗಲಿ ಮುಂದುವರೆಯಲು ಶಿಕ್ಷಣ ಅತ್ಯವಶ್ಯಕ. ಅಸ್ಪೃಶ್ಯರನ್ನು ಮೇಲ್ವರ್ಗದವರು ಶಿಕ್ಷಣದಿಂದ ದೂರ ಇಟ್ಟಿದ್ದರಿಂದಲೇ ಅಸ್ಪೃಶ್ಯರು ಹಲವು ಶತಮಾನಗಳವರೆಗೆ ಅಂಧಕಾರದಲ್ಲಿ ಬದುಕಬೇಕಾಯಿತು. ಆದ್ದರಿಂದ, ಅಂಬೇಡ್ಕರ್ ಅಸ್ಪೃಶ್ಯ ಜನಾಂಗಕ್ಕೆ ಶಿಕ್ಷಣದ ಸೌಲಭ್ಯಗಳನ್ನು ದೊರಕಿಸಿಕೊಡಲು ಅಪಾರವಾಗಿ ಶ್ರಮಿಸಿದರು. 1924ರಲ್ಲಿ ಅವರು ಸ್ಥಾಪಿಸಿದ "ಬಹಿಷ್ಕೃತ ಹಿತಕಾರಿಣಿ ಸಭಾ", ಅಸ್ಪೃಶ್ಯರಿಗೆ ಶಿಕ್ಷಣ ದೊರಕಿಸಿ ಕೊಡುವುದು, ಅವರ ಸಂಸ್ಕೃತಿಯ ಮಟ್ಟವನ್ನು ಹೆಚ್ಚಿಸುವುದು, ಅವರ ಆರ್ಥಿಕ ಮಟ್ಟವನ್ನು ಉತ್ತಮಪಡಿಸುವುದು ಮುಂತಾದ ಧ್ಯೇಯ, ಉದ್ದೇಶಗಳನ್ನು ಹೊಂದಿತ್ತು. ಹಾಸ್ಟೆಲ್‌ಗಳನ್ನು ಪ್ರಾರಂಭಿಸುವುದರ ಮೂಲಕ ಅಸ್ಪೃಶ್ಯರಿಗೆ ಶಿಕ್ಷಣ ದೊರಕುವಂತೆ ಮಾಡುವುದು, ಗ್ರಂಥಾಲಯಗಳು, ಸಾಮಾಜಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಪ್ರಾರಂಭಿಸುವುದು ಅಂಬೇಡ್ಕರ್ ನೀಡಿದ ಸಲಹೆಗಳಾಗಿದ್ದವು. ಅಸಮಾನತೆಯನ್ನು ತೊಡೆದು ಹಾಕಲು ಶಿಕ್ಷಣವೇ ಮದ್ದು ಎಂದು ಅಂಬೇಡ್ಕರ್ ಅಭಿಪ್ರಾಯಪಟ್ಟಿದ್ದರು.

ಪ್ರಜಾಪ್ರಭುತ್ವವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾದರೆ, ಶಿಕ್ಷಣ ಕ್ಷೇತ್ರದಲ್ಲಿ ಎಲ್ಲರಿಗೂ ಸಮಾನ ಶಿಕ್ಷಣ ನ್ಯಾಯಯುತವಾಗಿ ದೊರೆತಾಗ ಮಾತ್ರ ಸಾಧ್ಯ ಎಂದು ಅಂಬೇಡ್ಕರ್ ಭಾವಿಸಿದ್ದರು. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿಗೂ ಶಿಕ್ಷಣ ದೊರಕುವಂತಿರಬೇಕು. ಜಾತಿ, ಮತ, ಲಿಂಗ ತಾರತಮ್ಯಗಳಿಲ್ಲದೆ ಶಿಕ್ಷಣವು ಸಮಾಜದ ಎಲ್ಲಾ ವರ್ಗದವರಿಗೂ ಸಿಗಬೇಕು ಎಂದು ಅವರು ಹೇಳಿದರು. ಆಗಿನ ಕಾಲದಲ್ಲಿ ಶಿಕ್ಷಣದಲ್ಲಿ ಹಿಂದುಳಿದಿದ್ದ ಅಸ್ಪೃಶ್ಯ ಮತ್ತು ಹಿಂದುಳಿದ ಜನಾಂಗಗಳ ವಿದ್ಯಾರ್ಥಿಗಳ ಸಲುವಾಗಿ "ಜನತಾ ಶಿಕ್ಷಣ ಸಂಸ್ಥೆ"ಯನ್ನು ಅಂಬೇಡ್ಕರ್ ಪ್ರಾರಂಭಿಸಿ, ಶಾಲಾ-

ಕಾಲೇಜುಗಳನ್ನು ತೆರೆದರು. ಸಾಮಾಜಿಕ ಅಸಮಾನತೆ ತೊಲಗಲು ಶಿಕ್ಷಣ ಸಿಗಬೇಕು ಎಂದು ಹೇಳಿದರು.

ಬ್ರಿಟಿಷ್ ಸರ್ಕಾರವು ಶಿಕ್ಷಣ ಕುರಿತು ಹೊಂದಿದ್ದ ನೀತಿಯನ್ನು ಅಂಬೇಡ್ಕರ್ ಕಟುವಾಗಿ ಟೀಕಿಸಿದ್ದರು. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹ ಶಿಕ್ಷಣವನ್ನು ರೂಪಿಸುವ ಅಗತ್ಯವನ್ನು ಅವರು ತಿಳಿಸಿದರು. ಅಸಮಾನತೆ ಹೋಗಲಾಡಿಸಲು ಶಿಕ್ಷಣ, ಸ್ವಾಭಿಮಾನ ಪಡೆಯಲು ಶಿಕ್ಷಣ, ಸಹಬಾಳ್ವೆ ನಡೆಸಲು ಶಿಕ್ಷಣ, ಅಧಿಕಾರ ಪಡೆಯಲು ಶಿಕ್ಷಣ, ಅಸ್ಪೃಶ್ಯತೆಯನ್ನು ನಿವಾರಿಸಲು ಶಿಕ್ಷಣ, ಜಾತೀಯತೆಯನ್ನು ಹೋಗಲಾಡಿಸಲು ಶಿಕ್ಷಣ, ಸಾಂಸ್ಕೃತಿಕ ಒಗ್ಗಟ್ಟು ಬರಲು ಶಿಕ್ಷಣ, ವೈಯಕ್ತಿಕ ಸ್ವಾತಂತ್ರ್ಯ ಪಡೆಯಲು ಶಿಕ್ಷಣ, ಭ್ರಾತೃತ್ವ ಹುಟ್ಟುಹಾಕಲು ಶಿಕ್ಷಣ, ಸಮತಾಸಮಾಜ ನಿರ್ಮಿಸಲು ಶಿಕ್ಷಣ, ಮಾನವೀಯ ಮೌಲ್ಯಗಳನ್ನು ಬೆಳೆಸಲು ಶಿಕ್ಷಣ, ಸಾಮಾಜಿಕ ನ್ಯಾಯಕ್ಕಾಗಿ ಶಿಕ್ಷಣ, ಬಹುಜನರ ಹಿತಕ್ಕಾಗಿ ಶಿಕ್ಷಣ, ಧಾರ್ಮಿಕ ದಬ್ಬಾಳಿಕೆ ವಿರೋಧಿಸಲು ಶಿಕ್ಷಣ, ವಯಸ್ಕರ ಶಿಕ್ಷಣ ಹೀಗೆ ಅಂಬೇಡ್ಕರ್ ಶಿಕ್ಷಣದ ವಿವಿಧ ಆಯಾಮಗಳನ್ನು ಬಿಡಿಸಿ ಹೇಳಿದರು.

ಅಂಬೇಡ್ಕರ್ ಸ್ವತಃ ಅಸ್ಪೃಶ್ಯತೆ ಅನುಭವಿಸಿದವರು. ಅವರು ಪಟ್ಟ ಯಾತನೆ, ನೋವು, ಅಸಹಾಯಕತೆ ಅಷ್ಟಿಷ್ಟಲ್ಲ. ಶಿಕ್ಷಣವನ್ನು ಪಡೆಯುವ ಹಂತದಲ್ಲೂ ಅವರು ಎದುರಿಸಿದ ಸಂಕೀರ್ಣ ಸಮಸ್ಯೆಗಳು ಅಸಂಖ್ಯ. ಎಲ್ಲರಿಗೂ ಕಡ್ಡಾಯ ಮತ್ತು ಉಚಿತ ಶಿಕ್ಷಣ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವಸತಿ ಸೌಲಭ್ಯಗಳು, ಅವಶ್ಯ ಎಂದು ಅವರು ಆಗ್ರಹಿಸಿದರು. ಪ್ರಸ್ತುತ 21ನೇ ಶತಮಾನದಲ್ಲಿ 20 ವರ್ಷಗಳನ್ನು ಮುಗಿಸುವ ಹೊತ್ತಿನಲ್ಲೂ, ಭಾರತದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಕೋಟಿ ಕೋಟಿ ಮಕ್ಕಳು ಹೊರಗೆ ಉಳಿದಿದ್ದಾರೆ. ಮಾಧ್ಯಮಿಕ, ಪ್ರೌಢ, ಪ.ಪೂರ್ವ, ಪದವಿ ಹಂತದಲ್ಲಿ ಶಿಕ್ಷಣ ಮೊಟಕುಗೊಳಿಸುವ ಸಹಸ್ರಾರು, ಲಕ್ಷಾಂತರ ಮಕ್ಕಳು ಇದ್ದಾರೆ. ಅನಕ್ಷರತೆಯನ್ನು ಪೂರ್ತಿ ತೊಡೆದು ಹಾಕುವುದು ಇನ್ನೂ ಸಾಧ್ಯವಾಗಿಲ್ಲ.

ಇಂಥ ಪರಿಸ್ಥಿತಿಯಲ್ಲಾದರೂ ನಾವು, ನಮ್ಮ ಸಮಾಜ, ನಮ್ಮ ಸರ್ಕಾರ ಶಿಕ್ಷಣವನ್ನು ಎಲ್ಲಾ ಮಕ್ಕಳಿಗೆ ಉಚಿತವಾಗಿ ಮತ್ತು ಕಡ್ಡಾಯವಾಗಿ ನೀಡುವಲ್ಲಿ ಕೇವಲ ಪ್ರಯತ್ನಗಳನ್ನುನಡೆಸಿದರೆ ಸಾಲದು; ಈ ಪ್ರಯತ್ನಗಳಿಗೆ ಒಂದು ಕಾಲಮಿತಿ ನಿಗದಿಪಡಿಸಿಕೊಂಡು, ಆ ಮಿತಿಯಲ್ಲಿ ಅನಕ್ಷರತೆಯನ್ನು 100%ರಷ್ಟು ನಿರ್ಮೂಲನೆ ಮಾಡಲು ಬೇಕಾದ ನಕ್ಷೆಗಳನ್ನು ರೂಪಿಸಿಕೊಳ್ಳಬೇಕು.

ಶಿಕ್ಷಣದ ಅವಶ್ಯಕತೆ ಪ್ರತಿಯೊಬ್ಬರಿಗೂ ಇದ್ದು, ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರ ಚಿಂತನೆಯನ್ನೂ ಒಳಗೊಂಡ ಮೌಲ್ಯಾತ್ಮಕ ಶಿಕ್ಷಣವನ್ನು ಎಲ್ಲಾ ಶಾಲಾ–ಕಾಲೇಜುಗಳಲ್ಲೂ ನೀಡುವುದು ಅಗತ್ಯ. ಹಿಂದೆ ಇದ್ದ "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎಂಬ ಸಾಲುಗಳನ್ನು "ಪ್ರತಿಯೊಬ್ಬರೂ ಕಲಿತರೆ ಉತ್ತಮ ಜೀವನ" ಎಂಬ ಸಾಲುಗಳನ್ನು

ನಮನದಲ್ಲಿ ಮೂಡಿಸಬೇಕು; ಈ ನಿಟ್ಟಿನಲ್ಲಿ ಅಗತ್ಯವಾದ ಕ್ರಮಗಳನ್ನು ಸರ್ಕಾರ ಗೆದುಕೊಳ್ಳಬೇಕು; ಇದಕ್ಕೆ ಪೂರಕವಾಗಿ ಸಮಾಜವು ಸ್ಪಂದಿಸಬೇಕು. ಒಟ್ಟಾರೆ, 'ಶಿಕ್ಷಣವು ಮಾನವರ ಜೀವನವನ್ನು ಬೆಳಗುವ ಸಾಧನ' ಎಂಬುದನ್ನು ನಮ್ಮ ಹೃದಯ–ಬುದ್ಧಿಗೆ ಳಿಸಿಕೊಳ್ಳಬೇಕು.

ರಾಮರ್ಶನ ಗ್ರಂಥಗಳು

- ರಾಜಕೀಯ ಸಿದ್ಧಾಂತ ಹಾಗೂ ಚಿಂತಕರು – ಹೆಚ್. ಟಿ. ರಾಮಕೃಷ್ಣ
- ರಾಜಕೀಯ ಚಿಂತಕರು – ಪ್ರೊ. ಬಿ. ಚಂದ್ರಮೋಹನ್
- ಉದಯೋನ್ಮುಖ ಭಾರತದಲ್ಲಿ ಶಿಕ್ಷಣ – ಪ್ರೊ. ಎ. ಎಲ್. ನರಸಿಂಹಾಚಾರ್

ಬಸವಣ್ಣ, ಗಾಂಧಿ ಮತ್ತು ಅಂಬೇಡ್ಕರ್ ಸಾಮಾಜಿಕ ಚಿಂತನೆಗಳು

ಡಾ. ಬಿ.ಕೆ. ಮಂಜುಳ

ಭಾರತೀಯ ಸಮಾಜದ ಉನ್ನತಿಗಾಗಿ ಚಿಂತಿಸಿದ ಮಹಾಪುರುಷರಲ್ಲಿ ಬಸವಣ್ಣ, ಗಾಂಧೀಜಿ ಮತ್ತು ಅಂಬೇಡ್ಕರ್ ಪ್ರಮುಖರು. ಅಂದಿನ ಸಮಾಜದ ಸ್ಥಿತಿಗತಿಗಳು ಈ ಚಿಂತಕರನ್ನು ತೀವ್ರ ಚಿಂತನೆ, ಗಂಭೀರ ಚರ್ಚೆ, ನಿರಂತರ ಅಧ್ಯಯನನಿರತರನ್ನಾಗಿ ಮಾಡಿದವು. ಈ ಸುಧಾರಕರ ಚಿಕಿತ್ಸಕ ದೂರದೃಷ್ಟಿಯು ಜೀವಪರವಾದ ಮೌಲ್ಯಗಳಿಗೆ ಹೆಚ್ಚು ಒತ್ತು ನೀಡುವಂಥದ್ದು. ಮನುಷ್ಯರನ್ನು ಪ್ರೀತಿಸುವ ಗುಣ, ಶೀಲ, ನಡತೆಗಳಿಂದ ವ್ಯಕ್ತಿಗಳನ್ನು ಗೌರವಿಸಬೇಕೆಂಬುದು ಬಸವಣ್ಣ, ಗಾಂಧಿ ಮತ್ತು ಅಂಬೇಡ್ಕರ್ ಅವರ ಚಿಂತನೆಯಾಗಿತ್ತು.

ಮನುಷ್ಯ-ಮನುಷ್ಯರ ನಡುವಣ ನೆಮ್ಮದಿ, ಸಹಬಾಳ್ವೆ, ಆಲೋಚನೆ-ಅನಿಸಿಕೆಗಳನ್ನು ಸಮಾಜದ ಇತರರೊಂದಿಗೆ ಹಂಚಿಕೊಳ್ಳುವ ಮೂಲಕ ನಿಕಟ ಸಂಬಂಧವನ್ನು ಬೆಳೆಸಿಕೊಳ್ಳಲು ಶಿಕ್ಷಣವು ಸಹಕಾರಿಯಾಗುತ್ತದೆ. ಸಮಾಜದ ಪ್ರತಿ ವ್ಯಕ್ತಿಯ ಎಲ್ಲ ವಿಧವಾದ ಕಾರ್ಯಗಳು ಸಮಾಜದಲ್ಲಿ ಕ್ರಿಯೆಗೆ ಕಾರಣವಾಗುತ್ತದೆ; ಈ ಕ್ರಿಯೆಗಳಿಗೆ ಆಧಾರವಾಗಿ ಮಾನವೀಯತೆ ಇದ್ದಾಗ, ಆ ಸಮಾಜದಲ್ಲಿ ಸಾಮಾಜಿಕ ಸಾಮರಸ್ಯ ತಂತಾನೆ ಮೂಡುತ್ತದೆ. ತನ್ಮೂಲಕ, ಸಮಾಜದಲ್ಲಿ ನೆಮ್ಮದಿ ಮತ್ತು ಶಾಂತಿ ನೆಲೆಸುತ್ತವೆ.

ಮನುಷ್ಯರು ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಲು, ಆಸೆ-ಆಕಾಂಕ್ಷೆ ಸಾಧಿಸಿಕೊಳ್ಳಲು, ಆಹಾರ, ವಸತಿ, ವಿದ್ಯೆ, ಕೆಲಸ, ಗೆಳೆತನ, ಲೈಂಗಿಕತೆ, ಮನರಂಜನೆ ಮುಂತಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಂಘಜೀವಿಯಾಗಿದ್ದಾರೆ. ಮನುಷ್ಯರು ಈ ದಾರಿಯಲ್ಲಿ ಸಹಸ್ರ ವರ್ಷಗಳಿಂದ ನಡೆದುಕೊಂಡು ಬಂದಿದ್ದಾರೆ. ಪ್ರದೇಶ, ಕಾಲಘಟ್ಟ, ಭಾಷೆ, ಧರ್ಮ, ಜಾತಿ, ಭೌಗೋಳಿಕ ಹಿನ್ನೆಲೆಗಳು, ಆಚರಣೆ, ನಂಬಿಕೆ, ಸಂಪ್ರದಾಯ, ಕಟ್ಟುಪಾಡುಗಳು ಬೇರೆ ಬೇರೆಯಾದರೂ, ಮನುಷ್ಯರು ಸಂಘಜೀವನವನ್ನು ಮಾತ್ರ ಎಂದೂ ತಿರಸ್ಕರಿಸಿಲ್ಲ ಎಂಬುದನ್ನು ನಾವು ಕಾಣುತ್ತೇವೆ. ಆದರೆ, ಯಾವುದೇ ಸಮಾಜದಲ್ಲಿ ಮನುಷ್ಯರು ಹಾರ್ದಿಕ ಸಂಬಂಧ ಹೊಂದಿ ಬೆಳೆದು ಬಂದಿಲ್ಲ ಎಂಬುದೂ ಕಟುಸತ್ಯ. ಪ್ರದೇಶಗಳಿಗೆ, ಕಾಲಕ್ಕೆ, ಜಾತಿಗಳಿಗೆ, ಧರ್ಮಗಳಿಗೆ ನಿರ್ದಿಷ್ಟವಾದ ಕಟ್ಟುಪಾಡುಗಳು, ಪದ್ಧತಿಗಳು, ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು ರೂಢಿಗೆ ಬಂದಿರುವುದೂ

ತ್ಯವೇ. ಒಬ್ಬರ, ಒಂದು ಸಮುದಾಯದ, ಒಂದು ಜಾತಿಯ, ಒಂದು ಧರ್ಮದ ಜನರ ಟ್ಟುಪಾಡುಗಳು, ಪದ್ಧತಿಗಳು, ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು ಇತರ ಕ್ತಿಯ ಅಥವಾ ಇತರ ಜಾತಿಯ, ಇತರ ಧರ್ಮದ ಕಟ್ಟುಪಾಡುಗಳಿಗೆ, ಪದ್ಧತಿಗಳಿಗೆ, ಂಪ್ರದಾಯಗಳಿಗೆ, ನಂಬಿಕೆಗಳಿಗೆ, ಆಚರಣೆಗಳಿಗೆ ವಿಭಿನ್ನವಾಗಿಯಷ್ಟೇ ಉಳಿದರೆ ಚ್ಚಿನ ಸಮಸ್ಯೆ ಉಂಟಾಗುವುದಿಲ್ಲ. ಸಾಮಾಜಿಕ ಸಾಮರಸ್ಯ ಕದಡುವುದಿಲ್ಲ. ಆದರೆ, ವುಗಳು ಇನ್ನೊಂದಕ್ಕೆ ವಿರೋಧವಾಗಿ ಬಳಕೆಯಾದರೆ, ಇತರರ ಸಾಮಾಜಿಕ, ಆರ್ಥಿಕ, ಜಕೀಯ, ಸಾಂಸ್ಕೃತಿಕ ಹಕ್ಕುಗಳನ್ನು ಹತ್ತಿಕ್ಕುವ ಸ್ವರೂಪ ಪಡೆದುಕೊಂಡರೆ, ಅಂಥ ಮಾಜದಲ್ಲಿ ಸಹೃದಯತೆ, ಸೌಹಾರ್ದ, ಶಾಂತಿ, ನೆಮ್ಮದಿ ಉಳಿಯುವುದು ಕಠಿಣ.

ಪ್ರಾಚೀನ ಭಾರತದ ಸಮಾಜವನ್ನು ಅಧ್ಯಯನ ಮಾಡಿದರೆ, ಇಂಥ ಸಹೃದಯತೆ, ೌಹಾರ್ದ, ಶಾಂತಿ, ನೆಮ್ಮದಿ ಬಹುತೇಕವಾಗಿ ಇರಲಿಲ್ಲ ಎಂಬುದು ಕಂಡು ಬರುತ್ತದೆ. ದಕ್ಕೆ ಮುಖ್ಯವಾಗಿ ಹಿಂದೂ ಧಾರ್ಮಿಕ ಕಟ್ಟುಪಾಡುಗಳನ್ನು ಕಾರಣವಾಗಿ ಗುರುತಿಸುವ ನಿವಾರ್ಯತೆ ಕೂಡ ಕಾಣುತ್ತದೆ. ಹಿಂದೂ ಧರ್ಮೀಯ ಸಮಾಜದಲ್ಲಿ ಬುದ್ಧಿಯ ುತ್ತು ಅಧಿಕಾರದ ಬಲ ಇದ್ದವರು ತಮ್ಮ ಅನುಕೂಲಕ್ಕೆ, ಹೆಗ್ಗಳಿಕೆಗೆ, ಸುಖ-ಹಿತಕ್ಕೆ ಕ್ಕ ಹಾಗೆ ಕಟ್ಟುಪಾಡುಗಳನ್ನು, ಪದ್ಧತಿಗಳನ್ನು, ಸಂಪ್ರದಾಯ ಗಳನ್ನು, ನಂಬಿಕೆಗಳನ್ನು, ಚರಣೆಗಳನ್ನು ರೂಪಿಸಿಕೊಂಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

ಹಿಂದೂ ಧರ್ಮೀಯ ಸಮಾಜದಲ್ಲಿ ಇದ್ದ ಕಟ್ಟುಪಾಡುಗಳು, ಪದ್ಧತಿಗಳು, ಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು ಸರ್ವರ ಹಿತವನ್ನು ಬಯಸುವಂಥವು ಳಾಗಿರಲಿಲ್ಲ. ಅವು ಅಂದಿನ ಸಮಾಜದಲ್ಲಿ ಇದ್ದ ಬಲಿಷ್ಠರ, ಪಟ್ಟಭದ್ರರ ಹಿತವನ್ನು ಾಪಾಡುವಂಥವುಗಳಾಗಿದ್ದವು. ಕೆಲವು ಸಮುದಾಯಗಳಿಗೆ ನಿರ್ದಿಷ್ಟ ಉದ್ಯೋಗ/ ರ್ತವ್ಯ ವಹಿಸಿಕೊಡುವ ಮೂಲಕ ಸಮಾಜದಲ್ಲಿ ಅಂತಸ್ತುಗಳು ನಿರ್ಮಾಣ ವಾಗುವುದಕ್ಕೆ ಈ ಕಟ್ಟುಪಾಡುಗಳು, ಪದ್ಧತಿಗಳು, ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು ಾರಣವಾದವು. ಓದುವುದು, ಆಡಳಿತ ನಡೆಸುವುದು/ಯುದ್ಧ ಮಾಡುವುದು, ವ್ಯಾಪಾರ ಮಾಡುವುದು, ಹಾಗೂ ಎಲ್ಲರ ಸೇವೆ ಮಾಡುವುದು ಹೀಗೆ ನಾಲ್ಕು ವಿಭಾಗಗಳ ್ಯವಸ್ಥೆಯು ಹಿಂದೂ ಧರ್ಮೀಯ ಸಮಾಜದಲ್ಲಿ ನಿರ್ಮಾಣವಾಗಿತ್ತು. ಪರಿಣಾಮವಾಗಿ, ಸಮಾಜದಲ್ಲಿ ಅಸಮಾನತೆ, ತಾರತಮ್ಯ, ಶೋಷಣೆ, ಅವಕಾಶವಂಚನೆ ಇತ್ಯಾದಿಗಳು ಬೆಳೆದು, ಸಮಾಜ ಕುರೂಪಿಯಾಯಿತು.

ಸಮಾಜದಲ್ಲಿನ ಇಂಥ ದುರ್ಗುಣಗಳನ್ನು ತೊಡೆದು ಹಾಕಲು, ಎಲ್ಲರಿಗೆ ಸಮಾನತೆ ಒದಗಿಸಲು, ಮಾನವೀಯತೆಯ ಕುಡಿಯನ್ನು ಚಿಗುರಿಸಲು, ಶೋಷಣೆ-ಅನ್ಯಾಯ- ಅವಮಾನ ಇರುವ ಸಮಾಜದಲ್ಲಿ ಶಾಂತಿ-ನೆಮ್ಮದಿ ಇರಲು ಸಾಧ್ಯವಿಲ್ಲ; ಅದೊಂದು ರೋಗಿಷ್ಟ ಮತ್ತು ಪ್ರತೀಕಾರಕ್ಕೆ ಅವಕಾಶ ಒದಗಿಸುವಂಥದ್ದಾಗುತ್ತದೆ ಎಂಬ ಬಗ್ಗೆ ಕಾಲಕಾಲಕ್ಕೆ ಎಚ್ಚರಿಕೆ ನೀಡುವ, ಪ್ರತಿಭಟನೆಯ ಸೊಲ್ಲು ಏಳುವ ಸಂದರ್ಭಗಳನ್ನು ನಮ್ಮ ಚರಿತ್ರೆ ಕಂಡಿದೆ.

ಇಂತಹ ಸಮಾಜ ಸುಧಾರಕರಲ್ಲಿ ಬಸವಣ್ಣ, ಗಾಂಧೀಜಿ ಮತ್ತು ಬಿ.ಆರ್. ಅಂಬೇಡ್ಕರ್ ಮುಖ್ಯರು. ಇವರು ಬೇರೆ ಬೇರೆ ಪ್ರದೇಶ, ಭಾಷೆ, ಜಾತಿಗಳ ಹಿನ್ನೆಲೆ ಯಿಂದ ಬಂದರೂ, ಸಮಾಜದ ಬಗೆಗೆ ತಳೆದಿದ್ದ ಚಿಂತನೆಯಲ್ಲಿ ಸಾಮ್ಯತೆ ಇದ್ದಿತ್ತು

12ನೆಯ ಶತಮಾನದ ಬಸವಣ್ಣ ಬಾಲ್ಯದಿಂದಲೇ ವೈದಿಕ ಸಂಸ್ಕೃತಿಯ ಕರ್ಮಾಚಾರಣೆಗಳನ್ನು ವಿರೋಧಿಸುತ್ತಿದ್ದರು. ಆಗಲೇ ಅವರಿಗೆ ಸಮಾಜದಲ್ಲಿ ಅನೇಕ ಲೋಪದೋಷಗಳು ಕಂಡುಬರುತ್ತವೆ. ಹಾಗಾಗಿ, ಅಮಾನವೀಯವಾದ ಆಚಾರ-ಮೂಢನಂಬಿಕೆಗಳನ್ನು ವಿರೋಧಿಸುವ ಮನೋಭಾವವನ್ನು ಅವರು ಮೈಗೂಡಿಸಿಕೊಳ್ಳುತ್ತಾರೆ. ಸಮಾಜದ ಸುಧಾರಣೆಗಾಗಿ ಸಾಮಾನ್ಯ ಮನುಷ್ಯರು ಆಚರಿಸಬಹುದಾದ ಆಚಾರ, ವಿಚಾರ, ನೀತಿಗಳನ್ನು ರೂಪಿಸುತ್ತಾರೆ. ಅವುಗಳನ್ನು ಸಮಾಜದ ಮುಂದೆ ಇಡುತ್ತಾರೆ. ತಾವೂ ಅವುಗಳಂತೆ ಬದುಕಿ ತೋರಿಸುತ್ತಾರೆ. ಬಸವಣ್ಣ ನುಡಿದಂತೆ ನಡೆದ ಯುಗಪುರುಷ.

ಬಸವಣ್ಣನವರ ಸಾಮಾಜಿಕ ನಿಲುವುಗಳು

ಬಸವಣ್ಣ ಇಡೀ ಸಮಾಜದ ಹಿತವನ್ನು ಬಯಸಿದವರು. ಅನ್ಯಾಯ, ಅಸಮಾನತೆಗಳನ್ನು ವಿರೋಧಿಸಿದವರು. ಅಮಾನವೀಯ ಆಚರಣೆಗಳಿಗೆ ಅಡಿಪಾಯ ಒದಗಿಸುವ ಧರ್ಮಶಾಸ್ತ್ರ ಗ್ರಂಥಗಳನ್ನು ಧಿಕ್ಕರಿಸಿದರು. ಅಸಮಾನತೆಯನ್ನು ಪ್ರತಿಪಾದಿಸಿದ ವೇದ, ಉಪನಿಷತ್ತುಗಳನ್ನು ಖಂಡಿಸಿದರು. ಸಮಾಜದಲ್ಲಿದ್ದ ಅಸ್ಪೃಶ್ಯತೆಯನ್ನು ಅಲ್ಲಗಳೆದರು.

ಉಂಬಲ್ಲಿ ಉಡುವಲ್ಲಿ ಕುಲವಳಿಯಿತ್ತೆಂಬರಿ,
ಕೊಂಬಲ್ಲಿ ಕೊಡುವಲ್ಲಿ ಕುಲವನರಿಸುವ ಮಾದಿಗರನೇನೆಂಬೆನಯ್ಯ?,,,,,
ಅವರಲ್ಲಿ ಕುಲವ ನೋಡದೆ ಆಚಾರವ ನೋಡಿ
ಅವರಿಂಗೆ ಬೇಕಾದ ಹೆಣ್ಣುಕೊಟ್ಟು,
ತಮಗೆ ಬೇಕಾದ ಹೆಣ್ಣು ತಂದುಕೊಂಬುದು
ಈ ಕ್ರಮನವನರಿಯದವರ ಭಕ್ತಿ,
ಹೊಲತಿ ಶುದ್ಧ ನೀರ ಮಿಂದಂತಾಯಿತ್ತು ಕೂಡಲಸಂಗಮದೇವಾ'

ಎಂದು ಭಕ್ತರಾದ ಬಳಿಕ ಕುಲ-ಜಾತಿಗಳ ಹಂಗು ಇರುವುದಿಲ್ಲ; ಹೆಣ್ಣು ಕೊಟ್ಟು ತರುವುದೇ ಶಿಷ್ಟಾಚಾರ ಎಂದು ಬಸವಣ್ಣ ಹೇಳಿದರು. ಸದಾಚಾರದಲ್ಲಿ ಸತ್ಯ, ಶುದ್ಧಕಾಯಕ ತತ್ವಕ್ಕೆ ಹೆಚ್ಚು ಮಹತ್ವವನ್ನು ಅವರು ನೀಡಿದರು; 'ಕಾಯಕವೆಂದರೆ ಜೀವನೋಪಾಯಕ್ಕೆ ಕೈಗೊಂಡ ವೃತ್ತಿ ಅಷ್ಟೆ. ಎಲ್ಲ ವೃತ್ತಿಗಳೂ ಗೌರವಯುತ ವಾದಂಥವು; ಅವುಗಳಲ್ಲಿ ಶ್ರೇಷ್ಠ-ಕನಿಷ್ಠ ಎಂಬ ವೃತ್ತಿಗಳಿಲ್ಲ' ಎಂದು ಸ್ಪಷ್ಟವಾಗಿ ಹೇಳಿದರು. ವೃತ್ತಿಗಳಿಂದ ಜಾತಿಗಳು ಏರ್ಪಡುವುದಿಲ್ಲವೆಂದು ಸಾರಿದ ಅವರು, ವರ್ಣಾಶ್ರಮ ಧರ್ಮವನ್ನು, ಅದರ ಆಚಾರವನ್ನು ಕಟುವಾಗಿ ವಿಡಂಬಿಸಿದರು. ದಯವೇ ಧರ್ಮದ ಮೂಲವೆಂಬ ದಿಟ್ಟ ಮಂತ್ರವನ್ನು ಸಾರಿದರು. ದಾಸೋಹಕ್ಕೆ ಮಹತ್ವ ನೀಡಿದರು. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದರು. ಸ್ತ್ರೀ ಸಮಾನತೆಗೆ ಒತ್ತುಕೊಟ್ಟರು. 'ಆಚಾರವೇ ಸ್ವರ್ಗ ಅನಾಚಾರವೇ

ರಕ' ಎಂದು ಸಾರಿದರು. ಬಹುದೇವರುಗಳ ಆರಾಧನೆಯನ್ನು ಖಂಡಿಸಿದರು. ಬಡವ-
ೀಮಂತ, ಮೇಲುಜಾತಿ-ಕೆಳಜಾತಿಗಳ ಅಸಮಾನತೆಯನ್ನು ಧಿಕ್ಕರಿಸಿ, ಸರ್ವ ಸಮಾನತೆಗೆ
ಪ್ರಾಮುಖ್ಯತೆ ನೀಡಿದರು.

ಬಸವಣ್ಣನವರು ಜನಸಮಾನ್ಯರ ವೈಯಕ್ತಿಕ ನಡವಳಿಕೆಗಳ ಸುಧಾರಣೆಗೆ ಹೆಚ್ಚಿನ
ಹತ್ವ ಕೊಟ್ಟರು. ಇದಕ್ಕಾಗಿ ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾದ
ಗತ್ಯವನ್ನು ಒತ್ತಿ ಹೇಳಿದರು. ಅಂತರಂಗದ ಒಳದನಿಗೆ ಕಿವುಡಾಗಬಾರದೆಂದು
ಚ್ಚರಿಸಿದರು. "ಸದಾಚಾರ ಅಂತರಂಗದಲ್ಲೂ-ಬಹಿರಂಗದಲ್ಲೂ ಅಗತ್ಯ" ಎಂದು
ಸವಣ್ಣ ಪ್ರತಿಪಾದಿಸಿದರು.

"ಕಳಬೇಡ, ಕೊಲಬೇಡ, ಹುಸಿಯ ನುಡಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ನ್ನ ಬಣ್ಣಿಸಬೇಡ, ಇದಿರ ಹಳಿಯಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ
ಶುದ್ಧಿ" ಎಂಬುದು ಬಸವಣ್ಣನವರ ಪ್ರಖ್ಯಾತ ನೀತಿ. ನೈತಿಕ ಆಚರಣೆಗಳಿಂದ ವೈಯುಕ್ತಿಕ
ಜೀವನ ದೊಡ್ಡದಾಗಬೇಕು. ಅದಾಗದ ಹೊರತು, ವ್ಯಕ್ತಿಗಳು ಸಮಾಜವನ್ನು ದೊಡ್ಡದು
ಮಾಡಲಾರರು. ಹೀಗಾಗಿ, "ನೀರ ಕಂಡಲ್ಲಿ ಮುಳುಗುವರಯ್ಯ, ಮರವ ಕಂಡಲ್ಲಿ
ಸುತ್ತುವರಯ್ಯ, ಬತ್ತುವ ಜಲವ, ಒಣಗುವ ಮರವ ಮೆಚ್ಚಿದವರು ನಿಮ್ಮನೆತ್ತ ಬಲ್ಲರು?"
ಎಂದು ಪ್ರಶ್ನಿಸುತ್ತಾರೆ. ಹೀಗೆ ಸಮಾಜ ಸುಧಾರಣೆಯಾಗಬೇಕು ಎನ್ನುವುದಾದರೆ, ಅಲ್ಲಿನ
ವ್ಯಕ್ತಿಗಳು ಸುಧಾರಣೆ ಯನ್ನು ತಮ್ಮಲ್ಲಿ ಅಳವಡಿಸಿಕೊಳ್ಳಬೇಕು. ಇದು ಸಾಧ್ಯವಾಗಬೇಕು
ಎನ್ನುವುದಾದರೆ, ಮೊದಲು ವ್ಯಕ್ತಿಗಳಲ್ಲಿ ಅರಿವು ಮೂಡಬೇಕು ಎಂದು ಬಸವಣ್ಣನವರು
ಪ್ರತಿಪಾದನೆ ಮಾಡುತ್ತಾರೆ.

ಗಾಂಧೀಜಿ ಅವರ ಸಾಮಾಜಿಕ ಚಿಂತನೆ

ಮೋಹನ್‌ದಾಸ್ ತಮ್ಮ ಕೊಡುಗೆಗಳ ಮೂಲಕ 'ರಾಷ್ಟ್ರಪಿತ' ಎನಿಸಿದರು. ಸತ್ಯವಂತ, ವಿದೇಶಿ ನೆಲದಲ್ಲಿ ಹೋರಾಟಕ್ಕೆ ಮುಂದಾದ ಧೈರ್ಯಶಾಲಿ, ಸ್ವಾತಂತ್ರ್ಯ ಹೋರಾಟದ ನೇತಾರ, ಪ್ರಕೃತಿ ಚಿಕಿತ್ಸೆಯ ಪ್ರಯೋಗಕಾರ, ಅಸಾಧಾರಣ ಚಾಣಾಕ್ಷ, ಸತ್ಯ ಮತ್ತು ಅಹಿಂಸೆ ಕುರಿತು ಜೀವನದಲ್ಲಿ ಪ್ರಯೋಗ ಮಾಡಿದ ಸಾಧಕ, ಅಪ್ಪಟ ಕರ್ಮಯೋಗಿ .. .. .. ಹೀಗೆ ಗಾಂಧೀ ಅವರನ್ನು ಗುರುತಿಸಬಹುದು. ಗಾಂಧೀಜಿ ಅವರ ಬದುಕಿನ ಹಿನ್ನೆಲೆಯೇ ಅವರನ್ನು ಹಾಗೆ ರೂಪಿಸಿತ್ತು.

ಗಾಂಧೀಜಿಯವರಿಗೆ ಹರಿಜನರ ಉದ್ಧಾರ ಮುಖ್ಯವಾಗಿತ್ತು. ನಮ್ಮ ದೇಶ ಸಮಸ್ಯೆಗಳು ಬಿಡಿಸಲಾಗದ ಕಗ್ಗಂಟುಗಳು. ಗಾಂಧೀಜಿ ಅವರ ಸ್ವಾತಂತ್ರ್ಯದ ಹೋರಾಟದ ಮೂಲಕ ಸ್ತ್ರೀಸ್ವಾತಂತ್ರ್ಯ, ಹಳ್ಳಿಗಳ ಉದ್ಧಾರ, ಗ್ರಾಮ ಸ್ವರಾಜ್ಯದ ಕಲ್ಪನೆ, ಶಿಕ್ಷಣದ ಮೂಲಕ ಸುಧಾರಣೆ ಮುಂತಾದ ಕನಸುಗಳನ್ನು ಅವರು ಕಂಡಿದ್ದರು.

"ಹಿಂದೂ ಸಂಪ್ರದಾಯವಾದಿ ಅಧಿಕಾರದ ಪರಿಕಲ್ಪನೆಗೆ ಗಾಂಧಿ ಒಡ್ಡಿದ ಗಂಭೀರ ಸವಾಲೆಂದರೆ, ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆ. ಅಬ್ರಾಹ್ಮಣೀಕರಣ ಹಾಗೂ ಅಬೌದ್ಧೀಕರಣಕ್ಕೆ ಒತ್ತುಕೊಟ್ಟು ಗಾಂಧೀಜಿ ಕೆಳಜಾತಿಗಳ, ರೈತರ, ಬ್ರಾಹ್ಮಣೇತರ

ಸಂಸ್ಕೃತಿಗಳ ಇನ್ನೊಂದು ಪರ್ಯಾಯವನ್ನು, ಒಳಗೊಂಡ ಗ್ರಾಮ ಭಾರತವನ್ನೂ ಮುಂದಿಟ್ಟರು. ಇದು ಬ್ರಾಹ್ಮಣವಾದಿ ಹಿಂದೂ ಸಂಸ್ಕೃತಿಗಿಂತ ಮುಖ್ಯವೆಂದು ಭಾವಿಸಿದ್ದರು. ಪುರುಷತ್ವದ ದುರಹಂಕಾರದ ಬದಲಿಗೆ, ಸ್ತ್ರೀತ್ವದ ಕಲ್ಪನೆ ಕೂಡ ಗಾಂಧಿ ನೀಡಿದ ಪ್ರಮುಖ ಕೊಡುಗೆ. ಇದರ ಆಳದಲ್ಲಿ ಬ್ರಾಹ್ಮಣ ಸಂಸ್ಕೃತಿಯ ವಿರೋಧವೇ ಇತ್ತು. ಬ್ರಾಹ್ಮಣೇತರ ಸಂಸ್ಕೃತಿಗಳಲ್ಲಿ ಸ್ತ್ರೀಯರಿಗೆ ಪ್ರಾಮುಖ್ಯ ಇದೆ. ಅಲ್ಲದೆ, ಆಳುವ ವರ್ಗವಾಗಿದ್ದ ಜಮೀನ್ದಾರಿ ಹಾಗೂ ಬ್ರಾಹ್ಮಣ ವರ್ಗಗಳ ಎಲ್ಲೆಯಾಚೆಗಿದ್ದ ಬಹುಸಂಖ್ಯಾತ ಹಿಂದುಳಿದ ಜಾತಿಗಳನ್ನು, ಸ್ತ್ರೀಯರನ್ನು, ಹಳ್ಳಿಗರನ್ನು, ಅಸ್ಪೃಶ್ಯರನ್ನು ಗಾಂಧೀಜಿ ಅವರು ತಮ್ಮ ರಾಜಕೀಯ ಸಂಘಟನೆಯ ತೆಕ್ಕೆಗೆ ತೆಗೆದುಕೊಂಡಿದ್ದು ದೊಡ್ಡ ಸಾಧನೆ"[1] ಎಂಬ ಗ್ರಹಿಕೆ ಇದೆ.

ಭಾರತದ ಹಳ್ಳಿಗಳ ದೇಶ. ಹಳ್ಳಿಗಳ ಉದ್ಧಾರದ ಮೂಲಕ ದೇಶದ ಏಳಿಗೆಯಾಗುತ್ತದೆ ಎಂಬುದು ಗಾಂಧೀಜಿ ಅವರ ಬಲವಾದ ನಂಬಿಕೆ. ಔದ್ಯೋಗೀಕರಣ ವನ್ನು ಗಾಂಧಿ ವಿರೋಧಿಸುತ್ತಿದ್ದರು. ಕೈಗಾರಿಕೀಕರಣದ ನೆಪದಲ್ಲಿ ಬರುವ ಗುಲಾಮ ಗಿರಿಯನ್ನು ಅವರು ವಿರೋಧಿಸುತ್ತಿದ್ದರು. ಗ್ರಾಮಗಳಲ್ಲಿ ಗುಡಿ ಕೈಗಾರಿಕೆ, ಸಣ್ಣ ಉದ್ಯೋಗಗಳಿಗೆ ಬೆಂಬಲ ಕೊಡುವ ಮೂಲಕ, ಗ್ರಾಮ ಸ್ವರಾಜ್ಯದ ಕನಸನ್ನು ಅವರು ಕಂಡಿದ್ದರು. ಗಾಂಧಿ ಅವರ ಸತ್ಯ–ಅಹಿಂಸೆಯ ನೈತಿಕ ಬದುಕಿನ ಜೊತೆಗೆ, ಸ್ವಾವಲಂಬನೆಯ ಸರಳ ಬದುಕು ಕೂಡ ಅಷ್ಟೇ ಮಹತ್ವವಾದುದು. ಅವರಿಗೆ ಚರಕ ಸ್ವಾವಲಂಬನೆಯ ಸಂಕೇತವಾದರೆ, ಖಾದಿ ಸ್ವದೇಶಿಯ ಸಂಕೇತವಾಗಿದೆ. ಭಾರತದಲ್ಲಿನ ಅತಿ ಬಡ ವ್ಯಕ್ತಿಯು ತಮ್ಮನ್ನು ಒಪ್ಪುವ ರೀತಿಯಲ್ಲಿ ಗಾಂಧೀಜಿ ಉಡುಪು ಧರಿಸಿದರು. ಮನೆಯಲ್ಲಿ ನೂತ ನೂಲಿನ ಬಟ್ಟೆ (ಖಾದಿ)ಯ ಬಳಕೆಯನ್ನು ಸಮರ್ಥಿಸಿದರು. ತಾವೇ ಸ್ವತಃ ತಮ್ಮದೇ ಉಡುಪುಗಳನ್ನು ನೇಯುವ ಅಭ್ಯಾಸವನ್ನು ಅವರು ಅಳವಡಿಸಿಕೊಂಡಿದ್ದರು.

ಬಾಬಾಸಾಹೇಬ ಅಂಬೇಡ್ಕರ್ ಸಾಮಾಜಿಕ ಚಿಂತನೆ

ಭಾರತೀಯ ಹಿಂದೂ ಪರಂಪರೆಯ ಸಮಾಜಕ್ಕೆ ಹೊಸ ತಿರುವನ್ನು ತಂದುಕೊಟ್ಟ ಶೂದ್ರಾತಿಶೂದ್ರ ಜಗತ್ತಿನ ಮೊಟ್ಟಮೊದಲ ನಾಯಕ ಡಾ.ಬಿ.ಆರ್. ಅಂಬೇಡ್ಕರ್. ಪ್ರಾಣಿಗಳಿಗಿಂತಲೂ ಹೀನಾಯವಾದ ಬದುಕನ್ನು ಸವೆಸಿದ ಅಸ್ಪೃಶ್ಯರ ಬಾಳಿನಲ್ಲಿ, ಬೆಳಕಾಗಿ ಬಂದ ಅಂಬೇಡ್ಕರ್ ಚಾರಿತ್ರಿಕವಾಗಿ ಬಹುಮುಖ್ಯರಾಗಿದ್ದಾರೆ. ಅವರು ನಡೆದು ಬಂದ ದಾರಿ ಅತೀವ ನೋವು, ಅವಮಾನ, ಕಷ್ಟಗಳಿಂದ ಕೂಡಿದ್ದು, ಅವರ ಹೋರಾಟಗಳು ಸಾಮಾಜಿಕ ಪರವರ್ತನೆಗೆ ದಾರಿ ಮಾಡಿಕೊಟ್ಟಿವೆ. ಹಿಂದೂ ಧಾರ್ಮಿಕ ಕರ್ಮಠತನವನ್ನು ಧಿಕ್ಕರಿಸಿ, ದಲಿತರ ವಿಮೋಚನೆಗೆ ತಮ್ಮನ್ನು ಸಮರ್ಪಿಸಿಕೊಂಡ ಅವರು ಮಹಾಮಾನವತಾವಾದಿ. ಅಂಬೇಡ್ಕರ್ ತಮ್ಮ ಜೀವನದ ಉದ್ದಕ್ಕೂ ಅಸಮಾನತೆಯ ವಿರುದ್ಧ ನಿರಂತರ ಹೋರಾಟಗಳನ್ನು ಮಾಡಿದವರು. ಈ ಹೋರಾಟದ ಫಲದಿಂದಲೇ ಇಂದು ಭಾರತದಲ್ಲಿ ದಲಿತರು ಎಚ್ಚೆತ್ತಿದ್ದಾರೆ; ಸ್ವಾಭಿಮಾನ–ಆತ್ಮಾಭಿಮಾನಗಳನ್ನು ಮೈಗೂಡಿಸಿಕೊಂಡಿದ್ದಾರೆ.

ಅಂಬೇಡ್ಕರರ ಚಿಂತನೆಯಲ್ಲಿ ದೇವರು ಧರ್ಮಗಳ ಬಗೆಗೆ ದಿಟ್ಟತನದ ನಿಲುವನ್ನು ಕಾಣಬಹುದು. ಅವರದು ವೈಚಾರಿಕ ದೃಷ್ಟಿ. ನೂತನ ಆಲೋಚನೆ. ಅವರು ಮಂದಿರ

ಂಸ್ಕೃತಿಯನ್ನು ತಿರಸ್ಕರಿಸಿದರು. ಮೂರ್ತಿಪೂಜೆಯನ್ನು ಅಲ್ಲಗೆಳೆದರು. ಮಂದಿರಗಳು ಡವರ ಶೋಷಣೆಯ ತಾಣಗಳು; ಪುರೋಹಿತಶಾಹಿ ಸುಲಿಗೆ ಮಾಡುತ್ತಿದೆ ಂದು ಸಾರಿ, ಮೂಢನಂಬಿಕೆಗಳನ್ನು ತಿರಸ್ಕರಿಸಿದರು. ಧರ್ಮವು ಮನುಷ್ಯನಿಗಾಗಿ ಇರುವುದೆ ಹೊರತು, ಧರ್ಮಕ್ಕಾಗಿ ಮನುಷ್ಯ ಇರಬೇಕಿಲ್ಲ. ಮನುಷ್ಯರ ಒಳಿತನ್ನು ಾಧಿಸಲು ಧರ್ಮ ಸಹಾಯಕವೆಂದು ಹೇಳಿದರು. ಹಿಂದೂ ಧರ್ಮವು ಶೋಷಣೆಯ ಪ್ರತೀಕವೆಂದು ನಿರ್ಧರಿಸಿ, ಅದನ್ನು ತ್ಯಜಿಸಿದರು; ಮಾನವೀಯ ಮೌಲ್ಯಗಳಿಂದ ಕೂಡಿದ ಬೌದ್ಧಧರ್ಮವನ್ನು ಅಂಬೇಡ್ಕರ್ ಒಪ್ಪಿದರು.

ಶತಮಾನಗಳಿಂದ ಹಿಂದೂ ಧರ್ಮದಲ್ಲಿ ಹುಟ್ಟಿ, ಮೇಲ್ಜಾತಿ-ಮೇಲ್ವರ್ಗ ದವರ ತುಳಿತದಿಂದ, ಶೋಷಣೆ, ದೌರ್ಜನ್ಯಗಳಿಂದ ತತ್ತರಿಸಿ ಹೋಗಿದ್ದವರ ಬಾಳಿನಲ್ಲಿ ಅಂಬೇಡ್ಕರ್ ಬೆಳಕಾಗಿ ಬಂದವರು. ದಮನಿತರ ಬದುಕಿನಲ್ಲಿ ಅವರು ಆಶಾವಾದವನ್ನು ಮೂಡಿಸಿದವರು. ಕೆರೆ-ನದಿಗಳ ನೀರು, ಮಂದಿರ, ಶಾಲೆ, ಕಾಲೇಜು, ಆಸ್ಪತ್ರೆ ಸೇರಿದಂತೆ ಸಾರ್ವಜನಿಕ ಸ್ಥಳಗಳು ಸಮಸ್ತ ಸಾರ್ವಜನಿಕರಿಗೆ ಮುಕ್ತವಾಗಿರಬೇಕು ಎಂಬುದನ್ನು ಸಾರ್ವತ್ರಿಕವಾಗಿ ಪ್ರತಿಪಾದಿಸಿದವರು. ಈ ಮೂಲಕ ಸನಾತನ ಹಿಂದೂ ಧರ್ಮವನ್ನು ನಂಬಿದವರ ಮುಂದೆ ಮಾನವೀಯ ಪ್ರಶ್ನೆಗಳನ್ನು ಇಟ್ಟವರು. ಶೋಷಿತ ವರ್ಗಗಳ ಜನರಲ್ಲಿ ಆತ್ಮಾಭಿಮಾನವನ್ನು ತುಂಬಿದವರು. ಕಾರ್ಮಿಕರಿಗೆ ಅನೇಕ ಉತ್ತಮ ಕಾನೂನುಗಳನ್ನು ಮಾಡಿದವರು. ಎಲ್ಲಾ ಜಾತಿಗಳ ಮಹಿಳೆಯರ ಹಿತವನ್ನು ಗಮನಿಸಿ, ಅಗತ್ಯ ಕಾನೂನು ಮಾಡುವುದಕ್ಕೆ ಹಕ್ಕೊತ್ತಾಯ ಮಂಡಿಸಿದವರು. ತಮ್ಮ ಒತ್ತಾಯಕ್ಕೆ ಸರ್ಕಾರ ಮಣಿಯದೇ ಹೋದಾಗ, ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ, ಪ್ರತಿಭಟನೆ ಸೂಚಿಸಿದವರು. ಮಾನವೀಯತೆ, ವೈಚಾರಿಕತೆ ಮತ್ತು ವೈಜ್ಞಾನಿಕ ತಳಹದಿಯನ್ನು ಅವಲಂಬಿಸುವಂತೆ ಜನರಿಗೆ ಕರೆ ನೀಡಿದವರು. ಅನ್ಯಾಯ ಮತ್ತು ತಾರತಮ್ಯ ಇಲ್ಲದ ಸಮಾಜದ ನಿರ್ಮಾಣದ ಗುರಿಯನ್ನು ಹೊಂದಿದ್ದವರು. ಅವರು ಜಾತಿ, ಕುಲ ಕಸುಬುಗಳನ್ನು ಖಂಡಿಸಿದವರು. ಹುಟ್ಟಿನಿಂದಷ್ಟೇ ಯಾರೂ ಬುದ್ಧಿವಂತರಲ್ಲ ಮತ್ತು ದಡ್ಡರಲ್ಲ. ಅವಕಾಶಗಳು ಮನುಷ್ಯನನ್ನು ಬುದ್ಧಿವಂತರನ್ನಾಗಿ ಮತ್ತು ದಡ್ಡರನ್ನಾಗಿ ಮಾಡುತ್ತವೆ ಎಂದವರು. ಭೂಮಿ ರಾಷ್ಟ್ರೀಕರಣವಾಗಬೇಕು. ಆರ್ಥಿಕ ಸಮಾನತೆ ಸಾಕಾರಗೊಳ್ಳಬೇಕು ಜೊತೆಗೆ ಸಾಮಾಜಿಕ ಸಮಾನತೆ ಸ್ಥಾಪನೆಯಾಗಬೇಕು ಎಂದು ವಾದಿಸಿದವರು.

ಮಹಿಳೆಯರ ಸ್ವಾತಂತ್ರ್ಯ, ಸಮಾನತೆ ಬಗೆಗೆ ಅಂಬೇಡ್ಕರ್ ಅವರಿಗೆ ಅಪಾರ ಕಾಳಜಿ ಇತ್ತು. ಮಹಿಳೆಯರಿಗೆ ಕಡ್ಡಾಯ ಶಿಕ್ಷಣ ದೊರಕಬೇಕು; ಇದು ಮಹಿಳೆಯರ ಹಕ್ಕು ಎಂದು ಪ್ರತಿಪಾದಿಸಿದರು. ಸಂವಿಧಾನ ರಚಿಸುವ ಅವಕಾಶ ದೊರಕಿದಾಗ, ಜಾತಿಭೇದ ಮತ್ತು ಲಿಂಗಭೇದ ನಿರ್ಮೂಲನೆಗೆ ಅಗತ್ಯವಾದ ಕಾನೂನು ಮಾಡಲು ಪುಷ್ಟಿ ಒದಗಿಸಿದರು.

ಹೀಗೆ ಬಸವಣ್ಣ-ಗಾಂಧೀ-ಅಂಬೇಡ್ಕರ್ ಈ ಮೂವರೂ ಮಹಾನ್ ನಾಯಕರು ಸಮಾಜ ಸುಧಾರಣೆಗೆ ತಮ್ಮನ್ನು ಅರ್ಪಿಸಿಕೊಂಡವರು. ಅವರ ದಾರಿಗಳು ಮತ್ತು ಆದ್ಯತೆಗಳು ಕೊಂಚ ಬೇರೆ ಬೇರೆಯಾಗಿ ಕಾಣುವುದನ್ನು ನಾವು ವೈರುಧ್ಯ ಎಂದು ಪರಿಗಣಿಸುವ ಅಪಚಾರ ನಡೆಯಕೂಡದು. 12ನೆಯ ಶತಮಾನದಲ್ಲಿ ಸರ್ವ ಸಮಾನತೆಯನ್ನು ಬಸವಣ್ಣ ಪ್ರತಿಪಾದಿಸುತ್ತಾರೆ. ಅನಂತರ ಗಾಂಧೀಜಿ ಮತ್ತು ಅಂಬೇಡ್ಕರ್

ಅವರ ಮಾತು ಮತ್ತು ಕೃತಿಗಳಲ್ಲಿ ಬಸವಣ್ಣನವರ ಚಿಂತನೆ ಪ್ರತಿಫಲಿಸುತ್ತಿರುವುದು ಕಂಡು ಬರುತ್ತದೆ. ಆದರೆ, ತಮ್ಮ ಮುಂದಿದ್ದ ಸವಾಲುಗಳು ವಿಭಿನ್ನವಾಗಿದ್ದ ಹಿನ್ನೆಲೆಯಲ್ಲಿ ಅವರು ವಿಭಿನ್ನ ಆದ್ಯತೆಗಳನ್ನು ಇಟ್ಟುಕೊಂಡು ಕ್ರಿಯಾಶೀಲರಾಗುತ್ತಾರೆ. ಬಸವಣ್ಣ, ಗಾಂಧೀಜಿ ಮತ್ತು ಅಂಬೇಡ್ಕರ್ ಉಡುಗೆಗಳೂ ಕೊಂಚಮಟ್ಟಿಗೆ ಅವರ ಆದ್ಯತೆಗಳನ್ನು ಸಾಂಕೇತಿಕವಾಗಿ ಪ್ರತಿಬಿಂಬಿಸುತ್ತವೆ ಎನ್ನಬಹುದು. ಅಂಗೈಯಲ್ಲಿ ಲಿಂಗವನ್ನು ಇಟ್ಟುಕೊಂಡ ಬಸವಣ್ಣ ನನ್ನು ಗಮನಿಸಿದಾಗ, ಎಲ್ಲರೂ ದೇವರ ಮುಂದೆ ಸಮಾನರು; ದೇವರಿಗೆ ಭಾರಿ ಮಂದಿರಗಳು ಬೇಕಿಲ್ಲ ಇತ್ಯಾದಿ ತತ್ವಗಳನ್ನು ಪ್ರತಿಪಾದಿಸುವುದು ಗೊತ್ತಾದರೆ, ಅರೆಬಟ್ಟೆ ಫಕೀರನ ಉಡುಪಿನಲ್ಲಿ ಕಾಣುವ ಗಾಂಧೀ, ಸ್ವಾವಲಂಬನೆ, ಸರಳತೆ, ಸ್ವದೇಶಿ ತತ್ವ ಪ್ರತಿಪಾದಿಸುವವರಾಗಿ ಕಾಣುತ್ತಾರೆ. ಸ್ವಾಭಿಮಾನ ಎದ್ದು ಕಾಣುವಂಥ ಉತ್ತಮ ಗುಣಮಟ್ಟದ ಸೂಟ್-ಬೂಟ್ ಹಾಕಿಕೊಂಡ ಅಂಬೇಡ್ಕರ್ ಚಿತ್ರವು, ತುಳಿತ, ದಾಸ್ಯ, ಶೋಷಣೆ, ದೌರ್ಜನ್ಯಗಳನ್ನು ಶತಮಾನಗಳಿಂದ ಅನುಭವಿಸಿಕೊಂಡು ಬಂದಿರುವ ಶೋಷಿತ ವರ್ಗಗಳ ಜನರು, ಆತ್ಮಗೌರವದಿಂದ ತಲೆಯೆತ್ತಿ, ಎಲ್ಲರಿಗೂ ಸಮಾನರಾಗಿ, ಉತ್ತಮ ವಿದ್ಯೆ, ಬಟ್ಟೆ, ಉದ್ಯೋಗ ಹೊಂದುವವರಾಗಬೇಕು ಎಂಬುದನ್ನು ಪ್ರತಿಪಾದಿಸುವ ಹಾಗೆ ಕಾಣುತ್ತದೆ.

ಗಾಂಧೀ ಮತ್ತು ಅಂಬೇಡ್ಕರ್ ಇಬ್ಬರೂ ಸುಧಾರಕರು. ಸುಧಾರಣೆಗೆ ಅವರು ಆಯ್ಕೆ ಮಾಡಿಕೊಂಡ ಹಾದಿಗಳಷ್ಟೇ ವಿಭಿನ್ನವಾಗಿದ್ದವು. ಜಾಗತೀಕರಣ, ವಾಣಿಜ್ಯೀಕರಣ, ಯಾಂತ್ರೀಕರಣ, ಖಾಸಗೀಕರಣಗಳ ಯುಗದಲ್ಲಿ ಮನುಷ್ಯರು ತಮ್ಮ ಬದುಕನ್ನು ಮತ್ತು ಮಾನವೀಯ ಮೌಲ್ಯಗಳನ್ನು ಉಳಿಸಿಕೊಂಡು ಬದುಕುವ ಬಗೆಯನ್ನು ಅರಿತುಕೊಳ್ಳಲು ಈ ಮೂವರೂ ಮಹಾನ್ ನಾಯಕರ ಚಿಂತನೆ ಮತ್ತು ಬದುಕು ನಮಗೆ ದಾರಿದೀಪವಾಗಬಲ್ಲದು. ಏಕೆಂದರೆ, ಇವರ ಚಿಂತನೆ ಎಲ್ಲ ಕಾಲಘಟ್ಟದ ಸಮಾಜಗಳಿಗೆ ಪ್ರಸ್ತುತ.

ಆಧಾರ ಗ್ರಂಥಗಳು

- ಎಂ.ಆರ್.ಶ್ರೀನಿವಾಸಮೂರ್ತಿ, ವಚನಧರ್ಮಸಾರ, ಕನ್ನಡ ಸಾಹಿತ್ಯ ಪರಿಷತ್ತು, 2003 ಪುಟ 15
- ಸಂ.ಮಹೇಶ್ ತಿಪ್ಪಶೆಟ್ಟಿ, ಬಸವತತ್ವ ಸಾಮಾಜಿಕ ಬದಲಾವಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ದ್ವಿ ಮು, 2009, ಪುಟ 49
- ನಟರಾಜ್ ಹುಳಿಯಾರ್, ಗಾಳಿ ಬೆಳಕು, ಪಲ್ಲವ ಪ್ರಕಾಶನ, ಚನ್ನಪಟ್ಟಣ, 2011, ಪುಟ 213
- ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, 2013
- ಪ್ರೊ. ಎನ್. ಕೃಷ್ಣಸ್ವಾಮಿ, ಮಹಾತ್ಮ, ಭಾರತೀಯ ವಿದ್ಯಾಭವನದ ಗಾಂಧೀ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಕೇಂದ್ರ, ಬೆಂಗಳೂರು, 2000
- ಹೊಸತು, ಮಾಸ ಪತ್ರಿಕೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಬುದ್ಧನ ಅಹಿಂಸಾ ತತ್ವದ ವಿಶ್ಲೇಷಣೆ

ಡಾ. ಮನು ಎ. ಟಿ.

ಸರ್ವ ಧರ್ಮಕ್ಕೆ ಸರ್ವಕಾಲಕ್ಕೂ ಕಾಮ, ಕ್ರೋಧ, ಲೋಭ, ಮದ, ಮತ್ಸರ ಮೋಹಗಳನ್ನು ತ್ಯಜಿಸಿ, ಅಹಿಂಸಾ ತತ್ವಗಳನ್ನು ಅನುಸರಿಸುವಂತೆ ಬುದ್ಧನು ತನ್ನ ತತ್ವಗಳಲ್ಲಿ ತಿಳಿಸಿದ್ದಾನೆ. ವೇದ ಪೂರ್ವ, ವೇದಕಾಲೀನ ಮತ್ತು ಸಂಸ್ಕೃತ ಕಾಲದಿಂದಲೂ ಸಾಮಾಜಿಕ-ಧಾರ್ಮಿಕ ಹಿಂಸಾ ಪ್ರವೃತ್ತಿ ಅಸ್ತಿತ್ವದಲ್ಲಿತ್ತು; ಯಜ್ಞ-ಯಾಗಾದಿಗಳ ಆಚರಣೆಯಲ್ಲಿ ಪಶು ಬಲಿ, ನರಬಲಿ, ಶಿಶುಹತ್ಯೆ ನಡೆಸಿ, ಹಾಲು-ಮೊಸರು-ತುಪ್ಪ-ಬಾರ್ಲಿ-ನವಧಾನ್ಯ-ಸೋಮರಸ-ನಗನಾಣ್ಯ ಇತ್ಯಾದಿ ವಸ್ತುಗಳನ್ನು ಅಗ್ನಿಕುಂಡಕ್ಕೆ ಅರ್ಪಿಸುವ ಅನಿಷ್ಟ ಪದ್ಧತಿ ಶಿಲಾಯುಗ ಕಾಲದಿಂದಲೂ ಇತ್ತು ಎಂಬುದು ತಿಳಿದು ಬರುತ್ತದೆ. ಇಂಥ ಹಿಂಸಾ ಪ್ರವೃತ್ತಿಯ ಕಠಿಣ ಆಚರಣೆಗಳ ಹಿಂದಿನ ನೀತಿಗೆ ಪರ್ಯಾಯವಾಗಿ ಮಾನವೀಯ ಸಾಮಾಜಿಕ-ಧಾರ್ಮಿಕ ವಿಧಿವಿಧಾನಗಳನ್ನು ಪ್ರತಿಪಾದಿಸುವ ವ್ಯಕ್ತಿಗಳು ಉದಯಿಸಿದ್ದನ್ನು ಕಾಣಬಹುದು. ಅವರೇ ಅಜೀವಕರು, ಚಾರ್ವಕರು(ಲೋಕಾಯಕರು) ಜೈನರು, ಬೌದ್ಧರು. ವೈದಿಕ ಧರ್ಮ ಜಾರಿಗೊಳಿಸಿದ್ದ ಅನ್ಯಾಯ ಅಸಮಾನತೆ, ಮೂಢನಂಬಿಕೆ, ವಾಮಾಚಾರ, ಮಾಟ-ಮಂತ್ರ-ತಂತ್ರ-ಯಂತ್ರ ಮೊದಲಾದ ಅಮಾನವೀಯ ಆಚರಣೆಗಳನ್ನು ತೀವ್ರತರವಾಗಿ ವಿರೋಧಿಸುವ ಮೂಲಕ, ಸಮಾಜದಲ್ಲಿ ವಿಚಾರಶಕ್ತಿ ಮೂಡಿಸುವ ಪ್ರಯತ್ನಗಳನ್ನು ಇವರು ನಡೆಸಿದರು. ಸಾಮಾಜಿಕ, ಧಾರ್ಮಿಕ ವಲಯಗಳಲ್ಲಿ ಕ್ರಾಂತಿಕಾರಿ ಸುಧಾರಣೆಗೆ ಕಾರಣರಾದರು. ಸ್ವರ್ಗ-ನರಕ, ಪಾಪ-ಪುಣ್ಯ ಮುಂತಾಧ ನಂಬಿಕೆಗಳನ್ನು ತಿರಸ್ಕರಿಸಿ, ಮೋಕ್ಷದ ಹಂಗಿಲ್ಲದೆ, ಹೊಸ ಪ್ರಜ್ಞೆ ಬೆಳೆಯಲು ನಿಮಿತ್ತರಾದರು. ಇಂಥ ಅನೇಕ ತತ್ವದರ್ಶಿಗಳು, ಆಧ್ಯಾತ್ಮವಾದಿಗಳು, ಸಮಾಜ ಸುಧಾರಕರು ಜನ್ಮತಾಳಿ ಮಾನವ ಕುಲಕ್ಕೆ ದಾರಿ ದೀಪವಾಗಿದ್ದಾರೆ.

ಇತಿಹಾಸಪೂರ್ವ ಯುಗ, ವೇದಪೂರ್ವ ಯುಗ, ವೇದಕಾಲೀನ ಯುಗಗಳಲ್ಲಿ ಅಸ್ತಿತ್ವದಲ್ಲಿದ್ದ ಸಂಸ್ಕೃತಿಯು ಆತ್ಮ, ಪರಮಾತ್ಮ, ಪಾಪ, ಪುಣ್ಯ, ಸ್ವರ್ಗ, ನರಕ, ಪುನರ್ಜನ್ಮ, ಜೀವಾತ್ಮ, ಕರ್ಮಸಿದ್ಧಾಂತ ಎಂಬ ಕಲ್ಪನೆಗಳ ಬೆಳವಣಿಗೆಗೆ ಪ್ರೋತ್ಸಾಹ ದೊರಕಿತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಪಂಚಮ, ಮೇಲು-ಕೀಳು, ಉತ್ತಮ-ಮಧ್ಯಮ-ಅಧಮ ಮುಂತಾದ ನಂಬಿಕೆಗಳು ಬೆಳೆದುಕೊಂಡು ಬಂದಿದ್ದನ್ನು ಪ್ರಶ್ನಿಸಲಾಯಿತು. ಇವುಗಳು ಸಮಾಜದಲ್ಲಿ ಹಿಂಸೆಯ ವಾತಾವರಣವನ್ನು ಹುಟ್ಟು ಹಾಕುವಂಥವು;

ಮಾನವೀಯತೆ ಆಧಾರಿತ ಸಮಾಜ ನಿರ್ಮಾಣವಾಗುವುದಕ್ಕೆ ಅಡ್ಡಿಯಾಗಿರುವಂಥವು ಎಂದು ತಿಳಿಸಲಾಯಿತು. ಈ ದಿಕ್ಕಿನಲ್ಲಿ ನಮಗೆ ಕಾಣುವ ಮೊಟ್ಟ ಮೊದಲು ಮೇರು ವ್ಯಕ್ತಿ ಎಂದರೆ ಮಹಾತ್ಮಾ ಬುದ್ಧ.

ಬುದ್ಧನು ಅಹಿಂಸೆಯನ್ನು ಮತ್ತು ಮಾನವೀಯತೆಯನ್ನು ಬೋಧಿಸಿದ. ಅಂದಿನ ಸಮಾಜದಲ್ಲಿ ಹಾಸುಹೊಕ್ಕಾಗಿದ್ದ ಹಿಂಸಾ ಪ್ರವೃತ್ತಿಯ ಪರಿಣಾಮಗಳನ್ನು ವಿವರಿಸಿದನು. ಅಹಿಂಸಾ ತತ್ವ, ಮಾನವೀಯತೆಯ ಮಹತ್ವವನ್ನು ಆತನು ಮಂಡಿಸಿದನು. ಮಾನವೀಯ ವ್ಯವಸ್ಥೆಯನ್ನು ರೂಪಿಸಲು ಬುದ್ಧನ ತತ್ವಗಳು ಉಪಯುಕ್ತವಾಗಿವೆ; ಬುದ್ಧನ ತತ್ವಗಳನ್ನು ಪಾಲಿಸುವುದರಿಂದ ಸರ್ವಜೀವಿಗಳಿಗೂ ಸುಖ ಉಂಟಾಗುವುದು ಖಚಿತ. ಇವುಗಳನ್ನು ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿ ಬೇರೂರಿಸುವ ಅವಶ್ಯಕತೆ ಇದೆ.

ಬುದ್ಧನ ಜೀವನ: ಸಂಕ್ಷಿಪ್ತ ಪರಿಚಯ

ಬುದ್ಧನ ಕಾಲ ಕ್ರಿ ಪೂ 567 ರಿಂದ 480. ಬುದ್ಧನು ನೇಪಾಳದ ಕಪಿಲವಸ್ತು ಎಂಬಲ್ಲಿ ಆಳ್ವಿಕೆ ಮಾಡುತ್ತಿದ್ದ ಶಾಕ್ಯ ವಂಶದ ಶುದ್ಧೋದನ–ಮಾಯಾದೇವಿ ದಂಪತಿಯರ ಮಗ. ಆತನು ಪ್ರಜಾಪತಿ ಗೌತಮಿಯ ಪಾಲನೆಯಲ್ಲಿ ಬೆಳೆದವನು; ಆತನ ಮೂಲ ಹೆಸರು ಸಿದ್ಧಾರ್ಥ. ಆತನಿಗೆ ಯಶೋಧರೆಯ ಜೊತೆ ವಿವಾಹ ವಾಯಿತು; ರಾಹುಲ ಎಂಬ ಮಗ ಜನಿಸಿದ. ಆತನು ಸಮಾಜದಲ್ಲಿನ ದು:ಖ, ರೋಗ, ಮರಣ ಇತ್ಯಾದಿ ಕಂಡು ಜೀವನದಲ್ಲಿ ರೋಸಿ ಹೋಗಿ, ಮನೆ ತ್ಯಜಿಸಿದ ಎಂಬ ಒಂದು ವ್ಯಾಖ್ಯಾನ ಇದೆ; ನದಿ ನೀರಿನ ವಿಷಯದಲ್ಲಿ ಯುದ್ಧ ತಲೆದೋರಿದಾಗ, ಅದನ್ನು ಒಪ್ಪದ ಸಿದ್ಧಾರ್ಥ ಮನೆ ಬಿಟ್ಟು ತೆರಳಿದ; ನೂತನ ಸಾಮಾಜಿಕ ಬದುಕಿನ ವ್ಯವಸ್ಥೆಗಾಗಿ ಶೋಧನೆ ನಡೆಸಿದ ಎಂದು ಇನ್ನೊಂದು ವ್ಯಾಖ್ಯಾನ ಇದೆ. ಆದರೆ, ಬುದ್ಧನು ಸಮಾಜವನ್ನು ನ್ಯಾಯ, ಸಮಾನತೆಗಳ ಆಧಾರದಲ್ಲಿ ಪುನರ್ ಸಂಘಟಿಸಲು ಬೋಧನೆ ನೀಡಿದ.

ಬುದ್ಧನು ನಾಲ್ಕು ಮಹಾತತ್ವ ಅಹಿಂಸೆಯನ್ನು ಪಾಲಿಸುವುದು, ಸತ್ಯವನ್ನು ನುಡಿಯುವುದು, ಕಳ್ಳತನ ಮಾಡದಿರುವುದು, ಪಾವಿತ್ರ್ಯ ಜೀವನ ನಡೆಸುವುದು ಇವುಗಳನ್ನು ಪಾಲಿಸುವಂತೆ ತಿಳಿಸಿದ್ದಾನೆ. ನಾಲ್ಕು ಪರಮ ಸತ್ಯಗಳನ್ನು ಬೋಧಿಸಿ, ಮನುಷ್ಯ ಜೀವನವು ದುಃಖಮಯವಾಗಿದ್ದು ದುಃಖಕ್ಕೆ ಅತಿಆಸೆಯೇ ಕಾರಣ; ಅತಿಆಸೆಯನ್ನು ತ್ಯಜಿಸಿದರೆ ಮೋಕ್ಷ ಸಿಗುತ್ತದೆ; ಶರೀರ ದಂಡನೆ, ಪ್ರಾಣಿ ಬಲಿ ಮಂತ್ರ–ತಂತ್ರ ವೈಧಿಕ ಧರ್ಮಾಚರಣೆಗಳು, ಬ್ರಾಹ್ಮಣರಿಂದ ಮಾಡಿಸುವ ಪೂಜೆ–ಪುನಸ್ಕಾರಗಳಿಂದ ಏನೂ ಪ್ರಯೋಜನ ಇಲ್ಲ; ಅಷ್ಟಾಂಗ ಮಾರ್ಗ ಉತ್ತಮ. ಸದ್‌ನಂಬಿಕೆ, ಸದ್‌ಯೋಚನೆ, ಸನ್ನುಡಿ, ಸನ್ನಡತೆ, ಸದ್‌ಜೀವನ ನಡೆಸುವುದರಿಂದ ಬದುಕು ಅರ್ಥ ಪಡೆದುಕೊಳ್ಳುತ್ತದೆ ಎಂದು ತಿಳಿಸಿದ್ದಾನೆ.

ಬುದ್ಧ ತತ್ವಗಳನ್ನು ಬೌದ್ಧಧರ್ಮದ ಪವಿತ್ರ ಗ್ರಂಥಗಳಾದ ತ್ರಿಪಿಟಕಗಳಾದ ವಿನಯ ಟಕ ಸುತ್ತ ಪಿಟಕ ಅಭಿದಮ್ಮ ಪಿಟಕಗಳಲ್ಲಿ ತಿಳಿಯಬಹುದು. ದೀರ್ಘ ನಿಕಾಯ, ಮಧ್ಯಮ ಾಯ, ದೀಪವಂಶ, ಮಹಾವಂಶ, ಚುಲವಂಶ, ಲಲಿತ ವಿಸ್ತಾರ, ಜಾತಕ ಕಥೆಗಳು, ರ ಗಾಥಾಗಳಲ್ಲಿ ಬುದ್ಧನ ಸಂದೇಶಗಳಿವೆ. 'ಸರ್ವರೂ ಅನುಸರಿಸಬಹುದಾದ ಜೀವನ ಧತಿಯನ್ನು ಮತ್ತು ಸಾಮಾಜಿಕ ಸಮಾನತೆಯ ಆಧಾರದ ಮೇಲೆ ಸಮಾಜ ನಿರ್ಮಾಣ ಗಬೇಕು ಎಂಬುದನ್ನು ಧರ್ಮವಾಗಿ ಬೋಧಿಸಿದವನು ಬುದ್ಧ'.

ಬುದ್ಧನ ತತ್ವಗಳಿಂದ ಅವನ ಕಾಲದಲ್ಲಿ ಮತ್ತು ನಂತರದ ಶತಮಾನಗಳಲ್ಲಿ ಅಸಂಖ್ಯ ನಸಾಮಾನ್ಯರು ಮತ್ತು ಆಡಳಿತಗಾರರು, ಮಹಾರಾಜರುಗಳು, ಚಕ್ರವರ್ತಿ ಗಳು ಭಾವಿತರಾದರು. ಸಹಸ್ರ ಸಹಸ್ರ ಭಿಕ್ಷುಗಳು-ಭಿಕ್ಷುಣಿಯರು ಪರಿತ್ಯಾಗಿಗಳಾಗಿ ಬುದ್ಧನ ತ್ವಗಳನ್ನು ಅನುಸರಿಸಿದರು; ಮೌಢ್ಯಗಳಿಂದ ಮುಕ್ತಿ ಪಡೆಯುವ, ವೆಚ್ಚವಿಲ್ಲದ ಧಾರ್ಮಿಕ ಚರಣೆಗಳನ್ನು ಕೈಗೊಳ್ಳುವ, ಅಹಿಂಸಾ ಮಾರ್ಗ ಅವಲಂಬಿಸುವ, ಸಮಾನತೆಯಿಂದ ರ್ವರನ್ನೂ ಕಾಣುವ ಮಹತ್ವವನ್ನು ಮನವರಿಕೆ ಮಾಡಿಕೊಂಡರು. ಬುದ್ಧನ ಈ ಸಂದೇಶ ರವನ್ನು ಸರ್ವರಲ್ಲೂ ಪ್ರಚಾರ ಮಾಡಿದರು. ಅಂದು ಸರ್ವರಿಗೂ ಅರ್ಥವಾಗುವ ಳಿ/ಪ್ರಾಕೃತ ಭಾಷೆಗಳಲ್ಲಿ ತಮ್ಮ ಸಂದೇಶ ನೀಡಿದರು.

ಅಶೋಕನ ಆಡಳಿತದಲ್ಲಿ ಆಶ್ರಯ ಪಡೆದಿದ್ದ ಬೌದ್ಧ ಧರ್ಮವು ಚೀನಾ, ಬರ್ಮಾ, ಪಾನ್, ಟಿಬೆಟ್ ಮತ್ತು ಆಗ್ನೇಯ ಏಷ್ಯಾ ದೇಶಗಳಲ್ಲಿ ಪ್ರಚಾರಗೊಂಡಿತು. ಸ್ವತಃ ಶೋಕ ಚಕ್ರವರ್ತಿಯೇ ತಮ್ಮ ಮಗ ಮಹೇಂದ್ರ, ಮಗಳು ಸಂಘ ಮಿತ್ರೆಯನ್ನು ಬರ್ಮಾ, ಲಂಕಾ ದೇಶಗಳಿಗೆ ಕಳುಹಿಸಿ, ಬುದ್ಧನ ತತ್ವ ಪ್ರಚಾರ ಆಗುವಂತೆ ನೋಡಿಕೊಂಡ. ತನ್ನ ಡಳಿತದಲ್ಲಿದ್ದ ವಿವಿಧ ಪ್ರಾಂತಗಳಲ್ಲಿ ಬುದ್ಧನ ತತ್ವಗಳ ಮಹತ್ವವನ್ನು ಶಿಲೆಯಲ್ಲಿ ಕೆತ್ತಿಸಿ, ರ್ವಜನಿಕರ ಗಮನಕ್ಕೆ ತಂದ. ನಂತರದ ಚಕ್ರವರ್ತಿಗಳಾದ ಕನಿಷ್ಕ, ಹರ್ಷವರ್ಧನ ುಂತಾದವರು ಬುದ್ಧನ ತತ್ವಗಳನ್ನು ತಮ್ಮ ಇಡೀ ಸಾಮ್ರಾಜ್ಯದಲ್ಲಿ ಪ್ರಚಾರಗೊಳಿಸಿದರು.

ಬೌದ್ಧ ತತ್ವ-ಸಿದ್ಧಾಂತಗಳನ್ನು ತಕ್ಷಶಿಲೆ, ನಲಂದ, ವಿಕ್ರಮಶೀಲ, ವಲ್ಲಬಿ ಮುಂತಾದ ದ್ಯಾಪೀಠಗಳ ಮುಖಾಂತರ ಅಧ್ಯಯನ ಮತ್ತು ಬೋಧನೆಗೆ ಅವಕಾಶವನ್ನು ಡಲಾಯಿತು. ಬುದ್ಧನ ತತ್ವಗಳು ಆಗಿನ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ ಅನೇಕ ದೇಶಿ ಯಾತ್ರಿಕರನ್ನು, ವಿದ್ವಾಂಸರನ್ನು, ಪಂಡಿತ-ಪಾಮರರನ್ನು ಆಕರ್ಷಿಸಿದವು. ಬುದ್ಧ ಷ್ಯಾದ ಜ್ಯೋತಿ' ಎಂದು ಗುರುತಿಸಲ್ಪಟ್ಟ.

ಬುದ್ಧನು ಬೋಧಿಸಿದ ನೈತಿಕತೆಯು ಮಾನವೀಯತೆಯನ್ನು ತಳಹದಿಯಾಗಿ ೊಂದಿದೆ. ಅವುಗಳಲ್ಲಿ ಮುಖ್ಯವಾದ ಒಂದು ತತ್ವವೆಂದರೆ, ಅಹಿಂಸಾ ತತ್ವ. ಳಜಿ, ಅನುಕಂಪ, ಕಾರುಣ್ಯಗಳು ಬುದ್ಧನ ತತ್ವಗಳ ಆಧಾರ ನೆಲೆಗಳು. ದ್ವೇಷವನ್ನು ರೀತಿಯಿಂದಲೂ, ಹಿಂಸೆಯನ್ನು ಅಹಿಂಸೆಯಿಂದಲೂ ನಿವಾರಿಸಬಹುದು ಎಂಬುದನ್ನು ುದ್ಧನ ತತ್ವಗಳಿಂದ ತಿಳಿಯುತ್ತೇವೆ. ಬುದ್ಧನ ತತ್ವಗಳು, ಮೌಲ್ಯಗಳು ವಿಶ್ವಕ್ಕೆ

ಕೊಡುಗೆಯಾಗಿವೆ. ಬುದ್ಧ ತತ್ವಗಳಲ್ಲಿನ ಮಾನವೀಯತೆಯು ವಿಶ್ವಕ್ಕೆ ಮಾರ್ಗದರ್ಶಿ. ಅಹಿಂಸಾ ಮಾರ್ಗ ಎಂಬುದು ವಿಶ್ವಕ್ಕೆ ಬುದ್ಧ ನೀಡಿದ ಕೊಡುಗೆ.

ಉಪ ಸಂಹಾರ

ಬುದ್ಧನ ತತ್ವಗಳು ಮಾನವೀಯ ಮೌಲ್ಯಗಳನ್ನು, ಅಹಿಂಸಾ ಮಾರ್ಗವನ್ನು, ತ್ಯಾಗವನ್ನು, ಸುಜ್ಞಾನವನ್ನು ಬೋಧಿಸಿದೆ. ಸಕಲ ಜೀವಿಗಳಲ್ಲೂ ದಯೆ, ಅನುಕಂಪ, ಕಾರುಣ್ಯ ತೋರಲು ಪ್ರೇರೇಪಣೆ ನೀಡಿದೆ. ಮನುಷ್ಯತ್ವವನ್ನು .ಸ್ಫುರಿಸಿ, ಸಾಮಾಜಿಕ ನ್ಯಾಯ, ಪ್ರೀತಿ-ವಿಶ್ವಾಸಗಳ ತಳಹದಿಯಲ್ಲಿ ಹೊಸ ಸಮಾಜ ನಿರ್ಮಿಸುವುದಕ್ಕೆ ನೆರವಾಗುವ ತತ್ವಗಳೇ ಬುದ್ಧ ತತ್ವಗಳು.

ಅಡಿ ಟಿಪ್ಪಣಿಗಳು

- ಡಾ. ರಾಧಾಕುಮಾರ್ ಮುಖರ್ಜಿ,
  ಎ ಹಿಸ್ಟರಿ ಆಫ್ ಇಂಡಿಯನ್ ಸಿವಿಲೈಜೇಷನ್.

ಡಾ|| ಬಿ.ಆರ್. ಅಂಬೇಡ್ಕರ್ ಮತ್ತು ಬಸವಣ್ಣನವರ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯ

ಪ್ರೊ. ಜಗದೀಶ. ನಡುವಿನಮಠ
ಪ್ರೊ. ಮಂಜುನಾಥ ಎಸ್.

ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಹೋರಾಡಿದ ಮಹಾನ್ ದಾರ್ಶನಿಕರಲ್ಲಿ ಯುಗಪುರುಷ ಜಗಜ್ಯೋತಿ ಬಸವಣ್ಣನವರಿಗೆ ಹಾಗೂ ಸಾಮಾಜಿಕ ಕ್ರಾಂತಿಯ ಹರಿಕಾರ, ದಲಿತ ಜನಾಂಗದ ಬಿಡುಗಡೆಯ ಕಾರಣ ಪುರುಷ ಡಾ|| ಬಿ.ಆರ್. ಅಂಬೇಡ್ಕರ್ ಅವರಿಗೆ ಅಗ್ರಗಣ್ಯ ಸ್ಥಾನವಿದೆ.

ಅಂಬೇಡ್ಕರ್ ಹಿಂದೂ ಸಮಾಜದ ಅಮಾನವೀಯತೆ, ಮೇಲ್‌ಜಾತಿಯವರು ನೀಡಿದ ಕಿರುಕುಳ ಅನುಭವಿಸಿ ಬೆಳೆದವರು; ಆದರೆ ಅವರು ಸೇಡಿನ ಮನೋಭಾವ ವನ್ನು ಎಂದೂ ಬೆಳೆಸಿಕೊಂಡವರಲ್ಲ. ಬದಲಾಗಿ, ತಮಗಾದ ಅವಮಾನ ಮುಂದೆ ಯಾರಿಗೂ ಆಗಬಾರದು ಎಂಬ ಉದ್ದೇಶ ಇಟ್ಟುಕೊಂಡು, ಸಾಮಾಜಿಕ ನ್ಯಾಯ ಪಡೆಯುವ ಛಲಗಾರರಾಗಿ ಅವರು ರೂಪುಗೊಂಡರು.

ಯುಗಪುರುಷ ಬಸವಣ್ಣನವರು ಸಂಪ್ರದಾಯವಾದಿಗಳು ಮತ್ತು ಉಳ್ಳವರ ಶೋಷಣೆಯ ಕಪಿಮುಷ್ಟಿಯಲ್ಲಿ ಸಿಲುಕಿ ನರಳುತ್ತಿದ್ದ ಸಮಾಜವನ್ನು ಉನ್ನತ ಮಾರ್ಗದಲ್ಲಿ ಕೊಂಡೊಯ್ಯುವ ನಿಟ್ಟಿನಲ್ಲಿ ತಮ್ಮ ಜೀವನವನ್ನು ಪಣಕ್ಕೆ ಇಟ್ಟರು. ಸಾಮರಸ್ಯದ ಬದುಕನ್ನು ರೂಪಿಸಲು ಅವರು ತಮ್ಮನ್ನು ಅರ್ಪಿಸಿಕೊಂಡರು.

ಅಂಬೇಡ್ಕರ್‌ರವರ ದೃಷ್ಟಿಯಲ್ಲಿ ಸಾಮಾಜಿಕ ಸಮಸ್ಯೆಗಳು

1. ಅಸ್ಪೃಶ್ಯತೆ: 19ನೇ ಶತಮಾನದ ಉತ್ತರಾರ್ಧದಲ್ಲೂ ಅಸ್ಪೃಶ್ಯತೆ, ಮಡಿ ಮತ್ತು ಮೈಲಿಗೆಯ ಕಲ್ಪನೆಗಳು ಸಮಾಜದಲ್ಲಿ ತಾಂಡವಾಡುತ್ತಿದ್ದವು ಧರ್ಮದ, ಜಾತಿಯ, ಸಂಪ್ರದಾಯದ ಹೆಸರಿನಲ್ಲಿ ಮಾನವರು ಮಾನವರನ್ನು ಶೋಷಿಸುವ, ಅವಮಾನಿಸುವ ಸಮಾಜ ಅಂದಿನದು.ಅಂಥ ಕಾಲದಲ್ಲಿ "ಶಿಕ್ಷಣವು ಅಸ್ಪೃಶ್ಯತೆಯನ್ನು ನಿವಾರಿಸಬಲ್ಲದು" ಎಂಬ ನಿಲುವನ್ನು ಅಂಬೇಡ್ಕರ್ ಹೊಂದಿದ್ದರು.

2. ಜಾತಿ ವ್ಯವಸ್ಥೆ: ಮಾನವರ ಯೋಗ್ಯತೆಯನ್ನು, ಸಾಮರ್ಥ್ಯವನ್ನು ಜಾತಿ ಆಧಾರದ ಮೇಲೆ ಅಳತೆ ಮಾಡುವುದು ಸರಿಯಲ್ಲ; ಜಾತಿ ಎಂಬುದು ಭಾರತೀಯರಿಗೆ ಶಾಶ್ವತ ಶಾಪ; ಜಾತಿ ಪದ್ಧತಿಯು ಮಾನವರ ಅಭಿವೃದ್ಧಿಗೆ ಮುಳುವಾಗಿದೆ; ಜಾತಿ ಎಂಬುದು ಸಾವಿರ ಹೆಡೆಯ ಸರ್ಪ ಎಂದು ಡಾ॥ ಅಂಬೇಡ್ಕರ್ ತಿಳಿದಿದ್ದರು.

ಡಾ॥ ಬಿ.ಆರ್.ಅಂಬೇಡ್ಕರ್ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯ ಸ್ಥಾಪನೆಗಾಗಿ ಆಗಬೇಕಿರುವ ಸುಧಾರಣೆಗಳು

ಅನ್ಯಾಯ, ತಾರತಮ್ಯ, ಜಾತೀಯತೆ, ಅಸ್ಪೃಶ್ಯತೆ, ಅವಕಾಶಗಳ ವಂಚನೆ, ಅಧಿಕಾರಹೀನತೆ ಇತ್ಯಾದಿ ಅನಿಷ್ಟಗಳಿಗೆ ಬಲಿಯಾಗಿದ್ದ ಶೋಷಿತ ಸಮುದಾಯಗಳಿಗೆ ನ್ಯಾಯ ಒದಗಿಸಲು, ಕೆಲವೊಂದು ಪ್ರಮುಖ ಸುಧಾರಣೆಗಳು ಅತ್ಯವಶ್ಯ ಎಂದು ಅಂಬೇಡ್ಕರ್ ನಿರಂತರವಾಗಿ ಪ್ರತಿಪಾದಿಸಿದರು. ಅವುಗಳೆದಂದರೆ

1. ಸೈನ್ಯ ಮತ್ತು ಪೋಲಿಸ್ ಇಲಾಖೆಗಳಲ್ಲಿ ಸಮಾನ ಅವಕಾಶ
2. ಸಮಾನ ಪೌರ ಹಕ್ಕುಗಳು
3. ಸರ್ಕಾರಿ ಸೇವೆಯಲ್ಲಿ ಸಮಾನ ಸ್ಥಾನ, ಉಚಿತ ಶಿಕ್ಷಣ, ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತ ಅವಕಾಶ
4. ಸತ್ತ ಪ್ರಾಣಿಗಳ ಮಾಂಸ ಮತ್ತು ಮದ್ಯ ಸೇವನೆ ನಿಷೇಧ
5. ಕೆರೆ, ಬಾವಿ, ನದಿ, ನೀರನ್ನು ಉಪಯೋಗಿಸುವ ಅವಕಾಶ
6. ದೇವಸ್ಥಾನಗಳಿಗೆ ಪ್ರವೇಶ
7. ಸಮಾನ ರಾಜಕೀಯ ಹಕ್ಕುಗಳು
8. ತಾರತಮ್ಯಕ್ಕೆ ಗುರಿಪಡಿಸುವ ಧರ್ಮದಿಂದ ವಿಮೋಚನೆ
9. ಸಂವಿಧಾನದಲ್ಲಿ ರಕ್ಷಣೋಪಾಯಗಳು ಹಾಗೂ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ದಲ್ಲಿ ಜನಸಂಖ್ಯೆಗೆ ಅನುಗುಣವಾದ ಪ್ರಾತಿನಿಧ್ಯ
10. ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸಮಾನತೆಯ ತತ್ವಗಳು

ಬಸವಣ್ಣನವರ ದೃಷ್ಟಿಯಲ್ಲಿ ಸಾಮಾಜಿಕ ಸಮಸ್ಯೆಗಳು

12ನೇ ಶತಮಾನದಲ್ಲಿದ್ದ ಸಾಮಾಜಿಕ ಸಮಸ್ಯೆಗಳ ಬಗ್ಗೆ ಬಸವಣ್ಣನವರಲ್ಲಿ ಮೊದಲಿನಿಂದಲೂ ಚಿಂತನೆ ಮೂಡಿತ್ತು. ಅಸ್ಪೃಶ್ಯ ಬಾಲಕನಿಗೆ ಅವಮಾನವಾದ ಸಂದರ್ಭ, ತನ್ನ ಅಕ್ಕನಿಗೆ ಧಾರ್ಮಿಕ ಸಂಸ್ಕಾರ ಕೊಡದ ಸಂದರ್ಭ, ಶೋಷಣೆಯ ಮೂಲಕ ನಡೆದ ಅಮಾನವೀಯ ಸಂದರ್ಭಗಳು ಬಸವಣ್ಣನವರಲ್ಲಿ ತೀವ್ರ ಚಿಂತನೆ ಯನ್ನು ಮೂಡಿಸಿದ್ದವು. ತಮ್ಮ ಹಕ್ಕಿಗಾಗಿ ಹೋರಾಡುವುದು ದೊಡ್ಡ ಮಾತಲ್ಲ; ಸಮಾಜದಲ್ಲಿ ಎಲ್ಲರಿಗೆ ಹಕ್ಕುಗಳು ದೊರಕಬೇಕು ಎಂದು ಶ್ರಮಿಸುವುದು ದೊಡ್ಡದು ಎಂಬುದು ಬಸವಣ್ಣನವರ ನಿಲುವಾಗಿತ್ತು.

ಅರ್ಥಹೀನ ಪದ್ಧತಿಯ ವಿರುದ್ಧ ದನಿಯೆತ್ತಿ ಅವರು ತಂದೆಯ ಕೋಪಕ್ಕೆ ತುತ್ತಾಗುತ್ತಿದ್ದರು. ಧಾರ್ಮಿಕತೆಯ ಹೆಸರಿನಲ್ಲಿ ಆಚರಿಸುತ್ತಿದ್ದ ಪ್ರಾಣಿಬಲಿ, ಕಂದಾಚಾರ, ಶೋಷಣೆ ಕಂಡು ಮರುಗುತ್ತಿದ್ದರು. ಅಮಾನವೀಯತೆಯ ಪ್ರತಿರೂಪವಾದ ಅಸ್ಪೃಶ್ಯತೆ ಅವರ ಮನ ಕಲಕುತ್ತಿತ್ತು.

ಬಸವಣ್ಣನವರ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯ ಸ್ಥಾಪನೆಗಾಗಿ ಆಗಬೇಕಿರುವ ಸುಧಾರಣೆಗಳು

ನೊಂದಂತಹ ವ್ಯಕ್ತಿಯನ್ನು ಹೀಯಾಳಿಸಬಾರದು
ಅದು ಗಾಯದ ಮೇಲೆ ಬರೆ ಎಳೆದಂತೆ
ಹಗೇವಿನಲ್ಲಿ ಬಿದ್ದವರ ಮೇಲೆ ಒರಳ ನೂಕುವರೆ?
ಕೋಳದ ಮೇಲೆ ಸಂಕೋಲೆಯನಿಕ್ಕುವರೆ?
ಬೆಂದ ಹುಣ್ಣ ಕಂಬಿಯಲ್ಲಿ ಕೀಸುವರೆ?
ಕೂಡಲ ಸಂಗಯ್ಯ ಕಾಡುವ ಕಾಟ
ಸಿರಿಯಾಳರಿಗಲ್ಲದೆ ಸೈರಿಸಬಹುದೇ?

ಕೆಳಗೆ ಬಿದ್ದವರಿಗೆ ನಾಲ್ಕು ಏಟು ಹೆಚ್ಚಿಗೆ ಹಾಕುವುದು ಸಾಮಾನ್ಯ. ಕಷ್ಟದಲ್ಲಿ ಇರುವವರಿಗೆ ಇನ್ನೊಂದಿಷ್ಟು ತೊಂದರೆ ಕೊಡುವುದು, ಮೇಲೇಳೆದಂತೆ ವ್ಯವಸ್ಥಿತವಾಗಿ ನೋಡಿಕೊಳ್ಳುವುದು ಎಂದರೆ ಬೆದರಿದವನ ಮೇಲೆ ಹಾವನ್ನು ಎಸೆದಂತೆ; ಛೇಡಿಸಿ, ಮನಸ್ಸಿಗೆ ನೋವನ್ನುಂಟು ಮಾಡುವುದು ಮಾನವೀಯತೆಯ ಲಕ್ಷಣವಲ್ಲ, ನೋವು-ಸಂಕಟದಲ್ಲಿ ಇರುವವರಿಗೆ ಬೇಕಿರುವುದು ಸಾಂತ್ವನದ ನುಡಿಗಳೇ ಹೊರತು ಬಿರುನುಡಿಗಳಲ್ಲ, ಶಸ್ತ್ರರಹಿತರ ಮೇಲೆ ಬಾಣದ ಮಳೆಗರೆಯುವುದು ವೀರರ ಲಕ್ಷಣವಲ್ಲ.

ಜಾತಿ ಮೂಲ ಕಾರಣವಾಗಿ
ವ್ಯಕ್ತಿಯನ್ನು ಹೀನಾಯವಾಗಿ ಕಾಣಬಾರದು.
ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯ
ಕಕ್ಕಯ್ಯನೊಕ್ಕು ದನಕ್ಕ ನೋಡಯ್ಯ
ದಾಸಯ್ಯಾ ಶಿವದಾನವ ನೆರೆಯ ನೋಡಯ್ಯಾ,
ಮನ್ನಣೆಯ ಚೆನ್ನಯ್ಯಾ ನೆನ್ನೆವ ಮನ್ನಿಸ, ಉನ್ನತ ಮಹಿಮೆ,
ಕೂಡಲ ಸಂಗಮದೇವಾ, ಶಿವಧೋ ಶಿವಧೋ !

ಒಬ್ಬ ವ್ಯಕ್ತಿ ಕೀಳು ಜಾತಿಯವನಾಗಿದ್ದರೆ ಅವನಲ್ಲಿ ಕೀಳುರಿಮೆ ಇರುವ ಕಾರಣ, ಮೇಲ್ ಜಾತಿಯವರಲ್ಲಿ ವ್ಯವಹಾರ ಮಾಡಲು ಹಿಂಜರಿಯುತ್ತಾನೆ. ಎರಡೂ ವರ್ಗದ ಜನರ ಮಧ್ಯೆ ಮಾನವ ನಿರ್ಮಿತ ಕೃತಕ ಗೋಡೆ ಅಡ್ಡಲಾಗಿದೆ. ಇದರಿಂದ ಪರಸ್ಪರ ಉತ್ತಮ ಜೀವನ ನಡೆಸಲು ಸಾಧ್ಯವಿಲ್ಲ ಎಂದ ಅವರು, ಮಾನವ ನಿರ್ಮಿತ ಜಾತಿಪದ್ಧತಿಯನ್ನು ಒಡೆಯಬೇಕೆಂದು ಕರೆ ನೀಡಿದರು.

ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ,
ನಿಮ್ಮ ಪಾದಸಾಕ್ಷಿ ಎನ್ನ ಮನಸಾಕ್ಷಿ ಎನಗಿದೇ ದಿವ್ಯ,

ವ್ಯಕ್ತಿಗಿಂತ ಸಮಾಜ ಶ್ರೇಷ್ಠ; ಆದ್ದರಿಂದ ಸಮಾಜದ ಬಂಧುಗಳು ದೊಡ್ಡವರೆಂದು ಗೌರವಿಸಬೇಕು. ಒಬ್ಬ ವ್ಯಕ್ತಿ ಎಷ್ಟೆ ದೊಡ್ಡವರಾಗಿರಲಿ, ಅವರಲ್ಲಿ ವಿನಯ ಇಲ್ಲದಿದ್ದರೆ ಅಂತಹ ವ್ಯಕ್ತಿತ್ವ ಮೂಗಿಲ್ಲದ ಶೃಂಗಾರವಾಗುತ್ತದೆ. ತಾನೇ ಎಲ್ಲರಿಗಿಂತ ಶ್ರೇಷ್ಠ ಎಂದು ಬೀಗುತ್ತಿದ್ದರೆ, ಕೊನೆಗೊಂದು ದಿನ ಯಾರೂ ಅಂಥ ವ್ಯಕ್ತಿಗೆ ಗೌರವವನ್ನು ಕೊಡುವುದಿಲ್ಲ; ವಿನಯವಂತರಿಗೆ ಯಾವಾಗಲೂ ಸಮಾಜದಲ್ಲಿ ಮಹತ್ವ ಇರುತ್ತದೆ ಎಂದು ಬಸವಣ್ಣ ತಿಳಿಸುತ್ತಾರೆ.

ಏನಯ್ಯಾ ವಿಪ್ರರು ನುಡಿದಂತೆ ನಡೆಯರು ಇದೆಂತಯ್ಯಾ ?
ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ!
ಕೂಡಲ ಸಂಗಮದೇವಯ್ಯಾ ಹೊಲೆಯರ ಬಸುರಲ್ಲಿ,
ವಿಪ್ರರು ಹುಟ್ಟಿ ಗೋಮಾಂಸವ ತಿಂಬರೆಂಬುದಕ್ಕೆ ಇದೇ ದೃಶ್ಯ

ಬಸವಣ್ಣನವರ ಅಭಿಪ್ರಾಯದಲ್ಲಿ ಎಲ್ಲರಿಗೂ ಒಂದೇ ದಾರಿ, ಕಾನೂನು ಇರಬೇಕು. ಇದೆಂಥ ವಿಪರ್ಯಾಸ! ವಿಪ್ರರು ನುಡಿದಂತೆ ತಾವೇ ನಡೆಯರು; ಒಂದು ನೀತಿ, ನಿಯಮ, ಒಂದು ಚೌಕಟ್ಟು ಇದ್ದರೆ, ಅದು ಎಲ್ಲರಿಗೂ ಅನ್ವಯಿಸಬೇಕು. ಆಗ ಅವುಗಳಿಗೆ ಗೌರವ ಸಿಗುತ್ತದೆ. ಪ್ರತಿಯೊಬ್ಬರಿಗೂ ಸಮಾನವಾದ ಕಾನೂನು, ನಿಯಮ ಇರಬೇಕು ಎಂದು ಅವರು ಆಗ್ರಹಪಡಿಸುತ್ತಾರೆ.

ದಯವಿಲ್ಲದ ಧರ್ಮವು ಯಾವುದಯ್ಯಾ ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ.

ಪ್ರತಿಯೊಬ್ಬ ವ್ಯಕ್ತಿಯ ಜೀವವನ್ನು ಗೌರವಿಸಬೇಕು, ಯಾರಲ್ಲೂ ಕ್ರೂರವಾಗಿ ವರ್ತಿಸಬಾರದು, ನಾವು ಬದುಕಬೇಕು ಇತರರನ್ನು ಬದುಕಲು ಬಿಡಬೇಕು, ನಮ್ಮ ಜೀವ ಶ್ರೇಷ್ಠವಾದುದು, ಅಮೂಲ್ಯವಾದುದು ಎಂದು ಹೇಗೆ ಭಾವಿಸುತ್ತೇವೆಯೋ ಹಾಗೆಯೆ ಇತರರ ಜೀವವು ಸಹ ಅಮೂಲ್ಯವಾದುದು ಎಂಬುದನ್ನು ಅರಿಯಬೇಕು. ಧರ್ಮದ ಮೂಲಾಧಾರವಾಗಿ ದಯೆ ಇರಬೇಕು. ಧರ್ಮದ ಸೌಧ ದಯೆಯ ಅಡಿಪಾಯದ ಮೇಲೆ ಕಟ್ಟಿರಬೇಕು, ಆಗ ಆ ಧರ್ಮವು ಬಹುಕಾಲ ಬಾಳುತ್ತದೆ. ಸಹಜೀವನ, ಸಹಬಾಳ್ವೆ ನಡೆಸುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡರೆ ಸಮಾಜ ಸುಧಾರಣೆ ಆಗುತ್ತದೆ ಎಂದು ಬಸವಣ್ಣನವರು ಉತ್ಕೃಷ್ಟವಾಗಿ ತಿಳಿಸಿದ್ದಾರೆ.

ಪಸಂಹಾರ

ಅಂಬೇಡ್ಕರ್ ಮತ್ತು ಬಸವಣ್ಣ ಸಾಮಾಜಿಕ ಸಮಸ್ಯೆಗಳ ನಿರ್ಮೂಲನೆಗಾಗಿ ರಂತರವಾಗಿ ಹೋರಾಟ ಮಾಡಿ, ಪರಿಹಾರ ಕಂಡುಕೊಂಡು, ಸಮಾಜಕ್ಕೆ ಾರ್ಗದರ್ಶನ ನೀಡಿದ ಮಹಾ ಮಾನವತಾವಾದಿಗಳು ಮತ್ತು ದಾರ್ಶನಿಕರು. "ಅದೃಷ್ಟದ ೕಲೆ ನಂಬಿಕೆಯಿಡಬೇಡಿ; ಪ್ರಯತ್ನದ ಮೇಲೆ ನಂಬಿಕೆಯಿಡಿ" ಎಂದು ಭಾರತೀಯರಿಗೆ ರಿವಿನ ಜ್ಞಾನವನ್ನು ಮೂಡಿಸಿದ ಮಹಾನ್ ತತ್ವಜ್ಞಾನಿ.

ಮಹಾನ್ ಮಾನವತಾವಾದಿ ಬಸವಣ್ಣ 12ನೇ ಶತಮಾನದಲ್ಲಿ ನವ ಸಮಾಜದ ರ್ಮಾಣಕ್ಕೆ ಬದ್ಧರಾಗಿ ನಿಂತವರು, ಕಾಯಕ ನಿಷ್ಠೆಯನ್ನು ವಿಶ್ವಕ್ಕೆ ಸಾರಿದ ಮಹಾನ್ ತ್ವಜ್ಞಾನಿಗಳಾಗಿದ್ದಾರೆ. ಸಮಾಜದ ಅನಿಷ್ಠ ಪದ್ಧತಿಗಳ ವಿರುದ್ದ ಹೋರಾಟ ರೂಪಿಸಿ, ಾನವೀಯತೆಯನ್ನು ಪ್ರತಿಪಾದಿಸಿದ ಸಾಮಾಜಿಕ ಚಿಂತಕರು. ಜಗತ್ತಿನ ಚರಿತ್ರೆಯಲ್ಲಿ ಳಿಸಲಾಗದ ಕಪ್ಪು ಚುಕ್ಕೆಗಳಾದ ಅಸ್ಪೃಶ್ಯತೆ, ಜಾತಿ ಪದ್ಧತಿ, ಶೋಷಣೆಗಳನ್ನು ಳಿಸಿಹಾಕಿ, ಶೋಷಣಾ ಮುಕ್ತ ಸಮಾಜವನ್ನು ಸ್ಥಾಪನೆ ಮಾಡುವಲ್ಲಿ ಹಾಗೂ ಸಾಮಾಜಿಕ ್ಯಾಯ ದೊರಕಿಸುವಲ್ಲಿ ಇವರಿಬ್ಬರೂ ಮಹಾನ್ ದಾರ್ಶನಿಕರಾಗಿದ್ದಾರೆ.

ಜಾತಿ-ಲಿಂಗ ತಾರತಮ್ಯ : ಬಸವ ಚಿಂತನೆ

ಎಂ. ನಂದೀಶ

ಭಾರತ ದೇಶದಲ್ಲಿ ತಮ್ಮ ಆದರ್ಶಗಳ ಮೂಲಕ ಸಾಮಾಜಿಕ ನ್ಯಾಯ ಸಿದ್ಧಾಂತವನ್ನು ಪ್ರತಿಪಾದಿಸಿದ ಮಹಾನ್ ವ್ಯಕ್ತಿಗಳಲ್ಲಿ ಬಸವಣ್ಣನವರು ಪ್ರಮುಖರು. ಸ್ಪೃಶ್ಯ-ಅಸ್ಪೃಶ್ಯರ ನಡುವೆ, ಮೇಲ್ಜಾತಿ-ಕೆಳಜಾತಿಗಳ ನಡುವೆ ಬೆಳೆದು ಬಂದಿದ್ದ ಬೃಹತ್ ಗೋಡೆಯನ್ನು ಒಡೆದು, ಅವರೆಲ್ಲರನ್ನು ಶರಣತ್ವದ ನೆಲೆಯಲ್ಲಿ ಒಂದುಗೂಡಿಸುವ ಯತ್ನವನ್ನು ಮಾಡಿದರು. ಅಲ್ಲದೆ ಲಿಂಗ ಸಮಾನತೆಯನ್ನು ಸಾಧಿಸುವ ಅಮೋಘ ಯತ್ನ ಮಾಡಿದರು. ಹರಳಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಶಿವನಾಗಮಯ್ಯ ಮುಂತಾದವರು ಬಸವ ತತ್ವಗಳಿಗೆ ಶರಣಾದರು. ಹಾಗೂ ಅಕ್ಕಮಹಾದೇವಿ, ಮಹಾದೇವಮ್ಮ, ಲಕ್ಕಮ್ಮ, ಲಿಂಗಮ್ಮ, ಗಂಗಾಂಬಿಕೆ, ನೀಲಾಂಬಿಕೆ ಮುಂತಾದ ಸ್ತ್ರೀಯರು ಶರಣತತ್ವ ಒಪ್ಪಿಕೊಂಡು ಮಾನವೀಯತೆಗೆ ಜೀವ ನೀಡಿದ ಅಪೂರ್ವ ಬದಲಾವಣೆ ಸಂಭವಿಸಲು ಮೂಲ ಕಾರಣಕರ್ತೃರು ಬಸವಣ್ಣನವರಾಗಿದ್ದಾರೆ. ಈ ಕಾರಣದಿಂದ ಬಸವಣ್ಣನ ತತ್ವಗಳಿಗೆ "ಸಾಮಾಜಿಕ ಕ್ರಾಂತಿ" ತತ್ವವೆಂಬ ಮನ್ನಣೆ ಈಗಲೂ ಸಲ್ಲುವುದು.

ಕಾಯಕವೇ ಕೈಲಾಸ

'ಶ್ರಮ ತತ್ವ'ವು ಬಸವೇಶ್ವರರ ವಿಚಾರದ ಕೇಂದ್ರ ಭಾಗ. ಇದು ಭಾರತೀಯ ಜನಜೀವನಕ್ಕೆ ಸಾಕ್ಷಾತ್ಕರಿಸಿ ಕೊಟ್ಟ ಒಂದು ಚಿರಂತನ ಮೌಲ್ಯ. ಇದನ್ನು ನೆಲೆಗೊಳಿಸಿದ ಕೀರ್ತಿ 'ಅನುಭವ ಮಂಟಪ'ಕ್ಕೆ ಸಲ್ಲುತ್ತದೆ. ವ್ಯಕ್ತಿಯ ಕ್ಷೇಮಕ್ಕೆ, ನಾಡಿನ ಅಭ್ಯುದಯಕ್ಕೆ ಕಾಯಕವೊಂದೇ ಮೂಲ; ಅದೊಂದೇ ಸತ್ಯ. ಪ್ರಾಮಾಣಿಕತೆಯಿಂದ ದುಡಿಯು ವವರಿಗೆ ಯಾವುದೇ ಶಂಕೆಯೂ ಸುಳಿಯುವುದಿಲ್ಲ, ಅಲ್ಲದೆ ಅಂತಹ ಸಮಾಜಕ್ಕೆ ದಾರಿದ್ರ್ಯವೂ ಸೋಂಕದು ಎಂದು ಬಸವೇಶ್ವರರು ನಂಬಿದ್ದರು.

ಕಾಯಕಗಳಲ್ಲಿ ಮೇಲು-ಕೀಳೆಂಬುದಿಲ್ಲ

ಎಲ್ಲಾ ಕಾಯಕಗಳು ಸಮಾನ. ಯಾವುದೂ ಮೇಲು ಅಲ್ಲ, ಕೀಳು ಅಲ್ಲ. ನ್ಯಾಯೋಚಿತವಾಗಿ ದುಡಿಯುವುದು ಪ್ರತಿಯೊಬ್ಬರ ನೈತಿಕ ಹೊಣೆ. ಕಾಯಕವನ್ನು ಅಥವಾ ವ್ಯಕ್ತಿಯನ್ನಾಧರಿಸಿ ಉಚ್ಚ-ನೀಚ ಎಂದು ವಿಭಾಗಿಸುವುದು ತರವಲ್ಲ ಎಂದರು ಬಸವಣ್ಣನವರು.

ಬಸವಪೂರ್ವ ಯುಗ: ಕಾಯಕದ ಲಕ್ಷಣಗಳು

ಬಸವಪೂರ್ವ ಯುಗದಲ್ಲಿ ಪ್ರಚಲಿತವಿದ್ದ ಕಾಯಕದ ಲಕ್ಷಣಗಳನ್ನು ಹೀಗೆ ಗುರುತಿಸಬಹುದು.

1. ಪ್ರತಿಯೊಂದು ವರ್ಣ ಅಥವಾ ಜಾತಿಗೂ ತನ್ನದೇ ಆದ ಕಾಯಕ ಅಥವಾ ವೃತ್ತಿಯಿದೆ.
2. ಪ್ರತಿಯೊಬ್ಬನೂ ತನ್ನ ಜಾತಿಯ ಕಾಯಕ ಅಥವಾ ವೃತ್ತಿಯನ್ನು ಮಾತ್ರ ಮಾಡಬೇಕು. ತನಗಿಂತಲೂ ಮೇಲಿನ ಜಾತಿಯ ಕಾಯಕಕ್ಕೆ ಆಶಿಸಕೂಡದು.
3. ಕಾಯಕವೇ ಕೈಲಾಸ. ಕಾಯಕ ಮಾಡುತ್ತಲೇ ಶಿವತ್ವವನ್ನು ಪಡೆಯುವುದು ಶ್ರೇಯಸ್ಕರ. ಕಾಯಕವೆಂದಿಗೂ ಆಧ್ಯಾತ್ಮ ಸಾಧನೆಗೆ ಅಡ್ಡಿ ಪಡಿಸದು.
4. ಕಾಯಕವನ್ನು ಧಾರ್ಮಿಕ ಕರ್ತವ್ಯವೆಂಬಂತೆ ನ್ಯಾಯೋಚಿತವಾಗಿ ನಡೆಸಬೇಕು. ನೀತಿ-ಧರ್ಮಬಾಹಿರವಾದ ಗಳಿಕೆ ಕಳ್ಳತನಕ್ಕೆ ಸಮಾನ.
5. ಕಾಯಕ ಮಾಡುವುದು ಒಂದು ನೈತಿಕ ಬದ್ಧತೆ. ಪ್ರತಿಯೊಬ್ಬನೂ ತನ್ನ ಅನ್ನವನ್ನು ದುಡಿದು ತಿನ್ನಬೇಕು.

ಬಸವಣ್ಣನ ಕಲ್ಪನೆಯ ಸಾಮಾಜಿಕ ಸಮಾನತೆ

ಬಸವಣ್ಣನವರ ವಿಚಾರ ಧಾರೆಯಲ್ಲಿ ಎದ್ದು ಕಾಣುವುದು ಸಾಮಾಜಿಕ ಕಳಕಳಿ. ಹಾಗಾಗಿ, ಅವರು ಸಾಮಾಜಿಕ ಅಸಮಾನತೆಯ ವಿರುದ್ಧ ಅವಿರತವಾಗಿ ನಡೆಸಿದ ಹೋರಾಟಕ್ಕೆ ಬಹಳ ಮಹತ್ವವಿದೆ. ಇಂತಹ ಹೋರಾಟಕ್ಕೆ ಅಂದಿನ ಪರಿಸ್ಥಿತಿಗಳು ಕಾರಣ ಇರಬಹುದು. ಸಮಾಜದಲ್ಲಿ ಇದ್ದ ತಾರತಮ್ಯ ವಿಪರೀತವಾದ ಕಾರಣ, ಸಮಾಜವು ಅಜ್ಞಾನದ ಅಂಧಕಾರದಲ್ಲಿ ಮುಳುಗಿತ್ತು. ಈ ತಾರತಮ್ಯಗಳಿಂದ ಸಮಾಜದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆ ನಡೆಯುತ್ತಿತ್ತು. ಬುದ್ಧ ಮತ್ತು ಮಹಾವೀರರ ಸಾಮಾಜಿಕ ಪರಿವರ್ತನೆಯ ಕಾವು ಮಾಸಿದ್ದು, ವೃತ್ತಿ ಆಧಾರಿತ ಮೇಲು-ಕೀಳು ಚಿಂತನಾ ಕ್ರಮ ಮುನ್ನಡೆದು, ಸಮಾಜಪರ ಚಿಂತನಾ ಕ್ರಮ ಉಪೇಕ್ಷೆಗೆ ಒಳಗಾಗಿತ್ತು. ಇಂಥ ಸಂದರ್ಭದಲ್ಲಿ ಬಸವಣ್ಣ 'ವ್ಯಕ್ತಿ ಕಲ್ಯಾಣ ದೊಂದಿಗೆ ಸಮಾಜ ಕಲ್ಯಾಣವೂ ಅಗತ್ಯ' ಎಂದು ಸಾರಿ, ಅವುಗಳ ನಡುವೆ ಅನುಪಮವಾದ ಸಾಂಗತ್ಯ ಏರ್ಪಡುವಂತೆ ಮಾಡಿದರು.

ವೈಚಾರಿಕ ಕ್ರಾಂತಿಯ ಮೂಲಕ ಸಮಾನತೆಯ ಸಮಾಜದ ಸ್ಥಾಪನೆ

ಚಿಕ್ಕಂದಿನಿಂದ ಬಸವಣ್ಣನವರ ಮನಸ್ಸು ಸಾಮಾಜಿಕ ಅಸಮಾನತೆ ಬಗ್ಗೆ ಕಲಕಿತ್ತು. ಹಾಗಾಗಿ, ಅಸಮಾನತೆಯನ್ನು ನಿವಾರಣೆ ಮಾಡಿ, ಸಮಾನತೆಯನ್ನು ಸ್ಥಾಪಿಸಬೇಕೆಂಬುದು ಅವರ ತುಡಿತವಾಗಿತ್ತು. ಇದಕ್ಕಾಗಿ ಅವರು ಅಹಿಂಸಾತ್ಮಕ ಮಾರ್ಗವನ್ನು ಅನುಸರಿಸಿದರು. ಕಾಯಕ ಮತ್ತು ದಾಸೋಹ ಮಾಧ್ಯಮಗಳ ಮೂಲಕ, ಆದರ್ಶ ಸಮಾಜ ಸ್ಥಾಪಿಸಿ, ಸಮಾನತೆಯನ್ನು ಸಾಧಿಸಬಹುದು ಎಂದರು. ವಿಚಾರಗಳ ಬಗ್ಗೆ ಚರ್ಚೆ, ವಿಮರ್ಶೆಗೆ ಅವಕಾಶ ನೀಡಲು 'ಅನುಭವ ಮಂಟಪ' ಎಂಬ ವೈಚಾರಿಕ ವೇದಿಕೆಯನ್ನು ಸ್ಥಾಪಿಸಿದರು.

ಇದರ ಮೂಲಕ ಎಲ್ಲ ಜಾತಿ, ಪಂಥ, ಲಿಂಗ, ವರ್ಗಗಳನ್ನು ಒಂದುಗೂಡಿಸಲು ಹೊರಟ ಸಾಹಸಿ ಇವರು. ವೈಚಾರಿಕ ವಿಚಾರಗಳನ್ನು ಸಮಾಜಕ್ಕೆ ತಿಳಿಸಿಕೊಡಲು, ವಚನ ಸಾಹಿತ್ಯವನ್ನು ಸಾಧನವನ್ನಾಗಿ ಬಳಸಿ, ಸಮಾಜಕ್ಕೆ ಸರಳ ಭಾಷೆಯ ಮೂಲಕ ಪರಿವರ್ತನೆಯ ಅಗತ್ಯವನ್ನು ಮನಗಾಣಿಸಿಕೊಟ್ಟರು.

ಸಾಮಾಜಿಕ ಸಮಾನತೆಗೆ ವಿವಿಧ ಪರಿಕಲ್ಪನೆಗಳು

1. ಆರ್ಥಿಕ ಸಮಾನತೆ: ಸಾಮಾಜಿಕ ಸಮಾನತೆಗೆ ಮೂಲವಾದುದು ಆರ್ಥಿಕ ಸಮಾನತೆ. ಬಿಜ್ಜಳನ ಆಸ್ಥಾನದಲ್ಲಿ ಅರ್ಥ ಸಚಿವರಾಗಿದ್ದಾಗ, 'ಭಂಡಾರದ ಒಡೆಯ ರಾಜನಲ್ಲ, ಪ್ರಜೆಗಳು' ಎಂಬ ನಂಬಿಕೆಯನ್ನು ಬಸವಣ್ಣ ಅಭಿವ್ಯಕ್ತಿಸಿದರು. ಆರ್ಥಿಕ ಅಸಮಾನತೆಯನ್ನು ಅವರು ಪ್ರತಿಪಾದಿಸಿದರು. ಶ್ರೀಮಂತಿಕೆಯ ಬಗ್ಗೆ ತಮಗಿದ್ದ ಅನಾಸಕ್ತಿ/ತಿರಸ್ಕಾರವನ್ನು ಅವರು ಸಾರ್ವಜನಿಕಗೊಳಿಸಿದರು. ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು "ನಿಮಗೆ ಅಗತ್ಯವಿದ್ದುದಕ್ಕಿಂತ ಹೆಚ್ಚಿನದೇನನ್ನೂ ಸ್ವೀಕರಿಸಬೇಡಿರಿ" ಎಂಬ ಪರಿಹಾರವನ್ನು ಸೂಚಿಸಿದರು. 'ಶರಣ ಸಮಾಜದಲ್ಲಿ ಯಾರೂ ಶ್ರೀಮಂತರಿರುವುದಿಲ್ಲ. ಯಾರೂ ದರಿದ್ರರಿರುವುದಿಲ್ಲ' ಎಂದು ಸಾರಿದರು.

2. ಜಾತಿ ಸಮಾನತೆ: ಹುಟ್ಟಿನಿಂದ ಯಾರೂ ಮೇಲಲ್ಲ, ಕೀಳಲ್ಲ, ಮಾನವನ ಹುಟ್ಟು ನೈಸರ್ಗಿಕ ನಿಯಮಗಳಿಗೆ ಅನುಗುಣವಾಗಿರುತ್ತದೆ ಎಂದ ಬಸವಣ್ಣನವರು, ವರ್ಣ ತಾರತಮ್ಯವನ್ನು ಪ್ರಶ್ನಿಸಿದರು. ಚತುರ್ವರ್ಣಗಳು ದೇವರ ವಿವಿಧ ಅಂಗಗಳಿಂದ ಹುಟ್ಟಿದವು ಎಂಬುದನ್ನು ಹೀಗಳೆದರು.

3. ವೃತ್ತಿ ಸಮಾನತೆ: ಕಾಯಕದ ಆಧಾರದ ಮೇಲಿನ ಜಾತಿ ವಿಂಗಡಣೆಯು ಸಮಾಜ ದ್ರೋಹ, ದೇಶದ್ರೋಹ, ವಿಶ್ವದ್ರೋಹ ಎಂದವರಲ್ಲಿ ಬಸವಣ್ಣನವರು ಮೊದಲಿಗರು. ಯಾರು ಕಾಯಕ ಯೋಗಿಯೋ ಅವರೇ ನಿಜವಾದ ಭಕ್ತರು ಎಂದರು. ಯಾರು ಯಾವ ಕಾಯಕವನ್ನು ಮಾಡುತ್ತಿದ್ದಾರೆ ಎಂಬುದು ಅಪ್ರಸ್ತುತ. ಆದರೆ ಮಾಡುವ ಕೆಲಸವನ್ನು ಮಾತ್ರ ಸರಿಯಾಗಿ ಮಾಡಬೇಕೆಂಬ ನೈತಿಕ ಆಗ್ರಹ ಮಾಡಿದರು.

4. ಲಿಂಗ ಸಮಾನತೆ: ಸ್ಮೃತಿಗಳ ಕಾಲಾನಂತರದಲ್ಲಿ ಸ್ತ್ರೀಯರ ಸ್ಥಾನಮಾನಗಳು ಅಧೋಗತಿಗಿಳಿದವು. ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎಂದಾಯಿತು. ಪುರುಷರು ಸರ್ವಾಧಿಕಾರಿಗಳಾದರು; ಸ್ತ್ರೀಯರು ಅಧೀನರಾದರು. ಇಂತಹ ಹಿನ್ನೆಲೆಯಲ್ಲಿ ಬಸವಣ್ಣನವರು ಸ್ತ್ರೀ–ಪುರುಷ ಸಮಾನತೆಯ ಘೋಷಣೆ ಮೊಳಗಿಸಿದರು. ಅದಕ್ಕಾಗಿ ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ ವಿಮೋಚನಾ ಚಳುವಳಿಗೆ ನಾಂದಿ ಹಾಡಿದರು. ಸ್ತ್ರೀಯರಿಗೂ ಲಿಂಗ ಧರಿಸಲು, ಶಿವಾರಾಧನೆ ಮಾಡಲು ಅವಕಾಶ ನೀಡಿದರು, ಸ್ತ್ರೀಯರೂ ಧಾರ್ಮಿಕ ವಿಚಾರಗಳಲ್ಲಿ ಸಮರ್ಥರು ಎಂದು ತಿಳಿಸಿದರು. ಧಾರ್ಮಿಕ ವಿಚಾರಗಳಲ್ಲಿ ಸ್ತ್ರೀ–ಪುರುಷರಿಗೆ ಮುಕ್ತ ಚರ್ಚೆ ನಡೆಸಲು ಅವಕಾಶ ಕಲ್ಪಿಸಿದರು. 'ಅನುಭವ ಮಂಟಪ'ದಲ್ಲಿ ಸ್ತ್ರೀಯರಿಗೂ ಅವಕಾಶ ಕಲ್ಪಿಸಿದರು.

ಬಸವಣ್ಣನವರು ಪ್ರಕಾರ ಸ್ತ್ರೀಯರ ಸ್ಥಾನಮಾನ

ಬಸವೇಶ್ವರರು ತಮ್ಮ ಜೀವನದಲ್ಲಿ ಸಾಧಿಸಿದ ಮಹತ್ಸಾಧನೆಗಳಲ್ಲಿ ಸ್ತ್ರೀಯರಿಗೆ ಒದಗಿಸಲಾದ ಸಾಮಾಜಿಕ, ಧಾರ್ಮಿಕ ಸಮಾನತೆ ಪ್ರಮುಖವಾದುದು. ವರ್ಣಬೇಧ, ಜಾತಿಭೇಧ, ವರ್ಗಭೇಧವನ್ನು ವಿರೋಧಿಸಿದ ರೀತಿಯಲ್ಲೇ, ಅವರು ಲಿಂಗ ಬೇಧವನ್ನೂ ವಿರೋಧಿಸಿದರು. ದೇವರನ್ನು ಪ್ರಾರ್ಥಿಸುವುದರಲ್ಲಿ ಸ್ತ್ರೀ-ಪುರುಷರು ಸಮಾನರೆಂದು ಹೇಳಿದರು. ಅಲ್ಲದೆ, ಪುರುಷರಿಗೆ ಸಮಾನವಾಗಿ ಬಾಳುವ ಎಲ್ಲಾ ಅರ್ಹತೆಗಳು ಸ್ತ್ರೀಯರಲ್ಲಿ ಇವೆ ಎಂದು ಒತ್ತಿ ಹೇಳಿದರು.

ಮಹಿಳೆಯರ-ಪುರುಷರ ಸಮಾನತೆಯ ಹಿನ್ನೆಲೆಯಲ್ಲಿ ಬಸವಣ್ಣನವರು ಅನೇಕ ವಿಷಯಗಳನ್ನು ಪ್ರತಿಪಾದಿಸಿದರು. ಅವುಗಳೆಂದರೆ-

1. ಜೈವಿಕ ಲಕ್ಷಣಗಳ ಹೊರತಾದ ಲಿಂಗಸಮಾನತೆ: ಹೆಣ್ಣು ಗಂಡು ಎಂಬ ವ್ಯತ್ಯಾಸ ಜೈವಿಕ ಲಕ್ಷಣಗಳಿಗೆ ಸೀಮಿತವಾಗಿರಬೇಕೆ ವಿನಃ, ಸ್ತ್ರೀತ್ವಕ್ಕೆ ಮುಸುಗಿದ ಶಾಶ್ವತ ಗ್ರಹಣದಂತೆ ಇರಬಾರದು. ಸ್ತ್ರೀ-ಪುರುಷರ ನಡುವೆ ಕಾಣುವ ಶಾರೀರಿಕ ಲಕ್ಷಣ, ಭೇದಗಳನ್ನು ಆತ್ಮಕ್ಕೆ ಆರೋಪಿಸಬಾರದು ಎಂದು ಬಸವಣ್ಣ ಎಚ್ಚರಿಸಿದರು.
2. ಸ್ತ್ರೀಯರಿಗೂ ಧಾರ್ಮಿಕ ಸ್ವಾತಂತ್ರ್ಯ: ಸ್ತ್ರೀಯರೂ ಆಧ್ಯಾತ್ಮಿಕವಾಗಿ ಪುರುಷರಷ್ಟೇ ಉನ್ನತವಾಗಿ ಚಿಂತಿಸಬಲ್ಲರು ಎಂದು ಪ್ರತಿಪಾದಿಸಿದ ಬಸವಣ್ಣನವರು, ಲಿಂಗ ದೀಕ್ಷೆ, ಲಿಂಗ ಧಾರಣೆ ಹಾಗೂ ಲಿಂಗಾರ್ಚನೆಯ ಹಕ್ಕನ್ನು ಸ್ತ್ರೀಯರಿಗೂ ನೀಡಿದರು. ಲಿಂಗ ಧರಿಸಿದ ಸ್ತ್ರೀ-ಪುರುಷರಿಗೆ ಹೊಲೆಯಿಲ್ಲ, ಜ್ಞಾನದ ಮಾರ್ಗ ತುಳಿಯಲು ಸ್ತ್ರೀ-ಪುರುಷರಿಗೆ ಯಾವ ಅಡ್ಡಿಯೂ ಇಲ್ಲ ಎಂದು ತಿಳಿಸಿದರು.
3. ಕಾಯಕ ಮಾಡುವ ಸ್ವಾತಂತ್ರ್ಯ: ಸ್ತ್ರೀಯರು ತಮಗಿಷ್ಟವಾದ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿದ್ದಾರೆ; ಈ ಮೂಲಕ ಪ್ರತಿಯೊಬ್ಬರ ಹೃದಯದಲ್ಲಿನ ಶಿವನನ್ನು ಸಂಪ್ರೀತಿಗೊಳಿಸಿದಂತೆ ಆಗುತ್ತದೆ ಎಂದು ಬಸವಣ್ಣ ವಿವರಿಸಿದರು.
4. ಸಾಮಾಜಿಕ ಹಾಗೂ ಕೌಟುಂಬಿಕ ಸ್ವಾತಂತ್ರ್ಯ: ಧಾರ್ಮಿಕ ಹಾಗೂ ಕಾಯಕ ಸ್ವಾತಂತ್ರ್ಯಗಳ ಜೊತೆಗೆ ಸ್ತ್ರೀಯರಿಗೆ ಸಾಮಾಜಿಕ ಹಾಗೂ ಕೌಟುಂಬಿಕ ಸ್ವಾತಂತ್ರ್ಯಗಳು ನೀಡಲ್ಪಟ್ಟವು. ಇದರಿಂದ ಸ್ತ್ರೀಯರು ನಾಲ್ಕು ಗೋಡೆಗಳ ಮಧ್ಯದಿಂದ ಹೊರಬರಲು ಮತ್ತು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಲು ಸಾಧ್ಯವಾಯಿತು. ಅಲ್ಲದೆ ಬಸವಣ್ಣನವರು ತಮ್ಮ ಸ್ವಂತ ಪತ್ನಿಯರಿಗೇ ಸ್ವಾತಂತ್ರ್ಯವನ್ನು ನೀಡಿದರು. ಈ ರೀತಿ ಸ್ವಾತಂತ್ರ್ಯ ನೀಡಿದುದರಿಂದಲೇ ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಮೋಳಿಗೆಯ ಮಹಾದೇವಿ, ಮುಕ್ತಾಯಕ್ಕ, ಕಾಳವ್ವ ಮುಂತಾದವರು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಯಿತು.

5. ಸ್ತ್ರೀಯರ ಅಸಾಮರ್ಥ್ಯಗಳ ನಿರ್ಮೂಲನೆ: ಸ್ತ್ರೀಸಂಬಂಧಿ ವಾಸ್ತವಗಳಾದ ಪ್ರಸವ, ಋತು ಸಮಯದ ಜೈವಿಕ ಪ್ರಕ್ರಿಯೆಗಳಿಗೆ ಸಂಬಂಧಿಸಿ ಹೇರಲಾಗಿದ್ದ ಕಟ್ಟುಪಾಡುಗಳನ್ನು ಬಸವಣ್ಣ ಪ್ರಶ್ನಿಸಿದರು. ಸೂತಕ, ಮೈಲಿಗೆ, ಹೊಲೆ ಮುಂತಾದವುಗಳನ್ನು ತೊಡೆದುಹಾಕುವಲ್ಲಿ ಯಶಸ್ವಿಯಾದರು. ವಿಧವಾ ವಿವಾಹಕ್ಕೆ, ಪರಿತ್ಯಕ್ತ ಹೆಣ್ಣಿನ ಮರುವಿವಾಹಕ್ಕೆ ಅವಕಾಶ ಕಲ್ಪಿಸಿದರು. ದಾಸಿ-ವೇಶ್ಯೆಯರು, ಅಂತರ್ಜಾತಿ ವಿವಾಹಿತರ ಮಕ್ಕಳು ಇತ್ಯಾದಿ ಜನರನ್ನು ಅವರು ಮಾನವೀಯತೆ ಯಿಂದ ಕಂಡರು. ಅವರಿಗೆ ಸಮಾಜದಲ್ಲಿ ಸಮಾನ ಗೌರವ-ಮರ್ಯಾದೆ ಸಿಗಬೇಕೆಂದು ವಾದಿಸಿದರು. ಸ್ತ್ರೀಯರಿಗೆ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳಲ್ಲಿ ಪಾಲು ಒದಗಿಸುವುದನ್ನು ಪ್ರತಿಪಾದಿಸಿದರು. ಸ್ತ್ರೀಯರು ಸಾಹಿತ್ಯದ ಮೂಲಕ ತಮ್ಮ ಅನಿಸಿಕೆ-ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಿದರು.

ಉಪಸಂಹಾರ

ಬಸವಣ್ಣನವರ ಕಾಲದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಜಾಗೃತಿಯ ಕಾರ್ಯದಲ್ಲಿ ಸ್ತ್ರೀಯರನ್ನು ಅಪಾರವಾಗಿ ತೊಡಗಿಸಿಕೊಳ್ಳಲಾಯಿತು. ಕೆಲವು ರಾಜ ಮನೆತನಗಳಲ್ಲಿ ಸ್ತ್ರೀಯರೇ ರಾಜ್ಯದ ಚುಕ್ಕಾಣಿ ಹಿಡಿದರೂ, ರಾಜಕೀಯ ಹೋರಾಟ ದಲ್ಲಿ ಮಹಿಳೆಯರು ಭಾಗಿಯಾದರೂ, ಸಾಮಾಜಿಕ-ಧಾರ್ಮಿಕ ವಿಷಯಗಳಲ್ಲಿ ಸ್ತ್ರೀಯರಿಗೆ ಸಮಾನತೆ ಒದಗಿಸುವುದು ಕನಸಾಗೇ ಉಳಿದಿದ್ದ ಕಾಲದಲ್ಲಿ ಬಸವಣ್ಣನವರ ಚಿಂತನೆ ಕ್ರಾಂತಿಕಾರಿ ಎನಿಸುವುದು ನಿಶ್ಚಿತ.

ಬಸವೇಶ್ವರರು ಕೈಗೊಂಡ ಆಂದೋಲನಕ್ಕೆ ಅನುಪಮವಾದ ಮಹತ್ವವಿದೆ. ಬಸವೇಶ್ವರರ ಪ್ರಯತ್ನದ ಫಲ ಇನ್ನೂ ಸ್ಪಷ್ಟವಾಗಿ ನಮ್ಮ ಸಮಾಜದಲ್ಲಿ ಜಾತಿ ಮತ್ತು ಲಿಂಗಾಧಾರಿತ ತಾರತಮ್ಯವನ್ನು ಎದುರಿಸುತ್ತಿರುವವರಿಗೆ ದೊರಕಬೇಕಿದೆ.

ಗ್ರಂಥಋಣ

- ಬಸವೇಶ್ವರರು ಮತ್ತು ಅವರ ಚಿಂತನೆಗಳು–ಚ.ನ.ಶಂಕರ್‌ರಾವ್
- **Sociology Methods and Theories–Jayaram N.**
- ಸಾಮಾಜಿಕ ಚಿಂತನೆಯ ಇತಿಹಾಸ–ಹೆಚ್.ವಿ.ನಾಗೇಶ್
- ಸಮಕಾಲೀನ ಭಾರತೀಯ ತತ್ವಶಾಸ್ತ್ರ–ಡಾ। ಎ.ಎನ್.ಶೇಷಗಿರಿ ರಾವ್
- **Indian Social Thought–Sharma R.N. and Sharma R.K.**
- ನಿಯತಕಾಲಿಕಗಳು ಮತ್ತು ದಿನ ಪತ್ರಿಕೆಗಳು.

ಮಹಾತ್ಮ ಗಾಂಧೀಜಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಚಿಂತನೆಗಳ ಮರು ಅಧ್ಯಯನ

ಪ್ರೊ. ಪಿ. ನಂಜುಂಡ
ಡಾ. ಕೆ.ಎಂ. ಶೋಭಾ

"ಪ್ರಕೃತಿ ಮಾನವನ ಆಸೆಯನ್ನು ಪೂರೈಸುತ್ತದೆಯೇ, ವಿನಃ ಅವನ ದುರಾಸೆಗಳನ್ನಲ್ಲ"

– ಮಹಾತ್ಮ ಗಾಂಧೀಜಿ

"ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು"

– ಡಾ. ಬಿ.ಆರ್. ಅಂಬೇಡ್ಕರ್

ಈ ಮೇಲಿನ ಎರಡು ಹೇಳಿಕೆಗಳು ಭಾರತ ಮತ್ತು ವಿಶ್ವದ ಶ್ರೇಷ್ಠ ಮಾನವತಾವಾದಿ ನಾಯಕರುಗಳು ಹೇಳಿರುವ ಪ್ರಸಿದ್ಧವಾದ ಮಾತುಗಳಾಗಿವೆ. ಭಾರತ ವಸಾಹತುಶಾಹಿ ಆಡಳಿತಕ್ಕೆ ಸಿಕ್ಕಿ ನಲುಗುವ ಸಂದರ್ಭ. ಇಲ್ಲಿನ ಮೇಲ್ವರ್ಗದ ಜನರ ಶೋಷಣೆ. ಈ ಎರಡು ವಿಷಮ ಪರಿಸ್ಥಿತಿಗಳನ್ನು ಸಮರ್ಪಕವಾಗಿ ಎದುರಿಸಿ, ಪುಟ್ಟ ಹೆಜ್ಜೆಯಿಂದ ಪ್ರಾರಂಭಿಸಿ, ದಿಟ್ಟ ಹೆಜ್ಜೆಯ ಕಡೆಗೆ ಸಾಗಿ, ವಸಾಹತುಶಾಹಿ ಆಡಳಿತ ವ್ಯವಸ್ಥೆಯಿಂದ ಮುಕ್ತಿ ದೊರಕಿಸಿಕೊಳ್ಳಲು ಗಾಂಧಿ ಅಹರ್ನಿಶಿ ಹೋರಾಡಿದರೆ, ಶೋಷಿತ ಜನರ ನಾಯಕರಾಗಿ, ಧ್ವನಿ ಎತ್ತದಂತೆ ಒತ್ತಿಕ್ಕಲ್ಪಟ್ಟವರಿಗೆ ಧ್ವನಿ ಆದವರು ಅಂಬೇಡ್ಕರ್.

ಗಾಂಧೀ ಮತ್ತು ಅಂಬೇಡ್ಕರ್ ಚಿಂತನಾ ಮಾರ್ಗಗಳು ಬೇರೆಯಾದರೂ ಉದ್ದೇಶವು ಒಂದೇ ಆಗಿದೆ. ಸೂರ್ಯ ಮುಳುಗದ ಸಾಮ್ರಾಜ್ಯದಿಂದ ಗಾಂಧೀಜಿ ಬಿಡುಗಡೆಯನ್ನು ಬಯಸಿದರೆ, ಅಂಬೇಡ್ಕರ್‌ರವರು ಭಾರತದೊಳಗಿನ ಜಾತಿಪದ್ಧತಿ ಯಿಂದ ಬಿಡುಗಡೆಯನ್ನು ಅಂಬೇಡ್ಕರ್ ಬಯಸಿದವರು. ದೇಶದ ಹೊರಗಿನ ಶತ್ರುಗಳು(ವಿದೇಶೀಯರು ಹೇರಿದ ಗುಲಾಮಗಿರಿ) ತುಂಬಾ ಅಪಾಯಕಾರಿ ಎಂದು ಗಾಂಧೀಜಿ ನಂಬಿದ್ದರೆ, ದೇಶದ ಒಳಗಿನ ಶತ್ರುಗಳು(ದೇಶೀಯರು ತಮ್ಮವರ ಮೇಲೆಯೇ ಹೇರಿದ ಗುಲಾಮಗಿರಿ) ಹೆಚ್ಚು ಅಪಾಯಕಾರಿ ಎಂದು ಅಂಬೇಡ್ಕರ್ ನಂಬಿದ್ದರು. ಈ ಎರಡೂ ನಂಬಿಕೆಗಳು ನಿಜವಾಗಿದ್ದವು.

"ನಾನು ಹಿಂದೂ ಆಗಿ ಹುಟ್ಟಿದ್ದೇನೆ ಆದರೆ ಹಿಂದೂ ಆಗಿ ಸಾಯಲಾರೆ" ಎನ್ನುವುದು ಅಂಬೇಡ್ಕರರ ಹೇಳಿಕೆಯಾಗಿದ್ದರೆ, 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' ಎನ್ನುವುದು ಗಾಂಧೀಜಿ ಅವರ ಹೇಳಿಕೆಯಾಗಿತ್ತು. ಇವರ ಈ ಹೇಳಿಕೆ ಗಳನ್ನು ಸಂಕುಚಿತ ಅರ್ಥದಲ್ಲಿ ಗ್ರಹಿಸಿ, ಇವು ದ್ವಂದ್ವವನ್ನು ವ್ಯಕ್ತಪಡಿಸುವ ಪರಿಕಲ್ಪನೆಗಳು ಎಂದು ವಾದಿಸುವವರು ಇದ್ದಾರೆ. ಆದರೆ, ಅಂದಿನ ಕಾಲದಲ್ಲಿ ಇವೆರಡೂ ಕೆಡುಕುಗಳನ್ನು ಸಮರ್ಥವಾಗಿ ನಿಭಾಯಿಸಿದವರು, ಅದಕ್ಕೆ ದಿಟ್ಟವಾದ ಉತ್ತರಗಳನ್ನು ಕೊಟ್ಟವರು ಗಾಂಧೀಜಿ ಮತ್ತು ಅಂಬೇಡ್ಕರ್.

ಗಾಂಧೀಜಿಯಿಂದ ಅಂಬೇಡ್ಕರರು, ಅಂಬೇಡ್ಕರರಿಂದ ಗಾಂಧೀಜಿ ಅವರು ಪ್ರಭಾವಿತರಾಗಿದ್ದರು ಎಂಬುದು ಅತಿಶಯೋಕ್ತಿ ಅಲ್ಲ. ಅವರಲ್ಲಿ ಪರಸ್ಪರರನ್ನು ಅರ್ಥ ಮಾಡಿಕೊಳ್ಳುವ, ಪರಸ್ಪರರಿಂದ ಕಲಿಯುವ ವಿಶಾಲ ಮನೋಭಾವವಿತ್ತು; ಇಬ್ಬರ ವೈಚಾರಿಕ ಹಿನ್ನೆಲೆಗಳು ಬೇರೆ-ಬೇರೆಯಾಗಿದ್ದರೂ ಇಬ್ಬರ ಗುರಿ ಮಾತ್ರ ಒಂದೇ ಆಗಿತ್ತು. ಅವರಲ್ಲಿ ಕೆಲವೊಂದು ವಿಷಯಗಳಿಗೆ ಸಂಬಂಧಿಸಿದಂತೆ ಅಭಿಪ್ರಾಯ ಭೇದ ಇತ್ತೇ ವಿನಃ ದ್ವೇಷ, ತಿರಸ್ಕಾರ ಇರಲಿಲ್ಲ; ಇಬ್ಬರಲ್ಲೂ ಪರಸ್ಪರರನ್ನು ಪ್ರೀತಿಸುವ, ಗೌರವಿಸುವ ಗುಣ ಇತ್ತು. ಇದಕ್ಕೆ ಉದಾಹರಣೆಯಾಗಿ, 'ಡಾ. ಬಿ.ಆರ್. ಅಂಬೇಡ್ಕರ್ ಇಲ್ಲದ ಮಂತ್ರಿಮಂಡಲ ಅಪೂರ್ಣ' ಎಂದು ಹೇಳಿ, 'ಸಂವಿಧಾನವನ್ನು ರಚಿಸುವ ಸಾಮರ್ಥ್ಯ ಹೊಂದಿರುವ ಏಕಮಾತ್ರ ಮೇಧಾವಿ ಅಂಬೇಡ್ಕರ್' ಎಂಬ ಮಾತನ್ನು ಗಾಂಧೀಜಿ ಸಾರ್ವತ್ರಿಕವಾಗಿ ಆಡಿದ್ದನ್ನು ಪ್ರಸ್ತಾಪಿಸಬಹುದು. ಸಮಾಜದ ಅಂಚಿಗೆ ನೂಕಲ್ಪಟ್ಟ ವ್ಯಕ್ತಿಗಳ ನೋವು, ಹತಾಶೆ ತಿಳಿಯಲು ಗಾಂಧೀಜಿಯವರಿಗೆ ಸಹಕಾರಿ ಯಾಗಿದ್ದು ಅಂಬೇಡ್ಕರ್ ಚಿಂತನೆಯೇ ಎನ್ನಬೇಕು.

ಗಾಂಧೀ ಮತ್ತು ಅಂಬೇಡ್ಕರ್ ಇಬ್ಬರೂ ಜೀವನದಲ್ಲಿ ಅವಮಾನವನ್ನು ಅನುಭವಿಸಿದರು. ಒಬ್ಬರು ಕಪ್ಪು ವರ್ಣೀಯ ಎಂದು ಗುರುತಿಸಲ್ಪಟ್ಟು, ರೈಲಿನಿಂದ ಹೊರಕ್ಕೆ ಎಸೆಯಲ್ಪಟ್ಟರೆ, ಇನ್ನೊಬ್ಬರು ಅಸ್ಪೃಶ್ಯ ಎಂದು ಗುರುತಿಸಲ್ಪಟ್ಟು ಎತ್ತಿನ ಗಾಡಿಯಿಂದ ಹೊರಗೆ ಎಸೆಯಲ್ಪಟ್ಟರು; ತರಗತಿಯಲ್ಲಿನ ಕಪ್ಪುಹಲಗೆಯಿಂದ ದೂರಕ್ಕೆ ಸರಿಸಲ್ಪಟ್ಟರು.

ಆದರೆ, ಗಾಂಧೀ ಮತ್ತು ಅಂಬೇಡ್ಕರ್ ಇಬ್ಬರೂ ತಮಗೆ ಎದುರಾದ ಸಂಕೀರ್ಣ ಪರಿಸ್ಥಿತಿಯನ್ನು ಅಹಿಂಸೆಯಿಂದ, ತಾಳ್ಮೆಯಿಂದ ಎದುರಿಸಿದರು. ಇಬ್ಬರೂ ತಮ್ಮ ಜೀವನ ಪೂರ್ತಿ ಅಹಿಂಸೆಯ ಪ್ರತಿಪಾದಕರಾಗಿ ಉಳಿದರು; ಅದನ್ನೇ ಬೋಧಿಸಿದರು. ಹೀಗಾಗಿ, ಗಾಂಧೀಜಿ ಮತ್ತು ಅಂಬೇಡ್ಕರ್ ಇಂದಿಗೂ ಜಗತ್ತಿಗೆ ನಾಯಕರಾಗಿದ್ದಾರೆ.

ಗಾಂಧೀಜಿ ಮತ್ತು ಅಂಬೇಡ್ಕರ್ ಇಬ್ಬರೂ ವಿದ್ಯಾರ್ಥಿ ದೆಸೆಯಿಂದಲೂ ಅಪಾರವಾದ ಪುಸ್ತಕಪ್ರೇಮಿಗಳಾಗಿದ್ದರು. ಇಬ್ಬರೂ ನಿರಂತರವಾಗಿ ಮತ್ತು ಆಳವಾಗಿ ಅಧ್ಯಯನವನ್ನು ಮಾಡುತ್ತಿದ್ದರು. ಅಂಬೇಡ್ಕರ್ ಜಗತ್ತಿನ ಶ್ರೇಷ್ಠ ದಾರ್ಶನಿಕರ ಗ್ರಂಥಗಳನ್ನು ಅಧ್ಯಯನ ಮಾಡಿದರು.. ಅವರ ಮೇಲೆ ಮಹಾತ್ಮಾ ಫುಲೆ ಅಪಾರ ಪ್ರಭಾವ ಬೀರಿದರು. ಬುದ್ಧನ ತತ್ವಗಳಿಗೆ ಅವರು ಮಾರು ಹೋದರು. ಹಾಗೆಯೆ, ಗಾಂಧೀಜಿ ಕೂಡ ಜಾನ್ ರಸ್ಕಿನ್

ರೆದ 'ಅನ್ ಟು ದಿಸ್ ಲಾಸ್ಟ್' ಕೃತಿಯಿಂದ ಅಪಾರವಾಗಿ ಪ್ರಭಾವಿತರಾದರು. ಇಬ್ಬರೂ ಅನ್ಯಾಯ, ಅಸಮಾನತೆ ಇಲ್ಲದ ಸಮಾಜವನ್ನು ನಿರ್ಮಿಸಲು ಬಯಸಿದರು.

ಆದರೆ, ಇತ್ತೀಚಿನ ಕೆಲವು ವರ್ಷಗಳಿಂದ ಗಾಂಧೀ ಮತ್ತು ಅಂಬೇಡ್ಕರ್ ಇಬ್ಬರನ್ನೂ ಎದುರು-ಬದರು ನಿಲ್ಲಿಸುವ ಪ್ರಸಂಗಗಳು ಕಾಣುತ್ತವೆ. ಗಾಂಧೀಜಿ ಅಭಿವ್ಯಕ್ತಿಸಿದ ಕೆಲವೊಂದು ಹಳೇ ಅಂಶಗಳನ್ನು ಉದಾಹರಣೆಯಾಗಿ ನೀಡಲಾಗುತ್ತದೆ. ಗಾಂಧೀಜಿ ಬದುಕನ್ನು ಗಂಭೀರವಾಗಿ ಅಧ್ಯಯನ ಮಾಡಿದರೆ, ಕಾಲಾಂತರದಲ್ಲಿ ಅವರು ತಮ್ಮ ಅನೇಕ ಅಭಿಪ್ರಾಯಗಳನ್ನು ಬದಲಿಸಿಕೊಳ್ಳುತ್ತಾ ಬಂದರು; ಮತ್ತು 'ಯಾವುದೇ ವಿಷಯಕ್ಕೆ ಸಂಬಂಧಿಸಿ ನನ್ನ ಅಭಿಮತವನ್ನು ಪರಿಗಣಿಸುವ ಇರಾದೆ ನಿಮಗೆ ಇದ್ದರೆ, ನಾನು ಆ ವಿಷಯ ಕುರಿತು ಕಡೇ ದಿನಗಳಲ್ಲಿ ಏನು ಅಭಿಪ್ರಾಯ ಪಟ್ಟಿರುವೆನೊ ಅದನ್ನು ಪರಿಗಣಿಸಿ' ಆದರೆ ಇಂದು ಗಾಂಧೀಜಿಯವರೇ ಹೇಳಿದ್ದನ್ನು ಮುಚ್ಚಿಡುವ ವಿಷಾದಕರ ಪ್ರಯತ್ನಗಳು ನಡೆಯುತ್ತಿರುವುದು ಕಂಡು ಬರುತ್ತದೆ. ಇದು ನಿಜಕ್ಕೂ ದುರ್ದೈವದ ವಿಷಯ.

ಐತಿಹಾಸಿಕವಾದ 'ಪೂನಾ ಒಪ್ಪಂದ' 1932ರಲ್ಲಿ ನಡೆಯಿತು. ನಿಮ್ನ ವರ್ಗದವರಿಗೆ ಪ್ರತ್ಯೇಕ ಮತಕ್ಷೇತ್ರ ಮತ್ತು ಎರಡು ಮತಗಳನ್ನು ನೀಡುವ ಹಕ್ಕು ಒದಗಿಸುವಂತೆ ಅಂಬೇಡ್ಕರ್ ಆಗ್ರಹಪಡಿಸಿದರು. ಇದರಿಂದ ನಿಮ್ನ ವರ್ಗಗಳು ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸಿಕೊಳ್ಳಬಹುದು; ಸವರ್ಣೀಯ ಹಿಂದೂಗಳ ಹಂಗಿನಲ್ಲಿ ನಿಮ್ನ ವರ್ಗಗಳು ಉಳಿಯುವುದು ಅನಿವಾರ್ಯವಾಗುವುದಿಲ್ಲ ಎಂಬ ಅಭಿಮತ ಅವರದಾಗಿತ್ತು. ಆದರೆ, ಇದು ಸಮಾಜವನ್ನು ಒಡೆಯುವ ಸಾಧನ ವಾದೀತೇನೊ ಎಂದು ಗಾಂಧೀಜಿ ಸಂಶಯಪಟ್ಟರು. ಹಿಂದೂ ಸಮಾಜದಿಂದ ನಿಮ್ನ ವರ್ಗದವರು ಬೇರೆಯಾಗಿ ಬಿಡುವರೆಂಬ ಆತಂಕ ಅವರನ್ನು ಕಾಡಿತು. ಈ ದೃಷ್ಟಿಯಿಂದ ಅವರು ಅದನ್ನು ವಿರೋಧಿಸಿದರು. ಇದರಿಂದ ತಮಗೆ ಅನ್ಯಾಯ ವಾಯಿತು ಎಂಬ ಭಾವನೆ ತೀವ್ರವಾಗಿ ದಲಿತರಲ್ಲಿ ಮೂಡಿತು. ಇದರಲ್ಲಿ ಅಸತ್ಯವೇನೂ ಇರಲಾರದು. ಆದರೆ, ಈ ವಾದವನ್ನು ಮುಂದಿಟ್ಟು ಗಾಂಧೀಜಿಯನ್ನು ಅಂಬೇಡ್ಕರ್ ಅವರನ್ನು ಶತ್ರು ಎಂಬಂತೆ ಮಾತನಾಡುವುದು ಎಷ್ಟರ ಮಟ್ಟಿಗೆ ಸರಿಯಾದೀತು?

ಒಟ್ಟಾರೆ, ಗಾಂಧೀ ಮತ್ತು ಅಂಬೇಡ್ಕರ್ ಭಾರತದ ಎರಡು ಅಮೂಲ್ಯ ರತ್ನಗಳು. ಅವರ ವಿಚಾರಗಳನ್ನು ಮುಕ್ತವಾಗಿ ನೋಡುವ ಚಿಂತನೆ ಅಗತ್ಯ. ಆರೋಗ್ಯಕರ ಸಮಾಜಕ್ಕೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ಅವರು ಮಾನವತೆಯ ಸಂಕೇತವಾಗಿದ್ದಾರೆ.

ಅಂಬೇಡ್ಕರ್‌ವಾದದ ಪ್ರಸ್ತುತತೆ

ಡಾ. ಹೆಚ್.ಜಿ. ನಾರಾಯಣ

ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಆಧುನಿಕೋತ್ತರ ಭಾರತದಲ್ಲಿ ಯಾವ ಸ್ಥಾನವಿದೆ. ಅದು ಎಷ್ಟರಮಟ್ಟಿಗೆ ಒಪ್ಪಿತವಾಗಿದೆ? ಮನುವಿನ ಗುಂಗಿನಲ್ಲಿ ಇರುವವರು ಅಥವಾ ಅವನ ಪರಂಪರೆಯಲ್ಲೇ ಜೀವನದ ಉತ್ಕರ್ಷ ಕಾಣುವವರನ್ನು ಅಂಬೇಡ್ಕರ್ ವಿಚಾರ ಪಥದ ಹಾದಿಯಲ್ಲಿ ಕರೆತರಲು ಸಾಧ್ಯವೇ? ಎಂಬ ಚರ್ಚೆ ಸಹಜವಾಗಿ ಆಗಬೇಕು.

ದಲಿತರು ಅಂಬೇಡ್ಕರರನ್ನು ಆರಾಧಿಸುವ ಪರಂಪರೆ ಅನುಸರಿಸುವುದು ಸೂಕ್ತವೇ? ಅವರು ಅಂಬೇಡ್ಕರ್ ವಿಚಾರಧಾರೆಗಳ ಒತ್ತಾಸೆಗೆ ಹೆಚ್ಚು ಮಹತ್ವ ನೀಡಬೇಕಲ್ಲವೆ? ಅವರ ಧ್ಯೇಯಗಳನ್ನು ಅನುಸರಿಸದೇ ಭಾರತದ ಸಾಮಾಜಿಕ ಸಂಘರ್ಷ ಕೊನೆಗಾಣಬಲ್ಲದೇ? ಎಂಬ ಪ್ರಶ್ನೆಯನ್ನು ಚರ್ಚಿಸುವ ಪ್ರಯತ್ನ ಇಲ್ಲಿದೆ.

ಸ್ವಾತಂತ್ರ್ಯ ಪಡೆದ ಭಾರತಕ್ಕೆ ನೆಹರೂ ನೇತಾರರಾಗುವುದಕ್ಕೆ ಹಲವು ಅನಿವಾರ್ಯತೆಗಳಿದ್ದವು. ನೆಹರೂಗಿಂತ ಸಮರ್ಥ ನಾಯಕರು ಇದ್ದರೂ, ಕೆಲವೊಂದು ಕಾರಣಗಳು ಅಡ್ಡಿಯಾಗಿ ಅವರೆಲ್ಲ ಪಕ್ಕಕ್ಕೆ ಸರಿಯಬೇಕಾಯಿತು. ಸ್ವಾತಂತ್ರ್ಯ, ಅಹಿಂಸೆ, ಸಾಮರಸ್ಯದ ಹಾದಿಯಲ್ಲಿದ್ದವರಿಗೆ ಇದ್ದ ಅನುಕೂಲವು ಸಂಘರ್ಷ, ಸಮಾನತೆ, ಸಹೋದರತೆಯ ಗುಂಗಿನಲ್ಲಿದ್ದವರಿಗೆ ಸಿಗಲಿಲ್ಲ. ಇದು ವಿಷಾದಕರ ಸತ್ಯ; ಇದು ಹಲವರಿಗೆ ಅರಗಿಸಿಕೊಳ್ಳಲಾಗದ ಸತ್ಯ.

ಆಗ ಭಾರತದ ಪ್ರತಿನಿಧಿಗಳಂತೆ ಇದ್ದವರು ಗಾಂಧಿ, ನೆಹರು, ಪಟೇಲ್ ಇತರರು. ಅಂಬೇಡ್ಕರರ ಆಲೋಚನಾ ಧಾಟಿಯಲ್ಲಿ 'ಸ್ವಾತಂತ್ರ್ಯ'ಕ್ಕಿಂತಲೂ ಮಿಗಿಲಾಗಿ 'ಸಮಾನತೆ' ಪ್ರಮುಖ ಆದ್ಯತೆ ಪಡೆದಿತ್ತು. ಅವರಿಗೆ ಪುರಾತನ ಭಾರತದ ಯಾವೊಂದು ಅನಿಷ್ಟವೂ ಬೇಡವಾಗಿತ್ತು. ಹೀಗಾಗಿ, ಅವರು ಹತ್ತೆಂಟು ನಾಯಕರಲ್ಲಿ ಒಬ್ಬರಾದರು. ನೆಹರು ಸಂಪುಟದಲ್ಲಿ ಸೇರ್ಪಡೆಗೊಂಡರು. ಹೊಣೆಗಾರಿಕೆಯನ್ನು ವಹಿಸಿಕೊಂಡರು. ಭಾರತ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಭಾರತಕ್ಕೊಂದು ಆದರ್ಶಪ್ರಾಯವಾದ ಸಂವಿಧಾನ ನೀಡಿದರು. ಸಾವಿರಾರು ವರ್ಷಗಳ ಹಿಂದಿನ ಸಾಮಾಜಿಕ, ರಾಜಕೀಯ ಚಿಂತನೆಗಳನ್ನು ಬದಲಿಸಿ, ಹೊಸ ಮಾರ್ಗ ತೋರಿಸಿದರು.

ಅಂಬೇಡ್ಕರ್ ಚಿಂತನೆಗೆ ನೆಹರೂ ಸರ್ಕಾರದಲ್ಲಿ ಸಿಗಬೇಕಾದ ಸ್ಥಾನಮಾನ ಸಿಗಲಿಲ್ಲ. ಹರೂ ಪ್ರಣೀತ ರಾಜಕಾರಣದಲ್ಲಿ ಅವರನ್ನು ಮೂಲೆಗುಂಪು ಮಾಡಲಾಯಿತು. ತಿಭಟನೆಯು ಕಾವು, ಅವರನ್ನು ಹಿಂದೂ ಧರ್ಮದಿಂದ ಬೌದ್ಧ ಧರ್ಮಕ್ಕೆ ತಾಂತರಿಸಿತು. ಆದರೆ ಅಂಬೇಡ್ಕರ್ ಕನಸಿನ ಬೀಜಗಳು ವೃಕ್ಷವಾಗಿ ಬೆಳೆಯಲೇ ಇಲ್ಲ. ದರಲ್ಲಿ ಹೂ, ಚಿಗುರು, ಹಣ್ಣು ಬಿಡಲೇ ಇಲ್ಲ. ಅವರ ಚಿಂತನೆಗೆ ಭಾರತ ಸ್ಪಂದಿಸಲಿಲ್ಲ ನ್ನುವ ಪರಿಸ್ಥಿತಿ ಇದೆ.

ಅಂಬೇಡ್ಕರ್, ಹಲವರಿಗೆ ರಾಜಕೀಯದ ಸರಕು. ಕೆಲವರಿಗೆ ಸಾಮಾಜಿಕ, ಸಾಂಸ್ಕೃತಿಕ ಕ್ಕಿನ ಸಂಕೇತ. ಇನ್ನೂ ಕೆಲವರಿಗೆ ಅವರು ಅವತಾರ ಪುರುಷ. ಅವರನ್ನು 'ಅಭಿನವ ನು' ಎನ್ನುವವರೂ ಇದ್ದಾರೆ. ಇದೊಂದು ಕೆಟ್ಟ ಪರಂಪರೆ. ಮತ್ತೂ ಕೆಲವರು ಸಂವಿಧಾನ ಚನೆಯ ಕೆಲಸ ಒಬ್ಬ ವ್ಯಕ್ತಿಯ ಕೆಲಸ ಅಲ್ಲ ಎಂದು ಅರುಣ್ ಶೌರಿ ಜರೆದರು. ಲೇಖಕರಾದ ಲೆರಿಯನ್ ರೋಡ್ರಿಗಸ್ ಸಹ ಇದೇ ಅಭಿಪ್ರಾಯಕ್ಕೆ ಬರುತ್ತಾರೆ. ಗ್ರಾನ್‌ವಿಲ್ ಆಸ್ಟಿನ್ ಂಬ ಬ್ರಿಟಿಷ್ ಸಂವಿಧಾನ ತಜ್ಞನು 'ಭಾರತದ ಸಂವಿಧಾನ ಅಂಬೇಡ್ಕರ್ ಅವರ ಂಪೂರ್ಣ ಕೊಡುಗೆ ಏನಲ್ಲ ಎಂದು ಹೇಳುತ್ತಾರೆ. ಹತ್ತಾರು ಜನರ ಬುದ್ಧಿ, ಚಿಂತನೆ, ರಿಶ್ರಮ ಇದ್ದಾಗ್ಯೂ, ಅಲ್ಲಿ ಅಂಬೇಡ್ಕರ್ ಎಂಬ ವ್ಯಕ್ತಿತ್ವದ ಹಾಜರಿ ಇದ್ದಿಲ್ಲದಿದ್ದರೆ ನಮ್ಮ ಂವಿಧಾನ ಇನ್ನೆಷ್ಟರ ಮಟ್ಟಿಗೆ ಇರುತ್ತಿತ್ತು ಹಾಗೂ ಸಮಸ್ತ ಭಾರತವನ್ನು ಅದು ಹೇಗೆ ತಿನಿಧಿಸುತ್ತಿತ್ತು ಎಂಬ ಪ್ರಶ್ನೆ ಕೂಡ ಕೇಳಿ ಬರುತ್ತದೆ.

ಒಂದು ರಾಷ್ಟ್ರದ ಬಲ ಮತ್ತು ಅಭಿವೃದ್ಧಿ ಅದರ ಶುದ್ಧ ಜೀವನ, ವ್ಯವಹಾರಿಕೆ, ್ರಮಾಣಿಕತೆ, ಉನ್ನತ ಮಟ್ಟದ ನೈತಿಕ ಸಾಮರ್ಥ್ಯ, ಸಾರ್ವತ್ರಿಕ ಅಂತ:ಕರಣ, ಸರಳ ೂಢಿಗಳು, ಧೈರ್ಯ, ಸತ್ಯಸಂಧತೆ ಮತ್ತು ಒಳ್ಳೆಯ ಗುಣ ಹಾಗೂ ಬುದ್ಧಿಮತ್ತೆಯಿಂದ ುಗಮಿಸುವ ಸರಿಯಾದ ಮತ್ತು ಸಮಾಧಾನಕರ ನಿರ್ಣಯ ಗಳನ್ನೇ ಅವಲಂಬಿಸಿರುತ್ತದೆ ಂಬ ಅಂಬೇಡ್ಕರರ ಅರಿವು ಅವರು ಭಾರತವನ್ನು ಕಂಡುಕೊಂಡ ರೀತಿಯನ್ನು ಎತ್ತಿ ೇಳುತ್ತದೆ. ಭಾರತದ ಚರಿತ್ರೆಯನ್ನು ಸಮರ್ಪಕ ವಾಗಿ ಅರ್ಥೈಸಿಕೊಳ್ಳದ ಜನರು ೀಸಲಾತಿ ನಿಲ್ಲಿಸಿ; ಪ್ರತಿಭೆಗೆ ಆದ್ಯತೆ ಕೊಡಿ' ಎಂಬ ಒತ್ತಾಯವನ್ನು ಮಾಡುತ್ತಿದ್ದಾರೆ. ವರಿಗೆ ಸಮಗ್ರ, ಸಂಪೂರ್ಣ, ಸಮಾನ, ಶಕ್ತ ಭಾರತದ ಬದಲಾಗಿ ಅಸಮಾನ, ುರ್ಬಲ, ಬೌದ್ಧಿಕ ಹಾಗೂ ರಾಜಕೀಯ ಶೋಷಣೆ ಇರುವ ಭಾರತದಲ್ಲೇ ಅತೀವ ಂಬಿಕೆ ಇರುವ ಹಾಗೆ ಕಾಣುತ್ತದೆ. ಕೆಲವು ಹಿಂದೂ ಸಂಘಟನೆಗಳ ವಾದ ಕೂಡ ದೇ ನೆಲೆಯಲ್ಲಿ ಇದೆ. ಅಂಬೇಡ್ಕರ್, ಈ ದೇಶದ ವಿರುದ್ಧ ದಂಗೆ ಹೂಡಿದ ವ್ಯಕ್ತಿಯಲ್ಲ ಥವಾ ದೇಶದ ಹಿತದೃಷ್ಟಿಗೆ ವಿರುದ್ಧವಾದುದನ್ನು ಬಯಸಲಿಲ್ಲ. ಎಲ್ಲಾ ಹೋರಾಟ, ್ರತಿಭಟನೆ, ಹಕ್ಕೊತ್ತಾಯಗಳು ಶೋಷಿತರ ವಿಮೋಚನೆಗಾಗಿ ನಡೆದಿದ್ದವು. ಇದನ್ನು ವರೇ ಹತ್ತಾರು ಬಾರಿ ಸ್ಪಷ್ಟಪಡಿಸಿದ್ದಾರೆ. "ಒಂದು ವರ್ಗ ಮತ್ತೊಂದು ವರ್ಗದ ೀಲೆ ದಬ್ಬಾಳಿಕೆ ಮಾಡಲು ಕಾರಣ, ಆ ವರ್ಗದ ಕೈಲಿರುವ ಅಧಿಕಾರ. ಆ ವರ್ಗದ ಧಿಕಾರವನ್ನು ನಾಶಪಡಿಸಬೇಕೆಂದರೆ ಇನ್ನೊಂದು ವರ್ಗಕ್ಕೆ ಅಧಿಕಾರ ದೊರಕಬೇಕು" ಂದು ಅವರು ಹಟ ಹಿಡಿದದ್ದು ಈ ಹಿನ್ನೆಲೆಯಲ್ಲೇ.

ಅವರೇ ಒಂದೆಡೆ 'ಹಿಂದೂಗಳು ನನ್ನನ್ನು ಶತ್ರುವಾಗಿ ಕಾಣುವುದು ಅವಿವೇಕ. ಅವರನ್ನು ನಾನು ಸದಾ ಪ್ರೀತಿಸುತ್ತಲೇ ಇರುವೆ. ಭಾರತೀಯ ತತ್ತ್ವಶಾಸ್ತ್ರವನ್ನು ಜೀರ್ಣಿಸಿಕೊಂಡಿರುವ ನಾನು, ಅವರಲ್ಲಿರುವ ಕೊಳಕು ಶುದ್ಧ ಮಾಡಿ, ಸುಭದ್ರ ದೇಶ ನಿರ್ಮಿಸಲು ನಾನು ಹೋರಾಟ ನಡೆಸಿರುವೆ. ನನ್ನನ್ನು ಅವರು ತಪ್ಪಾಗಿ ಅರ್ಥ ಮಾಡಿಕೊಂಡಿರುವರು; ನನ್ನ ಮಾರ್ಗವೇ ಸರಿಯಾದುದು ಎಂದು ಅವರು ತಿಳಿಯುವ ಕಾಲ ಬರುತ್ತದೆ ಎಂಬ ಬಲವಾದ ನಂಬಿಕೆ ನನ್ನಲ್ಲಿದೆ' ಎಂದು ಹೇಳಿದ್ದಾರೆ.

"ಗಾಢ ಪ್ರೀತಿ ಮತ್ತು ಕಟು ದ್ವೇಷವನ್ನು ಹೊಂದಿರದವರು ತಮ್ಮ ಕಾಲದ ಮೇಲೆ ಯಾವುದೇ ಪ್ರಭಾವವನ್ನು ಬೀರಲಾರರು. ಯಾವುದೇ ಘನ ತತ್ವವನ್ನು ಪ್ರತಿಪಾದಿಸಲಾರರು. ಧ್ಯೇಯಗಳಿಗೆ ಪರಿಣಾಮಕಾರಿ ಮಾರ್ಗದರ್ಶನ ನೀಡಲಾರರು. ನಾನು ಅನ್ಯಾಯ, ದಬ್ಬಾಳಿಕೆ, ಆಡಂಬರ ಮತ್ತು ವಂಚನೆಯನ್ನು ದ್ವೇಷಿಸುತ್ತೇನೆ ಮತ್ತು ಯಾರು ಇವುಗಳನ್ನು ಆಚರಿಸುತ್ತಾರೋ ಅಂಥವರನ್ನು ಕೂಡ ದ್ವೇಷಿಸುತ್ತೇನೆ. ನನ್ನನ್ನು ಟೀಕಿಸುವವರಿಗೆ 'ಇಂತಹ ನನ್ನ ದ್ವೇಷ ಭಾವನೆಯಲ್ಲಿಯೇ ನನ್ನ ಶಕ್ತಿ ಅಡಗಿದೆ' ಎಂದು ತಿಳಿಸಬಯಸುತ್ತೇನೆ. ನಾನು ಬಲವಾಗಿ ನಂಬಿರುವಂತಹ ತತ್ವಗಳು ಮತ್ತು ಧ್ಯೇಯಗಳ ಬಗ್ಗೆ ನಾನು ಹೊಂದಿರುವ ಪ್ರೀತಿಯ ಗಾಢತೆಯನ್ನು ಈ ದ್ವೇಷವೇ ಎತ್ತಿ ಹೇಳುತ್ತದೆ." ಎಂದು ಅಂಬೇಡ್ಕರ್ ಹೇಳಿದ್ದಾರೆ.

ಅವರ ಇಂತಹ ಹೇಳಿಕೆಗಳು ಅವರನ್ನು ಆರಾಧಿಸುವವರಿಗೂ ಮತ್ತು ವಿರೋಧಿಸುವವರಿಗೂ ಅಪಾರ ಗ್ರಾಸವನ್ನು ಒದಗಿಸುತ್ತವೆ. ಇನ್ನೊಂದು ಸಂದರ್ಭದಲ್ಲಿ ಅಂಬೇಡ್ಕರ್ "ನಾವಿಂದು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಒಡೆದು ಹೋಳಾಗಿದ್ದೇವೆ. ಇಂದು ನಾವು ಪರಸ್ಪರ ಕಚ್ಚಾಡುವ ಗುಂಪುಗಳಾಗಿದ್ದೇವೆ. ಪ್ರಾಮಾಣಿಕವಾಗಿ ಹೇಳುವುದಾದಲ್ಲಿ ನಾನೂ ಅಂತಹ ಒಂದು ಗುಂಪಿನ ನಾಯಕನಾಗಿದ್ದೇನೆ. ಆದರೂ, ಕಾಲಾನುಕ್ರಮದಲ್ಲಿ ಯೋಗ್ಯ ಸನ್ನಿವೇಶಗಳು ಕೂಡಿ ಬಂದಾಗ, ನಮ್ಮ ದೇಶ ಒಂದಾಗುವುದನ್ನು ಜಗತ್ತಿನ ಯಾವುದೇ ಶಕ್ತಿ ತಡೆಯಲಾರದು' ಎಂಬ ಭವಿಷ್ಯವನ್ನು ನುಡಿಯುತ್ತಾರೆ. ಇಂತಹ ನುಡಿಗಳನ್ನು ಆಡಿದವರಲ್ಲಿ ಕೊಂಕು ಹುಡುಕುವುದು, ಅವರು ಸವರ್ಣೀಯರ ಶತ್ರುಗಳೆಂಬಂತೆ ಬಿಂಬಿಸುವುದು ಶೋಚನೀಯ. ಅಂಬೇಡ್ಕರ್ ಕನಸು ಕಂಡ ಭಾರತ ನಿರ್ಮಾಣಕ್ಕೆ ಇಂಥ ದುಷ್ಟ ಪ್ರಯತ್ನಗಳು ಪೂರಕವಲ್ಲ.

ಅಂಬೇಡ್ಕರ್ ಅವರ ಮಾರ್ಮಿಕವಾದ ಮಾತುಗಳನ್ನು ನಾವು ಸದಾ ನೆನಪು ಮಾಡಿಕೊಳ್ಳುವುದು ಸೂಕ್ತ. ಪ್ರಸ್ತುತ ಭಾರತದ ರಾಜಕೀಯ ಬೆಳವಣಿಗೆಯ ಹಿನ್ನೆಲೆಯಲ್ಲಿ ಅವರ ಒಂದು ಮಾತು ಹೆಚ್ಚು ಅರ್ಥಪೂರ್ಣವಾಗಿ ಕಾಣುತ್ತದೆ. ಅದು ಹೀಗಿದೆ: "ಧಾರ್ಮಿಕವಾಗಿ ಭಕ್ತಿಯ ಆತ್ಮದ ದೋಷಕ್ಕೆ ದಾರಿ ಮಾಡಿಕೊಡಬಹುದು. ಆದರೆ ರಾಜಕೀಯ ಕ್ಷೇತ್ರದಲ್ಲಿ ಭಕ್ತಿಯು ಅಥವಾ ವ್ಯಕ್ತಿ ಪೂಜೆಯು ಖಂಡಿತವಾಗಿ ಅವನತಿಗೆ ಮತ್ತು ನಿರಂಕುಶ ಪ್ರಭುತ್ವದ ಉದಯಕ್ಕೆ ಕಾರಣವಾಗುತ್ತದೆ".

ಒಟ್ಟಿನಲ್ಲಿ ಜಾತಿವಾದ, ಕೋಮುವಾದ, ಮೂಲಭೂತವಾದ ಸದ್ದಿಲ್ಲದೆ ರ್ಘಟಿಸುತ್ತಿರುವ ಈ ಸಂದರ್ಭದಲ್ಲಿ ಅಂಬೇಡ್ಕರ್‌ವಾದ ಅತ್ಯಂತ ಪ್ರಸ್ತುತವಾಗಿದೆ.

ರಿಶೀಲನಾ ಕೃತಿಗಳು:

ಅಂಬೇಡ್ಕರ್ ಸಮಗ್ರ ಸಾಹಿತ್ಯ –ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಡಿ.ಆರ್. ನಾಗರಾಜು – ಸಂಸ್ಕೃತಿ ಕಥನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಇತಿಹಾಸ ದರ್ಪಣ – ಜುಲೈ, ಸೆಪ್ಟೆಂಬರ್ ಪುಸ್ತಕ 14, 2002

ಡಾ. ಎಸ್. ಚಂದ್ರಶೇಖರ್, ದಕ್ಷಿಣ ಭಾರತದ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ಪ್ರಸಾರಾಂಗ, ಹಂಪಿ.

ಎನ್. ಆರ್. ಶಿವರಾಮ್: ಅಂಬೇಡ್ಕರ್ ಥಾಟ್ಸ್, ಬೆಂಗಳೂರು 2013.

ಭೀಮರಾವ್ ರಾಮ್‌ಜಿ ಅಂಬೇಡ್ಕರ್ – ಸಾಮಾಜಿಕ ಪ್ರಜಾಪ್ರಭುತ್ವದ ಒಂದು ಅಧ್ಯಯನ: ಮೂಲ – ಡಾ. ಜಿ.ಎಸ್. ಲೋಖಂಡೆ; ಅನುವಾದ: ಸಿ.ಹೆಚ್. ಜಾಕೋಬ್ ಲೋಬೋ.

ಗಾಂಧೀಜಿ ಹಾಗೂ ಅಂಬೇಡ್ಕರ್ ಅವರ ಶೈಕ್ಷಣಿಕ ಚಿಂತನೆಗಳು

ಪಾರ್ಥಸಾರಥಿ
ಸುರೇಶ ಕೆ.

ಡಾ. ಬಿ.ಆರ್. ಅಂಬೇಡ್ಕರ್ ಭಾರತದ ಇತಿಹಾಸದಲ್ಲಿ ಸಮಾನತೆ ಮತ್ತು ಸಹೋದರತೆಗೆ ಜೀವನುದುದ್ದಕ್ಕೂ ಹೋರಾಡಿದ ಮಹಾನ್‌ಪುರುಷ. ಅಸ್ಪೃಶ್ಯತೆ ಎಂಬ ಸಾಮಾಜಿಕ ಪಿಡುಗನ್ನು ನಿರ್ಮೂಲನೆ ಮಾಡಲು ನಿರ್ಮಲ ಸಮಾಜವನ್ನು ನಿರ್ಮಿಸಲು ಯತ್ನಿಸಿದವರು. ಹಿಂದೂ ಸಮಾಜದಲ್ಲಿ ಬೇರು ಬಿಟ್ಟಿದ್ದ ಜಾತಿಪದ್ಧತಿಯನ್ನು ಕಿತ್ತೊಗೆಯಲು ಅವಿರತವಾಗಿ ದುಡಿದ ಮಹಾನ್‌ಚೇತನ. ಸಮಾಜದಲ್ಲಿದ್ದ ಅಸಮಾನತೆಯನ್ನು ದೂರಮಾಡಿ ದಲಿತರ, ಅಸ್ಪೃಶ್ಯರ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಅಭ್ಯುದಯಕ್ಕಾಗಿ ಸದಾಕಾಲ ಆಲೋಚಿಸುತ್ತಿದ್ದ ಚಿಂತಕ. ಸ್ವತಂತ್ರ ಭಾರತಕ್ಕೆ ಸಂವಿಧಾನ ರಚಿಸಿಕೊಟ್ಟ ಸಂವಿಧಾನಶಿಲ್ಪಿ. ಇವರ ವಿಚಾರಧಾರೆಗಳು ಇಂದಿಗೂ ಅನನ್ಯ.

ಅಂಬೇಡ್ಕರ್ ಅವರ ಶೈಕ್ಷಣಿಕ ವಿಚಾರಧಾರೆ

ಡಾ.ಬಿ.ಆರ್.ಅಂಬೇಡ್ಕರ್ ಪ್ರಕಾರ, ಶಿಕ್ಷಣ ಬಹಳ ಪ್ರಮುಖವಾದುದು. ಕೆಲವೊಂದು ಸಮುದಾಯಗಳು ಅಸ್ಪೃಶ್ಯರಾಗುವುದಕ್ಕೆ ಅವರನ್ನು ಶಿಕ್ಷಣದಿಂದ ವಂಚಿಸಲಾಯಿತು ಎಂಬುದೂ ಮುಖ್ಯ ಕಾರಣ. ಶಿಕ್ಷಣ ಪ್ರತಿಯೊಬ್ಬರ ಮೂಲಭೂತ ಹಕ್ಕು ಎಂದು ಘೋಷಿಸಿ ಸಂವಿಧಾನದ 45ನೇ ಪರಿಚ್ಛೇದದಲ್ಲಿ 6ರಿಂದ14ನೇ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಘೋಷಿಸಿದರು.

"ಶಿಕ್ಷಣವು ಮಾನವನನ್ನು ಸುಸಂಸ್ಕೃತನನ್ನಾಗಿ ಮಾಡುತ್ತದೆ. ಶಿಕ್ಷಣದಿಂದಲೇ ಭೌತಿಕ ಮತ್ತು ನೈತಿಕ ಪರಿಸ್ಥಿತಿಗಳು ಉತ್ತಮವಾಗುತ್ತವೆ. ದಲಿತರ ಉದ್ಧಾರವೆಂದರೆ ಅವರಿಗೆ ಅನ್ನ, ಆಶ್ರಯ ನೀಡುವುದಲ್ಲ; ಬದಲಾಗಿ, ಅವರಿಗೆ ಶಿಕ್ಷಣ ನೀಡಿ ಅವರನ್ನು ಸ್ವಾವಲಂಬಿ, ಸ್ವಾಭಿಮಾನಿಗಳನ್ನಾಗಿ ಮಾಡಬೇಕು. ಆದ್ದರಿಂದ ಪ್ರತಿಯೋರ್ವರೂ ಶಿಕ್ಷಣವನ್ನು ಹೊಂದಲೇಬೇಕು".

ಮಿಲಿಂದ ಕಾಲೇಜನ್ನು ಸ್ಥಾಪಿಸುವಾಗ ಡಾ.ಬಾಬು ರಾಜೇಂದ್ರ ಪ್ರಸಾದರ ಧ್ಯಕ್ಷತೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ "ಹಿಂದೂ ಮಾಜದ ಅತ್ಯಂತ ಕೆಳದರ್ಜೆಯಿಂದ ನಾನು ಬಂದಿರುವುದರಿಂದ, ನನಗೆ ಶಿಕ್ಷಣದ ಹತ್ವದ ಅರಿವು ಇದೆ; ದಲಿತ ಸಮಾಜದ ಉನ್ನತಿ ಸಾಧಿಸುವುದೆಂದರೆ "ಇಲ್ಲಿನ ತಿಯೊಬ್ಬರೂ ರಾಷ್ಟ್ರದ ದೃಷ್ಟಿಯಿಂದ ಮಹತ್ವಪೂರ್ಣರಾಗಿದ್ದಾರೆ ಎಂಬುದರ ರಿವನ್ನು ಅವರಿಗೆ ಮಾಡಿಕೊಡುವುದು ಮುಖ್ಯ. ಶಿಕ್ಷಣದ ಪ್ರಸಾರವಾಗದ ಹೊರತು, ೇರೆಯಾವುದರಿಂದಲೂ ಇದು ಸಾಧ್ಯವಾಗಲಾರದು, ನನ್ನ ಅಭಿಪ್ರಾಯದಲ್ಲಿ ಎಲ್ಲಾ ಾಮಾಜಿಕ ಅನ್ಯಾಯದ ನಿರ್ಮೂಲನೆಗೆ ಶಿಕ್ಷಣವೊಂದೆ ಔಷಧಿಯಾಗಿದೆ" ಎಂದು ಳಿಸಿದರು.

ಅಸ್ಪೃಶ್ಯರು ಮೊದಲು ಶಿಕ್ಷಣವನ್ನು ಪಡೆಯಬೇಕು. ಮಕ್ಕಳಿಗೂ ಶಿಕ್ಷಣ ಕೊಡಿಸುವ ್ಯವಸ್ಥೆ ಮಾಡಬೇಕು. ಮಕ್ಕಳಿಗೆ ಉನ್ನತ ಶಿಕ್ಷಣವನ್ನು ನೀಡಿದರೆ, ಸಮುದಾಯಗಳ ುನ್ನತಿ ಬೇಗ ಆಗುತ್ತದೆ ಎಂದು ಅವರು ಕರೆ ನೀಡಿದರು. ಇದೇ ಆಶಯವನ್ನು 927 ಮಾರ್ಚ್ 19ರಂದು ಕೂಲಾಬಾ ಜಿಲ್ಲಾ ಬಹಿಷ್ಕೃತ ಪರಿಷತ್ತಿನ ಮೊದಲನೇ ಅಧಿವೇಶನದಲ್ಲಿ ವ್ಯಕ್ತಪಡಿಸಿದರು. "ಹಿಂದುಳಿದ ವರ್ಗಗಳು ಉನ್ನತ ಶಿಕ್ಷಣದತ್ತ ಹೆಚ್ಚಿನ ಕ್ಷ್ಯ ನೀಡಬೇಕು, ಬಿ.ಎ. ಪದವೀಧರನಾದರೆ, ಅಸ್ಪೃಶ್ಯ ಸಮಾಜ ಶಕ್ತಿ ಪಡೆಯುತ್ತದೆ" ಎಂದು ಅವರು ನುಡಿದರು.

'ಶಿಕ್ಷಣವು ಸಾಮಾನ್ಯ ವ್ಯಕ್ತಿಗೆ ಸುಲಭವಾಗಿ ದೊರಕಬೇಕು. ಮಧ್ಯಮ ಹಾಗೂ ಕೆಳವರ್ಗದವರಿಗೆ ಖರ್ಚಿನ ಸಂಗತಿಯಾಗಬಾರದು. ಶಾಲೆಗಳಲ್ಲಿ ಯಾವುದೇ ರೀತಿಯ ಭೇದಭಾವಕ್ಕೆ ಅವಕಾಶವಿರಬಾರದು. ಕೆಳವರ್ಗದವರಿಗೆ ವಿಶೇಷ ಸವಲತ್ತುಗಳನ್ನು ನೀಡಿ ಸಾಮಾಜಿಕ ಸಮಾನತೆ ತರಬೇಕು' ಎಂದು ಅಂಬೇಡ್ಕರ್ ಹೇಳಿದರು.

ಸಾಮಾಜಿಕ ಸಮಾನತೆಯನ್ನು ಬೋಧಿಸುವ ಪಠ್ಯವನ್ನು ಆಯ್ಕೆ ಮಾಡಬೇಕು. ವಯಸ್ಕರ ಶಿಕ್ಷಣವನ್ನು ಬಲಪಡಿಸಬೇಕು. ಹಿಂದುಳಿದ ಪ್ರತಿಭಾವಂತ ಮಕ್ಕಳಿಗೆ ಶಿಷ್ಯವೇತನ ನೀಡಬೇಕು; ಶಾಲೆಯಲ್ಲಿ ಉದಾತ್ತ ನಿಲವಿನ, ನಿಷ್ಪಕ್ಷಪಾತ ಮತ್ತು ಉದಾರ ಮನಸ್ಸಿನ ಶಿಕ್ಷಕರಿರಬೇಕು. ಶಿಕ್ಷಕ ವರ್ಗವು ರಾಷ್ಟ್ರದ ನಾಡಿ.

ನಾವು ಪ್ರಗತಿ ಹೊಂದಬೇಕಾದರೆ ನಮ್ಮನ್ನು ನಾವು ಎರಡು ವಿಧವಾದ ಶುದ್ಧೀಕರಣಕ್ಕೆ ಒಳಪಡಿಸಿಕೊಳ್ಳಬೇಕು. 1)ನಮ್ಮ ಆಚಾರ ಶುದ್ಧವಾಗಬೇಕು. 2)ನಮ್ಮ ವಿಚಾರ ವಿಕಸಿತವಾಗಬೇಕು. ನಮ್ಮ ಆತ್ಮ ಗೌರವವನ್ನು ಮಾರಿಕೊಂಡು ಅನ್ಯರಿಗೆ ಗೌರವ ತೋರಿಸಬಾರದು. ಗೌರವಯುತವಾದ ಕೆಲಸ ಮಾಡಬೇಕು. ಗೌರವಯುತವಾಗಿ ಬದುಕಬೇಕು. ನಮ್ಮ ಪರಿಸರವನ್ನು ನಿರ್ಮಲವಾಗಿಡಬೇಕು. ನಮ್ಮ ವೇಷಭೂಷಣಗಳಲ್ಲಿ ಬದಲಾವಣೆಯಾಗಬೇಕು. ನಮ್ಮಲ್ಲಿ ಮೇಲು-ಕೀಳೆಂಬ ಭಾವನೆಯನ್ನು ಬೇರುಸಹಿತ ಕಿತ್ತೊಗೆಯಬೇಕು. ನಮ್ಮನ್ನು ನಾವು ಗೌರವಿಸಿಕೊಳ್ಳುವು ದನ್ನು ಕಲಿಯಬೇಕು. ನಾವು ಒಗ್ಗಟ್ಟಾಗಿದ್ದರೆ, ಬಲಶಾಲಿಗಳಾಗಿದ್ದರೆ, ಸತತ ಪ್ರಯತ್ನ ಶೀಲರಾಗಿದ್ದರೆ, ಛಲಗಾರರಾಗಿದ್ದರೆ

ನಮಗೆ ಒಂದಲ್ಲ ಒಂದು ದಿನ ಜಯ ದೊರೆಯುವುದು. ಈ ಮಾತುಗಳ ಮೂಲಕ ಅವರು ಶಿಕ್ಷಣದ ಮಹತ್ವವನ್ನು ಮತ್ತು ಪ್ರಭಾವವನ್ನು ಒತ್ತಿ ಹೇಳುತ್ತಾರೆ.

ಶಿಕ್ಷಣದ ಬಗ್ಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರ ಮತ್ತು ಅನುಷ್ಠಾನ

1. ದಲಿತ–ಕಾರ್ಮಿಕ ಹಾಗೂ ಅಸ್ಪೃಶ್ಯ ವರ್ಗದವರಿಗೆ ಶಿಕ್ಷಣವನ್ನು ನೀಡಬೇಕು. ಅವರ ಮಕ್ಕಳಿಗೂ ಶಿಕ್ಷಣ ಸಿಗುವಂತೆ ಏರ್ಪಾಟು ಮಾಡಬೇಕು.
2. ಪ್ರಾಥಮಿಕ ಶಿಕ್ಷಣವು ಉಚಿತ ಮತ್ತು ಕಡ್ಡಾಯವಾಗಬೇಕು.
3. 'ಬಹಿಷ್ಕೃತ ಹಿತಕಾರಿಣಿ ಸಭಾ' ಎಂಬ ಸಂಸ್ಥೆ ಕಟ್ಟಿ ವಿದ್ಯಾರ್ಥಿನಿಲಯ ಆರಂಭಿಸಿದರು.
4. 'ಮೂಕನಾಯಕ, ಬಹಿಷ್ಕೃತ ಭಾರತ ಎಂಬ ಪತ್ರಿಕೆಗಳ ಮೂಲಕ, ದಲಿತರಿಗೆ ಶಿಕ್ಷಣದ ಮಹತ್ವದ ವಿಚಾರಗಳನ್ನು ಚರ್ಚಿಸಿದರು.
5. ಸಮಾನತೆಯನ್ನು ಪ್ರತಿಪಾದಿಸಲು ಪತ್ರಕೆಗಳಲ್ಲಿ ನಿಷ್ಠುರ ಸಂಪಾದಕೀಯ ಬರೆದರು.
6. ದಲಿತ, ಹಿಂದುಳಿದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ಮುಂಬಯಿಯಲ್ಲಿ ಸಿದ್ಧಾರ್ಥ ಕಾಲೇಜು ಹಾಗೂ ಔರಂಗಾಬಾದ್‌ನಲ್ಲಿ ಮಿಲಿಂದ ವಿದ್ಯಾಲಯವನ್ನು ಸ್ಥಾಪಿಸಿದರು.
7. ತಮ್ಮ ವೈಯಕ್ತಿಕ ಗ್ರಂಥಾಲಯವನ್ನು ಸಿದ್ಧಾರ್ಥ ಕಾಲೇಜಿಗೆ ದಾನವಾಗಿ ನೀಡಿದರು
8. ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕೆ ಪ್ರೋತ್ಸಾಹ ನೀಡಿದರು.
9. ಹಿಂದುಳಿದ, ದಲಿತ ಅಸ್ಪೃಶ್ಯ ವರ್ಗದ ಮಕ್ಕಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ಅಳವಡಿಸಿದರು.
10. ಹಿಂದುಳಿದ ಮಕ್ಕಳಿಗೆ ಶಿಷ್ಯವೇತನ ನೀಡಲು ಶಿಫಾರಸ್ಸು ಮಾಡಿದರು

ಡಾ.ಬಿ.ಆರ್.ಅಂಬೇಡ್ಕರರು ದಲಿತರ ಏಳಿಗೆಗಾಗಿ ಶಿಕ್ಷಣವು ಒಂದು ಪ್ರಧಾನ ಅಸ್ತ್ರವೆಂದು ತಿಳಿಸಿದರು. ಶಿಕ್ಷಣ ಪಡೆದು, ಸಮಾಜದಲ್ಲಿನ ಅನ್ಯಾಯಗಳ ವಿರುದ್ಧ ಹೋರಾಡುವ ಪ್ರವೃತ್ತಿಯನ್ನು ಪ್ರೋತ್ಸಾಹಿಸಿದರು. ಏಳಿಗೆಗಾಗಿ ಶಿಕ್ಷಣವೇ ಪ್ರಬಲವಾದ ಸಾಧನ ಎಂದು ತಿಳಿಸಿದರು, ಪ್ರಾಥಮಿಕ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯಗೊಳಿಸಲು ಆಗ್ರಹಿಸಿದರು; ಹಿಂದುಳಿದವರು ಉನ್ನತ ಶಿಕ್ಷಣ ಪಡೆಯಲು ಅವರಿಗೆ ಶಿಷ್ಯವೇತನ ನೀಡುವಂತೆ ಹೇಳಿದರು.

ಮಹಾತ್ಮ ಗಾಂಧೀಜಿ ಅವರ ಶೈಕ್ಷಣಿಕ ವಿಚಾರಧಾರೆ

ಮಹಾತ್ಮ ಗಾಂಧೀಜಿ ಭಾರತ ಕಂಡ ಅಸಾಮಾನ್ಯ ಪುರುಷ, ಸತ್ಯ–ಅಹಿಂಸೆಗಳ ಮೂಲಕ ಬ್ರಿಟಿಷರಲ್ಲಿ ನಡುಕ ಉಂಟುಮಾಡಿ ಇಡೀ ಪ್ರಪಂಚವೇ ಭಾರತವನ್ನು

ರಗುಗಣ್ಣಿನಿಂದ ನೋಡುವಂತೆ ಮಾಡಿದ ಶಾಂತಿದೂತ. ಹಿಂದುಳಿದವರಿಗೆ ಸಾಮಾಜಿಕ ್ಯಯ ದೊರಕಿಸಿದ ಮಾನವತಾವಾದಿ, ಸ್ವತಂತ್ರ ಭಾರತವನ್ನು ರಾಮರಾಜ್ಯ ಮಾಡಬೇಕೆಂಬ ಣತೊಟ್ಟ ಆದರ್ಶವಾದಿ; ರಾಜಕಾರಣಿ, ತತ್ವಜ್ಞಾನಿ, ದಾರ್ಶನಿಕ, ಸಮಾಜ ಸುಧಾರಕ, ತ್ಯಾನ್ವೇಷಿ, ಶ್ರೇಷ್ಠ ಶಿಕ್ಷಣತಜ್ಞರು.

ಹಾತ್ಮ ಗಾಂಧೀಜಿ ಅವರ ಶೈಕ್ಷಣಿಕ ವಿಚಾರಧಾರೆಗಳು

ಮಹಾತ್ಮ ಗಾಂಧೀಜಿ ಜೀವಶಾಸ್ತ್ರ, ಸಮಾಜಶಾಸ್ತ್ರ ಹಾಗೂ ತತ್ವಜ್ಞಾನಗಳನ್ನು ಆಧರಿಸಿದ ಕ್ಷಣವನ್ನು ಮಾನ್ಯ ಮಾಡಿದರು. ಶಿಕ್ಷಣವು ವ್ಯಕ್ತಿಗಳ ಮತ್ತು ಸಾಮಾಜಿಕ ಜೀವನವನ್ನು ಕಾಸ ಮಾಡಬೇಕು ಎಂದ ಅವರು ಶಿಕ್ಷಣದ ಸ್ವರೂಪ, ಉದ್ದೇಶ, ಪಠ್ಯಕ್ರಮ ಮುಂತಾದ ಷಯಗಳನ್ನು ಕುರಿತು ಅವರು ಆಳವಾಗಿ ಚಿಂತನೆ ಮಾಡಿದರು.

ಗಾಂಧೀಜಿ ದೃಷ್ಟಿಯಲ್ಲಿ ಸಾಕ್ಷರರನ್ನು ಮಾಡುವುದೇ ಶಿಕ್ಷಣವಲ್ಲ, ಅವರ ಪ್ರಕಾರ, ಶಿಕ್ಷಣವು ಸಾಮಾಜಿಕ ಪುನರ್‌ರಚನೆಯ ಸಾಧನ; ಸಾಮಾಜಿಕ, ರಾಜಕೀಯ, ಆರ್ಥಿಕ, ೃತಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಅಗತ್ಯವಾದ ಚಟುವಟಿಕೆ, ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ಅಧ್ಯಾತ್ಮಿಕ ಶಕ್ತಿಗಳ ಸರ್ವಾಂಗೀಣ ವಿಕಾಸವೇ ಶಿಕ್ಷಣವಾಗಿದೆ". ಆದ್ದರಿಂದ ವರು–"**By Education I mean all-round drawing out of the best child and an-body, mind and spirit**" ಎಂದು ಹೇಳುತ್ತಿದ್ದರು.

ಶಿಕ್ಷಣವು ಮಕ್ಕಳ ವ್ಯಕ್ತಿತ್ವ ವಿಕಾಸ ಮತ್ತು ನೀತಿ–ನಡತೆಗಳ ಕಡೆ ಗಮನ ನೀಡಬೇಕು. ಮಗುವಿನ ದೇಹದ ಜೊತೆಗೆ ಮನಸ್ಸು ಹೃದಯ ಹಾಗೂ ಚೈತನ್ಯ ಇರುವುದು. ದೇಹವು ದೃಢವಾಗುವಂತೆ ಮಾಡಿ, ಮನಸ್ಸು ಮೃದುವಾಗುವಂತೆ, ಬುದ್ಧಿ ತೀಕ್ಷ್ಣವಾಗುವಂತೆ ಮತ್ತು ೃದಯ ವಿಶಾಲವಾಗುವಂತಹ ಶಿಕ್ಷಣ ನೀಡಬೇಕು. ಇದರ ಜೊತೆಗೆ ಮಗುವಿನಲ್ಲಿರುವ ಅಂತಃಶಕ್ತಿಯನ್ನು ಹೆಚ್ಚಿಸಿ, ಉತ್ತಮಾಂಶಗಳನ್ನು ವಿಕಾಸಗೊಳಿಸಬೇಕು.

ಶಿಕ್ಷಣದ ಧ್ಯೇಯಗಳು

. ಉದರ ನಿರ್ವಹಣೆಯ ಗುರಿ:– ಶಿಕ್ಷಣವು ಭೌತಿಕ ಸುಖಗಳಾದ ಆಹಾರ, ಅರಿವೆ ಮತ್ತು ಆಶ್ರಯಗಳನ್ನು ಪಡೆಯಲು ಸಹಾಯಮಾಡಬೇಕು. ಇದನ್ನು ನಿರ್ಧರಿಸುವ,ನಿರ್ಮಿಸುವ ಸಾಮರ್ಥ್ಯ ಮಕ್ಕಳಲ್ಲಿ ಮೂಡಿಬರಬೇಕು. ವ್ಯಕ್ತಿಯನ್ನು ಆರ್ಥಿಕವಾಗಿ ಸ್ವಾವಲಂಬಿ ಮಾಡುವ ಧ್ಯೇಯವನ್ನು ಶಿಕ್ಷಣವು ಪ್ರಪ್ರಥಮವಾಗಿ ಹೊಂದಿರಬೇಕು. "**This Education ought to be for them, a kind of insurance against unemployment; the child at the end of fourteen years after he had finished his seven years, to be discharged as an earning unit**" (1937ರ ಸೆಪ್ಟೆಂಬರ್ 11ರಲ್ಲಿ 'ಹರಿಜನ' ಪತ್ರಿಕೆಯಲ್ಲಿನ ಲೇಖನ) ಅಂದರೆ, ಏಳು ವರ್ಷಗಳವರಗೆ ಶಿಕ್ಷಣವನ್ನು ಪಡೆದು, ಹದಿನಾಲ್ಕನೆಯ ವಯಸ್ಸಿನಲ್ಲಿ ಮಗು ಉತ್ಪಾದನಾ ಘಟಕವಾಗಿ ಶಾಲೆಯಿಂದ ಹೊರಬರಬೇಕು. ಅವನು ಪಡೆದ ಶಿಕ್ಷಣ ನಿರುದ್ಯೋಗದ ವಿರುದ್ಧದ ವಿಮೆಯಂತಿರಬೇಕು. ಶಿಕ್ಷಣ

ಪಡೆಯುತ್ತಾ ಗಳಿಸುವ ಮತ್ತು ಗಳಿಸುತ್ತಾ ಕಲಿಯುವ ವಿಧಾನಕ್ಕೆ ಮಹತ್ವ ನೀಡಬೇಕು.

2. ಸಾಂಸ್ಕೃತಿಕ ಧ್ಯೇಯ:- ಗಾಂಧೀಜಿಯವರಿಗೆ ನಮ್ಮ ದೇಶದ ಸಂಸ್ಕೃತಿ-ಪರಂಪರೆಗಳ ಮೇಲೆ ಅಪಾರವಾದ ಅಭಿಮಾನ, ಇವರ ಪ್ರಕಾರ, ನಮ್ಮ ಶಿಕ್ಷಣ ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಬೇಕು. ವೇಷ ಭೂಷಣ, ಆಚಾರ ವಿಚಾರ, ವರ್ತನೆ, ಸಂಸ್ಕೃತಿ ಸಂಪ್ರದಾಯಗಳ ಆಧಾರದ ಮೇಲೆ ಶಿಕ್ಷಣ ರೂಪಿತವಾಗಬೇಕು(Culture is not the product of intellectual work, but it is a quality of the soul, permeating all aspects of human behavior) ಎಂದು ಗಾಂಧೀಜಿ ಪ್ರತಿಪಾದಿಸಿದರು.

3. ಸರ್ವತೋಮುಖ ವಿಕಾಸದ ಧ್ಯೇಯ:- ಶಿಕ್ಷಣವು ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಮಾಧ್ಯಮವಾಗಬೇಕು. ಮಗುವಿನ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಅಂಶಗಳಲ್ಲಿ ಅತ್ಯುತ್ತಮವಾದುದನ್ನು ವಿಕಾಸಗೊಳಿಸುವುದೇ ಶಿಕ್ಷಣ ಎಂದು ಹೇಳಿದರು. ಪ್ರತಿಯೋರ್ವನಿಗೂ ಕರ, (Hand) ಶಿರ, (Head) ಉರ (Heart)ಉಂಟು, ಈ ಮೂರು ಅಂಗಗಳ ಬೆಳವಣಿಗೆ ಏಕಕಾಲಕ್ಕೆ ಆಗಬೇಕು. ಅದೇ ವ್ಯಕ್ತಿಯ ಸರ್ವತೋಮುಖ ವಿಕಾಸ. ಅದೇ ಶಿಕ್ಷಣದ ಮೂಲಧ್ಯೇಯವಾಗಬೇಕು. ಆದ್ದರಿಂದ ಶಿಕ್ಷಣದಲ್ಲಿ ಇವುಗಳ ಬೇಳವಣಿಗೆಗೆ ಹೆಚ್ಚು ಪ್ರಾಧಾನ್ಯತೆ ೀನಿಡಬೇಕು ಎಂದು ಕರೆ ನೀಡಿದರು.

4. ಸಾಮಾಜಿಕ ಧ್ಯೇಯ:- ಮಗುವನ್ನು ಸಮಾಜದ ಸಮರ್ಥ ಸದಸ್ಯನನ್ನಾಗಿ ಮಾಡುವ ತರಬೇತಿಯನ್ನು ಶಿಕ್ಷಣವು ನೀಡಬೇಕು. ಭಾಷೆ, ಬಣ್ಣ, ಜಾತಿ, ಮತ, ಪಂಥ ಮುಂತಾದ ವೈವಿಧ್ಯತೆಗಳಿಂದ ಕೂಡಿದ ಸಮಾಜದಲ್ಲಿ ವ್ಯಕ್ತಿಯು ತನ್ನ ವೈಯಕ್ತಿಕತೆಯನ್ನು ಉಳಿಸಿಕೊಂಡು ಇತರರ ಆಸೆ-ಆಕಾಂಕ್ಷೆ, ನಡೆ-ನುಡಿಗಳಿಗೆ, ಆಚಾರ-ವಿಚಾರಗಳಿಗೆ ಮಾನ್ಯತೆ ನೀಡಬೇಕು. ಸಹಾಯ, ಸಹಕಾರ, ಅನುಕಂಪ, ಪ್ರೀತಿ, ವಾತ್ಸಲ್ಯ, ದಯೆ, ಸಹಾನಭೂತಿ, ಸೇವಾ ಮನೋಭಾವ, ಪರೋಪಕಾರ ಮುಂತಾದ ಸಾಮಾಜಿಕ ಗುಣಗಳನ್ನು ಶಿಕ್ಷಣವು ಕಲಿಸಬೇಕು. ಮಕ್ಕಳಿಗೆ ಸಾಂಘಿಕ ಜೀವನದ ತರಬೇತಿ ನೀಡಬೇಕು.

5. ನೈತಿಕ ಧ್ಯೇಯ:- ಶೀಲಸಂವರ್ಧನೆ, ಸಚ್ಚಾರಿತ್ರ್ಯ, ಮಕ್ಕಳ ಮಾನಸಿಕ ಮತ್ತು ಆಧ್ಯಾತ್ಮಿಕ ಅಂಶಗಳ ಸಾಮರಸ್ಯದ ವಿಕಾಸವೇ ಶಿಕ್ಷಣ. ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸ, ಆತ್ಮಸಂಯಮ, ಶುದ್ಧವಾದ ಆಚಾರ, ನಿರ್ಮಲವಾದ ವಿಚಾರ, ನ್ಯಾಯ, ಧರ್ಮ, ಸಾಹಸ, ತ್ಯಾಗ, ಪರೋಪಕಾರ, ಶಾಂತಿ, ಅಹಿಂಸೆ, ಸತ್ಯಪ್ರಿಯತೆ ಮುಂತಾದ ಗುಣಗಳನ್ನು ಶಿಕ್ಷಣದಿಂದಲೇ ರೂಪಿಸಿದರೆ, ಅದು ನೈತಿಕ ಉನ್ನತ ಮಟ್ಟಕ್ಕೆ ದಾರಿಯಾಗುತ್ತದೆ ಎಂದು ಗಾಂಧೀಜಿ ನಂಬಿದ್ದರು.

ಸಮರ್ಥ ನಾಗರಿಕರನ್ನು ನಿರ್ಮಿಸುವ ಧ್ಯೇಯ:- ಒಂದು ದೇಶದ ಉನ್ನತಿ ಮತ್ತು ಅವನತಿ ಆ ದೇಶದ ಯುವಜನರ ಕೈಯಲ್ಲಿದೆ. ದೇಶದ ಬೆಳವಣಿಗೆ ಅಲ್ಲಿನ ಯುವ ನಾಗರಿಕರ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ಶಿಕ್ಷಣದ ಮುಖ್ಯ ಧ್ಯೇಯ ಉತ್ತಮ ಸಮರ್ಥ ನಾಗರಿಕರ ನಿರ್ಮಾಣ ಆಗಿರಬೇಕು. ಅವರು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತೊಡಗುವಂತೆ ಮಾಡಿ ಅವರಲ್ಲಿ ದೇಶಪ್ರೇಮ ಹುಟ್ಟುವಂತೆಮಾಡಿ, ರಾಷ್ಟ್ರದ ಅಭ್ಯುದಯಕ್ಕಾಗಿ ದುಡಿಯುವಂತೆ ಅವರನ್ನು ಪ್ರಚೋದಿಸುವ ಧ್ಯೇಯವನ್ನು ಶಿಕ್ಷಣವು ಹೊಂದಿರಬೇಕು ಎಂದು ಗಾಂಧೀಜಿ ಹೇಳಿದರು.

ಸತ್ಯದ ಸಾಕ್ಷಾತ್ಕಾರ:-ಸತ್ಯವನ್ನು ನುಡಿಯುತ್ತಾ, ಸತ್ಯವನ್ನು ಚಿಂತಿಸುತ್ತಾ, ಸತ್ಯಮಾರ್ಗದಿಂದಲೇ ನಡೆಯುತ್ತಾ ಸತ್ಯಕ್ಕಾಗಿಯೇ ಸಕಲವನ್ನು ಸಮರ್ಪಣೆ ಮಾಡುವ ಧೈರ್ಯವನ್ನು ಪಡೆಯುವುದಾಗಿದೆ. ಇದನ್ನು ಶಿಕ್ಷಣ ನೀಡಬೇಕು ಎಂದು ಗಾಂಧೀಜಿ ಆಶಿಸಿದರು. ಶಿಕ್ಷಣದ ಧ್ಯೇಯಗಳನ್ನು ಚರ್ಚಿಸುವಾಗ ಗಾಂಧೀಜಿ ಮಗುವಿನ ಶಾರೀರಿಕ, ಬೌದ್ಧಿಕ, ಮಾನಸಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಅಧ್ಯಾತ್ಮಿಕ ಅಂಶಗಳಿಗೆ ಮಹತ್ವ ನೀಡಿದ್ದಾರೆ. ಇದಕ್ಕಾಗಿಯೇ ಅವರು ಮೂಲ ಶಿಕ್ಷಣ (Basic Education) ಪದ್ಧತಿಯನ್ನು ರೂಪಿಸಿದರು.

ಪಠ್ಯಕ್ರಮ

ಮಹಾತ್ಮ ಗಾಂಧೀಜಿ ಅವರು ಶಿಕ್ಷಣದ ಧ್ಯೇಯ-ಉದ್ದೇಶಗಳ ಸಾಧನೆಗಾಗಿ ಅನುಕೂಲವಾದ ಪಠ್ಯಕ್ರಮ ಅಗತ್ಯ ಎಂದು ಪ್ರತಿಪಾದಿಸಿದರು. ಪಠ್ಯಕ್ರಮದಲ್ಲಿ ಈ ಕೆಳಕಂಡ ಅಂಶಗಳಿಗೆ ಪ್ರಾಧಾನ್ಯತೆಯನ್ನು ನೀಡಿರಬೇಕು ಎಂದು ಅವರು ಆಶಿಸಿದ್ದರು.

1) ವೃತ್ತಿ ಶಿಕ್ಷಣ:- ಶಾಲೆಯು ಕಾರ್ಯ, ಪ್ರಯೋಗ ಮತ್ತು ಸಂಶೋಧನೆಯ ಸ್ಥಳವಾಗಿದೆ. ಅಲ್ಲಿ ಚಟುವಟಿಕೆಗಳಿಗೆ ಸಾಕಷ್ಟು ಅವಕಾಶಗಳಿರಬೇಕು. ನೂಲುವುದು, ನೇಯುವುದು, ಬಡಿಗತನ, ಕಮ್ಮಾರತನ, ಮುಂತಾದವುಗಳಿಗೆ ಅವಕಾಶ ಇರಬೇಕು. ಕಲಿಯುತ್ತ ಗಳಿಸು, ಗಳಿಸುತ್ತಾ ಕಲಿ ಎಂಬ ತತ್ವಕ್ಕೆ ಮಹತ್ವ ಇರಬೇಕು.

2) ಮಾತೃಭಾಷೆಯಲ್ಲಿ ಶಿಕ್ಷಣ:- ಪಠ್ಯಕ್ರಮದಲ್ಲಿ ಮಾತೃಭಾಷೆಗೆ ಮತ್ತು ಮಾತೃಭಾಷಾ ಮಾಧ್ಯಮಕ್ಕೆ ಪ್ರಾಧಾನ್ಯತೆ; ಮಾತೃಭಾಷೆಯಲ್ಲಿ ನಡೆಯುವ ಅಧ್ಯಯನ, ಅಧ್ಯಾಪನ, ಪರಿಣಾಮಕಾರಿಯಾಗಿರುತ್ತದೆ ಎಂಬುದು ಗಾಂಧೀಜಿ ಪ್ರತಿಪಾದನೆಯಾಗಿತ್ತು.

3) ಗಣಿತ ಮತ್ತು ವೃತ್ತಿಮೂಲ ಶಿಕ್ಷಣ:- ಪ್ರಾಥಮಿಕ ಹಂತದಲ್ಲಿಯೇ ಗಣಿತದ ಸ್ಥೂಲ ಜ್ಞಾನ ಇರಬೇಕು. ಈ ಗಣಿತ ವಿಜ್ಞಾನವು ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ರಂಗಗಳಲ್ಲಿ ಉಪಯೋಗವಾಗುವಂತೆ ಇರಬೇಕು.

4) ಶಾರೀರಿಕ ಶಿಕ್ಷಣ:- ಮಕ್ಕಳು ದೈಹಿಕವಾಗಿ ದುರ್ಬಲರಿರಬಾರದು; ಶಾರೀರಿಕ ಶಿಕ್ಷಣಕ್ಕೆ ಒತ್ತು ಇರಬೇಕು.

5) ಸಾಮಾಜಿಕ ಶಿಕ್ಷಣ:– ಚರಿತ್ರೆ, ಭೂಗೋಳ, ಪೌರನೀತಿಯನ್ನು ಒಳಗೊಂಡ ಸಾಮಾಜಿಕ ಅಭ್ಯಾಸವನ್ನು ಪಠ್ಯದಲ್ಲಿ ಸೇರಿಸಬೇಕು.

6) ಸಾಮಾನ್ಯ ವಿಜ್ಞಾನ ಶಿಕ್ಷಣ:– ಮಕ್ಕಳಲ್ಲಿ ವೈಜ್ಞಾನಿಕ ದೃಷ್ಟಿಕೋನ ಬೆಳೆಯಲು ರಸಾಯನಶಾಸ್ತ್ರ, ಭೌತಶಾಸ್ತ್ರ, ಆರೋಗ್ಯಶಾಸ್ತ್ರಗಳನ್ನು ಒಳಗೊಂಡ ಸಾಮಾನ್ಯ ವಿಜ್ಞಾನ ಇರಬೇಕು.

7) ಪ್ರಾಪಂಚಿಕ ಶಿಕ್ಷಣ:– ಪ್ರಪಂಚದ ಜ್ಞಾನಕ್ಕಾಗಿ ಮತ್ತು ಸೃಷ್ಟಿಯ ರಹಸ್ಯ ತಿಳಿಯಲು ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ನಿಸರ್ಗ ಅಭ್ಯಾಸ, ಖಗೋಳಶಾಸ್ತ್ರಗಳ ಪರಿಚಯವನ್ನು ಮಕ್ಕಳಿಗೆ ಮಾಡಿ ಕೊಡಬೇಕು.

8) ಕಲೆ ಮತ್ತು ಸಂಗೀತ ಶಿಕ್ಷಣ:– ಸಂಗೀತ, ಚಿತ್ರಕಲೆ, ಕಸೂತಿ, ಹೆಣಿಕೆ, ಗೃಹವಿಜ್ಞಾನ, ನೃತ್ಯ ಮುಂತಾದ ಅಂಶಗಳನ್ನು ಪಠ್ಯಕ್ರಮದಲ್ಲಿ ಇರಬೇಕು.

9) ಶಿಸ್ತು ಮತ್ತು ಶಿಕ್ಷಣ:–ಗಾಂಧೀಜಿ ದೃಷ್ಟಿಯಲ್ಲಿ ಶಿಸ್ತು ಆಂತರಿಕವಾಗಿ ಮೂಡುವಂಥದ್ದು. ಸ್ವಯಂ ಪ್ರೇರಣೆಯ ಶಿಸ್ತನ್ನು ಅನುಮೋದಿಸಿದ ಅವರು, ಶಿಸ್ತು ಎನ್ನುವುದು 'ಕಟ್ಟುನಿಟ್ಟಿನ ನಿಯಂತ್ರಣ ಮತ್ತು ಪೂರ್ಣಸ್ವಾತಂತ್ರ್ಯಗಳ ನಡುವಣ ಸ್ಥಿತಿ' ಎಂದರು. ಸ್ವಯಂಪ್ರೇರಿತ ಶಿಸ್ತು ಎಂದಿಗೂ ಪರಿಶುದ್ಧ ಜೀವನ, ಆತ್ಮನಿಯಂತ್ರಣ, ನಿರ್ಭೀತಿ, ತ್ಯಾಗ, ಅಹಿಂಸೆ, ಪರೋಪಕಾರ ಮುಂತಾದ ಗುಣಗಳಿಂದ ಹುಟ್ಟುವುದು. ಶಿಕ್ಷೆಯು ಅತ್ಯಂತ ಹೀನಕ್ರಿಯೆ; ಯಾರಾದರೂ ಶಿಸ್ತುಭಂಗ ಮಾಡಿದರೆ, ಅವರನ್ನು ಶಿಕ್ಷಿಸ ಕೂಡದು, ಬದಲಾಗಿ ಅವರನ್ನು ಪರಿವರ್ತಿಸುವ ಪ್ರಯತ್ನ ಮಾಡಬೇಕು. ಬದಲಾಗಲು ಅವಕಾಶ ನೀಡಬೇಕು ಎಂದು ಗಾಂಧೀಜಿ ತಿಳಿಸಿದರು.

10) ಅಧ್ಯಾಪನ ವಿಧಾನ ಮತ್ತು ಧಾರ್ಮಿಕ ಶಿಕ್ಷಣ:– ಬೋಧನೆಯು ಸ್ವಾಭಾವಿಕವಾಗಿ ನಡೆಯಬೇಕು. ಚಟುವಟಿಕೆ, ಯೋಗ, ಸಂಶೋಧನೆಯ ರೂಪದಲ್ಲಿ ಶಿಕ್ಷಣ ನಡೆಯಬೇಕು ಎಂದು ಹೇಳುತ್ತಾ ಚಟುವಟಿಕೆಗಳ ಮೂಲಕ ಅಂದರೆ ಮಾಡುತ್ತಾ ಕಲಿ (Learning by Doing) ತತ್ವದ ಆಧಾರದ ಮೇಲೆ ನೂಲುವ, ನೇಯುವ, ಬಡಿಗತನ ಮುಂತಾದ ಕರಕುಶಲಾಧಾರಿತ ಶಿಕ್ಷಣವನ್ನು ನೀಡಬೇಕು ಎಂದು ತಿಳಿಸಿದ ಗಾಂಧೀಜಿ, ವೃತ್ತಿಕೇಂದ್ರಿತ ಶಿಕ್ಷಣವನ್ನು ಪ್ರತಿಪಾದಿಸಿ, ಕಲಿಕೆಯಲ್ಲಿ ವೃತ್ತಿ ಸಂಬಂಧಿ ಅಂಶಗಳ ಮೂಲಕ ಕಲಿಕೆ ಸಾಗಬೇಕು ಎಂದರು, ನಿರುದ್ಯೋಗದ ಸಂದರ್ಭದಲ್ಲಿ ವೃತ್ತಿಯ ಅನಿವಾರ್ಯತೆಯನ್ನು ತಿಳಿಸಿದರು. ಭಾಷಣ, ಚರ್ಚೆ, ಪ್ರಶ್ನೋತ್ತರ, ಸಂಭಾಷಣೆ, ಸಂವಾದ ಮುಂತಾದ ವಿಧಾನಗಳನ್ನು ಅನುಸರಿಸಲು ಅವರು ತಿಳಿಸಿದರು. ಈ ಮೂಲಕ ವೃತ್ತಿಕೇಂದ್ರಿತ ಶಿಕ್ಷಣವನ್ನು ನೀಡಿದಲ್ಲಿ ಮಕ್ಕಳ ಸರ್ವತೋಮುಖ ವಿಕಾಸವಾಗುವುದು ಎಂದು ಹೇಳಿದರು.

11) ಸ್ತ್ರೀ ಶಿಕ್ಷಣ:– ಶಿಕ್ಷಣ ಪಡೆಯುವ ಹಕ್ಕು ಸ್ತ್ರೀಗೂ ಇದೆ. ಪುರುಷ ಶಿಕ್ಷಕರಿಗಿಂತ ಮಹಿಳಾ ಶಿಕ್ಷಕರು ಹೆಚ್ಚು ಪರಿಣಾಮಕಾರಿಯಾಗಿ ಬೋಧಿಸುವರು ಎಂದ ಗಾಂಧೀಜಿ, ಸ್ತ್ರೀಯರ ಬೇಡಿಕೆ ಹಾಗೂ ಅವರ ಸಾಮರ್ಥ್ಯಗಳಿಗೆ ತಕ್ಕ ಶಿಕ್ಷಣವನ್ನು

ನೀಡಬೇಕು. ಸ್ತ್ರೀಯರಿಗೆ ಗೃಹವಿಜ್ಞಾನದಂತಹ ವಿಷಯಗಳನ್ನು ಬೋಧಿಸಬೇಕು. ಸ್ತ್ರೀಯರಿಗೆ ಉನ್ನತ ಹಂತದವರೆಗೂ ಉಚಿತ ಶಿಕ್ಷಣವನ್ನು ನೀಡಬೇಕು ಎಂದು ಪ್ರತಿಪಾದಿಸಿದರು.

ಉಪಸಂಹಾರ

ಮಹಾತ್ಮ ಗಾಂಧೀಜಿ ಅವರ ಮೂಲ ಶಿಕ್ಷಣವು ಭಾರತದ ಶೈಕ್ಷಣಿಕ ಪದ್ಧತಿಯಲ್ಲಿಯೇ ಒಂದು ಪ್ರಾಮುಖ್ಯತೆಯನ್ನು ಪಡೆಯಿತು. ಭಾರತದ ಗ್ರಾಮೀಣ ಮತ್ತು ಮೂಲ ಕಸುಬುಗಳ ಉತ್ಥಾನಕ್ಕೆ ಮೂಲ ಶಿಕ್ಷಣವೊಂದೆ ಸಾಧನ. ಭಾರತದಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಇದು ಪ್ರಾಯೋಗಿಕ ಯೋಜನೆ ಎಂದ ಅವರು, ತತ್ವಶಾಸ್ತ್ರ, ನಿಸರ್ಗಶಾಸ್ತ್ರ, ಆದರ್ಶ ಮತ್ತು ವ್ಯವಹಾರಗಳ ಸಂಗಮ ವಾಗಿ ಶಿಕ್ಷಣವನ್ನು ರೂಪಿಸಬೇಕು ಎಂದು ತಿಳಿಸಿದರು. ಶಿಕ್ಷಣವು ಮನೋವೈಜ್ಞಾನಿಕ ವಾಗಿ, ಸಮಾಜಶಾಸ್ತ್ರೀಯವಾಗಿ, ಜೀವಶಾಸ್ತ್ರೀಯವಾಗಿ ತಿಳುವಳಿಕೆ ನೀಡುವಂತಿರಬೇಕು ಎಂದು ವಿವರಿಸಿದರು.

ಒಟ್ಟಾರೆಯಾಗಿ ಹೇಳುವುದಾದರೆ, ಶಿಕ್ಷಣದ ಮಹತ್ವವನ್ನು ಸಾರಿ, ಪ್ರಪಂಚದ ಚರಿತ್ರೆಯಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವಂತ ವ್ಯಕ್ತಿತ್ವವುಳ್ಳ ಕೆಲವೇ ನಾಯಕರುಗಳಲ್ಲಿ ಡಾ.ಬಿ. ಆರ್.ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧೀಜಿ ಅವರು ಸೇರುತ್ತಾರೆ.

ಆಧಾರ ಗ್ರಂಥಗಳು

- **Education in the Emerging Indian Society–(Made Essay)- DOABA House,1688, NaiSarak, New Delhi.**
- **Thinkers on Education-EDUTRACK Series, Neelkamal Publication, New Delhi.**
- ಡಾ.ವಿ.ಕೆ.ಹಂಪಿಹೊಳಿ ಮತ್ತು ಪ್ರೊ.ಬಿ.ಮೋಹನ್ ರಾವ್.–ಶ್ರೇಷ್ಠ ಶಿಕ್ಷಣ ತಜ್ಞರುಗಳು–ವಿಜಯ್ ಪಬ್ಲಿಕೇಶನ್, ಗದಗ.
- ಪ್ರೊ.ಕೆ.ಜಿ.ಕುಲಕರ್ಣಿ (Foundations of Education) ಶಿಕ್ಷಣದ ಆಧಾರಗಳು, ಪ್ರದೀಪ ಪ್ರಕಾಶನ, ಹುಬ್ಬಳ್ಳಿ.
- ಡಾ. ಆರ್. ಒಬಳೇಶ ಘಟ್ಟಿ. ಭಾರತದಲ್ಲಿ ಶಿಕ್ಷಣ ಮತ್ತು ಪ್ರಚಲಿತ ಸಮಸ್ಯೆಗಳು. ವಿದ್ಯಾಟಿಧಿ ಪ್ರಕಾಶನ, ಗದಗ.

ದಲಿತರ ಏಳಿಗೆಗೆ ಅಂಬೇಡ್ಕರ್ ಸೂಚಿಸಿದ ಶಿಕ್ಷಣ ವ್ಯವಸ್ಥೆ

ಪ್ರಭಾ ಎಚ್.ಎಂ.
ರೂಪಾ ಎಂ.

ಡಾ.ಅಂಬೇಡ್ಕರರು ಹಿಂದೂ ಸಮಾಜವನ್ನು ಮತ್ತು ಜಾತಿ ವ್ಯವಸ್ಥೆಯನ್ನು ಹಾಗೂ ಅದಕ್ಕೆ ಅಂಟಿದ ಅಸ್ಪೃಶ್ಯತೆಯನ್ನು ಉಗ್ರವಾಗಿ ಟೀಕಿಸಿರುವರು; ಅಲ್ಲದೆ, ಹಿಂದೂ ಸಮಾಜದ ಸುಧಾರಣೆಯ ದೃಷ್ಟಿಯಿಂದಲೂ ಮಹತ್ವದ ಅಂಶಗಳನ್ನು ಅವರು ದಾಖಲಿಸಿದ್ದಾರೆ. ಜಾತಿ ಪದ್ಧತಿಯಂತಹ ಜಡಪದ್ಧತಿಯನ್ನು ಆಧಾರವಾಗಿ ಹೊಂದಿರುವ ಹಿಂದೂ ಸಮಾಜವು ಕಾಲದ ಅಗತ್ಯಗಳಿಗೆ ತಕ್ಕಂತೆ ಬದಲಾವಣೆ ಹೊಂದಲಾರದೆ, ಅಪರಿವರ್ತನಶೀಲ ಸ್ವರೂಪವನ್ನು ತಳೆದಿದೆ ಎಂದು ಅವರು ವಿವರಿಸಿದರು. ಹಿಂದೂ ಸಮಾಜದ ಹಲವಾರು ದೋಷ-ದೌರ್ಬಲ್ಯಗಳಿಗೆ, ಅದರಲ್ಲೂ ದಲಿತರ ಶೋಷಣೆಗೆ ಮತ್ತು ಅಸ್ಪೃಶ್ಯತೆಯಂತಹ ಅಮಾನಷ ಪದ್ಧತಿಯ ಆಚರಣೆಗೆ ಕಾರಣವಾಗಿರುವ ಜಾತಿಯನ್ನು ನಿರ್ಮೂಲನೆ ಮಾಡಿದಲ್ಲದೆ ಭಾರತಕ್ಕೆ ಉಜ್ವಲವಾದ ಭವಿಷ್ಯವಿರದು ಎಂದು ಅವರು ತಮ್ಮ "ಆನಿಹಿಲೇಶನ್ ಆಫ್ ಕಾಸ್ಟ್" ಗ್ರಂಥದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಸಾಮಾಜಿಕ ಸುಧಾರಣೆಯ ಕಾರ್ಯರಾಜಕೀಯ ಕಾರ್ಯಕ್ಕಿಂತ ಕಠಿಣ

ಸ್ವಾತಂತ್ರ್ಯ ಹೋರಾಟದ ಕಾವು ಏರುತ್ತಿದ್ದಂತೆ 1930ರ ಸುಮಾರಿನಲ್ಲಿ ಗಾಂಧೀಜಿ ಅವರು ಸಾಮಾಜಿಕ ಸುಧಾರಣಾ ಕಾರ್ಯಗಳಿಗಿಂತ ಹೆಚ್ಚಾಗಿ ರಾಜಕೀಯ ಹೋರಾಟಕ್ಕಾಗಿಯೇ ತಮ್ಮ ಹೆಚ್ಚಿನ ಸಮಯವನ್ನು ವಿನಿಯೋಗಿಸ ಬೇಕಾಗುತ್ತಿತ್ತು. ರಾಜಕೀಯ ಸ್ವಾತಂತ್ರ್ಯದ ಗಳಿಕೆಯ ಕಾರಣವನ್ನು ಮುಂದಿಟ್ಟು. ಅವರು ಸಾಮಾಜಿಕ ಸುಧಾರಣೆಯ ಅಂಶವನ್ನು ಗೌಣವಾಗಿಸುತ್ತಿದ್ದಾರೆ ಎಂದು ಅಂಬೇಡ್ಕರ್ ಗಾಂಧೀಜಿ ಅವರನ್ನು ಉಗ್ರವಾಗಿ ಟೀಕಿಸಿದ್ದರು. ಇದೇ ಸಮಯಕ್ಕೆ ಅಂಬೇಡ್ಕರರು ವಕೀಲಿ ವೃತ್ತಿಯ ಜೊತೆಗೆ ದಲಿತೋದ್ಧಾರದ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕೆಂದು ತೀರ್ಮಾನಿಸಿದರು. ಈ ತೀರ್ಮಾನದೊಂದಿಗೆ ಅವರ ಗಮನವು ಅಸ್ಪೃಶ್ಯತೆಯ ರದ್ಧತಿ ಮತ್ತು ಜಾತಿ ವ್ಯವಸ್ಥೆಯ ನಿರ್ಮೂಲನೆಯೆಡೆಗೆ ಹರಿಯಿತು.

ರಾಜಕೀಯ ನಾಯಕರಿಗಿಂತ ಹೆಚ್ಚಾಗಿ ಸಮಾಜ ಸುಧಾರಕರು ತಮ್ಮ ಧಾರಣಾ ಕಾರ್ಯದಲ್ಲಿ ಹೆಚ್ಚಿನ ಅಡ್ಡಿ-ಆತಂಕಗಳನ್ನು ಮತ್ತು ತೊಂದರೆಗಳನ್ನು ದುರಿಸಬೇಕಾಗಬಹುದೆಂಬ ಅರಿವನ್ನು ಅಂಬೇಡ್ಕರ್ ಹೊಂದಿದ್ದರು. ರಾಜಕೀಯ ೈದಿಗಳನ್ನು ತ್ಯಾಗ ಬಲಿದಾನ ಮಾಡುವವರಾಗಿ ಬಹಳ ಗೌರವದಿಂದ ಕಾಣುತ್ತಿದ್ದ ದಿನಗಳಲ್ಲಿ, ಸಮಾಜ ಸುಧಾರಕರ ನೋವು ಹಾಗೂ ಸಮಸ್ಯೆಗಳನ್ನು ಕೇಳುವವರೇ ಲ್ಲವೆಂಬ ಸ್ಥಿತಿ ಇತ್ತು. "ಸರ್ಕಾರಕ್ಕಿಂತ ಹೆಚ್ಚು ಪ್ರಮಾಣದಲ್ಲಿಸಮಾಜವೊಂದು ್ಯಕ್ತಿಯೊಬ್ಬನ ಮೇಲೆ ದಬ್ಬಾಳಿಕೆ ಮತ್ತು ಶೋಷಣೆ ನಡೆಸಬಹುದಾಗಿದೆ" ಎಂದು ಂಬೇಡ್ಕರ್ ತಿಳಿಸಿದ್ದರು.

ಸಮಾಜ ಸುಧಾರಕರು ತಮ್ಮ ಸುಧಾರಣಾ ಕಾರ್ಯದಲ್ಲಿ ಸಮಾಜಕ್ಕೆ ವಾಲುಗಳನ್ನೆಸೆದಾಗ, ಅವರೊಂದಿಗೆ ಸ್ನೇಹ ಹೊಂದಿರಲೂ ಮುಂದೆ ಬರುವುದಿಲ್ಲ. ವರನ್ನು "ತ್ಯಾಗಜೀವಿ" ಎಂದು ಕರೆಯುವವರು ಇರುವುದಿಲ್ಲ. ಬದಲಿಗೆ ಎಲ್ಲರೂ ವರನ್ನು "ಅಸಹ್ಯದಿಂದ ಮತ್ತು ಕೀಳಾಗಿ" ಕಾಣುತ್ತಾರೆ. ಆದರೆ, ರಾಜಕೀಯ ೋರಾಟಗಾರರು ಸರ್ಕಾರಕ್ಕೆ ಸವಾಲು ಎಸೆದಾಗ ಅವರನ್ನು ಎಲ್ಲರೂ ಹಾಡಿ ೊಗಳುವರು. ಇದು ಅಂಬೇಡ್ಕರ್ ತಮ್ಮ ಅನುಭವದಿಂದ ಕಂಡುಕೊಂಡ ಸತ್ಯ ವಾಗಿತ್ತು. ಆದ್ದರಿಂದ ತಮ್ಮ ಸುಧಾರಣಾ ಕಾರ್ಯಕ್ರಮ ತಮ್ಮ ಬದುಕಿನ ಹಾಸಿಗೆಯಲ್ಲಿ ಮುಳ್ಳುಗಳನ್ನು ರುವುದೆಂದು ಅವರು ಮೊದಲೇ ನಿರೀಕ್ಷಿಸಿದ್ದರು.

ದಲಿತೋದ್ಧಾರಕ್ಕಾಗಿ "ಶಿಕ್ಷಣ ಸಂಘಟನೆ ಮತ್ತು ಹೋರಾಟ" ಎಂಬ ತ್ರಿವಳಿ ಸೂತ್ರ

ದಲಿತರಾದವರು ತಮ್ಮ ಉದ್ಧಾರಕ್ಕಾಗಿ ಹಾಗೂ ಏಳ್ಗೆಗಾಗಿ ಬೇರಾರನ್ನೂ ಅವಲಂಬಿಸುವುದು ತರವಲ್ಲವೆಂದು ಭಾವಿಸಿದ್ದ ಅಂಬೇಡ್ಕರ್, ದಲಿತರ ಏಳ್ಗೆಗಾಗಿ "ಸ್ವ-ಸುಧಾರಣೆ, ಸ್ವಾವಲಂಬನೆ, ಸ್ವಾಭಿಮಾನ, ಸ್ವ-ಏಳ್ಗೆ ಹಾಗೂ ಸ್ವ-ನಂಬಿಕೆ" ಎಂಬ "ಪಂಚಸೂತ್ರ" ಮುಂದಿರಿಸಿದ್ದರು. ದಲಿತ ಸಮುದಾಯಕ್ಕೆ ಸೇರಿದವರಾಗಿದ್ದು, ದಲಿತರ ನೋವು, ಶೋಷಣೆ, ಸಂಕಟ ಮೂಗುಬ್ಬಸಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ ಅವರು, ಅವುಗಳೆಲ್ಲವುಗಳಿಂದ ದಲಿತರು ಮುಕ್ತರಾಗಬೇಕಾದರೆ ಆಂದೋಲನದ ಹಾದಿ ಹಿಡಿಯುವುದು ಅವಶ್ಯವೆಂಬುದನ್ನು ಮನಗಂಡಿದ್ದರು. ಈ ಉದ್ದೇಶದಿಂದಲೇ ಅವರು "ಬಹಿಷ್ಕೃತ ಹಿತಕಾರಿಣಿ ಸಭಾ" ಎಂಬ ಆಂದೋಲನ ವನ್ನು ಹುಟ್ಟುಹಾಕಿದ್ದರು. ಇಂತಹ ಒಂದು ಆಂದೋಲನವು ಅರ್ಥಪೂರ್ಣವಾಗಿ, ಪರಿಣಾಮಕಾರಿಯಾಗಿ ಹಾಗೂ ಯಶಸ್ವಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡುವುದಕ್ಕಾಗಿ ಮತ್ತು ಅಂತಹ ಆಂದೋಲನಕ್ಕೆ ಶಾಶ್ವತವಾಗಿ ಮಾರ್ಗದರ್ಶಿ ಯಾಗಿರಬಲ್ಲ ತ್ರಿವಳಿ ಸೂತ್ರವೊಂದನ್ನು ಕೂಡ ಸೂಚಿಸಿದರು. ಈ ತ್ರಿವಳಿ ಸೂತ್ರವೇ "ಶಿಕ್ಷಣ-ಸಂಘಟನೆ-ಹೋರಾಟ". ಈ ಸೂತ್ರದ ತತ್ವಗಳು ದಲಿತರ ಸಮಗ್ರ ಅಭಿವೃದ್ಧಿ ಮತ್ತು ಸಮಾನತೆಯನ್ನು ತರುವಲ್ಲಿ ಮೂಲ ಮಂತ್ರಗಳಾದವು.

- ಶಿಕ್ಷಣ–ವಿದ್ಯಾವಂತರಾಗಿ: ದಲಿತರು ಎಲ್ಲಾ ಸಂಕಟದಿಂದ ಪಾರಾಗ ಬಹುದಾದುದು ಶಿಕ್ಷಣದಿಂದ ಮಾತ್ರ. ದಲಿತರ ಸಮಸ್ಯೆ ಹಾಗೂ ಶೋಷಣೆಗಳ ಹಿನ್ನೆಲೆಯಲ್ಲಿ ಅವರ ಅಜ್ಞಾನವಿದೆ, ಮೌಢ್ಯವಿದೆ. ಅದನ್ನು ಮೊದಲು ಅವರು ನೀಗಿಸಿಕೊಳ್ಳಬೇಕು. ದಲಿತರು ತಮ್ಮ ಅಜ್ಞಾನದ ಪೊರೆಯನ್ನು ಕಿತ್ತೆಸೆಯಬೇಕಾದರೆ ಅವರು ಶಿಕ್ಷಣ ಪಡೆಯಬೇಕು. ಆಗ ಮಾತ್ರ ಅವರು ತಮ್ಮ ಸ್ವಾಭಿಮಾನದಿಂದ, ಸ್ವಂತ ಬಲದಿಂದ ಸಮೃದ್ಧ–ಸಂತೃಪ್ತ ಜೀವನ ನಡೆಸಲು ಸಾಧ್ಯವಾಗುವುದು. ಇದು ಅಂಬೇಡ್ಕರ್ ನಂಬಿಕೆಯಾಗಿತ್ತು. ಅಂತೆಯೇ, "ವಿದ್ಯಾವಂತರಾಗಿ ಹಾಗೂ ವಿದ್ಯೆ ಇಲ್ಲದವರಿಗೆ ಶಿಕ್ಷಣ ನೀಡಿರಿ" ಎಂದು ಅವರು ದಲಿತರಿಗೆ ಕರೆ ನೀಡಿದ್ದರು.
- ಸಂಘಟನೆ–ಸಂಘಟಿತರಾಗಿ: ದಲಿತರ ವಿರುದ್ಧದ ಎಲ್ಲಾ ಬಗೆಯ ಶೋಷಣೆಗೆ ಅವರು ಅಸಂಘಟಿತರಾಗಿರುವುದು ಕಾರಣ ಆಗಿದೆ. ದುರ್ಬಲರು ಸ್ವತಃ ಒಟ್ಟುಗೂಡಿ ಒಂದು ಪ್ರಬಲ ಶಕ್ತಿಯಾಗುವ ಪ್ರಯತ್ನ ಮಾಡದೇ ಇದುದ್ದರಿಂದ ಇತಿಹಾಸದುದ್ದಕ್ಕೂ ಅವರ ಶೋಷಣೆ ನಡೆದಿದೆ. ಭಾರತದಲ್ಲಿ ಆಗಿದ್ದುದು ಕೂಡ ಇಷ್ಟೆ. ಅಸ್ಪೃಶ್ಯರ ಹಿತರಕ್ಷಣೆಗಾಗಿ ಸವರ್ಣೀಯ ಹಿಂದೂಗಳು ಪ್ರಯತ್ನಿಸುತ್ತಿಲ್ಲ. ಅವರಿಗೆ ಅದರ ಅಗತ್ಯವಿಲ್ಲ. ದಲಿತರು ತಮ್ಮ ರಕ್ಷಣೆಯ ಹೊಣೆಯನ್ನು ಇತರರಿಗೆ ವಹಿಸಿಕೊಟ್ಟು, ನೆಮ್ಮದಿಯಿಂದ ಬಾಳಲು ಸಾಧ್ಯವಿಲ್ಲ. ತಮ್ಮ ಹಿತ ಕಾಪಾಡಿಕೊಳ್ಳಲು ದಲಿತರು ತಾವೇ ಸಂಘಟಿತರಾಗಬೇಕು. ತಮ್ಮ ತಮ್ಮಲ್ಲಿನ ಭಿನ್ನಮತವನ್ನು ಮತ್ತು ತಿಕ್ಕಾಟಗಳನ್ನು ನೀಗಿಕೊಂಡು ಸಾಮಾಜಿಕ ಪರಿಸ್ಥಿತಿಯನ್ನು ದಲಿತರು ಎದುರಿಸ ಬೇಕಾದರೆ "ಸಂಘಟಿತ"ರಾಗುವುದು ಅನಿವಾರ್ಯ ಎಂದು ತಿಳಿಸಿ, ಅಂಬೇಡ್ಕರರು ದಲಿತರಿಗೆ ಸಂಘಟನೆಯ ಮಹತ್ವವನ್ನು ಮನವರಿಕೆ ಮಾಡಲು ಯತ್ನಿಸಿದರು.
- ಹೋರಾಟ/ಚಳುವಳಿ–ಹೋರಾಡಿರಿ: ದಲಿತರು ತಮ್ಮ ಹಿತ ರಕ್ಷಣೆಗಾಗಿ ಎಂತಹ ಹೋರಾಟಕ್ಕೂ ಸಿದ್ಧವಿರಬೇಕು. ತಮ್ಮನ್ನು ದಮನ ಮಾಡ ಹೊರಟವರ, ಶೋಷಿಸುತ್ತಿರುವವರ ವಿರುದ್ಧ ಹೋರಾಡುವುದು ಅವರಿಗೆ ಅನಿವಾರ್ಯ ಎಂದ ಅಂಬೇಡ್ಕರ್ ದಲಿತರನ್ನು ಹೋರಾಟಕ್ಕೆ ಅಣಿಗೊಳಿಸುವ ಪ್ರಯತ್ನ ಮಾಡಿದರು.

ದಲಿತರ ಹಿತರಕ್ಷಣೆ ಹಾಗೂ ಏಳ್ಗೆಯು ಹೋರಾಟದ ಮಾರ್ಗದಿಂದ ಸಾಧ್ಯ. ಸುಧಾರಣಾ ಮಾರ್ಗದಿಂದಲ್ಲ ಎಂಬುದು ಅಂಬೇಡ್ಕರ್‌ರವರ ನಂಬಿಕೆಯಾಗಿತ್ತು.

ದಲಿತರ ಮಾನವ ಹಕ್ಕುಗಳ ರಕ್ಷಣೆಯ ಬಗ್ಗೆ, ಅಸ್ಪೃಶ್ಯತೆ ಆಚರಣೆಯ ವಿರುದ್ಧ, ದಲಿತ ಕಾರ್ಮಿಕ ಹಿತಸಂರಕ್ಷಣೆಯ ಬಗ್ಗೆ, ಬಡ ರೈತರ ಹಾಗೂ ಕೃಷಿ ಕಾರ್ಮಿಕರ ಶೋಷಣೆಯ ವಿರುದ್ಧ, ಸಾರ್ವಜನಿಕ ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶ ನಿರಾಕರಣೆಯ ವಿರುದ್ಧ .. ..ಹೀಗೆ ಹಲವು ಹೋರಾಟಗಳನ್ನು ಅಂಬೇಡ್ಕರ್ ನಡೆಸಿದರು. ಇಲ್ಲವೆ ಅಂತಹ ಹೋರಾಟಗಳಿಗೆ ಪ್ರೇರಣೆ ನೀಡಿದರು.

ಂಬೇಡ್ಕರ್‌ರವರು ನಡೆಸಿದ ಸ್ವಂತ ಪ್ರಯತ್ನಗಳು

ದಲಿತರ ಉದ್ಧಾರದ ದೃಷ್ಟಿಯಿಂದ ತಾವು ಸೂಚಿಸಿದ "ಶಿಕ್ಷಣ-ಸಂಘಟನೆ-ೋರಾಟ" ಎಂಬ ಸೂತ್ರವನ್ನು ಅಂಬೇಡ್ಕರ್ ತಾವೇ ಅನುಷ್ಠಾನ ಮಾಡಿತೋರಿಸುವ ಯತ್ನ ನಡೆಸಿದರು. ಆಗಿನ ಕಾಲದ ದಲಿತರಲ್ಲಿ ಅತ್ಯಂತ ಶ್ರೇಷ್ಠ ವಿದ್ವಾಂಸರು, ತ್ಯುನ್ನತ ಶಿಕ್ಷಣ ಪಡೆದವರು ಆಗಿದ್ದ ತಾವೇ ಸ್ವತಃ ಆ ನಿಟ್ಟಿನಲ್ಲಿ ನೇತೃತ್ವ ವಹಿಸುವುದು ವಶ್ಯವೆಂಬುದನ್ನು ಅಂಬೇಡ್ಕರ್ ಮನಗಂಡರು. ಅವರು ಕಾರ್ಯಕ್ಷೇತ್ರಕ್ಕೆ ಇಳಿದು ದಲಿತರ ಾರ್ಗದರ್ಶಕರಾದರು. ಭಾರತೀಯ ಸಮಾಜದ ಒಟ್ಟು ಜನಸಂಖ್ಯೆಯ ಸುಮಾರು 1/6 ಾಗದಷ್ಟಿರುವ ದಲಿತರ ಜೀವನದಲ್ಲಿ ಪರಿವರ್ತನೆಯಾಗದೆ, ಈ ಸಮುದಾಯದಲ್ಲಿ ಣನೀಯ ಸುಧಾರಣೆ ಯಾಗದೆ ಭಾರತದ ಸಮಗ್ರ ಅಭಿವೃದ್ಧಿ ಅಸಾಧ್ಯ. ಈ ಅಂಶವನ್ನು ುನಗಂಡಾಗ ಡಾ.ಅಂಬೇಡ್ಕರ್ ಕ್ರಮದ ಮಹತ್ವ ಯಾರಿಗಾದರೂ ಮನದಟ್ಟಾಗುತ್ತದೆ. ಈ ಿನ್ನೆಲೆಯಲ್ಲಿ ದಲಿತರಿಗೆ ಶಿಕ್ಷಣದ ಪ್ರಾಮುಖ್ಯವನ್ನು ತಿಳಿಸಲು ಅವರಿಗೆ ಶಿಕ್ಷಣ ನೀಡಲು ಂಬೇಡ್ಕರ್‌ರ ಚಿಂತನೆ ಮತ್ತು ಹೋರಾಟ ಮಹತ್ವದ್ದೆನಿಸುತ್ತದೆ.

ದಲಿತರ ಶಿಕ್ಷಣ ಅಭಿವೃದ್ಧಿಯತ್ತ ಅಂಬೇಡ್ಕರ್ ಗಮನ

ದಲಿತೋದ್ಧಾರ ಕಾರ್ಯದಲ್ಲಿ ಅಂಬೇಡ್ಕರ್ ಶಿಕ್ಷಣಕ್ಕೆ ವಿಶೇಷ ಮಹತ್ವ ನೀಡಿದ್ದರು. ಅವರ ಪ್ರಕಾರ ಸ್ವಾಭಿಮಾನಿಯಾಗಿ ಬದುಕುವುದು ಪ್ರತಿಯೊಬ್ಬರ "ಜನ್ಮದತ್ತವಾದ ಹಕ್ಕು". ಆದರೆ, ಅನಕ್ಷರತೆ ಎಂಬುದು ದಲಿತರ ಶತೃವಾಗಿ, ಅವರ ಸ್ವಾಭಿಮಾನವನ್ನೇ ಜಡ್ಡುಗಟ್ಟಿಸಿ ಬಿಟ್ಟಿದೆ ಎಂದು ಅವರು ವ್ಯಾಕುಲರಾಗಿದ್ದರು. ಆದ್ದರಿಂದ ತಾವು 1923ರಿಂದ ವಕೀಲರಾಗಿ ವೃತ್ತಿಯನ್ನು ಆರಂಭಿಸಿದಾಗಿನಿಂದಲ್ಲೂ ಅವರು ಈ ನಿಟ್ಟಿನಲ್ಲಿಯೇ ತಮ್ಮ ಚಿಂತನೆಯನ್ನು ಗಾಢಗೊಳಿಸಿಕೊಳ್ಳುತ್ತಿದ್ದರು. ಕಾಂಗ್ರೆಸಿನ ತಂತ್ರದಿಂದ ದಲಿತರ ಏಳ್ಗೆಯಾಗದೆಂದು ಭಾವಿಸಿದ್ದ ಅವರು 1924ನೇ ಮಾರ್ಚ್ 9ರಂದು ರಾಜಕೀಯ ಮುಖಂಡರ ಸಭೆಯೊಂದನ್ನು ಕರೆದು, "ಬಹಿಷ್ಕೃತ ಹಿತಕಾರಣಿ ಸಭಾ" ಎಂಬ ಸಂಘಟನೆ ಪ್ರಾರಂಭಿಸಿದ್ದರು. ಚಿಮಣ್‌ಲಾಲ್ ಹೀರಾಲಾಲ್ ಸೆಟಲ್‌ವಾಡ್ ಅದರ ಅಧ್ಯಕ್ಷರಾಗಿ, ಅಂಬೇಡ್ಕರ್ ಕಾರ್ಯಾಧ್ಯಕ್ಷರಾಗಿ ಶಿವತ್ಕರ್ ಕಾರ್ಯದರ್ಶಿಯಾಗಿ, ಜಯಪ್ರಕಾಶ್ ನಾರಾಯಣ್, ಜಿ.ಕೆ. ನಾರಿಮನ್, ಡಾ.ಆರ್.ಬಿ.ಪರಾಂಜಪೆ, ಡಾ.ವಿ.ವಿ.ಚವ್ಹಾಣ್, ರುಸ್ತುಮ್‌ಜಿ ಜೀನ್‌ವಾಲ್, ಬಿ.ಜಿ.ಖೇರ್ ಉಪಾಧ್ಯಾಕ್ಷರಾಗಿ ಎನ್.ಟಿ.ಜಾಧವ್ ಖಜಾಂಚಿಯಾಗಿ ಆಯ್ಕೆ ಗೊಂಡರು.

"ಬಹಿಷ್ಕೃತ ಹಿತಕಾರಣಿ ಸಭಾ"ದ ಶೈಕ್ಷಣಿಕ ಉದ್ದೇಶ ಮತ್ತು ಆಶಯಗಳು

- ದಲಿತ ವರ್ಗಗಳ ಶಿಕ್ಷಣ ಮಟ್ಟವನ್ನು ಉತ್ತೇಜಿಸಲು ವಸತಿ ನಿಲಯಗಳನ್ನು ತೆರೆಯುವುದು ಮತ್ತು ಇತರ ಅವಶ್ಯಕವಾದ ಕ್ರಮಗಳನ್ನು ಕೈಗೊಳ್ಳುವುದು.
- ದಲಿತ ವರ್ಗಗಳ ಸಾಂಸ್ಕೃತಿಕ ಮಟ್ಟವನ್ನು ಎತ್ತರಿಸಲು ಗ್ರಂಥಾಲಯ ಗಳನ್ನು, ಸಮುದಾಯ ಕೇಂದ್ರಗಳನ್ನು ಮತ್ತು ಅಧ್ಯಯನ ಕೇಂದ್ರಗಳನ್ನು ತೆರೆಯುವುದು.

- ದಲಿತ ವರ್ಗಗಳ ಆರ್ಥಿಕ ಪ್ರಗತಿ ಮತ್ತು ಅವರ ಯಾವುದೇ ರೀತಿಯ ಕೊರತೆಗಳ ನಿವಾರಣೆಗಾಗಿ ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಸೂಕ್ತವಾಗಿ ಪ್ರತಿನಿಧಿಸುವುದು.
- "ಬಹಿಷ್ಕೃತ ಹಿತಕಾರಣಿ ಸಭಾ" ಮೂಲಕ ಅಂಬೇಡ್ಕರರು ದಲಿತ ವಿದ್ಯಾರ್ಥಿಗಳಿಗಾಗಿ ಪ್ರೌಢಶಾಲೆಗಳನ್ನು ಮತ್ತು ವಸತಿ ನಿಲಯಗಳನ್ನು ತೆರೆದರು. "ಓದು, ಓದಿ ಹೇಳು, ಇತರರಿಂದ ತಿಳಿದುಕೋ, ಅರ್ಥೈಸಿಕೋ ಮತ್ತು ಇತರರಿಗೆ ಅರ್ಥವನ್ನು ವಿವರಿಸು" ಎಂಬ ಧ್ಯೇಯವನ್ನು ಹೊಂದಿದ್ದ "ಭಾರತೀಯ ಬಹಿಷ್ಕೃತ ಸಮಾಜ ಸೇವಾ ಸಂಘ" ಎಂಬ ಸಾಮಾಜಿಕ ಸಂಸ್ಥೆಯೊಂದನ್ನು ಪ್ರಾರಂಭಿಸಿ, ಜ್ಞಾನ ಪ್ರಸಾರಕ್ಕಾಗಿಯೇ ಅದು ತನ್ನ ಕಾರ್ಯಗಳನ್ನು ಮುಡುಪಾಗಿಡುವಂತೆ ಮಾಡಿದರು. ಇದೇ ಸಂಸ್ಥೆಯ ಮೂಲಕ ಮುಂದೆ ಅಂಬೇಡ್ಕರರು "ಮಹರ್ ವತನ್" ಎಂಬ ಗುಲಾಮ ಕಾರ್ಮಿಕ ಪದ್ಧತಿಯನ್ನು ರದ್ದುಪಡಿಸಲು ಅಮೋಘ ಹೋರಾಟವನ್ನು ನಡೆಸಿದರು.

"ಸ್ವತಂತ್ರ ಕಾರ್ಮಿಕ ಪಕ್ಷ" ಕೈಗೊಂಡ ಶೈಕ್ಷಣಿಕ ಕಾರ್ಯಕ್ರಮಗಳು

1936–37ರಲ್ಲಿ ದಲಿತ ವರ್ಗಗಳ ಕಾರ್ಮಿಕ ಆಂದೋಲನವನ್ನು ಸಂಘಟಿಸಿದ ಡಾ.ಅಂಬೇಡ್ಕರರು "ಸ್ವತಂತ್ರ ಕಾರ್ಮಿಕ ಪಕ್ಷ" ಎಂಬ ರಾಜಕೀಯ ಪಕ್ಷವನ್ನು ಕಟ್ಟಿದ್ದರು. ಅಂಬೇಡ್ಕರರ ಶೈಕ್ಷಣಿಕ ಕಾಳಜಿ ಎಷ್ಟಿತ್ತೆಂದರೆ, ದಲಿತ ಕಾರ್ಮಿಕ ಮತ್ತು ರಾಜಕೀಯ ಹಿತಾಸಕ್ತಿಗಳ ಸಂರಕ್ಷಣೆಗಾಗಿ ಆರಂಭ ಮಾಡಿದ ಸ್ವತಂತ್ರ ಕಾರ್ಮಿಕ ಪಕ್ಷವು, 'ಬಹಿಷ್ಕೃತ ಹಿತಕಾರಿಣಿ ಸಭಾ'ದ ಮೂಲಕ ಅನುಷ್ಠಾನಕ್ಕೆ ತರಲಾಗದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಬ್ರಿಟಿಷ್ ಸರ್ಕಾರವನ್ನು ಆಗ್ರಹಿಸಿದ್ದರು. ಉದಾಹರಣೆಗೆ :

- ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀತಿ ಅನ್ವಯ
- ವಯಸ್ಕರ ಶಿಕ್ಷಣ ಪ್ರಸಾರ
- ವ್ಯಾಪಕವಾದ ತಾಂತ್ರಿಕ ಶಿಕ್ಷಣ ಪ್ರಸಾರ
- ಸರ್ಕಾರಿ ವೆಚ್ಚದಲ್ಲಿ ಹಿಂದುಳಿದ ವರ್ಗಗಳ ಬುದ್ಧಿವಂತ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ಕಳುಹಿಸುವಿಕೆ
- ಮುಂಬೈ, ಕಲ್ಕತ್ತಾ, ಮದ್ರಾಸ್ ಭಾಗಗಳಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು.

ಅಂಬೇಡ್ಕರರ ಶೈಕ್ಷಣಿಕ ಕಾಳಜಿ ಬಗ್ಗೆ ಅಮೆರಿಕಾದ ಪ್ರಾಧ್ಯಾಪಕರ ಪ್ರಶಂಸೆ

ಡಾ. ಅಂಬೇಡ್ಕರ್ ಸಿದ್ಧಪಡಿಸಿದ ಪಿಹೆಚ್.ಡಿ. ಪದವಿಯ ಪ್ರೌಢ ಪ್ರಬಂಧ ವನ್ನು ಪರಿಶೀಲನೆಗೆ ತೆಗೆದುಕೊಂಡ ಅಮೆರಿಕನ್ ಪ್ರಾಧ್ಯಾಪಕರು ಹೀಗೆ ಬರೆದಿದ್ದಾರೆ: "ದಲಿತ ಮತ್ತು ಹಿಂದುಳಿದ ವರ್ಗಗಳ ಶಿಕ್ಷಣದ ಬಗೆಗೆ ಅಂಬೇಡ್ಕರ್ ನೀಡಿದ ಪ್ರಾಧಾನ್ಯತೆ

ಹತ್ವದು. ಆ ಬಗೆಗಿನ ಅವರ ಚಿಂತನೆ ಭಾರತ ಅಥವಾ ಅಮೆರಿಕಾದಲ್ಲಿನ ಯಾವುದೇ ಜಕೀಯ ಪಕ್ಷಕ್ಕೆ ಕಡಿಮೆ ಇಲ್ಲದ ಉನ್ನತ ಮಟ್ಟದ ಚಿಂತನೆಯಾಗಿದೆ. ದಲಿತರ/ ರ್ಬಲರ ಪ್ರಗತಿಗಾಗಿ ವ್ಯವಸ್ಥೆ ನೀಡುವ ಶಿಕ್ಷಣವು ಉನ್ನತ ಮಟ್ಟದ್ದಾಗಿರಬೇಕು ಎಂಬ ಂಬೇಡ್ಕರ್ ಧೋರಣೆ ಪ್ರಶಂಸನೀಯ".

ಕ್ಷಣದ ಮೂಲಕ ಮಾದರಿಯಾದ ಅಂಬೇಡ್ಕರ್

ದಲಿತರಾಗಿ ಹುಟ್ಟಿದರೂ, ಶಿಕ್ಷಣದಲ್ಲಿ ಅಮೋಘ ಸಾಧನೆ ಮಾಡಬಹುದು ಎಂಬುದಕ್ಕೆ ಂಬೇಡ್ಕರರು ಸ್ವತಃ ತಾವೇ ಒಂದು ನಿದರ್ಶನವಾಗಿದ್ದರು. ಅಮೆರಿಕಾದ ಕೊಲಂಬಿಯಾ ವಿ.ಯಲ್ಲಿ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ನೀತಿತತ್ವಶಾಸ್ತ್ರಗಳನ್ನು ಅಭ್ಯಾಸ ಮಾಡಿದ್ದಲ್ಲದೆ, ಲಂಡನ್‌ನಲ್ಲಿ ಬ್ಯಾರಿಸ್ಟರ್ ಪದವಿಯನ್ನು ಗಳಿಸಿದ ಅವರು, ಭಾರತಕ್ಕೆ ಂದ ಮೇಲೆ ವಕೀಲಿ ವೃತ್ತಿಯನ್ನು ಆರಂಭಿಸಿದರು. ಅನಂತರವೂ ಅವರಿಗೆ ಶಿಕ್ಷಣದ ಮೇಲಿನ ಆಸಕ್ತಿ ಕಡಿಮೆಯಾಗಿರಲಿಲ್ಲ. 1917ರಷ್ಟು ಹಿಂದೆಯೇ ಮುಂಬೈ "ಸಿಡೆನ್ ಹ್ಯಾಮ್ ಲೇಜ್"ನಲ್ಲಿ ಸ್ವಲ್ಪ ಕಾಲ ಪ್ರಾಧ್ಯಾಪಕ ರಾಗಿದ್ದ ಅವರು 1935ರಲ್ಲಿ ಮುಂಬೈ ಕಾನೂನು ಲೇಜಿನಲ್ಲಿ ಪ್ರಾಂಶುಪಾಲರಾಗಿ ಹೆಸರು ಗಳಿಸಿದ್ದರು. ಪ್ರಾಂಶುಪಾಲರಾದ ಮೇಲೆ ಅವರು ರೆದ "ಮುಂಬೈ ವಿ.ವಿಯಲ್ಲಿನ ಕಾನೂನು ಶಿಕ್ಷಣದ ಸುಧಾರಣಾ ವಿಚಾರಗಳು" ಎಂಬ ೇಖನದ ಶೈಕ್ಷಣಿಕ ಮೌಲ್ಯದ ಬಗ್ಗೆ ಅವರಿಗೆ ಭಾರಿ ಪ್ರಶಂಸೆ ಬಂದಿತ್ತು. 1946ರಲ್ಲಿ ತಾವೇ ತಃ ಆಸಕ್ತಿ ವಹಿಸಿ "ಸಿದ್ದಾರ್ಥ ಕಾಲೇಜ್" ಸ್ಥಾಪಿಸಿದ ಕೀರ್ತಿ ಕೂಡ ಅವರದಾಗಿತ್ತು.

ಡಜನರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು ಧರ್ಮದರ್ಶಿ ಸಂಸ್ಥೆ ಸ್ಥಾಪನೆ

ದಾಸ್ಯ-ದಾರಿದ್ರ್ಯಗಳಿಗೆ ನಿರಕ್ಷರತೆಯೇ ಮೂಲ ಕಾರಣವೆಂದು ಮನಗಂಡ ಂಬೇಡ್ಕರ್ ಅವರು ನಿಮ್ನ ವರ್ಗದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಭದ್ರ ಬುನಾದಿಯನ್ನು ದಗಿಸುವ ದೃಷ್ಟಿಯಿಂದ 1928ರಲ್ಲಿಯೇ "ನಿಮ್ನ ವರ್ಗೀಯ ಶಿಕ್ಷಣ ಸೊಸೈಟಿ"ಯನ್ನು ಆರಂಭಿಸಿದರು. ಅದಕ್ಕೆ ತಾವು ಕಾರ್ಯದರ್ಶಿಯಾದರು; ಶಿವತಾರಕರ್ ಖಜಾಂಚಿ ಯಾದರು. ಇದನ್ನು ನಡೆಸಲು ಧರ್ಮದರ್ಶಿ ಮಂಡಳಿಯೊಂದನ್ನು ರಚಿಸಿದರು. ಇದು ಅದರ ಆಡಳಿತ ನೋಡಿಕೊಳ್ಳುವಂತೆ ವ್ಯವಸ್ಥೆ ಮಾಡಿದ್ದರು. ಅದು ದಾನಿಗಳ ನೆರವಿನ ಜೊತೆಗೆ ಸರ್ಕಾರದಿಂದ ಧನ ಸಹಾಯ ಪಡೆದು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿತು.

ದಲಿತರಲ್ಲಿ ಜಾಗೃತಿ ಮೂಡಿಸಲು ಪತ್ರಿಕೆಗಳ ಆರಂಭ

ದಲಿತರಲ್ಲಿ ಜಾಗೃತಿ ಮೂಡಿಸಲು ಮತ್ತು ದಲಿತರಲ್ಲಿ ವಿದ್ಯೆ-ಜವಾಬ್ದಾರಿ ಕುರಿತ ಆಸಕ್ತಿಯನ್ನು ಕಾಪಾಡಲು 1920ರಷ್ಟು ಹಿಂದೆಯೇ "ಮೂಕನಾಯಕ" ಎಂಬ ಪತ್ರಿಕೆಯನ್ನು ಅಂಬೇಡ್ಕರ್ ಆರಂಭಿಸಿದ್ದರು. ಅದು ಹೆಚ್ಚು ಕಾಲ ನಡೆಯಲಿಲ್ಲ. ಆದರೂ ಆ ನಿಟ್ಟಿನಲ್ಲಿ, ಆ ಕಾಲದಲ್ಲಿ ನಡೆಸಲಾದ ಮೊದಲ ಪ್ರಯತ್ನ ಅದಾಗಿತ್ತು. ಮುಂದೆ 1927ರಲ್ಲಿ ಪುನಃ ಅವರು "ಬಹಿಷ್ಕೃತ ಭಾರತ" ಎಂಬ ಮರಾಠಿ ಪತ್ರಿಕೆಯನ್ನು ಆರಂಭಿಸಿದರು; ಅದರ ಮೂಲಕ ಬಹಳ ಸರಳವಾದ ಭಾಷೆಯಲ್ಲಿ ಅಸ್ಪೃಶ್ಯರ ಅಜ್ಞಾನವನ್ನು ದೂರ ಮಾಡುವ

ಹಾಗೂ ಅವರಿಗೆ ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಮೂಡುವ ದಿಕ್ಕಿನಲ್ಲಿ ಪ್ರಯತ್ನ ನಡೆಸಿದರು. "ಸಮಾನತೆ ಎಂಬುದು ಒಂದು ಕಟ್ಟುಕತೆಯಂತೆ ಕಾಣಬಹುದು, ಆದರೆ, ಅದನ್ನೇ ಒಂದು ಆಚರಣಾ ತತ್ವವನ್ನಾಗಿ ಒಪ್ಪಿಕೊಳ್ಳುವುದು ಅನಿವಾರ್ಯ" ಎಂದು ಹೇಳುತ್ತಿದ್ದ ಅಂಬೇಡ್ಕರ್, ಅಂತಹ ಸಮಾನತೆಯ ಸಾಕ್ಷಾತ್ಕಾರಕ್ಕಾಗಿ ಅನೇಕ ಹೋರಾಟಗಳನ್ನು ನಡೆಸಿದರು.

ಆಧಾರ ಗ್ರಂಥಗಳು

- **David G. Mandelbam : Society in India (1) Continuity & change (2) Change & Continuity.**
  Desai A.R. : Rural Sociology in India.
- **Devaki Jain : Indian Women (National Book Trust of India)**
- **Doshi S.L. and Jain P.C : Rural Sociology (1999) – Rawat, Jaipur**
- **Dube S.C : Indian Society**
- **Ghurye G.S : Caste and Race in India**
- **The Gazetteer of India (Vol.1) Publication Division, Govt of India 1965.**
- **Students Britannica (India) Vol. 1 to 5.**

ಸಾಮಾಜಿಕ ನ್ಯಾಯದ ಪರ ಬಸವ ಚಿಂತನೆಗಳು

ಪ್ರಭಾವತಿ

ಬಸವಣ್ಣ 12ನೆಯ ಶತಮಾನದ ಕನ್ನಡ ನಾಡಿನ ಕ್ರಾಂತಿಕಾರಿ. ಸಮಾಜದಲ್ಲಿನ ಅನಿಷ್ಟಗಳನ್ನು ತೆಗೆದು ಹಾಕಲು ಅವರು ಶ್ರಮಿಸಿದರು. ವಚನಗಳ ಮುಖಾಂತರ ಸಮಾಜದ ಅನೇಕ ಸಮಸ್ಯೆಗಳಿಗೆ ಪರಿಹಾರ ನೀಡಲು ಜನರ ಮಧ್ಯೆ ದುಮುಕಿದರು; ಜನಸಾಮಾನ್ಯರ ಭಾಷೆಯಲ್ಲಿ ವಚನಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು, ಧಾಂಬಿಕತೆಯನ್ನು ಎಳೆ ಎಳೆಯಾಗಿ ಬಿಡಿಸಿ ಹೇಳಿದರು. ಅವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇವರ ವಚನಗಳನ್ನು ಕನ್ನಡದ ಉಪನಿಷತ್ತುಗಳೆಂದು ಬಣ್ಣಿಸಲಾಗಿದೆ.

ಬಸವಣ್ಣನವರ 8ನೇ ವಯಸ್ಸಿನಲ್ಲಿ ಬ್ರಾಹ್ಮಣ ಸಂಪ್ರದಾಯದಂತೆ ಅವರಿಗೆ ಜನಿವಾರ ಹಾಕುವ (ಉಪನಯನ) ಕಾರ್ಯಕ್ರಮ ಏರ್ಪಾಡಾದಾಗ, ತನ್ನ ಅಕ್ಕ ನಾಗಮ್ಮನಿಗೆ ಉಪನಯನ ಆಗಿಲ್ಲದಿರುವ ಬಗ್ಗೆ ಕೇಳುತ್ತಾರೆ. 'ಇದು ಪುರುಷರಿಗೆ ಮಾತ್ರ ಕೊಡುವಂತಹದು ಎಂಬ ಉತ್ತರ ದೊರೆತಾಗ, ಪುರುಷ/ಮಹಿಳೆ ಎಂಬ ಅಸಮಾನತೆಯನ್ನು ಒಪ್ಪುವುದಿಲ್ಲ. ಜನಿವಾರ ಧಾರಣೆಯನ್ನು ತಿರಸ್ಕರಿಸುತ್ತಾರೆ.

ಸಾಮಾಜಿಕ ನ್ಯಾಯ ಚಿಂತನೆ

"ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯಾ; ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ "ಎಂದು ಸಮಾಜದ ಎಲ್ಲ ವರ್ಗದ ಜನರನ್ನು ಒಂದುಗೂಡಿಸಿದ ಬಸವಣ್ಣನವರು ಜಾತೀಯತೆಯ ವಿರುದ್ಧ ಸಮರ ಸಾರಿದರು,

ಹೊಲೆಯನೆಂಬುವವನು ಊರ ಹೊರಗಿಹನೇ? ಊರ ಒಳಗಿಲ್ಲವೇ? ಎಂದು ಪ್ರಶ್ನಿಸಿ, ಅಸ್ಪ್ರಶ್ಯತೆಯ ಹೆಸರಿನಲ್ಲಿ ಊರ ಹೊರಗೆ ಇರಿಸಲಾದ ದಲಿತರನ್ನು ಕರೆತಂದು, ಸಮಾಜದ ಭಾಗವನ್ನಾಗಿ ಮಾಡಿದರು; ದೇವಾಲಯ, ನೀರಿನ ಬಾವಿ–ಕೆರೆಗಳನ್ನು ಬಳಸಲು ಎಲ್ಲರಿಗೂ ಸಮಾನ ಹಕ್ಕಿದೆ ಎಂದು ಪ್ರತಿಪಾದಿಸಿದರು.

ಬಸವಣ್ಣನವರು ಜಾತೀಯತೆ, ಮೂರ್ತಿಪೂಜೆ, ಯಜ್ಞಯಾಗಾದಿಗಳನ್ನು ಖಂಡಿಸಿದರು. ಜಾತಿಭೇದರಹಿತ, ಲಿಂಗಭೇದರಹಿತ ಮತ್ತು ವರ್ಗಭೇದರಹಿತ ಸಮಾಜ ನಿರ್ಮಾಣಕ್ಕೆ ಪಣತೊಟ್ಟರು. ಚಾತುರ್ವರ್ಣಗಳನ್ನು ವಿರೋಧಿಸಿದರು 'ಪ್ರತಿಯೊಬ್ಬರೂ

ದುಡಿದು ಉಣ್ಣಬೇಕು, ವೃತ್ತಿಗಳಲ್ಲಿ ಹಿರಿದು ಕಿರಿದೆಂಬುದಿಲ್ಲ' ಎಂದು ಸಾರಿದರು; ಸಮಾಜದ ಸ್ವಾವಲಂಬನೆಗೆ ಕಾಯಕ ತತ್ವ ಪ್ರತಿಪಾದಿಸಿದರು, ಬಸವಣ್ಣನವರ ಗುರಿ ಜನರಲ್ಲಿ ದುಡಿಮೆಯ ಸಂಸ್ಕೃತಿಯನ್ನು ಬೆಳೆಸುವುದಾಗಿತ್ತು.

"ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯ, ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಲಶವಯ್ಯ" ಎಂದು ಹೇಳಿ, ಬಸವಣ್ಣನವರು ಪುರೋಹಿತಶಾಹಿ ವ್ಯವಸ್ಥೆ ಮತ್ತು ಧರ್ಮದ ಹೆಸರಿನಲ್ಲಿ ನಡೆಯುಯತ್ತಿದ್ದ ಜನಸಾಮಾನ್ಯರ ಶೋಷಣೆಯನ್ನು ಖಂಡಿಸಿದ್ದಾರೆ. ಬಸವ ಕಲ್ಯಾಣದಲ್ಲಿ ಶರಣರ ಜೊತೆ ಸೇರಿ ಸ್ಥಾಪಿಸಿದ 'ಅನುಭವ ಮಂಟಪ' ವಿಚಾರಗಳ ಬಗೆಗೆ ಮುಕ್ತವಾಗಿ ಚರ್ಚಿಸಬಹುದಾದ ವೇದಿಕೆಯಾಗಿತ್ತು;

ಜನರು ವಿವಿಧ ಮತ, ಧರ್ಮಗಳ ಪೈಪೋಟಿಯನ್ನು ಕಂಡವರಾಗಿದ್ದರು, ಮೇಲು-ಕೀಳು ಭಾವನೆ ರಾಜಕೀಯ ಘರ್ಷಣೆಗಳು ಮುಂತಾದವುಗಳಿಂದ ಅಸ್ಥಿರ ಸ್ಥಿತಿಯಲ್ಲಿದ್ದ ಕಾಲದಲ್ಲಿ ಯೋಗ್ಯವಾದ ಮಾರ್ಗದರ್ಶನ ನೀಡಿ, ಮಾನವತ್ವವನ್ನು ಬಸವಣ್ಣನವರು ಎತ್ತಿ ಹಿಡಿದರು.

ಜಾತಿಭೇದದ ಬಗ್ಗೆ ಬಸವಣ್ಣ ಅವರು ಕೇವಲ ಮಾತನಾಡಲಿಲ್ಲ; ಅವರು ಜಾತಿಪದ್ಧತಿಯನ್ನು ಪ್ರಶ್ನಿಸುವ ವಿಚಾರಗಳಿಗೆ ಮನ್ನಣೆ ನೀಡಿದರು. ಅಂತರ ಜಾತಿ ವಿವಾಹದ ಸಂದರ್ಭದಲ್ಲಿ ತಾವೇ ಮುಂದಾಳತ್ವ ವಹಿಸಿದರು. ಬ್ರಾಹ್ಮಣ ಮಧುವರಸನ ಮಗಳು ಹಾಗೂ ಅಂತ್ಯಜನಾದ ಹರಳಯ್ಯನ ಮಗನಿಗೆ ತಾವೇ ಮುಂದೆ ನಿಂತು, ಅಂತರ್ಜಾತಿಯ ವಿವಾಹವನ್ನು ಮಾಡಿಸಿದರು. ಲಾವಣ್ಯವತಿ ಹಾಗೂ ಶೀಲವಂತರ ವಿವಾಹಕ್ಕೆ ಬಂದ ಯಾವ ಅಡ್ಡಿಯನ್ನೂ ಅವರು ಲೆಕ್ಕಿಸಲಿಲ್ಲ. ಶರಣ ಮಧುವಯ್ಯನ ಮಗಳು [ಲಾವಣ್ಯವತಿ] ಹಾಗೂ ಶರಣ ಹರಳಯ್ಯನ ಮಗನ [ಶೀಲವಂತ] ಮಧ್ಯೆ ವಿವಾಹವನ್ನು ಮಾಡಿಸಿದರು; ಸಂಪ್ರದಾಯಸ್ಥರ ಪ್ರಕಾರ, ಮಧುವಯ್ಯ ಬ್ರಾಹ್ಮಣನಾಗಿದ್ದರೆ, ಹರಳಯ್ಯ ಮಾದಿಗನಾಗಿದ್ದ. ಆದರೆ ಬಸವಣ್ಣನವರು ಅವರಿಬ್ಬರನ್ನೂ ಶರಣರೆಂದು ಪರಿಗಣಿಸಿದ್ದರು.

ಬಸವಣ್ಣನವರ ವಚನಗಳು ಮನುಷ್ಯರ ವ್ಯಕ್ತಿತ್ವ ವಿಕಸನಕ್ಕೆ ಪ್ರಾಮುಖ್ಯತೆಯನ್ನು ನೀಡಿವೆ. ಮನುಷ್ಯರ ನಡುವಿನಲ್ಲಿ ಹೊಮ್ಮಬೇಕಾದ ಮಾನವೀಯತೆ, ಹೃದಯ ವೈಶಾಲತೆಯು ಗೈರು ಹಾಜರಾದಾಗ ನಮ್ಮ ಭಕ್ತಿಗೆ ಅರ್ಥವಿರುವುದಿಲ್ಲ. ಅಸ್ವಸ್ಥ ವ್ಯಕ್ತಿ ಮತ್ತು ಅಸ್ವಸ್ಥ ಸಮಾಜದ ಲಕ್ಷಣಗಳೆಂದರೆ, ಆತ್ಮನಿಂದೆ-ಆತ್ಮಸ್ತುತಿ-ಆತ್ಮಹತ್ಯೆ-ಆತ್ಮರತಿ ಮುಂತಾದವು. ಆತ್ಮವಿಮರ್ಶೆಯು ಆರೋಗ್ಯವಂತ ವ್ಯಕ್ತಿ ಮತ್ತು ಆರೋಗ್ಯವಂತ ಸಮಾಜಗಳ ಪ್ರತೀಕ. ಬಸವಣ್ಣನವರ ವಚನಗಳಲ್ಲಿ ಅಪಾರ ಆತ್ಮವಿಮರ್ಶೆಯನ್ನು ಕಾಣುತ್ತೇವೆ. ಬಸವೇಶ್ವರರು ತಮ್ಮ ಕಾಲಾವಧಿಯಲ್ಲಿ ಉತ್ಕೃಷ್ಟ ವಿಚಾರಧಾರೆಗಳನ್ನು ಮನುಜ ಕುಲಕ್ಕೆ ಧಾರೆಯೆರೆಯುವಲ್ಲಿ ಯಶಸ್ವಿಯಾದರು.

ಉಪಸಂಹಾರ

ಗೌತಮ ಬುದ್ಧನ ದಯೆ, ವರ್ಧಮಾನ ಮಹಾವೀರನ ಅಹಿಂಸೆ, ಮಹಮ್ಮದನ ಕೆಚ್ಚು, ಕ್ರಿಸ್ತನ ಸರಳತೆ, ದಯೆ, ಸತ್ಯನಿಷ್ಠೆ ಅಹಿಂಸೆ.. .. ಹೀಗೆ ಅನೇಕ ಗುಣಗಳ ಸಾಕಾರ ರೂಪ ಬಸವಣ್ಣ. ಅವರು ಈ ಎಲ್ಲಾ ಗುಣಗಳನ್ನು ಸಮಾಜದಲ್ಲಿ ಬೇರೂರಿಸಲು ಶ್ರಮಿಸಿದರು. ಅವರು ಸಾಮಾಜಿಕ ಕ್ರಾಂತಿಕಾರಿ, ಆಂದೋಲನಕಾರ, ವಿಶ್ವಮಾನವತಾವಾದಿ. ಸಮಾಜದಲ್ಲಿ ಜ್ಞಾನದೀವಿಗೆಯನ್ನು ಬೆಳಗಿಸಿ, ವಚನ ಪುಷ್ಪಗಳನ್ನು ಹರಡಿ, ಸುವಾಸನೆಯನ್ನು ಬೀರಿದರು. ಲಿಂಗ ಮೆಚ್ಚಿ ಅಹುದು, ಅಹುದು ಎಂಬಂಥ ಅಮೃತ ನುಡಿಗಳನ್ನು ನಮಗೆ ನೀಡಿದ್ದಾರೆ. ಕಾಯಕ ತತ್ವದ ಮಹತ್ವವನ್ನು ತಿಳಿಸಿ, ಸರ್ವ ಸಮಾನತೆಯ ತತ್ವವನ್ನು ತೋರಿಸಿಕೊಟ್ಟರು, ಎಲ್ಲ ಜಾತಿ–ವರ್ಗಗಳ ಜನರನ್ನು ಅಕರ್ಷಿಸಿದರು; ಆ ಕಾಲದಲ್ಲೇ ಸಾಮಾಜಿಕ ನ್ಯಾಯ ವನ್ನು ಪ್ರತಿಪಾದಿಸಿದರು.

ಆಕಾರ ಗ್ರಂಥಗಳು

- ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ– ಡಾ ಚಿ.ಸಿ. ನಿಂಗಣ್ಣ
- ಕನ್ನಡ ಸಾಹಿತ್ಯ ಚರಿತ್ರೆ– ಡಾ ರಂ. ಶ್ರೀ. ಮುಗಳಿ
- ಕರ್ನಾಟಕ ಪರಂಪರೆಯ ಸಮೀಕ್ಷೆ– ಎಚ್ಚೆಸ್ಕೆ
- ಕರ್ನಾಟಕ ಇತಿಹಾಸ– ಫಾಲಾಕ್ಷ
- ಭಾರತದ ಇತಿಹಾಸ–ಟಿ.ಜಿ. ಚಂದ್ರಶೇಖರಪ್ಪ

ಬಸವೇಶ್ವರ ಅವರ ಸಾಮಾಜಿಕ ಸಮಾನತೆಯ ತತ್ವ

ಪ್ರಕಾಶ್. ಹೆಚ್. ಬಿ.

ಸಾಮಾಜಿಕ ಸಮಾನತೆ ಬಸವೇಶ್ವರರ ಪ್ರಮುಖ ಸಂದೇಶವಾಗಿದ್ದು, ಅಲ್ಲಿ "ವ್ಯಕ್ತಿಪರ ಚಿಂತನೆ"ಗಿಂತ "ಸಮಾಜಪರ ಚಿಂತನೆ"ಗೆ ಮಹತ್ವ ಇದೆ. ವರ್ಗ ಸಮಾನತೆ, ಜಾತಿ ಸಮಾನತೆ, ವೃತ್ತಿ ಸಮಾನತೆ ಮತ್ತು ಲಿಂಗ ಸಮಾನತೆಯನ್ನು ಬಸವೇಶ್ವರರ ಚಿಂತನೆ ಪ್ರತಿಪಾದಿಸುತ್ತದೆ.

ಬಸವೇಶ್ವರರು ಮೂಲಭೂತವಾಗಿ ಪ್ರಜಾತಂತ್ರವಾದಿ, ಸಮಾಜವಾದಿ, ಮಾನವತಾವಾದಿ ಹಾಗೂ ಕ್ರಾಂತಿಕಾರಿ. ನಂತರ ಬಂದ ಟಾಲ್ಕಟ್ ಪಾರ್ಸನ್ಸ್, ಡರ್ಖೀಂ, ರ್‍ಯಾಡ್ಕ್ಲಿಫ್ ಬ್ರೌನ್ ಮುಂತಾದವರು ಪ್ರತಿಪಾದಿಸಿದ ಧರ್ಮದ ಕಾರ್ಯಪರ ಸಿದ್ಧಾಂತ ಮತ್ತು ಆ ಕಲ್ಪನೆಯ ಅನ್ವಯವನ್ನು ಬಸವೇಶ್ವರರು ಶತನಮಾನಗಳ ಮುಂಚೆಯೇ ಮಾಡಿ ತೋರಿದ್ದರು. ಬಸವಣ್ಣನವರು ಸಮಾಜಕ್ಕೆ ನೀಡಿದ ಪ್ರಮುಖ ಕೊಡುಗೆಗಳಲ್ಲಿ "ಸಾಮಾಜಿಕ ಸಮಾನತೆ" ಮುಖ್ಯವಾಗಿದ್ದು, ಇಂದು ಮತ್ತು ನಾಳೆಗೂ ಅನ್ವಯವಾಗುವ ಜೀವಪರ ಕೊಡುಗೆ ಇದು.

ಅವರ ಪ್ರಕಾರ, ವ್ಯಕ್ತಿಗಳಿಗೆ ವೈಯಕ್ತಿಕ ಜೀವನದಷ್ಟೇ ಸಾಮಾಜಿಕ ಜೀವನವೂ ಮುಖ್ಯವಾದುದು, ಅವರ ಅವಲೋಕನದಂತೆ, "ವ್ಯಕ್ತಿತ್ವದ ಒಳಪದರಿನಲ್ಲಿ ವಿಕಾರಗಳಿರುವಂತೆ ಸಮಾಜದ ಒಳರಚನೆಗಳಲ್ಲಿಯೂ ನಿಯಮ/ಪದ್ಧತಿ/ಸಂಪ್ರದಾಯ ಕಟ್ಟು-ಕಟ್ಟಳೆಗಳ ಹೆಸರಿನಲ್ಲಿ ವಿಕಾರ/ಅನ್ಯಾಯಗಳು ನಿರ್ಮಾಣವಾಗಿರುತ್ತವೆ, ಇದರಿಂದಾಗಿ ಸಮಾಜಜೀವನವೂ ಅಶುದ್ಧವಾಗುತ್ತದೆ'. ಇಂಥ ಸಮಾಜದ ಶುದ್ಧೀಕರಣಕ್ಕೆ ಪ್ರಯತ್ನ ಪಟ್ಟಿದ್ದು ಬೌದ್ಧಮತ; ಇದರ ನಂತರ ಬಸವೇಶ್ವರರ ಚಿಂತನೆ.

ಸಮಾನತೆಯ ನೆಲೆ ಹೊಂದಿದ ಸಮಾಜ ವ್ಯವಸ್ಥೆಯೊಂದನ್ನು ಸ್ಥಾಪಿಸಲು "ಅನುಭವ ಮಂಟಪ"ವೆಂಬ ವೈಚಾರಿಕ ವೇದಿಕೆಯನ್ನು ಸ್ಥಾಪಿಸಿ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ, ಅಹಿಂಸಾ ಮಾರ್ಗದಲ್ಲಿ, ಜಾತಿ-ಮತ-ಲಿಂಗ-ವರ್ಗವೆಂಬ ಯಾವುದೇ ತಾರತಮ್ಯವೆಣಿಸದೆ ಎಲ್ಲರನ್ನೂ ಒಂದುಗೂಡಿಸಲು ಹೊರಟ ಅವರ ಸಾಹಸ ಅಮೋಘವಾದುದು.

ಸಾಮಾಜಿಕ ಪರಿವರ್ತನೆಯ ತೀವ್ರತೆಯನ್ನು ಹೆಚ್ಚಿಸಲು 'ಆತ್ಮವಿಮರ್ಶೆ" ಮತ್ತು "ಸಮಾಜ ವಿಮರ್ಶೆ"ಯ ಮೂಲಕ ಮಾನವೀಯ ಮೌಲ್ಯಗಳನ್ನು ವಚನಗಳ

ಮುಖಾಂತರ ಬಸವೇಶ್ವರರು ಮತ್ತು ಅವರ ಕಾಲದ ಶರಣರು ವ್ಯಕ್ತಪಡಿಸಿದ್ದಾರೆ. ನೈತಿಕ ಲೋಕಸಂದೇಶಗಳು ಧಾರ್ಮಿಕ ಸಂತನ ಉಪದೇಶಗಳಂತೆ; ಬಂಡಾಯ ಕಾವ್ಯದಂತೆ; ಕ್ರಾಂತಿಗೀತೆಗಳಂತೆ ಕಂಡಿವೆ.

ಈ ಲೇಖನದ ಉದ್ದೇಶಗಳು ಹೀಗಿವೆ:

1. ಸಾಮಾಜಿಕ ಸಮಾನತೆಯ ತತ್ವದ ಮುಖಾಂತರ, ವ್ಯಕ್ತಿಗಳಿಗೆ ವೈಯಕ್ತಿಕ ಜೀವನದಷ್ಟೇ ಸಾಮಾಜಿಕ ಜೀವನವೂ ಮುಖ್ಯವಾದುದು, ಎಂಬುದನ್ನು ಮನಗಾಣುವುದು.
2. ಸಾಮಾಜಿಕ ಅಸಮಾನತೆಯನ್ನು ನಿವಾರಣೆ ಮಾಡಿ, ಸಮಾನತೆಯ ನೆಲೆಯಲ್ಲಿ ಸಮಾಜವೊಂದನ್ನು ಸ್ಥಾಪಿಸಲು ಹೊರಟ ಬಸವಣ್ಣರವರ ಪ್ರಯತ್ನವನ್ನು ಅರಿಯುವುದು.
3. ಶತಮಾನಗಳು ಕಳೆದರೂ, ಸಹ ಇಂತಹ ತತ್ವ-ಸಂದೇಶಗಳು ಪ್ರಸ್ತುತ ಎಂಬುದನ್ನು ಅರಿಯುವುದು.

ಜಾತಿ ಸಮಾನತೆ

ಬಸವೇಶ್ವರರು ಜಾತಿ ಪದ್ಧತಿಯ ವಿರೋಧಿಯಾಗಿ, ಪುರುಷ ಸೂಕ್ತದ ಪ್ರಕಾರ ನಾಲ್ಕು ವರ್ಣಗಳು ಬ್ರಹ್ಮನ ದೇಹದ ವಿವಿಧ ಭಾಗಗಳಿಂದ ಜನಿಸಿರುವುದು ಕಟ್ಟುಕಥೆ ಎನ್ನುತ್ತಾ "ಕರ್ಣದಲಿ ಜನಿಸಿದವರುಂಟೆ ಜಗದೊಳಗೆ?'ಎಂದು ಹೀಗಳೆದರು; 'ವರ್ಣಭೇದ ಹಾಗೂ ವರ್ಣತಾರತಮ್ಯದಲ್ಲಿ ಹುರುಳಿಲ್ಲ' ಎಂದು ಸಾರಿದರು. "ಕೊಲುವವನೆ ಮಾದಿಗ ಹೊಲಸು ತಿಂಬುವನೆ ಹೊಲೆಯ"; 'ಹುಟ್ಟಿನಿಂದ ಯಾರೂ ಹೊಲೆಯರಲ್ಲ, ಮಾದಿಗರಲ್ಲ; ಲಿಂಗ ಧರಿಸಿದ ಮೇಲೆ ಹೊಲೆಯಿಲ್ಲ, ಮೇಲಿಲ್ಲ, ಕೆಳಗಿಲ್ಲ; ಹುಟ್ಟಿದ ಮನುಷ್ಯರೆಲ್ಲರೂ ಜಾತಿ-ಮತ-ಪಂಗಡಗಳ ಭೇದವಿಲ್ಲದೆ, ಸಮಾನರಾಗಿಯೇ ಇರುತ್ತಾರೆ' ಎಂದು ಸಮಾನತೆಯನ್ನು ಸಾರಿದರು.

ಕಾಯಕ ಸಮಾನತೆ

ವರ್ಣ ವ್ಯವಸ್ಥೆಯನ್ನಾಧರಿಸಿದ್ದ ವೃತ್ತಿ ಅಸಮಾನತೆಯನ್ನು ಬಸವೇಶ್ವರರು ಪ್ರಶ್ನಿಸಿದರು. "ಕಾಯಕದಲ್ಲಿ ತಾರತಮ್ಯವೆಣಿಸಲಾಗದೆಂದು ಅವರು ಲಿಗಂದ ಮೇಲೆ ಆಣೆಯಿಟ್ಟು ಹೇಳುತ್ತಾ, 'ಕಾಯಕ ಆಧಾರಿತ ಜಾತಿ ವಿಂಗಡಣೆಯು ಸಮಾಜ, ದೇಶ ಮತ್ತು ವಿಶ್ವದ್ರೋಹ' ಎಂದರು. "ಕಾಸಿ ಕಮ್ಮಾರನಾದ; ಬೀಸಿ ಮಡಿವಾಳನಾದ; ಹಾಸನಿಕ್ಕಿ ಸಾಲಿಗನಾದ; ವೇದವನೋದಿ ಬ್ರಾಹ್ಮಣನಾದ" ಎಂದು ವಿವರಿಸಿದರು. ಉದ್ಯೋಗದ ಮೇಲಿಂದ ಜಾತಿಯನ್ನೂ ಎಣಿಸುವುದಾದರೂ ಏಕೆ? ಮಡಿವಾಳ ಮಾಚಯ್ಯ, ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ- ಎಲ್ಲರೂ ಪರಮ ಶಿವಭಕ್ತ ರಾಗಿದ್ದು, ಅವರ ಕಾಯಕಗಳು ಹೀನವಲ್ಲವೆಂದು, ಎಲ್ಲಾ ವೃತ್ತಿಯು ನಮ್ಮ ಸಾಮಾಜಿಕ ಜೀವನಕ್ಕೆ ಅತಿ ಅವಶ್ಯ ಎಂದು ಬಸವೇಶ್ವರರು ಸಾರಿದರು.

ಲಿಂಗ ಸಮಾನತೆ

ಪುರುಷ ಪ್ರಾಧನ್ಯತಾ ಸಮಾಜದಲ್ಲಿ ಜೈವಿಕ ತಾರತಮ್ಯ ಇದ್ದುದನ್ನು ಬಸವೇಶ್ವರರು ಖಂಡಿಸಿದರು; ಲಿಂಗ ವ್ಯತ್ಯಾಸದ ಆಧಾರದಲ್ಲಿನ ತಾರತಮ್ಯವನ್ನು ತೊಡೆದು ಹಾಕಲು ಪ್ರಯತ್ನ ಪಟ್ಟರು.

ಪ್ರಾಚೀನ ಕಾಲದ ಮನು ಚಿಂತನೆಯನ್ನು ವಿಮರ್ಶಿಸಿ, ಸ್ತ್ರೀ ಸ್ವಾತಂತ್ರ್ಯ (ಸ್ತ್ರೀ ವಿಮೋಚನಾ) ಚಳುವಳಿಗೆ ನಾಂದಿ ಹಾಡಿದರು. ಸ್ತ್ರೀಯರ ಧಾರ್ಮಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯದ ಬಗ್ಗೆ ಒತ್ತು ನೀಡಿದರು. "ಸ್ತ್ರೀಯರಿಗೂ ಪುರುಷರಂತೆ ಲಿಂಗ ಧರಿಸುವ, ಶಿವಾರಾಧನೆ ಮಾಡುವ, ವಿಧವಾ ಪುನರ್ವಿವಾಹಕ್ಕೆ ಅವಕಾಶ ಇರುವ ಮೈಲಿಗೆ ಆಚರಣೆಯನ್ನು ತೊಡೆದು ಹಾಕುವ, ಧಾರ್ಮಿಕ ವಿಚಾರಗಳಲ್ಲಿ ಪಾಲುಗೊಳ್ಳುವ, ಮುಕ್ತ ಚರ್ಚೆ ನಡೆಸುವ ವ್ಯವಸ್ಥೆಯ ಪರ ತಮ್ಮ ನಿಲವು ಎಂದು ಅವರು ಸ್ಪಷ್ಟಪಡಿಸಿದರು. "ಅನುಭವ ಮಂಟಪ"ದಲ್ಲಿ ಅಲ್ಲಮಪ್ರಭು-ಅಕ್ಕಮಹಾದೇವಿ ಇಬ್ಬರಿಗೂ ಸಮಾನತೆ ಇರುವುದನ್ನು ಸಾರಿದರು. "ಅರಿವಿಂಗೆ ಹಿರಿದು-ಕಿರಿದುಂಟೆ", ಎಂದರು. ಜ್ಞಾನಾರ್ಜನೆಯಲ್ಲಿ ಪುರುಷ-ಸ್ತ್ರೀ ಇಬ್ಬರೂ ಸ್ವತಂತ್ರರು, ಸಮಾನರು ಎಂದರು.

12ನೇ ಶತಮಾನದಲ್ಲಿ ಕ್ರಾಂತಿಕಾರಿಯಾಗಿ, ಸಮಾಜ ಸುಧಾರಕರಾಗಿ, ಜಾತಿ, ಜನಾಂಗ, ವರ್ಣ, ಲಿಂಗ ತಾರತಮ್ಯ, ಸಾಮಾಜಿಕ ಅಸಮಾನತೆ, ಶೋಷಣೆ, ವೃತ್ತಿ ಮತ್ತು ವರ್ಗ ಅಸಮಾನತೆಯ ನೆಲೆಗಳನ್ನು ವೈಚಾರಿಕ ನೆಲೆಯಲ್ಲಿ ಪ್ರಶ್ನಿಸಿ, ವಚನಾಮೃತದ ಮೂಲಕ ಸಮಾಜಕ್ಕೆ ಸಮಾನತೆಯನ್ನು ಬೋಧಿಸಿದ ಪ್ರಮುಖ ಚಿಂತಕ-ಹೋರಾಟಗಾರ ಬಸವೇಶ್ವರರು. ಇಂಥವರ ತತ್ವದ ಆಧಾರದಲ್ಲಿ ಸಮಾಜ ನಿರ್ಮಿಸಬೇಕು; ನಮ್ಮ ಬದುಕನ್ನು ಕಟ್ಟಿಕೊಳ್ಳಬೇಕು.

ಟಿಪ್ಪಣಿಗಳು

- ಎಂ ನಾರಾಯಣ, ಭಾರತೀಯ ಸಾಮಾಜಿಕ ಚಿಂತಕರು, ಚೇತನ್ ಬುಕ್ ಹೌಸ್, ಮೈಸೂರು.
- ಚ.ನ. ಶಂಕರ್‌ರಾವ್, ಸಾಮಾಜಿಕ ಚಿಂತನೆಯ ಅಧ್ಯಯನ, ಜೈಭಾರತ್ ಪ್ರಕಾಶನ, ಮಂಗಳೂರು.

ಗಾಂಧಿ ಮತ್ತು ಅಂಬೇಡ್ಕರ್ ನಡೆಸಿದ ಮುಖ್ಯ ಹೋರಾಟಗಳು

ಪ್ರಸನ್ನಕುಮಾರ್. ಕೆ

ಮಹಾತ್ಮಾ ಗಾಂಧೀಜಿ ಅವರು ಭಾರತ ಕಂಡ ಮಹಾನ್ ವ್ಯಕ್ತಿ. ಅಹಿಂಸಾ ತತ್ವದ ಅಡಿಯಲ್ಲಿ ಇಡೀ ದೇಶವನ್ನು ಮುನ್ನಡೆಸಿದ ಅತಿ ಪ್ರಮುಖರು. ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಭಾರತದಲ್ಲಿದ್ದ ಅಸ್ಪೃಶ್ಯತೆ, ದಲಿತರ ಮೇಲಿನ ದೌರ್ಜನ್ಯ, ಬಡವರ ಹೀನಾಯ ಸ್ಥಿತಿ ಮುಂತಾದವುಗಳ ವಿರುದ್ಧ ಹೋರಾಡಿದ್ದಾರೆ. ಗಾಂಧೀ ಮತ್ತು ಅಂಬೇಡ್ಕರ್ ನಡೆಸಿದ ಹೋರಾಟಗಳನ್ನು ಪ್ರಸ್ತುತ ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

ಗಾಂಧೀಜಿ

ಗಾಂಧೀಜಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಬಹು ನಿರ್ಣಾಯಕವಾದ ಪಾತ್ರವನ್ನು ವಹಿಸಿದ್ದರು. ಅವರು ಅಹಿಂಸಾ ತತ್ವದ ನೆಲೆಯಲ್ಲಿ ನಡೆದದ್ದು ನಿಜಕ್ಕೂ ಮೈನವೀರೇಳಿಸುವಂತಿದೆ. ಈ ಮೂಲಕ ಅವರು ಬ್ರಿಟಿಷರಲ್ಲೂ ಆತ್ಮನಿರೀಕ್ಷಣೆ ಹುಟ್ಟುವ ಹಾಗೆ ಮಾಡಿದರು. ಗಾಂಧೀಜಿ ಅವರು ಅಚಂದ್ರಾರ್ಕ ಭಾರತದ ನಾಯಕರಾಗಿದ್ದಾರೆ.

ಗಾಂಧೀಜಿ ಕಾಂಗ್ರೆಸ್ ಮತ್ತು ಭಾರತದ ಪ್ರಶ್ನಾತೀತ ನಾಯಕರಾಗಿ ನಿಲ್ಲುತ್ತಾರೆ. ಭಾರತ ದೇಶದಲ್ಲಿಯೇ ಅಲ್ಲದೆ ನೆರೆಹೊರೆ ದೇಶಗಳಲ್ಲಿಯೂ ಸತ್ಯದ ನಿಲುವು ಹಾಗೂ ಹೋರಾಟದ ಕಿಚ್ಚನ್ನು ಹರಡಿದವರು. ಎರಡು ದಶಕಗಳ ಕಾಲ ದಕ್ಷಿಣ ಆಫ್ರಿಕಾದಲ್ಲಿದ್ದು, ಅಲ್ಲಿನ ವರ್ಣಭೇಧ ನೀತಿಯನ್ನು ಖಂಡಿಸಿದರು. ಅಲ್ಲಿನ ಭಾರತೀಯರ ವಿರುದ್ದ ಅಲ್ಲಿನ ಸರ್ಕಾರ ಹೇರಿದ್ದ ನಿರ್ಬಂಧಗಳನ್ನು ತೆರವುಗೊಳಿಸಿದರು.

1917ರಲ್ಲಿ ಬಿಹಾರದ ಚಂಪಾರಣ್ಯ ಪ್ರದೇಶದಲ್ಲಿ ಸತ್ಯಾಗ್ರಹ, 1919ರಲ್ಲಿ ರೌಲತ್ ಕಾಯ್ದೆ ವಿರೋಧ, ಜಲಿಯನ್ ವಾಲಾಬಾಗ್ ದುರಂತ ಸಂದರ್ಭಗಳಲ್ಲಿ ಧ್ವನಿ ಎತ್ತಿದರು. 1920ರಲ್ಲಿ ಖಿಲಾಫತ್ ಚಳುವಳಿ ಮೂಲಕ ಹಿಂದೂ ಮತ್ತು ಮುಸ್ಲಿಮರ ನಡುವೆ ಏಕತೆಯನ್ನು ಸಾಧಿಸುವಲ್ಲಿ ಕ್ರಿಯಾಶೀಲರಾದರು. 1921ರಿಂದ 1922ರವರೆಗೆ ಅಸಹಕಾರ ಚಳುವಳಿಗೆ ನೇತೃತ್ವ ನೀಡಿದರು. 1929ರಲ್ಲಿ ಲಾಹೋರ್ ಕಾಂಗ್ರೆಸ್‌ದಲ್ಲಿ ನಿರ್ಣಾಯಕ

ನಿರ್ಧಾರ ಕೈಗೊಂಡರು. 1930ರ ವೇಳೆಗೆ 'ಪೂರ್ಣ ಸ್ವರಾಜ್ಯ'ಕ್ಕಾಗಿ 'ಕಾನೂನು ಭಂಗ ಚಳುವಳಿ'ಯನ್ನು ಆರಂಭಿಸಿದರು.

ಅನಂತರ, 1934ರವರೆಗೂ ದುಂಡು ಮೇಜಿನ ಸಮ್ಮೇಳನಗಳಲ್ಲಿ ಪಾಲ್ಗೊಳ್ಳುತ್ತಾ, ಸಾಮಾಜಿಕ ಬದಲಾವಣೆ ಕಡೆಗೂ ಗಮನ ನೀಡುತ್ತಾರೆ. ದಲಿತರ ಸಮಾನತೆ ವಿಷಯವನ್ನು ದೇಶದ ಮುಂದಿಡುತ್ತಾರೆ. ಬಾವಿಗಳು, ರಸ್ತೆ ಮತ್ತು ದೇವಾಲಯಗಳನ್ನು ಎಲ್ಲರಿಗೆ ಮುಕ್ತಗೊಳಿಸುವ ಕರೆ ನೀಡುತ್ತಾರೆ. ಬ್ರಿಟಿಷರ ಪ್ರಾಬಲ್ಯವನ್ನು ಮಟ್ಟ ಹಾಕಲು, ಅವರ ದಬ್ಬಾಳಿಕೆಗೆ ಪ್ರತಿರೋಧ ತೋರಲು 1942ರಲ್ಲಿ 'ಭಾರತ ಬಿಟ್ಟು ತೊಲಗಿ' (ಚಲೇಜಾವ್) ಚಳುವಳಿ ಕೈಗೊಳ್ಳುತ್ತಾರೆ. ಹೀಗೆ, ವಿವಿಧ ಕಾಲಘಟ್ಟಗಳಲ್ಲಿ ಅತಿ ಮಹತ್ವದ ಹೋರಾಟಗಳನ್ನು ಕೈಗೊಂಡ ಧೀಮಂತರು.

ಅಂಬೇಡ್ಕರ್

ಅಂಬೇಡ್ಕರ್, ಭಾರತ ಕಂಡ ಮಹಾನ್ ಮಾನವತಾವಾದಿ. ಶೋಷಿತರ ವಿಮೋಚನೆಗಾಗಿ ಜೀವನ ಪರ್ಯಂತ ಹೋರಾಟ ಮಾಡಿದ ಧೀಮಂತ ನಾಯಕ. ಇವರ ಚಿಂತನೆ ಸಮಾನತೆಯನ್ನು ಸಮಾಜದಲ್ಲಿ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇವರು ಸಂವಿಧಾನ ಶಿಲ್ಪಿಯಾಗಿ ವಿಶ್ವವೇ ಕೊಂಡಾಡುವ ಮಹಾನ್ ನೇತಾರರಾಗಿದ್ದಾರೆ, ಇವರ ಚಿಂತನೆ ಸಾರ್ವತ್ರಿಕ ಮನ್ನಣೆ ಪಡೆದಿದೆ. ಅಂಬೇಡ್ಕರ್ ನಡೆಸಿದ ಹೋರಾಟಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಅಂಬೇಡ್ಕರ್ ಶ್ರೇಷ್ಠ ಸಮಾಜ ಸುಧಾರಕರು. ಅವರು ಹುಟ್ಟಿನಿಂದ ಹಿಂದೂ. ಹಿಂದೂ ಧರ್ಮದ ಬಗ್ಗೆ ಯಾವುದೇ ಪೂರ್ವಾಗ್ರಹ ಮತ್ತು ಅಸಹನೆ ಅವರಲ್ಲಿ ಇರಲಿಲ್ಲ. ಆದರೆ, ಹಿಂದೂ ಧರ್ಮದ ವಿಧಿ-ವಿಧಾನಗಳು ತಾರತಮ್ಯದ ಬುನಾದಿ ಯನ್ನು ಹೊಂದಿದ್ದನ್ನು, ಅಸ್ಪೃಶ್ಯರು ಮತ್ತಿತರ ಶೋಷಿತರು ಸಮಾನತೆಯಿಂದ ಬದುಕುವ ಹಕ್ಕನ್ನು ಹಿಂದೂ ಧರ್ಮ ಮಾನ್ಯ ಮಾಡದಿರುವುದನ್ನು ಅಂಬೇಡ್ಕರ್ ತೀವ್ರವಾಗಿ ವಿರೋಧಿಸಿದರು.

ಭಾರತದ ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಮತ್ತು ಮಹಿಳೆಯರ ಮಾನವ ಹಕ್ಕುಗಳಿಗಾಗಿ ಹೋರಾಡಿದ ಪ್ರಥಮ ವ್ಯಕ್ತಿ ಬಿ.ಆರ್.ಅಂಬೇಡ್ಕರ್. ಅವರ ಬದುಕಿನ ಕೊನೆಯ ದಿನಗಳವರೆಗೂ ಮಹಿಳಾ ಸಬಲೀಕರಣಕ್ಕಾಗಿ ಹೋರಾಟ ಮಾಡಿದ ದೀಮಂತ ವ್ಯಕ್ತಿ. ಮಹಾನ್ ಹೊರಾಟಗಾರರು ಮಾತ್ರವಲ್ಲದೆ ಮಹಿಳಾಪರ ಚಿಂತಕರೂ ಆಗಿದ್ದರು. ಹಿಂದೂಧರ್ಮವನ್ನು ಸುಧಾರಿಸುವ ಹಲವಾರು ಪ್ರಯತ್ನಗಳನ್ನು ಅಂಬೇಡ್ಕರ್ ಪ್ರಾಮಾಣಿಕವಾಗಿ ನಡೆಸಿದರು. ಆದರೆ ಚಾತುರ್ವರ್ಣ ವ್ಯವಸ್ಥೆಯ ಪ್ರತಿಪಾದಕರಾದ ಬ್ರಾಹ್ಮಣಶಾಹಿ ವಕ್ತಾರರು ಅಂಬೇಡ್ಕರ್‌ರವರು ಪ್ರತಿಪಾದಿಸಿದ ಸಾಮಾಜಿಕ ಸಮಾನತೆ ಮತ್ತು ಸ್ವಾತಂತ್ರ್ಯಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಲಿಲ್ಲ. ರಾಜಕೀಯ ವಿಷಯಕ್ಕೆ

ಂಬಂಧಿಸಿದಂತೆ ದೇಶಿ ಹಾಗೂ ವಿದೇಶಿ ಬರಹಗಾರರು, ರಾಜಕೀಯ ಮುತ್ಸದ್ಧಿಗಳು ಾಗೂ ಚಿಂತಕರ ಉತ್ಕೃಷ್ಟ ಗ್ರಂಥಗಳನ್ನು ಅಂಬೇಡ್ಕರ್ ಅಭ್ಯಸಿಸಿದರು. ಅನೇಕ ರಾಷ್ಟ್ರಗಳ ಂವಿಧಾನವನ್ನು ಅಭ್ಯಾಸ ಮಾಡಿ, ತಮ್ಮದೇ ವಿಶ್ಲೇಷಣೆಯನ್ನು ರೂಪಿಸಿಕೊಂಡರು.

ಅಂಬೇಡ್ಕರರ ಹೋರಾಟಗಳಲ್ಲಿ ಪ್ರಮುಖವಾದುದು 'ಚೌಡಾರ್ ಕೆರೆಯ ನೀರನ್ನು ುಟ್ಟಿದ ಪ್ರಸಂಗ'. ಗುಲಾಮಗಿರಿ, ಜಾತಿಪದ್ಧತಿ, ಮತ್ತು ಪುರೋಹಿತಶಾಹಿ ವಿರೋಧಿ ಂಬೇಡ್ಕರ್, ಅಸ್ಪೃಶ್ಯರಲ್ಲಿ ಕಾಣಿಸಿಕೊಂಡ ಅಪ್ರತಿಮ ಜಾಗೃತಿಯ ಸಂಕೇತವಾಗಿದ್ದರು. ಯಾವ ಕೆರೆಯ ನೀರನ್ನು ಹಿಂದೂ ಸವರ್ಣೀಯರು, ಮುಸ್ಲಿಮರು, ಕ್ರೈಸ್ತರು ಅಷ್ಟೇ ಅಲ್ಲದೆ, ಪ್ರಾಣಿ-ಪಕ್ಷಿಗಳು ಮುಟ್ಟಬಹುದಾಗಿತ್ತೋ ಆ ಕೆರೆಯ ನೀರನ್ನು ಅಸ್ಪೃಶ್ಯರು ಮುಟ್ಟುವ ಹಾಗಿರಲಿಲ್ಲ. ಅಂಥ ಸಂದರ್ಭದಲ್ಲಿ, ತಲೆಮಾರುಗಳಿಂದ ಅವಮಾನಿಸಲ್ಪಟ್ಟ ಅಸ್ಪೃಶ್ಯರು ತಮ್ಮ ನಾಗರಿಕ ಹಕ್ಕು ಚಲಾಯಿಸಲು ಹೊರಟಿದ್ದ ಘಳಿಗೆ ಅದಾಗಿತ್ತು. ಹೋರಾಟದ ಕಡೆಯಲ್ಲಿ ಅಂಬೇಡ್ಕರ್ ಕೆರೆ ನೀರನ್ನು ಮುಟ್ಟಿದರು. ಅವರನ್ನು ಸಹಸ್ರಾರು ದಲಿತರು ಅನುಸರಿಸಿದರು. ಹಿಂದೆಯೆ, ಸಾವಿರಾರು ಸವರ್ಣೀಯರು ದಲಿತರ ಮೇಲೆ ಹಲ್ಲೆ ನಡೆಸಿದರು. ಗಲಭೆ ಸಂಭವಿಸಿ, ಅಪಾರ ಸಾವು-ನೋವುಗಳಾದವು. ಇದನ್ನು ಬಹುತೇಕವಾಗಿ ಊಹಿಸಿದ್ದ ಅಂಬೇಡ್ಕರರು ಬಹಳ ತಾಳ್ಮೆಯಿಂದ ವರ್ತಿಸಿದರು; ಆಕ್ರೋಶಗೊಂಡ ತಮ್ಮ ಜನರನ್ನು ನಿಯಂತ್ರಿಸಿ, ಶಾಂತಿಯಿಂದ ಮತ್ತು ಕಾನೂನಾತ್ಮಕವಾಗಿ ಹೋರಾಟವನ್ನು ನಡೆಸುವಂತೆ ಪ್ರೇರೇಪಿಸಿದರು.

ದಲಿತರ ಆತ್ಮಗೌರವ ಮತ್ತು ಜೀವನದ ಮೇಲಾಗುತ್ತಿದ್ದ ಮಾನಸಿಕ, ದೈಹಿಕ ದೌರ್ಜನ್ಯಗಳ ವಿರುದ್ಧ ಸಂಘಟನಾತ್ಮಕವಾಗಿ ಹೋರಾಟ ಮಾಡಿದ್ದು,ದಲಿತರನ್ನು ಆರ್ಥಿಕವಾಗಿ ಸಧೃಢರನ್ನಾಗಿ ಮಾಡಲು ಅವರಿಗೆ ಭೂಮಿಯನ್ನು ದೊರಕಿಸಿ ಕೊಡಲು ಹೋರಾಡಿದ್ದು, ಮೀಸಲಾತಿಯನ್ನು ಸಂವಿಧಾನದಲ್ಲಿ ಅಳವಡಿಸಿದ್ದು, ಬುದ್ಧನೆಡೆಗೆ ಹೊರಳುವ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಟ್ಟಿದ್ದು ಇತ್ಯಾದಿ ಅನೇಕ ಸಾಧನೆಗಳ ಕಿರೀಟ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ.

ಆಧುನಿಕ ಭಾರತದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಧಾರೆಗಳನ್ನು ಪ್ರಬಲವಾಗಿ ಪ್ರಭಾವಿಸುತ್ತಿರುವುದು ಗಾಂಧೀ-ಅಂಬೇಡ್ಕರ್‌ವಾದಗಳು ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಗಾಂಧೀ-ಅಂಬೇಡ್ಕರ್ ಚಿಂತನೆ ಮೂಲಭೂತವಾದಿ ಶಕ್ತಿಗಳಲ್ಲಿ ಸಂಚಲನವನ್ನು ಮೂಡಿಸಿವೆ. ಮೂಲಭೂತವಾದಿಗಳು ಮತ್ತು ಮಾನವತಾವಾದಿಗಳ ನಡುವಣ ಸಂಘರ್ಷ ಅನಿವಾರ್ಯವಾಗಿದೆ. ಹೀಗಾಗಿ, ಇಬ್ಬರೂ ನಡೆಸಿದ ಹೋರಾಟಗಳ ಹಿನ್ನೆಲೆಯಲ್ಲಿ ಗಾಂಧೀ-ಅಂಬೇಡ್ಕರ್ ಇಬ್ಬರನ್ನೂ ಯುಗಪುರುಷರೆಂದು ಭಾರತೀಯ ಸಮಾಜ ಒಪ್ಪಿಕೊಂಡಿದೆ.

ಆಕರ ಗ್ರಂಥಗಳು

- ದಲಿತ ಚಳುವಳಿಯ ಚರಿತ್ರೆ ಸಂಪುಟ–2.: ಡಾ.ವಿ ಮುನಿವೆಂಕಟಪ್ಪ, ರಚನಾ ಪ್ರಕಾಶನ, ಮೈಸೂರು–17, 2012.
- ಅಂಬೇಡ್ಕರ್ ವಿಚಾರ ಸಾಹಿತ್ಯ : ಡಾ. ಮ. ನ. ಜವರಯ್ಯ
- ಕರ್ನಾಟಕದ ಸಮಗ್ರ ದಲಿತ ಚರಿತ್ರೆ : ಡಾ.ಎನ್.ಚಿನ್ನಸ್ವಾಮಿ ಸೋಸಲೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು 2016.
- ಡಾ. ಬಾಬಾಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು
- ಲೋಕ ಮಿತ್ರರ ನಡುವೆ : ಡಾ.ಎಚ್.ಟಿ.ಪೋತೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2010

ಂಬೇಡ್ಕರ್ ದೃಷ್ಟಿಕೋನದಲ್ಲಿ ಶಿಕ್ಷಣ ಮತ್ತು ಪರೀಕ್ಷೆಗಳು

ರಾಧಾಕೃಷ್ಣ. ಎ
ಡಾ. ಎನ್. ಸುಶೀಲಮ್ಮ

ಭಾರತದ ಶಿಕ್ಷಣದ ನೀತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ವೇದಗಳ ಲದಿಂದ ಪ್ರಾರಂಭವಾಗಿ, ಬೌದ್ಧ, ಜೈನ ಮತ್ತು ಮುಸ್ಲಿಂ ಶಿಕ್ಷಣ ನೀತಿಗಳು ಅಧಿಕಾರ ುತ್ತು ಧರ್ಮ ಕೇಂದ್ರೀಕೃತ ಶಿಕ್ಷಣ ಕ್ರಮಗಳಾಗಿ ಅಸ್ತಿತ್ವದಲ್ಲಿದ್ದವು. ಬ್ರಿಟಿಷ್ ಆಡಳಿತ ತಂದ ಕ್ಷಣ ನೀತಿ – ನಿಯಮಗಳು ಮತ್ತು ದೇಸಿ ಶಿಕ್ಷಣ ತಜ್ಞರು ರೂಪಿಸಿದ ನಿಯಮಗಳು ೇರೆಯಾಗಿದ್ದವು.

ಪೂರ್ವದ ಹೆಜ್ಜೆಯನ್ನು ಅರಿಯದೆ ಮುಂದಣ ದಾರಿಯನ್ನು ಕಾಣಲು ಸಾಧ್ಯವಿಲ್ಲ. ಾರತದಲ್ಲಿ ಅದುವರೆಗೆ ಇದ್ದ ಸನಾತನ ಶಿಕ್ಷಣ ನೀತಿಗೆ ವಿರುದ್ಧವಾಗಿ ಬಂದ ಬ್ರಿಟಿಷ್ ಕ್ಷಣ ನೀತಿಯು ಗುಮಾಸ್ತಗಿರಿ ನೀತಿಯಾಗಿತ್ತು. ಸುಧಾರಿತ ಹೊಸ ಶಿಕ್ಷಣ ಎಂದರೆ ಾರ್ಚ್ 7, 1835ರಲ್ಲಿ ಲಾರ್ಡ್ ಮೆಕಾಲೆ ಜಾರಿಗೆ ತಂದ ಶಿಕ್ಷಣ ನೀತಿ ಇದು. ಸ್ಥಳೀಯ ಂಪನ್ಮೂಲಗಳನ್ನು ತಮ್ಮ ಆಡಳಿತ ವ್ಯವಹಾರಗಳಿಗೆ ನೆರವಾಗುವಂತೆ ಬಳಸಿಕೊಂಡು, ಕ್ಷಣ ನೀತಿಯನ್ನು ರೂಪಿಸಲಾಗಿತ್ತು.

ಸನಾತನ ಶಿಕ್ಷಣ ನೀತಿ ಮೇಲ್ಜಾತಿಗಳಿಗೆ ಮೀಸಲಿತ್ತು. ಕೆಳಜಾತಿಗಳವರಿಗೂ ಶಿಕ್ಷಣ ೀಡುವ ಸಲುವಾಗಿ ಹೊಸ ನೀತಿಯೊಂದನ್ನು ಮೆಕಾಲೆ ಜಾರಿಗೆ ತಂದ. ಅದರಿಂದ ೆಲವರಾದರೂ ಕೆಳ ಹಾಗೂ ಪಂಚಮ ವರ್ಗದವರು ಶಿಕ್ಷಣ ಪಡೆಯಲು ಸಾಧ್ಯವಾಗಿತ್ತು. ಸ್ಥಳೀಯ ಸರ್ಕಾರಗಳ ಆಯ್ಕೆ ಮತ್ತು ಆಡಳಿತದಲ್ಲಿ ಹೊಸ ಸುಧಾರಣಾ ನೀತಿಯನ್ನು ್ರಿಟೀಷರು ತಂದ ಫಲವಾಗಿ ಹೊಸ ಚಿಂತನೆಗೆ ನಾಂದಿಯಾಯಿತು. ಮುಂಬೈನ ಸ್ಥಳೀಯ ಾಸಕಾಂಗ ಸಭೆಯಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಮಂಡಿಸಿದ ವಿಷಯಗಳು ಮತ್ತು ರ್ಚೆ ಮಾಡಿದ ಅಂಶಗಳು ಇಂದಿನ ಎಲ್ಲಾ ಸರ್ಕಾರಗಳ ಶಿಕ್ಷಣ ನೀತಿಗೆ ಮೂಲದ್ರವ್ಯ ಎಂದರೆ ತಪ್ಪಾಗಲಾರದು. ಪ್ರಾಥಮಿಕ ಶಿಕ್ಷಣ ಸೇರಿದಂತೆ ಉನ್ನತ ಶಿಕ್ಷಣದವರೆಗೂ ಕಾನೂನು ತಿದ್ದುಪಡಿಗೆ ಆಗ್ರಹ ಮಾಡಿ, ಸುಧಾರಣೆ ತಂದ ಕೀರ್ತಿ ಬಾಬಾಸಾಹೇಬರಿಗೆ ಸಲ್ಲುತ್ತದೆ. ಅಂಕ ನೀಡುವ ಕ್ರಮ, ಮರು ಪರೀಕ್ಷೆಯ ಅರ್ಹತೆಗಳು, ಅನುತ್ತೀರ್ಣವಾದ ವಿಷಯಗಳ ಜೊತೆಗೆ ಅಧ್ಯಯನ ಮುಂದುವರೆಸಲು ಅವರು ನೀಡಿದ ಕಾರಣಗಳು ಇಂದಿಗೂ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮುಂದುವರೆಯುತ್ತಿವೆ.

ಸಮಾಜದಲ್ಲಿನ ವಿವಿಧ ಜಾತಿಗಳ ನಡುವಣ ಭಿನ್ನಾಭಿಪ್ರಾಯಗಳ ಫಲವಾಗಿ ಶಿಕ್ಷಣದಲ್ಲಿ ಅಸಮಾನತೆ ತಲೆದೋರಿದ್ದು, ಆ ಅಸಮಾನತೆಯನ್ನು ಹೋಗಲಾಡಿಸಲು ಅಂಬೇಡ್ಕರ್ ನಡೆಸಿದ ಚರ್ಚೆಗಳು ಇಂದಿಗೂ ಆದರ್ಶವಾಗಿವೆ. ಮೊದಲು ಕೆಳವರ್ಗ ಗಳಿಗೆ ಶಿಕ್ಷಣ ಕೊಡಿಸಲು ಅವರು ಮಾಡಿದ ಹೋರಾಟ, ಶಿಷ್ಯ ವೇತನ ಮತ್ತು ಹಾಸ್ಟೆಲ್‌ಗಳ ಸ್ಥಾಪನೆಗೆ ಸಲಹೆ ಮತ್ತು ಮನವಿಗಳು ಹಾಗೂ ಶೈಕ್ಷಣಿಕ ಪ್ರಗತಿ ಸಾಧಿಸಲು ಹಾಗೂ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು ಶಿಕ್ಷಣ ಮುಂದುವರೆಸಲು ಅನುಮತಿ ಕೋರಿ ಮಾಡಿದ ಮನವಿಗಳು ಇಂದಿಗೂ ಮುಖ್ಯವಾದ ದಾಖಲೆ ಗಳಾಗಿವೆ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಧಾನಸಭಾ ಅಧ್ಯಕ್ಷರು ಮತ್ತು ಹಣಕಾಸು ಮಂತ್ರಿಗಳೊಡನೆ ವಿಧಾನ ಸಭೆಯಲ್ಲಿ ಅಂಬೇಡ್ಕರ್ ಚರ್ಚಿಸಿದಾಗ ಆಡಿದ ನುಡಿಗಳು ಹೀಗಿವೆ. "ಬಡವರ ಅವಶ್ಯಕತೆಗಳು ಬಹಳಷ್ಟಿವೆ. ಸಿರಿವಂತರು ಸರಕಾರದ ಮೇಲೆ ಅವಲಂಬಿಸಬೇಕಾಗಿಲ್ಲ. ಸಿರಿವಂತರಿಗೆ ಶಾಲೆ ಬೇಕಾಗಿಲ್ಲ. ಅವರು ತಮ್ಮ ಮಗನನ್ನು ಶಾಲೆ-ಕಾಲೇಜಿಗೆ ಕಳುಹಿಸದೆಯೇ, ಶಿಕ್ಷಕರನ್ನು ಮನೆಗೆ ಕರೆಸಿಕೊಂಡು ಉನ್ನತ ಶಿಕ್ಷಣದವರೆಗೂ ಶಿಕ್ಷಣವನ್ನು ಕೊಡಿಸಬಲ್ಲರು. ಸಿರಿವಂತರಿಗೆ ಆಸ್ಪತ್ರೆ ಬೇಡ. ಅವರು ವೈದ್ಯರನ್ನು ಮನೆಗೆ ಕರೆಯಿಸಿಕೊಂಡು ಅವರಿಗೆ 20ರೂ. ನೀಡಿ, ಕುಟುಂಬದ ಸದಸ್ಯರ ಆರೋಗ್ಯ ತಪಾಸಣೆ ಮಾಡಿಸಬಲ್ಲರು. ಆದರೆ ಬಡವರಿಗೆ ಸರಕಾರದ ರಕ್ಷಣೆ ಮತ್ತು ಸೇವೆಗಳ ಅಗತ್ಯವಿದೆ.. .. ."

ಸಮಾಜದಲ್ಲಿರುವ ಬಡವ-ಶ್ರೀಮಂತರ ನಡುವಿನ ಅಂತರ ಮತ್ತು ಅವರು ವ್ಯವಸ್ಥೆಯಲ್ಲಿ ಹೇಗೆ ಬದುಕುತ್ತಾರೆ ಎಂಬ ಅಂಶಗಳ ಮೇಲೆ ಬಾಬಾಸಾಹೇಬರ ಈ ಮಾತುಗಳು ಬೆಳಕನ್ನು ಚೆಲ್ಲುತ್ತವೆ. ಸರ್ಕಾರ ಇಂತಹ ಉಚಿತ ಸೇವೆಯನ್ನ ನೀಡದೆ ಇದ್ದಲ್ಲಿ ಬಡವರ, ದಲಿತರ ನೋವುಗಳನ್ನು ಕೇಳುವವರು ಯಾರು? ಜೀವನ ನಿರ್ವಹಣೆಯೇ ಕಷ್ಟವಾದ ಜನರಿಗೆ ಶಿಕ್ಷಣ ನೀಡಿ, ಅವರನ್ನು ಸ್ವಾವಲಂಬಿ ಗಳನ್ನಾಗಿ ಮಾಡಲು ಮೀಸಲಾತಿ, ವಿವಿಧ ರೀತಿಯ ಯೋಜನೆಗಳು ಅಗತ್ಯವಾಗಿ ಬೇಕಿವೆ.

ಒಮ್ಮೆ ಶಿಕ್ಷಣ ಮತ್ತು ಉದ್ಯೋಗ ಪಡೆದ ಕುಟುಂಬ ಸ್ವಾವಲಂಬಿಯಾಗಿ, ಪ್ರಗತಿಯ ಕಡೆ ಸಾಗುತ್ತದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ದುರ್ಬಲವಾದ ಕುಟುಂಬಗಳಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುವ ಮೂಲಕ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಸಾಧ್ಯ. ಅವರನ್ನು ಅಭಿವೃದ್ಧಿಯ ಕಡೆಗೆ, ಆರ್ಥಿಕ ಸಮಾನತೆಯ ಕಡೆಗೆ ಕರೆತರಲು ಸಾಧ್ಯ. ಆರ್ಥಿಕ ಮತ್ತು ಸಾಮಾಜಿಕ ಸ್ಥಿರತೆಯನ್ನು ಸಾಧಿಸಲು ಸೂಕ್ತವಾದ ಶಿಕ್ಷಣ ಕೆಳವರ್ಗಗಳಿಗೆ ದೊರಕಬೇಕು.

ಶಿಕ್ಷಣದ ಬಗ್ಗೆ ಮಾತನಾಡುತ್ತಾ ಅಂಬೇಡ್ಕರರು ಹಣಕಾಸು ಮಂತ್ರಿಗಳನ್ನು ವಿಧಾನ ಸಭೆಯಲ್ಲಿ "ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವುದಕ್ಕಾಗಿ ರೂ. 1.30 ಲಕ್ಷ ರೂಪಾಯಿಗಳು ಬೇಕಾಗುತ್ತದೆ, ಅದು ಸದ್ಯಕ್ಕೆ ಕಷ್ಟ ಎಂದಿದ್ದೀರಿ. ನೀವು ಅಬಕಾರಿಗೆ ಮಾಡುವ ವೆಚ್ಚಕ್ಕಿಂತಲೂ ಕಡಿಮೆ ವೆಚ್ಚ ಇದಾಗಿದೆ. ನೀವು ಮಾಡುವ ಆಯ್ಕೆ ಯಾವುದು, ಇದೇ ನಿಜವಾಗಿಯೂ ದೊಡ್ಡ ಪ್ರಶ್ನೆಯಾಗಿದೆ. ಕುಡಿಯುವುದನ್ನು ಆಯ್ಕೆ ಮಾಡಿಕೊಂಡ ಪಟ್ಟಣದ ಹತ್ತು ಲಕ್ಷ ಜನರ ಹಣೆಬರಹ ಸುಧಾರಣೆಗಿಂತ 17 ರಿಂದ 18 ಲಕ್ಷ ಮಕ್ಕಳ ಶಿಕ್ಷಣವು ಕಡಿಮೆ ಮಹತ್ವದ್ದೋ?

ಹಣಕಾಸು ಮಂತ್ರಿಗಳು ಗಮನಿಸಬೇಕು. ಒಬ್ಬ ವ್ಯಕ್ತಿಗೆ ಶಿಕ್ಷಣ ನೀಡಲು ತಲಾ ಕೇವಲ 4 ಆಣೆಗಳನ್ನು ಮಾತ್ರ ಖರ್ಚು ಮಾಡುತ್ತೇವೆ. ಈಗ ಪ್ರಾಥಮಿಕ ಶಿಕ್ಷಣಕ್ಕೆ ಖರ್ಚು ಮಾಡುತ್ತಿರುವ ಹಣವು ಹೆಚ್ಚಿನ ಮಟ್ಟಿಗೆ ವ್ಯರ್ಥವಾಗಿ ಖರ್ಚಾಗುತ್ತಿದೆ. ಪ್ರಾಥಮಿಕ ಶಾಲೆಯ ಆವರಣವನ್ನು ಪ್ರವೇಶಿಸುವ ಪ್ರತಿಯೊಂದು ಮಗುವೂ ಶಿಕ್ಷಣ ಪಡೆದುಕೊಂಡ ಬಳಿಕವೇ ಶಾಲೆಯನ್ನು ಬಿಡತಕ್ಕದ್ದು ಎಂಬುದು ಗುರಿಯಾಗಿರಬೇಕು. ಆದರೆ ನಾವು ಅಂಕಿ ಸಂಖ್ಯೆಗಳನ್ನು ಗಮನಿಸಿದರೆ, ಪ್ರಾಥಮಿಕ ಶಾಲೆಯನ್ನು ಪ್ರವೇಶಿಸುವ ಪ್ರತಿ ನೂರು ಮಕ್ಕಳಲ್ಲಿ 82 ಮಕ್ಕಳು ಪುನಃ ಅವಿದ್ಯಾವಂತರಾಗಿಯೇ ಉಳಿಯುತ್ತಾರೆ. ಈ ಪರಿಸ್ಥಿತಿಗೆ ಪರಿಹಾರವೇನು? ಭಾರತ ಸರ್ಕಾರವು ತನ್ನ ವರದಿಯಲ್ಲಿ ಮಾಡಿದ ಟೀಕೆಯನ್ನು, ಯಾವುದೇ ನೆಪವನ್ನು ಹೇಳದೆಯೇ, ಈ ಸದನಕ್ಕೆ ಓದಿ ಹೇಳಬೇಕು. ಆ ವರದಿಯು ಹೇಳುತ್ತಿದೆ: "ಶೈಕ್ಷಣಿಕ ಪ್ರಯತ್ನದಲ್ಲಿ ಹೆಚ್ಚಿನ ಹಣ (ಶೇ.50ರಷ್ಟು) ಪೋಲಾಗುತ್ತಿದ್ದು ಈ ಸಮಸ್ಯೆಯನ್ನು ನಿವಾರಿಸಲು ಒತ್ತಾಯ ಮಾಡಲೇಬೇಕಿದೆ. ಇದನ್ನು ಹಲವಾರು ಶಿಕ್ಷಣ ತಜ್ಞರು ಹೇಳಿದ್ದಾರೆ" ಎಂದು ತಿಳಿಸುತ್ತಾ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣ ವೆಚ್ಚ ಮಾಡಬೇಕೆಂದು ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ಆಗ್ರಹಿಸಿದರು.

ಶಿಕ್ಷಣ ಕ್ಷೇತ್ರಕ್ಕೆ ಹಣವನ್ನು ಯಾವ ರೀತಿಯಲ್ಲಿ ಒದಗಿಸಲಾಗಿದೆ ಎಂಬ ಮಾಹಿತಿಯನ್ನು ನೀಡುತ್ತಾ, ಶಿಕ್ಷಣಕ್ಕಾಗಿ ಮಾಡಲಾಗುತ್ತಿರುವ ಒಟ್ಟು ಖರ್ಚಿನಲ್ಲಿ ಶೇಕಡಾ 36ರಷ್ಟನ್ನು ಪ್ರಾಥಮಿಕ, ಶೇಕಡಾ 31ರಷ್ಟನ್ನು ಮಾಧ್ಯಮಿಕ ಶಿಕ್ಷಣಕ್ಕೆ ಖರ್ಚು ಮಾಡುತ್ತಿದ್ದು, ಈ ಖರ್ಚಿನಲ್ಲಿ ಶೇಕಡಾ 26 ರಷ್ಟನ್ನು ಶುಲ್ಕಗಳ ಮೂಲಕ ಪಡೆದುಕೊಳ್ಳಲಾಗುತ್ತಿದೆ ಎಂದು ಅಂಬೇಡ್ಕರ್ ಸದನದ ಗಮನ ಸೆಳೆದರು. 'ಇದು ಶಿಕ್ಷಣವನ್ನು ವ್ಯಾಪಾರವನ್ನಾಗಿ ಮಾಡಿದೆ' ಎಂಬ ಅಭಿಪ್ರಾಯವನ್ನು ಶಿಕ್ಷಣ ಮಂತ್ರಿಗಳ ಮುಂದೆ ವ್ಯಕ್ತಪಡಿಸಿದರು. 'ಶಿಕ್ಷಣವು ಪ್ರತಿಯೊಬ್ಬನ ಬದುಕಿನ ಮುಖ್ಯ ವಿಷಯವಾಗಬೇಕು. ಶಿಕ್ಷಣ ಇಲಾಖೆಯನ್ನು ಲಾಭ ಮಾಡುವ ಇಲಾಖೆಯೆಂದು ಪರಿಗಣಿಸಕೂಡದು. ಎಲ್ಲ ವಿಧಾನಗಳಿಂದ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ಎಲ್ಲರಿಗೂ ಲಭ್ಯವಾಗುವಂತೆ ಮಾಡಬೇಕು' ಎಂದು ಅಂಬೇಡ್ಕರ್ ವಾದಿಸಿದರು.

ಅಂದಿನ ಸರ್ಕಾರದ ಶಾಸನ ಸಭೆಯಲ್ಲಿ ಬಾಬಾಸಾಹೇಬರು ಹೂಡಿಕೆಗೆ ಸಂಬಂಧಿಸಿದ ವಿಷಯ ಕುರಿತು ಚರ್ಚೆ ಮಾಡುತ್ತಾ, 1930ರ ಸುಮಾರಿಗೆ ಸರ್ಕಾರದ ಮಟ್ಟದಲ್ಲೇ ಮದ್ಯ ಮಾರಾಟ ಕೇಂದ್ರಗಳನ್ನು ಮತ್ತು ಉತ್ಪಾದನಾ ಘಟಕಗಳನ್ನು ಅಬಕಾರಿ ಇಲಾಖೆಯ ಮೂಲಕ ಸರ್ಕಾರ ನಿಯಂತ್ರಿಸುತ್ತಿತ್ತು. ಆ ಕ್ಷೇತ್ರದಲ್ಲಿ ಹೆಚ್ಚು ಲಾಭಗಳಿಸಲಿಕ್ಕಾಗಿ ಹೆಚ್ಚಿನ ಹೂಡಿಕೆ ಮಾಡಲು ಸರ್ಕಾರ ಚಿಂತನೆ ಮಾಡಿತು. ಪ್ರಜೆಗಳನ್ನು ಕುಡುಕರನ್ನಾಗಿ ಮಾಡಿ, ಸರ್ಕಾರ ಆದಾಯ ಗಳಿಸಿದರೆ ಅದು ಎಂತಹ ಪ್ರಗತಿ? ದೂರಗಾಮಿಯಾದ ಯೋಜನೆಗಳಿಂದ ಮಾತ್ರ ರಾಷ್ಟ್ರದಲ್ಲಿ ಸ್ಥಿರವಾದ ಅಭಿವೃದ್ಧಿ ಕಾಣಲು ಸಾಧ್ಯ' ಎಂದು ಅಂಬೇಡ್ಕರರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಮುಂಬೈ ಪ್ರಾಂತ್ಯ ಒಂದರಲ್ಲೇ ಆ ಕಾಲಕ್ಕೆ 325 ಲಕ್ಷ ಆದಾಯ ಅಬಕಾರಿಯಿಂದ ಬರುತ್ತಿತ್ತು. ಅಲ್ಲಿ 180 ಲಕ್ಷ ಜನ ವಾಸಿಸುತ್ತಿದ್ದರು. ಅವರಲ್ಲಿ ಮಕ್ಕಳು ಮತ್ತು ಮಹಿಳೆಯರನ್ನು

ಹೊರತು ಪಡಿಸಿ, ವಯಸ್ಕ ಪುರುಷರು ಶೇ. 60ಕ್ಕೂ ಹೆಚ್ಚು ಜನ ಮದ್ಯದ ದಾಸರಾಗಿದ್ದರು. ತಕ್ಷಣ ಲಾಭಗಳಿಸುವ ದೃಷ್ಟಿಯಿಂದ ಸರ್ಕಾರದ ಕೆಟ್ಟ ತೀರ್ಮಾನ ಕೈಗೊಂಡಿದ್ದನ್ನು ಬಾಬಾಸಾಹೇಬರು ಅಂಕಿ ಅಂಶಗಳ ದಾಖಲೆಯನ್ನು ನೀಡಿದರು. ಕಡ್ಡಾಯ ಶಿಕ್ಷಣಕ್ಕೆ ಕೊಡಬೇಕಿರುವ ರೂ. 1.30 ಲಕ್ಷ ರೂಪಾಯಿ ಸರ್ಕಾರಕ್ಕೆ ಹೊರೆಯಾದರೆ, 325 ಲಕ್ಷ ರೂ. ಸುಂಕವನ್ನು ತರುವ ಅಬಕಾರಿ ಇಲಾಖೆಯಲ್ಲಿ ಸರ್ಕಾರ ಎಷ್ಟು ಹಣವನ್ನು ಹೂಡಿಕೆ ಮಾಡಿದೆ? ಎಂದು ಅವರು ಆಕ್ರೋಶದಿಂದ ಪ್ರಶ್ನಿಸಿದರು. ಈ ಮೂಲಕ ಅವರು ಎಲ್ಲರಿಗೂ ಸಮಾನವಾದ ಶಿಕ್ಷಣ ನೀಡುವ ಅವಶ್ಯಕತೆಯನ್ನು ಪ್ರತಿಪಾದಿಸಿದರು.

ಅಂಬೇಡ್ಕರ್‌ರವರು ಪ್ರಾಂತೀಯ ವಿಧಾನ ಸಭೆಯ ಇನ್ನೊಂದು ಅಧಿವೇಶನದಲ್ಲಿ "ಯಾವುದೇ ಸಹಾಯ ಇಲ್ಲದಿರುವಾಗ ಶಿಷ್ಯವೇತನ ರೂಪದಲ್ಲಿ ಬರುವ ಸಹಾಯವು ಉತ್ತಮವಾದದ್ದು. ಆದರೆ, ನನ್ನ ತಿಳುವಳಿಕೆಯಂತೆ ಶಿಷ್ಯವೇತನದ ಬಳಕೆಯು ಶಿಕ್ಷಣ ಪಡೆಯುವುದಕ್ಕೆ ಆಗುವುದು ಕಡಿಮೆ. ಏಕೆಂದರೆ, ದಲಿತ ತಂದೆ-ತಾಯಂದಿರು ತುಂಬಾ ಬಡವರು, ಅನಕ್ಷರಸ್ಥರು; ಸರ್ಕಾರವು ಮಗುವಿನ ಶಿಕ್ಷಣಕ್ಕಾಗಿ ಮಾಡುವ ಸಹಾಯವನ್ನು ತಮ್ಮ ಕುಟುಂಬಕ್ಕಾಗಿ ವೆಚ್ಚ ಮಾಡಿಕೊಳ್ಳುತ್ತಾರೆ. ಅವರ ಸ್ಥಿತಿ ಅಷ್ಟು ಕೆಳಮಟ್ಟದಲ್ಲಿ ಇದೆ. ಆದ್ದರಿಂದ ಶಿಷ್ಯವೇತನವು ಮಗುವಿನ ಶಿಕ್ಷಣಕ್ಕಾಗಿ ಉಪಯೋಗವಾಗುವುದೇ ಇಲ್ಲ; ಸರ್ಕಾರ ಯಾವ ಉದ್ದೇಶ ಕ್ಕಾಗಿ ಖರ್ಚು ಮಾಡಲಾಗುತ್ತಿದೆ ಎಂದು ಭಾವಿಸುತ್ತದೊ, ಆ ಉದ್ದೇಶ ಈಡೇರಿದಂತೆ ಆಗುವುದಿಲ್ಲ. ಆದ್ದರಿಂದ ನನ್ನ ಆಗ್ರಹ ಏನೆಂದರೆ, ಶಿಷ್ಯವೇತನ ರೂಪದಲ್ಲಿ ನೀಡುತ್ತಿರುವ ಹಣವನ್ನು ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡುವುದಕ್ಕೆ ಮತ್ತು ನಡೆಸುವುದಕ್ಕೆ ಬಳಸುವುದು ಸೂಕ್ತ. ಇದರಿಂದ ದಲಿತರು ಶಿಕ್ಷಣ ಪಡೆದಂತೆ ಆಗುತ್ತದೆ; ಸರ್ಕಾರದ ಹಣ ಸದ್‌ಬಳಕೆಯಾದಂತೆ ಆಗುತ್ತದೆ" ಎಂದು ಸರ್ಕಾರಕ್ಕೆ ಚಾಟಿ ಏಟು ಬೀಸಿ, ಎಚ್ಚರಿಸಿದ್ದರು.

ಬಾಬಾಸಾಹೇಬರು ಯಾವುದೇ ವಿಷಯವನ್ನು ತಳಮಟ್ಟದಿಂದ ಪರೀಕ್ಷೆ ಮಾಡುತ್ತಿದ್ದರು. ಅವರು ಪರೀಕ್ಷಾ ವಿಧಾನಕ್ಕೆ ಸಂಬಂಧಿಸಿ ಮಾತನಾಡಿರುವುದನ್ನು ಗಮನಿಸಿದರೆ ಇದು ಮನವರಿಕೆಯಾಗುತ್ತದೆ. ಅವರು ಸದನದಲ್ಲಿ ಮಾತನಾಡುತ್ತಾ, "ಪರೀಕ್ಷೆ ಎಂಬುದು ಶಿಕ್ಷಣಕ್ಕಿಂತ ತುಂಬಾ ಭಿನ್ನವಾದ ವಿಚಾರ. ಆದರೆ, ಶಿಕ್ಷಣದ ಮಟ್ಟವನ್ನು ಏರಿಸುವ ನೆಪದಲ್ಲಿ, ಇಲ್ಲಿಯವರೆಗೆ ವಿಶ್ವವಿದ್ಯಾಲಯ ಆವರಣವನ್ನು ಪ್ರವೇಶಿಸುವ ಅವಕಾಶವೇ ಇಲ್ಲದಿರುವ ಹಿಂದುಳಿದ ಕೋಮಿನವರಿಗೆ ಪರೀಕ್ಷೆಗಳು ಕಡುಕಠಿಣ ಆಗುವಂತೆ ಮತ್ತು ಅವರು ಅವುಗಳಿಂದ ಸಂಪೂರ್ಣವಾಗಿ ಹೊರಗೆ ಉಳಿಯುವಂತೆ ಮಾಡಲಾಗುತ್ತಿದೆ.

ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು, ಎಲ್ಲ ವಿಷಯಗಳಲ್ಲೂ ಒಂದೇ ಬಾರಿಗೆ ಉತ್ತೀರ್ಣರಾಗಬೇಕು ಎಂದು ಒತ್ತಾಯಿಸಲಾಗಿದೆ. ಯಾರ ತಂದೆ-ತಾಯಂದಿರು ಸಿರಿವಂತರಾಗಿರುತ್ತಾರೋ, ಹಗಲಿನಲ್ಲಿ ಯಾರ ಮಕ್ಕಳು ಕಾಲೇಜಿಗೆ ಹೋಗಬಲ್ಲವರಾಗಿದ್ದಾರೊ, ಯಾರು ತಮ್ಮ ಎಲ್ಲ ಸಮಯವನ್ನೂ ಅಭ್ಯಾಸಕ್ಕಾಗಿಯೇ ಉಪಯೋಗಿಸಿಕೊಳ್ಳಬಲ್ಲರೋ ಅಂಥ ವಿದ್ಯಾರ್ಥಿಗಳ ವಿಷಯದಲ್ಲಿ ಇದು ಸರಿಯಾದ ನಿರ್ಧಾರ ಇರಬಹುದು. ಆದರೆ, ಬಡತನದಲ್ಲಿ ಬಳಲುತ್ತಿರುವ ತಂದೆ-ತಾಯಿಗಳು

ಮ್ಮ ಮಕ್ಕಳು ಹಗಲಿನಲ್ಲಿ ಸಂಪಾದಿಸಿ, ಕುಟುಂಬದ ಸಂಪಾದನೆ ಹೆಚ್ಚಿಸಿ, ಹೊಟ್ಟೆ-ಟ್ಟೆಗೆ ಸರಿದೂಗುವಂತೆ ಮಾಡುವುದು ಅಗತ್ಯ ಎಂದು ಆಶಿಸುತ್ತಾರೆ. ಅವರ ಮಕ್ಕಳ ಚಾರವೇನು? ಹಗಲಿನ ಹನ್ನೆರಡು ಗಂಟೆಗಳಲ್ಲಿ ವಿಶ್ವವಿದ್ಯಾಲಯದ ಅಭ್ಯಾಸಕ್ಕೆ ಅತ್ಯಲ್ಪ ಮಯವನ್ನು ಕೊಡಬಹುದಾದರೆ ಮಕ್ಕಳು ಹೇಗೆ ಎಲ್ಲಾ ವಿಷಯಗಳಲ್ಲಿ ಒಂದೇ ಬಾರಿಗೆ ತ್ತೀರ್ಣರಾದಾರು? ವಿಶ್ವವಿದ್ಯಾಲಯಕ್ಕೆ ಹಿಂದುಳಿದ ಕೋಮಿನವರ ಬಗ್ಗೆ ಎಚ್ಚರ ಇದ್ದರೆ, ಂಥ ಅಸಮರ್ಥನೀಯ ಮತ್ತು ಅಸಂಬದ್ಧ ಪದ್ಧತಿಯನ್ನು ಜಾರಿಗೊಳಿಸುತ್ತಿರಲಿಲ್ಲ" ಂದು ಸರ್ಕಾರವನ್ನು ಕುಟುಕಿದರು.

'ಪ್ರಾಥಮಿಕ ಹಂತದಿಂದ ಉನ್ನತ ಹಂತದವರೆಗೂ ಕೆಳವರ್ಗದವರಿಗೆ ಸಾಧ್ಯವಾದಷ್ಟು ಡಿಮೆ ಖರ್ಚಿನಲ್ಲಿ ಶಿಕ್ಷಣವು ಲಭ್ಯವಾಗುವಂತೆ ಮಾಡಬೇಕು. ಇದರಿಂದ ಸಮಾಜದಲ್ಲಿ ಲ್ಲರಿಗೂ ಶಿಕ್ಷಣ ನೀಡಲು ಸಾಧ್ಯ ಎಂಬ ಆಶಯ ಹೊಂದಿದ್ದ ಅಂಬೇಡ್ಕರ್ ಶಿಕ್ಷಣ ತ್ರದಲ್ಲಿ ಅಗತ್ಯ ಕಾನೂನು ಮಾಡುವ ಮೂಲಕ ಎಲ್ಲರಿಗೆ ಕಡ್ಡಾಯ, ಉಚಿತ ಮತ್ತು ತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಮಾರ್ಗದತ್ತ ದೇಶದ ಗಮನ ಸೆಳೆದರು.

ದುರಂತವೆಂದರೆ, 75 ವರ್ಷಗಳ ಹಿಂದೆ ಮಾಡಿದ ಚರ್ಚೆಯ ಫಲ ಇನ್ನೂ ಈ ಶದ ದಲಿತರ ಮಕ್ಕಳಿಗೆ ದೊರಕಿಲ್ಲ. ಮಕ್ಕಳನ್ನು 100% ದಾಖಲಾತಿ ಮಾಡಿಕೊಳ್ಳುವುದು ನ್ನೂ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ಕಾರ್ಯಾಂಗ ಮತ್ತು ಸಾರ್ವಜನಿಕರು ಚ್ಚು ಕ್ರಿಯಾಶೀಲರಾಗಬೇಕಿದೆ. ಸಮಾಜದಲ್ಲಿ ಎಲ್ಲ ವರ್ಗಗಳು ಸಮಾನತೆ ಸಾಧಿಸಲು ಮಾನ ಶಿಕ್ಷಣವನ್ನು ಕಡ್ಡಾಯವಾಗಿ ಒದಗಿಸಬೇಕಿದೆ. ಆಗಲೇ, ಬಾಬಾಸಾಹೇಬರ ನಸು ನನಸಾಗುವುದು.

ಗ್ರಂಥಋಣ

- ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು; ಸಂಪುಟ 4; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; 1995.
- ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು; ಸಂಪುಟ 14; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; 2001.
- ವಿಶ್ವ ಕಂಡ ಶ್ರೇಷ್ಠ ಆರ್ಥಿಕ ಚಿಂತಕ ಬಾಬಾಸಾಹೆಬ್ ಡಾ. ಬಿ.ಆರ್. ಅಂಬೇಡ್ಕರ್; ಎಚ್.ಎಸ್. ಬೇನಾಳ; ಸಹನ ಪ್ರಕಾಶನ ಕಲಬುರ್ಗಿ; 2016.
- ಅಂಬೇಡ್ಕರ್ ಥಾಟ್ಸ್; ಎನ್.ಆರ್. ಶಿವರಾಂ; ಅಶೋಕ್ ಪಬ್ಲಿಕೇಷನ್ಸ್, ಹಾಸನ; 2013.
- **Ambedkar on Social Justice and Indian Constitution; Deep and Deep Publications, New Delhi; 1994.**
- **Dr. Ambedkar Life and Mission, Dhananjay Keer; Popular Prakashan, Bombay, 1991.**

ವಿದ್ಯಾರ್ಥಿಗಳಾಗಿ ಗಾಂಧಿ ಹಾಗೂ ಅಂಬೇಡ್ಕರ್

ಡಾ. ಅಶ್ವತ್ಥಮ್ಮ ಕೆ.

ಗಾಂಧೀಜಿ ವೈಷ್ಣವ ಪಂಥದ ಉನ್ನತ ಮನೆತನದಲ್ಲಿ ಜನ್ಮತಳೆದರೆ, ಅಂಬೇಡ್ಕರ್ ಮಹರ್ ಜಾತಿಯ ಅಸ್ಪೃಶ್ಯ ಜನಾಂಗದಲ್ಲಿ ಜನಿಸುತ್ತಾರೆ. ಹೀಗೆ ಜನಿಸಿದ ಇಬ್ಬರೂ ನಾಯಕರೂ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಒಂದಾದರು. ಇಬ್ಬರ ದಾರಿಯೂ, ಗುರಿಯೂ ಒಂದೇ ಆಗಿತ್ತು. ವೈಷ್ಣವ ಪಂಥದ ಮನೆತನದಲ್ಲಿ ಹುಟ್ಟಿ ಅಸ್ಪಶ್ಯತೆಯನ್ನು ಹೋಗಲಾಡಿಸುತ್ತೇನೆಂಬ ಹೋರಾಟದ ಹಾದಿ ಹಾಗೂ ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿ, ತಾನು ಕಂಡುಂಡ ನೋವು ಇತರರಿಗೂ ಆಗಬಾರದೆಂಬ ಛಲ ತೊಟ್ಟ ನಾಯಕನ ಹೋರಾಟದ ಹಾದಿ ಭಾರತದ ಇತಿಹಾಸದಲ್ಲಿ ಕಂಡು ಬರುತ್ತದೆ.

ಮನೆಯ ವಾತಾವರಣ

ಇಬ್ಬರೂ ನಾಯಕರಾಗಿ ಬೆಳೆಯಲು ಮನೆಯ ವಾತಾವರಣ ಕಾರಣವಾಯಿತು. ಗಾಂಧಿಯ ಶಿಕ್ಷಣಕ್ಕೆ ಅಣ್ಣ ಪೋಷಕನಾಗಿ ನಿಂತರೆ, ಅಂಬೇಡ್ಕರ್ ಅವರಿಗೆ ತಂದೆಯ ಆಶ್ರಯ ನೆರಳಾಗುತ್ತದೆ.

ಶಿಕ್ಷಕರು

ಗಾಂಧಿ ಪ್ರೌಢಶಾಲೆಯಲ್ಲಿ ಓದುವಾಗ, ಶಾಲಾ ಶಿಕ್ಷಕರು ಕಾಪಿ ಹೊಡೆಯುವಂತೆ ಪ್ರಚೋದಿಸಿದರು. ಸತ್ಯವೇ ರಕ್ತಗತವಾಗಿದ್ದ ಗಾಂಧಿ ಕಾಪಿ ಹೊಡೆಯಲಿಲ್ಲ. 'ಹಿರಿಯರ ದೋಷಗಳನ್ನು ಎಣಿಸುವ ಗುಣ ನನ್ನದಲ್ಲದ್ದರಿಂದ ನನಗೆ ಅವರ ಬಗ್ಗೆ ಇದ್ದ ಗೌರವ ಕಡಿಮೆ ಯಾಗಲಿಲ್ಲ' ಎಂದು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿಕೊಳ್ಳುತ್ತಾರೆ.

ಪ್ರೌಢಶಾಲೆಯಲ್ಲಿ ಓದುವಾಗ ಸಂಸ್ಕೃತವನ್ನು ಬಿಟ್ಟು ಪರ್ಷಿಯನ್ ಭಾಷೆಯ ತರಗತಿಗೆ ಹೋದಾಗ ಬ್ರಾಹ್ಮಣ ಶಿಕ್ಷಕರು ಗಾಂಧಿಗೆ ಕಿವಿಮಾತು ಹೇಳುವುದು. ಉನ್ನತ ಜಾತಿಯಲ್ಲಿ ಬೆಳೆದು ಸಂಸ್ಕೃತವನ್ನು ಓದುವ ಬದಲು ವಿಲಾಯತಿ ಭಾಷೆಯನ್ನು ಕಲಿಯುವ ಅವಶ್ಯಕತೆ ಏನು ಎನ್ನುವ ಮಾರ್ಮಿಕ ಮಾತನ್ನು ಅವರು ಕೇಳಬೇಕಾಗುತ್ತದೆ. ಆದರೆ ಅಂಬೇಡ್ಕರ್‌ರಿಗೆ ಈ ವಿಷಯದಲ್ಲಿ ಅದಲು ಬದಲಾಗುತ್ತದೆ. ಸಂಸ್ಕೃತ ಕಲಿಯುವ ಆಸಕ್ತಿಯಿದ್ದರೂ ಅಸ್ಪೃಶ್ಯ ಎನ್ನುವ ಕಾರಣದಿಂದ ಅವರಿಗೆ ಅದು ಸಾಧ್ಯವಾಗದೆ, ಅವರು ಪರ್ಷಿಯನ್ ಭಾಷೆಯನ್ನು ಕಲಿಯುವರು. ನಂತರದಲ್ಲಿ ಅಂಬೇಡ್ಕರ್ ಸಂಸ್ಕೃತವನ್ನು

ದಿದರು. ಇವರಿಬ್ಬರ ವಿದ್ಯಾರ್ಥಿ ಜೀವನದ ಹಾದಿಯಲ್ಲಿ ಭಾಷಾ ಕಲಿಕೆಯಲ್ಲೂ, ಜಾತೀಯತೆಯ ಸೋಂಕು ಹಾಗು ಸಾಮಾಜಿಕ ವ್ಯವಸ್ಥೆ ಹೇಗಿತ್ತು ಎಂಬುದನ್ನು ತಿಳಿಸುತ್ತದೆ.

ವಿದ್ಯಾರ್ಥಿ ಜೀವನದಲ್ಲಿ ಗಾಂಧೀಜಿಯವರಿಗೆ 'ಶ್ರವಣನ ಪಿತೃಭಕ್ತಿ', 'ಹರಿಶ್ಚಂದ್ರ ನಾಟಕ'ಗಳು ಮನಸ್ಸೆಳೆದರೆ, ಅಂಬೇಡ್ಕರ್‌ರಿಗೆ ಶಿಕ್ಷಕರಾದ ಕೆ.ಎ. ಕೇಲಸ್ಕರ್ ಅವರು ಕೊಟ್ಟ 'ಗೌತಮ ಬುದ್ಧನ ಚರಿತ್ರೆ' ಬದುಕು ಬದಲಾಯಿಸಿದ ಪುಸ್ತಕವಾಗುತ್ತದೆ. ಇಬ್ಬರು ನಾಯಕರದೂ ಬಾಲ್ಯ ವಿವಾಹ. ಇಬ್ಬರ ಪತ್ನಿಯರೂ ಶಿಕ್ಷಣ ಮುಂದುವರೆಸಲು ಪೂರ್ಣ ಸಹಕಾರ ನೀಡುತ್ತಾರೆ. ಇದೂ ಚರಿತ್ರಾರ್ಹ ಸಂಗತಿ. ಇದರಿಂದಾಗಿಯೇ, ಇಬ್ಬರೂ ತಮ್ಮದೇ ರೀತಿಯಲ್ಲಿ ಇತಿಹಾಸ ಸೃಷ್ಟಿಸುತ್ತಾರೆ. ಗಾಂಧೀಜಿ ಅವರು 'ಹೆಂಡತಿ ತನ್ನ ಸಹಚಾರಿಣಿಯೇ ಹೊರತು ಸೇವಕಳಲ್ಲ' ಎಂಬ ಮಾತನ್ನು ಒತ್ತಿ ಹೇಳುತ್ತಾರೆ.

ಚಿಕ್ಕಂದಿನಲ್ಲಿಯೇ ಗಾಂಧೀಜಿ ತಂದೆಯನ್ನು ಕಳೆದುಕೊಂಡರೆ, ಅಂಬೇಡ್ಕರ್ ಅವರಿಗೆ ತಾಯಿಯ ವಿಯೋಗವಾಗುತ್ತದೆ. ಇದು ಇವರಿಬ್ಬರ ಬದುಕಿನಲ್ಲಿ ಬಹುದೊಡ್ಡ ಆಘಾತವಾಗುತ್ತದೆ. ತಂದೆಯ ಹಣ ಕಳ್ಳತನ ಮಾಡಿದ ತಪ್ಪಿನ ಅರಿವಾಗಿ, ಆ ವಿಷಯವನ್ನು ತಂದೆಗೆ ತಿಳಿಸಿ, ಅಂದಿನಿಂದ ತಂದೆಯ ಮೇಲೆ ಪ್ರೇಮ ಹೆಚ್ಚಾದ ಅನುಭವ ಗಾಂಧೀಜಿ ಅವರದು. ವಿದ್ಯಾಭ್ಯಾಸ ಮುಂದುವರೆಸಲು ಚಿಕ್ಕಮ್ಮನ ಹಣ ತೆಗೆದುಕೊಂಡು ಮುಂಬೈಗೆ ಹೋಗಿ, ನಂತರ ಆ ಕುರಿತು ತೀವ್ರ ವಿಷಾದ ವ್ಯಕ್ತಪಡಿಸಿದ ಸಂದರ್ಭ ಅಂಬೇಡ್ಕರ್ ಜೀವನದ್ದು.

ಶಿಕ್ಷಣಕ್ಕಾಗಿ ಗಾಂಧಿ ಅವರು ಮುಂಬೈಗೆ ಬಂದು, ಅಲ್ಲಿಂದ ಲಂಡನ್ನಿಗೆ ಪ್ರಯಾಣಿಸಿದರೆ, ಅಂಬೇಡ್ಕರ್ ಅವರು ಮುಂಬೈನಲ್ಲಿಯೇ ಓದಿ, ಮಹಾರಾಜರ ನೆರವಿನಿಂದ ನ್ಯೂಯಾರ್ಕ್‌ಗೆ ಪ್ರಯಾಣ ಬೆಳೆಸಿದರು.

ಗಾಂಧಿ ಅವರ ಹಾಗೆಯೇ ಅಂಬೇಡ್ಕರ್ ಕೂಡ ವಿದ್ಯಾರ್ಥಿ ಜೀವನದಲ್ಲಿ ಹಣ ಖರ್ಚು ಮಾಡುವ ಬಗ್ಗೆ ಅತಿ ಶಿಸ್ತನ್ನು ಪಾಲಿಸಿದವರು. ಗಾಂಧೀ ಮತ್ತು ಅಂಬೇಡ್ಕರ್ ಇಬ್ಬರೂ ಅತಿ ಶಿಸ್ತಿನ, ಕಠಿಣ ಪರಿಶ್ರಮದ, ಅಪಾರ ಜ್ಞಾನದ ಹಸಿವನ್ನು ಹೊಂದಿದ್ದವರಾಗಿರು.

ಹೀಗೆ ಇಬ್ಬರೂ ನಾಯಕರ ವಿದ್ಯಾರ್ಥಿ ಜೀವನದ ಸಾಮ್ಯತೆ ಮತ್ತು ವೈರುಧ್ಯಗಳು ಭವಿಷ್ಯದಲ್ಲಿ ಭಾರತದ ಅಷ್ಟೇ ಏಕೆ ವಿಶ್ವದ ಮಹಾನ್ ವ್ಯಕ್ತಿಗಳನ್ನಾಗಿ ರೂಪಿಸಿರುವುದನ್ನು ಕಾಣುತ್ತೇವೆ.

ಆಧಾರ ಗ್ರಂಥಗಳು

- ನನ್ನ ಸತ್ಯಾನ್ವೇಷಣೆ–ಭಾಷಾಂತರ–ಗೊರೂರು–1995.
- **Photography of Bharat Ratna Babasaheb Dr. B.R. Ambedikar, Dr. S. Chinnaswamy 2016-17.**

ಗಾಂಧೀ ಮತ್ತು ಅಂಬೇಡ್ಕರ್ ಅವರ ಶಿಕ್ಷಣದ ಮೂಲಭೂತ ತತ್ವಗಳು :

ರಾಜಣ್ಣ ಕೆ.
ಆನಂದ ಕುಮಾರ್

ಶಿಕ್ಷಣ ಎಂಬ ಪದಕ್ಕೆ ವ್ಯಾಪಕವಾದ ಅರ್ಥವಿದೆ. ಅನೇಕ ತತ್ವಜ್ಞಾನಿಗಳು, ಶಿಕ್ಷಣತಜ್ಞರು, ವಿದ್ವಾಂಸರು ತಮ್ಮ ತಮ್ಮ ದೃಷ್ಟಿಯಲ್ಲಿ ಶಿಕ್ಷಣವನ್ನು ವ್ಯಾಖ್ಯಾನಿಸಿದ್ದಾರೆ. 'ಶಿಕ್ಷಣವು ನಮ್ಮೆಲ್ಲ ಬಂಧನಗಳನ್ನು ಕಿತ್ತೂಗೆದು, ಪರಮ ಶಾಂತಿ, ಸುಖ, ಸೌಹಾರ್ದಗಳನ್ನು ನೀಡುವ ಸಾಧನ; ಶಿಕ್ಷಣವು ನೀಡುವ ಸಂಪತ್ತೆಂದರೆ ಆಂತರಿಕ ಬೆಳಕು; ಅದಮ್ಯ ಚೇತನ ಎಂದು ರವೀಂದ್ರನಾಥ್ ಠಾಗೋರ್ ಹೇಳಿದ್ದಾರೆ.

ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣ ಸಹಾಯಕ ವಾಗುತ್ತದೆ. ಡಾ.ರಾಧಾಕೃಷ್ಣನ್ ಹೇಳಿರುವಂತೆ 'ಮಗುವು ಮಾನವನಾಗಿ, ನಾಗರಿಕ ನಾಗಿ ಎಲ್ಲರೊಡನೆ ಸ್ನೇಹ, ಘನತೆ ಮತ್ತು ಗೌರವದಿಂದ ವರ್ತಿಸುವಂತೆ ಮಾಡುವುದೆ ಶಿಕ್ಷಣ'. ಗಾಂಧೀಜಿ ಹೇಳಿರುವಂತೆ 'ಮಗುವಿನಲ್ಲಿರುವ ಮಾನಸಿಕ, ಶಾರೀರಿಕ ಹಾಗೂ ಆಧ್ಯಾತ್ಮಿಕ ಸುಪ್ತ ಚೇತನಗಳನ್ನು ಹೊರತರುವುದೇ ಶಿಕ್ಷಣ'.

ನಮ್ಮ ಪರತಂತ್ರಕ್ಕೆ, ಅಜ್ಞಾನಕ್ಕೆ, ದಾಸ್ಯಕ್ಕೆ ಶಿಕ್ಷಣದ ಕೊರತೆಯೇ ಕಾರಣ, ಮೂಢನಂಬಿಕೆಗಳು ಮನುಷ್ಯನ ವಿಚಾರ ಶಕ್ತಿಯನ್ನು ಹಾಳುಮಾಡಿ, ಅಜ್ಞಾನದ ಅಂಧಕಾರಕ್ಕೆ ನೂಕುತ್ತವೆ. ಮೂಢನಂಬಿಕೆಗಳ ವಿರುದ್ಧ ಅರಿವಿನ ಪ್ರಜ್ಞೆ ಮೂಡಿಸಿ ಹೋರಾಡಲು ಶಿಕ್ಷಣ ಮುಖ್ಯ. ಇದನ್ನು ಮನಗಂಡ ಕನ್ನಡದ ದಾರ್ಶನಿಕರು ಮೂಢನಂಬಿಕೆಗಳ ವಿರುದ್ಧ ಚಳುವಳಿಯನ್ನೇ ಪ್ರಾರಂಭಿಸಿದರು. 12 ನೇ ಶತಮಾನದ ಶಿವಶರಣರು ಆಡುನುಡಿಯನ್ನು ಬಳಸಿಕೊಂಡು, ವಚನಗಳನ್ನು ರಚಿಸಿ, ಕುರಿತೋದದೆ ಜನರನ್ನು ಸುಸಂಸ್ಕೃತರನ್ನಾಗಿ ಮಾಡಿದರು.

15ನೇ ಶತಮಾನದ ಪುರಂದರದಾಸರು, ಕನಕದಾಸರು ಮುಂತಾದ ದಾಸ ಪಂಥದವರು ದಂಡಿಗೆಯನ್ನು ಹಿಡಿದು, ಮನೆಮನೆಯ ಮುಂದೆ ನಿಂತು, ನೀತಿಭರಿತ ಹಾಡುಗಳನ್ನು ಹಾಡಿ, ಬಹುಪಾಲು ಅಜ್ಞಾನವನ್ನು ನಿವಾರಿಸಿ, ಅರಿವನ್ನು ಮೂಡಿಸಿದರು. ಆ ಕಾಲದಲ್ಲಿ ಪಾಠಶಾಲೆಗಳಿರಲಿಲ್ಲ, ಅಲ್ಲೊಂದು ಇಲ್ಲೊಂದು ಘಟಿಕಾಸ್ಥಾನಗಳಿರುತ್ತಿದ್ದವು.

ಬ್ರಾಹ್ಮಣರಲ್ಲದವರಿಗೆ ಈ ಘಟಿಕಾಸ್ಥಾನದ ಬಾಗಿಲುಗಳು ತೆರೆದುಕೊಳ್ಳುತ್ತಿರಲಿಲ್ಲ; ಶಿಕ್ಷಣದ ಕೊರತೆಯಿಂದಾಗಿ ನಮ್ಮ ಪ್ರಾಚೀನ ಭಾರತೀಯರು ಪದೇಪದೇ ಪಾರತಂತ್ರ್ಯದ ಶೃಂಖಲೆಗೆ ಒಳಗಾಗುತ್ತಿದ್ದರು.

ಶತಶತಮಾನಗಳಿಂದಲೂ ಭಾರತದಲ್ಲಿ ಬಹುಸಂಖ್ಯಾತರು ಶಿಕ್ಷಣವಂಚಿತರಾಗಿ ಉಳಿದಿದ್ದರು. ಭಾರತಕ್ಕೆ ಬಂದ ಬ್ರಿಟಿಷರು ಭಾರತದಲ್ಲಿ ಏಕರೂಪ ಶಿಕ್ಷಣ ಪದ್ಧತಿ ಪ್ರಾರಂಭಿಸಿದರು. ಜಾತಿಪದ್ಧತಿಯಿಂದಾಗಿ ಶಿಕ್ಷಣದಿಂದ ವಂಚಿತರಾಗಿದ್ದ ದಲಿತರು, ಶೂದ್ರರು ಅಕ್ಷರಗಳ ಲೋಕವನ್ನು ಪ್ರವೇಶಿಸಿದರು. ಕತ್ತಲೆಯಲ್ಲಿದ್ದವರಿಗೆ ಹೊಸ ಬೆಳಕು, ಭರವಸೆ ಕಂಡಿತು.

"ಶಿಕ್ಷಣವು ಅರಿವಿಂಗೆ ಅಡಿಗಲ್ಲು
ತಿಳಿವಿಂಗೆ ತಳಹದಿಯು
ಬಾಳಿಗೆ ಒಡನಾಡಿ" ಆಯಿತು.

ಮಹಾತ್ಮ ಗಾಂಧೀಜಿ ಅವರು ನಮ್ಮ ಸಮಾಜದಲ್ಲಿ ದಾರಿದ್ರ್ಯ ಮತ್ತು ಮೌಢ್ಯ ಮುಂತಾದ ಸಮಸ್ಯೆಗಳಿಗೆ ಶಿಕ್ಷಣವಿಲ್ಲದಿರುವುದೇ ಕಾರಣ ಎಂದಿದ್ದಾರೆ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವುದು ಭಾರತೀಯರೆಲ್ಲರ ಆದ್ಯ ಕರ್ತವ್ಯ, ಜೊತೆಗೆ ಮಹಿಳೆಯು ಶಿಕ್ಷಿತಳಾಗಬೇಕು ಹಾಗೂ ವಯಸ್ಕರ ಶಿಕ್ಷಣದ ಮೂಲಕ ಕಾರ್ಮಿಕರು ಮತ್ತಿತರರನ್ನು ಅಕ್ಷರಸ್ಥರನ್ನಾಗಿ ಮಾಡಬೇಕು ಎಂಬುದು ಅವರ ಚಿಂತನೆಯಾಗಿತ್ತು. ಅವರು ಸ್ವಾತಂತ್ರ್ಯದ ಮಹತ್ವದ ಜೊತೆಗೆ, ವ್ಯಕ್ತಿ ಸ್ವಾತಂತ್ರ್ಯ ಹಾಗೂ ವಿಕಾಸಕ್ಕೆ ಶಿಕ್ಷಣವೇ ತಾಯಿಬೇರೆಂದು ತಮ್ಮ ಭಾಷಣಗಳಲ್ಲಿ ಹೇಳಿ, ಭಾರತೀಯರನ್ನು ಜಾಗೃತಗೊಳಿಸಿದರು.

ಡಾ. ಬಿ.ಆರ್.ಅಂಬೇಡ್ಕರರು ಶಿಕ್ಷಣದ ಬಗ್ಗೆ ಹೇಳುತ್ತಾ 'ಅಂಧಕಾರ ದಲ್ಲಿರುವವರೂ ಭವಿಷ್ಯದ ಬೆಳಕನ್ನು ಅನುಭವಿಸಬೇಕು' ಎಂದು ಕರೆ ನೀಡಿದರು. ಕುಲ-ಜಾತಿ-ಮತ ಆದಾರಿತ ತಾರತಮ್ಯದ ನಿರ್ಮೂಲನೆಗೆ ಶಿಕ್ಷಣವೇ ಸಾಧನವೆಂದು ಮನಗಂಡು, ಅವರು ಅಕ್ಷರವಂಚಿತ ದಲಿತರು ಶಿಕ್ಷಣ ಪಡೆಯಬೇಕೆಂದು ಆಶಿಸಿದರು. ಸಂವಿಧಾನದಲ್ಲಿ ಶಿಕ್ಷಣವನ್ನು ಕಡ್ಡಾಯಗೊಳಿಸಿದರು.

"ಕತ್ತಲೆಯನ್ನು ಅರಿಯದವರು
ಬೆಳಕಿಗಾಗಿ ಹುಡುಕಾಟ ನಡೆಸುವುದಿಲ್ಲ"

ಎಂದು ಹೇಳಿದ ಅಂಬೇಡ್ಕರ್, 'ಶಿಕ್ಷಣವು ಜ್ಞಾನವನ್ನು ವೃದ್ಧಿಸುತ್ತದೆ; ಜ್ಞಾನದಿಂದ ಸಾಮಾಜಿಕ ಕೀಳರಿಮೆ ನಾಶಗೊಳ್ಳುತ್ತದೆ; ಅಲ್ಲದೆ ಶಿಕ್ಷಣವು ವಿಶಾಲ ಮನೋಭಾವನೆ ಯನ್ನು, ಮಾನವೀಯತೆಯನ್ನು ಬೆಳೆಸುತ್ತದೆ. ಸಮಾನತೆಯ ಹೊಸ ಸಮಾಜವನ್ನು ನಿರ್ಮಿಸಲು ಪ್ರೋತ್ಸಾಹಿಸುತ್ತದೆ' ಎಂದೂ ತಿಳಿಸಿದರು.

ಮನುಷ್ಯರ ಸರ್ವಾಂಗೀಣ ಪ್ರಗತಿಗೆ ಶಿಕ್ಷಣ ಅನಿವಾರ್ಯವೆಂದು ಪ್ರತಿಪಾದಿಸಿದ

ಬಾಬಾಸಾಹೇಬರು ಶತಮಾನಗಳಿಂದ ವಿದ್ಯೆಯಿಂದ ವಂಚಿತರಾಗಿದ್ದ ಜನರ ಶಿಕ್ಷಣದ ಕಡೆಗೆ ವಿಶೇಷವಾಗಿ ಗಮನ ನೀಡಿದರು. 'ಶಿಕ್ಷಣವಿಲ್ಲದ ಮನುಷ್ಯ ಪ್ರಾಣಿಗೆ ಸಮ' ಎಂದು ಅವರು ಮನವರಿಕೆ ಮಾಡಿಕೊಟ್ಟರು. ದಲಿತರ ಏಳಿಗೆಗಾಗಿ 1924ರಲ್ಲಿ 'ಬಹಿಷ್ಕೃತ ಹಿತಾಕರಣಿ ಸಭಾ' ಸ್ಥಾಪಿಸುವ ಮೂಲಕ 'ಶಿಕ್ಷಣ, ಸಂಘಟನೆ, ಹೋರಾಟ' ಎಂಬ ತ್ರಿವಳಿ ಸೂತ್ರಗಳನ್ನು ಬೋಧಿಸಿದರು.

"ಯಾವ ದೇಶದಲ್ಲಿ ಶಾಲೆಗಳಲ್ಲಿ ಕೇಳಿ ಬರುವುದಕ್ಕಿಂತ ಹೆಚ್ಚು ದೇವಾಲಯಗಳಲ್ಲಿ ಗಂಟೆಗಳು ಬಾರಿಸುತ್ತವೋ, ಆ ದೇಶ ಆರ್ಥಿಕವಾಗಿ ಹಿಂದುಳಿದು, ಮೌಢ್ಯ-ಕಂದಾಚಾರಗಳಿಂದ ಕೂಡಿರುತ್ತದೆ" ಎಂದು ಅಂಬೇಡ್ಕರ್ ಮಾರ್ಮಿಕವಾಗಿ ನುಡಿದಿದ್ದಾರೆ. ಮಹಿಳೆಯರಿಗೂ ಶಿಕ್ಷಣದ ಅಗತ್ಯ ಕುರಿತು ಒತ್ತಿ ಹೇಳಿದ ಅವರು, ಆಕೆ ಶಿಕ್ಷಿತಳಾದರೆ ಸಂಸಾರ ಮತ್ತು ಸಮಾಜವನ್ನು ಮೌಢ್ಯದಿಂದ ಬಿಡುಗಡೆಗೊಳಿಸುತ್ತಾಳೆ' ಎಂದು ಕಿವಿಮಾತು ಹೇಳಿದರು.

ಗ್ರಂಥಋಣ

- Thoughts on Education - Bangalore University 1974
- ಆಧುನಿಕ ಭಾರತದ ಶಿಕ್ಷಣದಲ್ಲಿ ಒಲವುಗಳು ಮತ್ತು ಸಮಸ್ಯೆಗಳು
  ಕೆ.ಶಿವಮೂರ್ತಿ, ಪ್ರೀತಿ ಪ್ರಕಾಶನ, 1976
- ಬಾಪು ಚಿಂತನೆ ಬಿ.ಎ.ಶ್ರೀಧರ, ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್ 2008
- ಅಂಬೇಡ್ಕರ್ : ಜಿ.ಎಂ.ಕೃಷ್ಣಮೂರ್ತಿ ಕಾಮಧೇನು, ಬೆಂಗಳೂರು 2004
- ಮಾನವ ಉದ್ಧಾರಕ ಸೋಸಲೆ ಗಂಗಾಧರ,
  ಅಂಬೇಡ್ಕರ್ ಯುವಸೇನೆ, ಬೆಂಗಳೂರು–2006
- ಹೊಸ ಸಮಾಜ ಮತ್ತು ಅಂಬೇಡ್ಕರ್ – ಎಸ್.ನರೇಂದ್ರ ಕುಮಾರ್
  ಈಶ್ವರಿ ಪ್ರಕಾಶನ, ಮೈಸೂರು 2002

ಗಾಂಧಿ ಮತ್ತು ಅಂಬೇಡ್ಕರ್ ಸಹಪಯಣ

ರಾಜಣ್ಣ ಕೆ.
ಡಾ. ಸಿ. ಎಂ. ರಾಜಣ್ಣ

ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ವ್ಯಕ್ತಿತ್ವಗಳು ಹೇಗೆ ಭಿನ್ನ ಭಿನ್ನವಾಗಿ ಕಾಣುತ್ತವೆಯೋ ಹಾಗೆಯೇ ಇವರಿಬ್ಬರ ಪಯಣವೂ ಕೂಡ ಭಿನ್ನವಾಗಿದೆ. ಇವರಿಬ್ಬರ ಉಡುಪುಗಳಲ್ಲೂ ಭಿನ್ನತೆಯನ್ನು ಕಾಣಬಹುದು. ಅಂಬೇಡ್ಕರ್ ಸೂಟು-ಬೂಟು ಧರಿಸಿದ್ದಾರೆ. ಗಾಂಧೀಜಿ ಫಕೀರರಾಗಿದ್ದಾರೆ. ಅಂಬೇಡ್ಕರ್‌ರವರು ಆಳುವ ವರ್ಗದ ನಾಯಕರಂತೆ ಹಾಗೂ ವಿದೇಶಿಯರಂತೆ ಕಂಡರೆ ಗಾಂಧೀಜಿ ಬಡ ರೈತನಂತೆ ಹಾಗೂ ಅಪ್ಪಟ ದೇಶಿಯ ಮನುಷ್ಯನಂತೆ ಕಾಣುತ್ತಿದ್ದಾರೆ. ಇವರಿಬ್ಬರ ಪಯಣ ಮೇಲ್ನೋಟಕ್ಕೆ ಒಂದೇ ದಿಕ್ಕಿನಲ್ಲಿ ಸಾಗುತ್ತಿರುವುದೆಂದು ಕಂಡರೂ, ಒಳಹೊಕ್ಕು ನೋಡಿದಾಗ ಇಬ್ಬರೂ ಭಿನ್ನ ದಿಕ್ಕುಗಳಲ್ಲಿ ಪಯಣ ನಡೆಸಿದ್ದಾರೆ ಎಂದು ತಿಳಿದು ಬರುತ್ತದೆ.

ಅಂಬೇಡ್ಕರರು ಅತಿ ಬಡಕುಟುಂಬದಿಂದ ಬಂದವರು ಹಾಗೂ ಅಸ್ಪೃಶ್ಯ ಜಾತಿಯಲ್ಲಿ ಜನಿಸಿದವರು. ಅಪಾರ ನೋವು, ಸಂಕಟ, ದು:ಖ-ದುಮ್ಮಾನಗಳನ್ನು, ಕಷ್ಟ-ಕಾರ್ಪಣ್ಯಗಳನ್ನು, ಅಪಮಾನಗಳನ್ನು ಸಹಿಸಿ, ಹಿಂಸೆಯಲ್ಲಿ ನಲುಗಿ ಬಂದವರು.

ಗಾಂಧೀಜಿ ಅವರು ಬಡತನ, ಅವಮಾನ, ನೋವು, ಸಂಕಟ ಇತ್ಯಾದಿ ಯಾವುದನ್ನೂ ಅನುಭವಿಸದೇ ಬೆಳದವರು. ಅವರು ಮೇಲ್ಜಾತಿ ಎನಿಸಿದ ವೈಶ್ಯ ಕುಟುಂಬದಲ್ಲಿ ಜನಿಸಿದವರು.

ಅಂಬೇಡ್ಕರ್‌ರವರು ಅಮೆರಿಕಾ ಮತ್ತು ಲಂಡನ್‌ನಲ್ಲಿ ವಿದ್ಯಾಭ್ಯಾಸ ಮಾಡಿದವರು. ಗಾಂಧೀಜಿ ಇಂಗ್ಲೆಂಡಿನಲ್ಲಿ ಓದಿದವರು. ಈ ಇಬ್ಬರೂ ರಾಷ್ಟ್ರೀಯ ಚಳುವಳಿಯ ನೇತಾರರು. ಆದರೆ, ಇವರಿಬ್ಬರ ಪಯಣ ಒಂದೇ ದಿಕ್ಕಿನಲ್ಲಿ ನಡೆಯಲಿಲ್ಲ. ಇವರಿಬ್ಬರ ಚಿಂತನೆಗಳು, ಆದರ್ಶಗಳು ಒಂದೇ ದಿಕ್ಕಿನಲ್ಲಿ ಸಾಗಲಿಲ್ಲ.

ಹುಟ್ಟಿನಿಂದ ಹೊಟ್ಟೆ ಬಟ್ಟೆಗೆ ಕೊರತೆಯಿಲ್ಲದೆ ಬಂದಂತಹ ಸಾಮಾನ್ಯ ಭಾರತೀಯನ ಉಡುಪು ತೊಡುವುದು ಗಾಂಧೀಜಿ ಅನಿವಾರ್ಯವಾಗಿತ್ತು. ಇತ್ತ ಅಂಬೇಡ್ಕರ್ ಹೊಟ್ಟೆ-ಬಟ್ಟೆಗಿಲ್ಲದ ಜನಾಂಗದಲ್ಲಿ ಜನಿಸಿದ ಇವರಿಗೆ ಮೈ ತುಂಬಾ ಬಟ್ಟೆ ತೊಡುವುದು

ಅನಿವಾರ್ಯವಾಗಿತ್ತು. ಹೀಗಾಗಿ, ಇವೆರಡೂ ಪರಸ್ಪರ ಪ್ರತಿರೋಧದ ಚಿತ್ರಗಳು. ಅಲ್ಲದೆ, ಇವೆರಡೂ ಚಿತ್ರಗಳು ದೇಸೀ ಸಂಸ್ಕೃತಿಯ ಪ್ರತೀಕಗಳೂ ಹೌದು.

ಎಲ್ಲರೂ ಸಮಾನರು ಎಂದು ಸಮಾಜದಲ್ಲಿ ಪರಿಗಣನೆಯಾಗಬೇಕು ಎಂಬುದು ಅಂಬೇಡ್ಕರ್‌ರ ಹೆಬ್ಬಯಕೆಯಾಗಿತ್ತು. ಆದರೆ, ಗಾಂಧೀಜಿ ದಲಿತರನ್ನು 'ಹರಿಜನರು' ಎಂದು ಕರೆದರು. ಅಂಬೇಡ್ಕರ್, ಎಲ್ಲರನ್ನೂ ಸಮಾನರು 'ಸರ್ವರನ್ನೂ ಸಮಾನವಾಗಿ ಕಾಣಬೇಕು. ದಲಿತರೆನ್ನುವ ಕಾರಣಕ್ಕೆ ಪ್ರತ್ಯೇಕವಾಗಿ ಇಡಬಾರದು. ಅವಕಾಶಗಳಿಂದ ವಂಚಿತರಾದವರಿಗೆ ಅವಕಾಶಗಳನ್ನು ವಿಶೇಷವಾಗಿ ಕಲ್ಪಿಸಿಕೊಡ ಬೇಕು. ಶಿಕ್ಷಣ ಎಲ್ಲರಲ್ಲೂ ಪ್ರಸಾರವಾಗಬೇಕು. ಎಂದರು.

ಕೇವಲ ಉಡುಪು ಮೂಲಕ ಅಷ್ಟೇ ಅಲ್ಲ, ವಿಚಾರದ ಮೂಲಕವೂ ಇಬ್ಬರೂ ಪರಸ್ಪರರಿಂದ ಪ್ರಭಾವಿತರಾದರು; ಹಾಗೆಯೆ ಪರಸ್ಪರರಿಂದ ಪ್ರಜ್ಞಾಪೂರ್ವಕವಾಗಿ ಭಿನ್ನವಾಗಿ ನಿಂತರು. ಗಾಂಧೀಜಿ ಅಪ್ಪಟ ಧಾರ್ಮಿಕ ಮನುಷ್ಯನಂತೆ ಸಂವಾದ ಆರಂಭಿಸಿದರೆ, ಅಂಬೇಡ್ಕರ್ ಅಪ್ಪಟ ಆಧುನಿಕ ಮನುಷ್ಯನಂತೆ ಸಂವಾದ ಆರಂಭಿಸಿದರು. ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವ ಮೊದಲು ತಮಗೆ ಸಮಾನತೆ ಬೇಕು ಎಂದು ಅಂಬೇಡ್ಕರ್ ಆಗ್ರಹಪಡಿಸಿದರು. ಇದು ದಕ್ಕದೇ ಹೋದಾಗ, ದಲಿತರು ತಮ್ಮ ಹಿತವನ್ನು ಕಾಪಾಡಿಕೊಳ್ಳಲು ಅನುಕೂಲವಾಗುವಂತೆ ಪ್ರತ್ಯೇಕ ಮತಕ್ಷೇತ್ರವನ್ನು ಕೇಳಿದರು.

ಇದ್ಯಾವುದಕ್ಕೂ ಗಾಂಧೀಜಿಯು ಮನಸ್ಸು ಮಾಡಲಿಲ್ಲ. ಅವರು ಅಂಬೇಡ್ಕರ್ ಅವರನ್ನು ಅರ್ಥ ಮಾಡಿಕೊಳ್ಳಲು ವಿಫಲರಾದರು ಎನ್ನುವುದಕ್ಕಿಂತ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲೇ ಇಲ್ಲ ಎನಿಸುತ್ತದೆ. ವಿಪರ್ಯಾಸವಾಗಿ ಕಾಣುವು ದೆಂದರೆ, ಯಾರನ್ನು ಮತ್ತು ಯಾರ ಹಿತವನ್ನು ನಿರ್ಲಕ್ಷಿಸಿ, ಯಾರಿಗೆ ವಿಶೇಷ ಅವಕಾಶಗಳನ್ನು ಕೊಡಿಸಲು ಗಾಂಧೀಜಿ ಮುಂದಾದರೊ, ಆ ಕಾರಣಕ್ಕಾಗಿಯೇ ಅವರು ಅನ್ಯಾಯವಾಗಿ ಕೊಲೆಯಾದರು.

ಇತ್ತಕಡೆ ಅಪ್ಪಟ ಆಧುನಿಕ ಮನುಷ್ಯನಂತೆ ಹೊರಟ ಅಂಬೇಡ್ಕರ್, ಧಾರ್ಮಿಕತೆಯ ಪುನರ್‌ವ್ಯಾಖ್ಯಾನ ಮಾಡಿದರು. ಅನ್ಯಾಯಕ್ಕೆ ಕಾರಣವಾದ ಧರ್ಮ ತ್ಯಜಿಸಿ, ಬೌದ್ಧ ಧರ್ಮ ಸ್ವೀಕರಿಸಿದರು.

ಗಾಂಧೀಜಿ ಬಹುಸಂಖ್ಯಾತ ಭಾರತೀಯರನ್ನು ಕೇವಲ 150 ವರ್ಷಗಳಿಂದ ಮುತ್ತಿಕೊಂಡಿದ್ದ ಪಾರತಂತ್ರ್ಯ ಎಂಬ ಕಾರ್ಮೋಡವನ್ನು ದೂರ ಮಾಡಲು ತಮ್ಮ ಗಮನವನ್ನು ಕೇಂದ್ರೀಕರಿಸಿದರೆ, ಅಂಬೇಡ್ಕರರು 5000 ವರ್ಷಗಳಿಂದ ಭಾರತದ ದಲಿತ, ಹಿಂದುಳಿದ ಮತ್ತು ಎಲ್ಲಾ ಜಾತಿಗಳ ಮಹಿಳೆಯರನ್ನು ಮುತ್ತಿಕೊಂಡಿದ್ದ ತಾರತಮ್ಯ ಎಂಬ ಕಾರ್ಮೋಡವನ್ನು ದೂರ ಮಾಡಲು ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಗಾಂಧೀಜಿ 'ಸತ್ಯಾಗ್ರಹ' ಎಂಬ ಮಂತ್ರ ಮುಂದಿಟ್ಟರೆ, ಅಂಬೇಡ್ಕರರು ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮೂರು ಮಂತ್ರಗಳನ್ನು ಮುಂದಿಟ್ಟರು.

ಆಧಾರಗಳು

- ಮರಳಿ ಮನೆಗೆ: ಪ್ರತಿರೋಧದ ಎರಡು ಚಿತ್ರಗಳು. – ಪ್ರಸನ್ನ. ದೇಸಿ ಜೀವನ ಪದ್ಧತಿ ಪುಟ–57 ಮತ್ತು ಪುಟ–134
- ಅಂಬೇಡ್ಕರ್ ವಿಚಾರ ಸಮಗ್ರ ಅಧ್ಯಯನ– ಡಾ. ಮ.ನ. ಜವರಯ್ಯ
- ಕ್ರಾಂತಿಕಾರಿ ಅಂಬೇಡ್ಕರ್, ಮಂಗಳೂರು ವಿಶ್ವವಿದ್ಯಾಲಯ.
- ಅಂಬೇಡ್ಕರ್ ವಿದ್ಯಾರ್ಥಿಜೀವನ – ಪಿ.ಎಚ್.ಡಿ. ಮಹಾಪ್ರಬಂಧ
- ಅಂಬೇಡ್ಕರ್ ಸಮಗ್ರ ಚಿಂತನೆ. ಸಂಪುಟ. 3. 7.
- ಗಾಂಧಿ ಮತ್ತು ಗಾಂಧೀವಾದ. ಸಂಪುಟ 1. 2.
- ಡಾ.ಬಿ.ಆರ್.ಅಂಬೇಡ್ಕರ್ ಅವರ ಕನ್ನಡ ಅನುವಾದಿತ ಕೃತಿಗಳು.

ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ನ್ಯಾಯದ ಚಿಂತನೆ

ಡಾ. ಜೆ. ರಾಜು ಗುಂಡಾಪುರ

ಕನ್ನಡ ಸಾಹಿತ್ಯದ ಒಂದು ವಿಶಿಷ್ಟವಾದ, ಬಹು ಅಮೂಲ್ಯವಾದ ಭಾಗವೆಂದರೆ ವಚನಸಾಹಿತ್ಯ. ನಮ್ಮ ನಾಡಿನಲ್ಲಿ ವಚನ ಸಾಹಿತ್ಯಕ್ಕೆ ಎಂಟು ನೂರು ವರ್ಷಗಳ ಇತಿಹಾಸವಿದೆ. ಆರಂಭದಲ್ಲಿ 'ಸೂಳ್ನುಡಿ' ಎಂದೂ, ಆಮೇಲೆ 'ವಚನ' ಎಂದೂ, ತರುವಾಯ ಕ್ವಚಿತ್ತಾಗಿ 'ವಚನಾಗಮ' ಎಂದೂ ಇದನ್ನು ಕರೆಯುತ್ತಾ ಬಂದಿದ್ದಾರೆ. ವಚನವೆನ್ನುವುದು ಕನ್ನಡ ಸಂದರ್ಭದಲ್ಲಿ ಕೇವಲ ಒಂದು ಸಾಹಿತ್ಯಕ ಪ್ರಕಾರವಲ್ಲ, ಒಂದು ಸಾಂಸ್ಕೃತಿಕ ಪರಂಪರೆ. ಸಂಸ್ಕೃತದ ಪ್ರಭಾವ ಕಡಿಮೆಯಾಗಿ, ಕನ್ನಡದ ಪ್ರಭಾವ ಹೆಚ್ಚಾಗಿದ್ದು ಈ ವಚನ ಸಾಹಿತ್ಯದಿಂದಲೇ; ಜೊತೆಗೆ ಪದ್ಯದ ಮೇಲಿನ ಆಸಕ್ತಿ ಕಡಿಮೆಯಾಗಿ, ಗದ್ಯಕ್ಕೆ ಮನ್ನಣೆ ದೊರೆತಿದ್ದು ಈ ವಚನ ಸಾಹಿತ್ಯದಿಂದಲೇ. ಪಂಡಿತ–ಪಾಮರರ ಸೊತ್ತಾಗಿದ್ದ ಸಂಸ್ಕೃತ ಭಂಡಾರವನ್ನು ಕಡೆಗಣಿಸಿ, ತಮ್ಮ ಅನುಭವದ ನೆಲೆಯಲ್ಲಿ ವಚನಗಳನ್ನು ರಚಿಸಿ, ಜನಸಾಮಾನ್ಯರ ಹೃದಯದಲ್ಲಿ ಅವುಗಳು ನೆಲೆಗೊಳ್ಳುವಂತೆ ಮಾಡಿದ ಶ್ರೇಯಸ್ಸು ವಚನಕಾರರಿಗೆ ಸಲ್ಲುತ್ತದೆ. 10ನೇ ಶತಮಾನದ ಪಂಪ, ರನ್ನ, ಜನ್ನ ಮುಂತಾದ ಕವಿಗಳು ಬಳಸಿದ ಭಾಷೆ ಜನಸಾಮಾನ್ಯರನ್ನು ಮುಟ್ಟಲಿಲ್ಲ. ಆದರೆ ವಚನಕಾರರ ಭಾಷೆ ಸಾಮಾನ್ಯರ ಹೃದಯ ಮುಟ್ಟಿತು.

ಕನ್ನಡ ನಾಡಿನಲ್ಲಿ ವಚನ ಸಾಹಿತ್ಯ ಜನಪ್ರಿಯಗೊಂಡು, ಗಟ್ಟಿಯಾದ ನೆಲೆಗಟ್ಟನ್ನು ಪಡೆದುಕೊಂಡದ್ದು ಬಸವಣ್ಣನವರಿಂದ; ವಚನ ಸಾಹಿತ್ಯದಲ್ಲಿ ಒಟ್ಟಾರೆ ಕಂಡುಬರುವ ಮುಖ್ಯ ಅಥವಾ ವಿಶೇಷ ಲಕ್ಷಣಗಳನ್ನೆಲ್ಲ ಒಂದೆಡೆ ಕಾಣಬೇಕೆಂದರೆ, ಅವೆಲ್ಲ ಸಮಗ್ರವಾಗಿ ಗೋಚರವಾಗುವುದು ಬಸವಣ್ಣನವರ ವಚನಗಳಲ್ಲಿಯೇ. "ಬಸವಣ್ಣನವರ ವಚನಗಳಲ್ಲಿ ಮಿಡಿಯುವ ಅವರ ವಾಣಿ, ಅಮೃತವಾಣಿ: ಅಧರಕ್ಕೂ ಸಿಹಿ, ಉದರಕ್ಕೂ ಸಿಹಿ; ರಸಪರಿಪಾಕವೆಂಬ ಅಮೃತ; ಶಾಶ್ವತ ಸಾಹಿತ್ಯವೆಂಬ ಅಮೃತ. ಹೀಗೆ, ವಚನ ಸಾಹಿತ್ಯದಲ್ಲಿ ಬಸವಣ್ಣನ ವಚನಗಳಿಗೆ ಮೊದಲ ಸ್ಥಾನ.

ವಿಶ್ವಕ್ಕೆ ಗುರುವಾದ ಬಸವಣ್ಣನವರ ವಿಚಾರಗಳು ಎಲ್ಲೆಡೆ ಮನ್ನಣೆ ಪಡೆದಿವೆ. "12ನೇ ಶತಮಾನದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಸಮಾನತೆಗಾಗಿ ಬಸವಣ್ಣನವರು

ಕಲ್ಯಾಣದಲ್ಲಿ ನಡೆಸಿದ ಕ್ರಾಂತಿ–ಕರ್ನಾಟಕದ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲು. ಸ್ವರ್ಗ–ನರಕಗಳನ್ನು ಅಲ್ಲಗೆಳೆದು, ಬಹುದೈವತ್ವ ಹಾಗೂ ಮೂರ್ತಿಪೂಜೆಯನ್ನು ತಿರಸ್ಕರಿಸಿ, ಆಚಾರಕ್ಕೆ ಪ್ರಾಧ್ಯಾನ್ಯತೆ ನೀಡಿ, ಕಾಯಕವೇ ಕೈಲಾಸವೆಂದು ಸಾರಿ, ಲಿಂಗಭೇದ, ವರ್ಗಭೇದ, ಜಾತಿಬೇಧಗಳನ್ನು ತಿರಸ್ಕರಿಸಿದ ಬಸವಣ್ಣ, ಧಾರ್ಮಿಕ–ಸಾಮಾಜಿಕ–ಆರ್ಥಿಕ ಸಮಾನತೆಯ ಮೇಲೆ ಹೊಸ ಸಮಾಜ ವನ್ನು ಕಟ್ಟಬಯಸಿದರು.

ಸಮಾಜ ಹಿತಕ್ಕೆ ಸೂಕ್ತವಾದ ವಿಚಾರ–ಆಚಾರವನ್ನು ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ಅಳವಡಿಸುವ ಮಹಾನ್ ಪ್ರಯತ್ನವನ್ನು ಶರಣರು –ವಿಶೇಷವಾಗಿ ಬಸವಣ್ಣನವರು– ಮಾಡಿದರು. ಒಂದು ಪ್ರದೇಶದ ಅಥವಾ ರಾಜ್ಯದ ರಾಜಕೀಯ ವ್ಯವಸ್ಥೆಯಲ್ಲಿ ಉನ್ನತ ಸ್ಥಾನದಲ್ಲಿದ್ದ ಬಸವಣ್ಣ, ತಮಗೆ ಲಭ್ಯವಿದ್ದ ಪ್ರತಿಷ್ಠೆ, ಹೇರಳ ಧನ ಹಾಗೂ ಅಧಿಕಾರಗಳನ್ನು ಕೂಡ ತಮಗೆ ಶ್ರೇಷ್ಠವೆನಿಸಿದ ತತ್ವಗಳನ್ನು ಆಚರಣೆಯಲ್ಲಿ ತರಲು ಬಳಸಿದರು; ಅದರಿಂದ ಆ ಕಾಲದ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ವ್ಯವಸ್ಥೆಗಳಲ್ಲಿ ಮಹತ್ತರವಾದ ಬದಲಾವಣೆಗಳು ಬಂದವು. ದೂರದಿಂದ ಸಹಸ್ರಾರು ಜನ ಅನುಯಾಯಿಗಳು ಆ ಪ್ರದೇಶಕ್ಕೆ ಬಂದು ಸೇರಿದರು. ಸ್ಥಳೀಯ ಬಹುಪಾಲು ಜನರು ಬಸವಣ್ಣನವರು ಕ್ರಾಂತಿಕಾರಿ ವಿಚಾರ ಗಳನ್ನು ಒಪ್ಪಿಕೊಂಡು, ಆಚರಣೆಯಲ್ಲಿ ತರಲಾರಂಭಿಸಿದರು. ಉಚ್ಚ–ನೀಚ ಜಾತಿ ಗಳವರಲ್ಲಿ, ವರ್ಗೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯ ಗಾಳಿ ಬೀಸಲು ಪ್ರಾರಂಭಿಸಿತು. ಶತಮಾನಗಳಿಂದ ತುಳಿಯಲ್ಪಟ್ಟ ಕೆಳವರ್ಗದ–ಕೆಳಜಾತಿಯ ಜನ, ವಿಚಾರ ಸ್ವಾತಂತ್ರ್ಯದೊಂದಿಗೆ ಮುಕ್ತ ಸಮಾಜದ ಕನಸು ಕಾಣತೊಡಗಿದರು. ಅವರು ಬಹುಸಂಖ್ಯೆಯಲ್ಲಿ ಬಸವಣ್ಣನವರೊಂದಿಗೆ ಪಾಲ್ಗೊಂಡರು. ಜಾತಿಗಳ ವಿನಾಶದೊಂದಿಗೆ ಲಿಂಗಭೇದ ಕಡಿಮೆಗಾಗಿ ಸ್ತ್ರೀಯರು, ಪುರುಷರೊಂದಿಗೆ ಆಚಾರ ವಿಚಾರದಲ್ಲಿ ಸಮಪಾಲು ಪಡೆಯಲಾರಂಭಿಸಿದರು. ಇದರಿಂದ ಮೇಲ್ಜಾತಿ ಅವರು, ಪಟ್ಟಭದ್ರ ಹಿತಾಸಕ್ತಿಗಳು ಕುಪಿತಗೊಂಡು, ಬಸವಣ್ಣನವರ ಸಮಾಜ ಪರಿವರ್ತನೆಯ ಕಾರ್ಯಕ್ಕೆ ವಿರೋಧ ವ್ಯಕ್ತಪಡಿಸಿದರು.

ಬಸವಣ್ಣನವರು ಪ್ರತಿರೋಧದ ಮಧ್ಯೆಯೇ ಸಾಮಾಜಿಕ ಬದಲಾವಣೆಯನ್ನು ಮುಂದುವರೆಸಿದ್ದರು. ಸಮಾಜದಲ್ಲಿದ್ದ ಅಶಾಂತಿ, ಬಡವ–ಬಲ್ಲಿದ, ಮೇಲು–ಕೀಳು, ಮೂಢನಂಬಿಕೆ ಹೀಗೆ ಇನ್ನೂ ಅನೇಕ ಅನಿಷ್ಟಗಳು ತುಂಬಿದ್ದ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದ ಬಸವಣ್ಣನವರು ಪ್ರತಿಯೊಬ್ಬರೂ ಸಮಾನತೆಯ–ಸುಂದರ ಬದುಕನ್ನು ನಡೆಸಬೇಕೆಂದು ಕನಸು ಕಟ್ಟಿಕೊಟ್ಟರು.

ಪ್ರತಿಯೊಬ್ಬರೂ ಸನ್ಮಾರ್ಗದಲ್ಲಿ ನಡೆಯಬೇಕೆಂಬುದು ಬಸವಣ್ಣನವರ ಕನಸಾಗಿತ್ತು. ಜನರಲ್ಲಿ ಆಳವಾಗಿ ಬೇರೂರಿದ್ದ ಭೇದವನ್ನು ಹೋಗಲಾಡಿಸಿ, 'ನಾವೆಲ್ಲರೂ ಜಂಗಮರೇ. ನಮ್ಮಲ್ಲಿ ಉತ್ತಮ, ಮಧ್ಯಮ, ಕನಿಷ್ಟ ಎಂಬವರು ಯಾರೂ ಇಲ್ಲ. ಸರ್ವರೂ ಸಮಾನರೆಂಬ ತತ್ವವನ್ನು ಸಾರಿದ್ದು ಹೀಗೆ:

"ಉತ್ತಮ ಮಧ್ಯಮ ಕನಿಷ್ಠವೆಂದು,
ಬಂದ ಜಂಗಮವನೆಂದೆನಾದಡೆ
ನೊಂದೆನಯ್ಯಾ, ಬೆಂದೆನಯ್ಯಾ, ಎನ್ನಕಿಚ್ಚು ಎನ್ನ ಸುಟ್ಟಿತ್ತು
ಸುಖಿ ಜಂಗಮ, ಸಾಮಾನ್ಯ ಜಂಗಮ ಉಂಟೆ,

ಆಡಂಬರದ ಭಕ್ತಿಯಲ್ಲಿ ನಿರತರಾಗಿದ್ದ ಉಳ್ಳವರನ್ನು ವಿರೋಧಿಸಿ, ನಿನ್ನ ದೇಹವೇ ದೇಗುಲ, ಆ ದೇಗುಲದಲ್ಲಿಯೇ ದೇವರನ್ನು ಕಾಣು ಎಂದು ಬಡವರಪರ ಧ್ವನಿ ಎತ್ತಿದ ಬಸವಣ್ಣನವರು

"ಉಳ್ಳವರು ಶಿವಾಲಯ ಮಾಡಿಹರು,
ನಾನೇನು ಮಾಡುವೆ ಬಡವನಯ್ಯಾ,
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರವೇ ಹೊನ್ನ ಕಳಸವಯ್ಯಾ"

ಎಂದು ಸಾಮಾಜಿಕ ಸಮಾನತೆಯನ್ನು ತರಬಯಸಿದರು. ಇರುವ ಸಿರಿಸಂಪತ್ತಿನಲ್ಲಿ ತೃಪ್ತಿ ಪಡದೆ, ಇನ್ನೂ ಬೇಕೆಂದು ಅನ್ಯಮಾರ್ಗವ ಹಿಡಿದು, ಸಂಪತ್ತನ್ನು ಗಳಿಸಿ ' ನಾನೇ ಸಿರಿವಂತ' ಎಂದು ಮೆರೆಯುವವರನ್ನು ಬಸವಣ್ಣನವರು ಖಂಡಿಸುತ್ತಾ

"ಎಲೆ ಎಲೆ ಮಾನವಾ, ಅಳಿಯಾಸೆ ಬೇಡವೋ,
ಕಾಳ ಬೆಳದಿಂಗಳು, ಸಿರಿ ಸ್ಥಿರವಲ್ಲ."

ಎಂದು ಎಚ್ಚರಿಸುತ್ತಾ, 'ಅತಿ ಆಸೆ ಆಮಿಷಕ್ಕೊಳಗಾದರೆ, ಮುಂದೆ ಕಷ್ಟಗಳು ತಪ್ಪಿದ್ದಲ್ಲ. ಸಿರಿವಂತಿಕೆ ಸಂಪತ್ತು ಸ್ಥಿರವಲ್ಲ. ಅದು ಕತ್ತಲು ಬೆಳಕು ಇದ್ದಂತೆ. ಬಡವ-ಬಲ್ಲಿದ ಎಂಬ ತಾರಮ್ಯ ಎಣಿಸದೆ ಎಲ್ಲರೂ ಸಮಾನರು, ಎಂಬ ತತ್ವಕ್ಕೆ ಅಂಟಿಕೊಂಡು ಸರಳ, ಸತ್ಯ ಸಮಾನತೆಯ ಬದುಕನ್ನು ಕಟ್ಟಿಕೊಳ್ಳಿ' ಎಂಬ ಸಮಾಜಮುಖಿ ಸಂದೇಶವನ್ನು ಬಸವಣ್ಣನವರು ಸಾರಿದ್ದಾರೆ.

ಬಸವಣ್ಣನವರ ಬಹುಪಾಲು ವಚನಗಳು ಸಾಮಾಜಿಕ ಸಮಾನತೆಯ ಚಿಂತನೆಯಿಂದ ಕೂಡಿರುವುದನ್ನು ಕಾಣಬಹುದು. ಸುಳ್ಳು, ಮೋಸ, ವಂಚನೆ, ಕೊಲೆ, ಸುಲಿಗೆ, ದರೋಡೆ, ಮೇಲು-ಕೀಳು, ಬಡವ-ಬಲ್ಲಿದ ಇವುಗಳಿಂದ ಮುಕ್ತರಾಗಿ ಪ್ರೀತಿ, ಸೌಹಾರ್ದ, ಸಹಬಾಳ್ವೆ, ಸಾಮರಸ್ಯದ ಬದುಕನ್ನು ಕಟ್ಟಿಕೊಳ್ಳಬೇಕೆಂಬುದು ಬಸವಣ್ಣನವರ ಚಿಂತನೆಯಾಗಿತ್ತು.

ಪ್ರತಿಯೊಬ್ಬರ ಬದುಕು ಪಾವಿತ್ರ್ಯದಿಂದ, ಪರಿಶುದ್ಧತೆಯಿಂದ ಕೂಡಿರಬೇಕು. ಬದುಕು ಮನುಷ್ಯನ ಅಂತರಂಗದಲ್ಲಿ, ಬಹಿರಂಗದಲ್ಲಿ ಒಂದೇ ಆಗಿರಬೇಕು. ನಾವೆಲ್ಲರೂ ಒಂದೇ ಎಂಬ ಗೌರವ ಭಾವನೆಯನ್ನು ಹೊಂದಿರಬೇಕು. ನಮ್ಮ-ನಮ್ಮಲ್ಲಿಯ ಒಳಜಗಳ, ವೈರ, ಅಪಹಾಸ್ಯ, ನಿಂದನೆ, ಅಸಹನೆ - ಇಂಥ ಹಲವಾರು ದುಷ್ಟ ಗುಣಗಳನ್ನು ಕೈಬಿಟ್ಟು, ಸುಂದರ ಬದುಕನ್ನು ನಾವೆಲ್ಲರೂ ಕಟ್ಟಿಕೊಳ್ಳಬೇಕು. ಆಗ, ಸಮಾಜದಲ್ಲಿ ಶಾಂತಿ ಸಮೃದ್ಧಿ

ಗಿಲೆಸಲು ಸಾಧ್ಯ. ಬಸವಣ್ಣನವರ ಸಾಮಾಜಿಕ ಚಿಂತನೆ ಇದನ್ನೇ ಬಯಸಿತ್ತು. ಅದಕ್ಕೇನೆ ಅವರು,

"ಕಳಬೇಡ, ಕೊಲಬೇಡ, ಹುಸಿ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ ಇದಿರು ಹಳಿಯಲು ಬೇಡ.
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ

ಎಂದು ಸಮಾನತೆಯ ತತ್ವ ಸಾರಿದರು. ಬಸವಣ್ಣನವರ ಪರಿಕಲ್ಪನೆ, ನಾವೆಲ್ಲರು ಒಂದೇ, ಅವನಾರು ಇವನಾರು ಎಂದು ಪ್ರಶ್ನೆ ಮಾಡಬೇಡಿರಿ; ಅವನು ನಮ್ಮವನೆಂದು ಭಾವಿಸಿ ಮುನ್ನಡೆಯಿರಿ ಎಂಬುದಾಗಿತ್ತು. ಅದಕ್ಕೆ ಅವರು,

"ಇವನಾರವ, ಇವನಾರವ,
ಇವನಾರವನೆಂದೆನಿಸಿದಿರಯ್ಯಾ,
ಇವ ನಮ್ಮವ, ಇವ ನಮ್ಮವ,
ಇವ ನಮ್ಮವನೆಂದಿನಿಸಯ್ಯಾ
ಎಂದು ಹೇಳುವ ಮೂಲಕ ಎಲ್ಲರನ್ನೂ ಒಳಗೊಳ್ಳುವ ಪರಿಕಲ್ಪನೆಯನ್ನು ಬಿತ್ತಿದರು.

ಗಾಂಧಿ ಮತ್ತು ಶಿಕ್ಷಣ ನೀತಿ

ರೂಪ ಕೆ.

"ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು; ಇಂದಿನ ಯುವಜನರೇ ನಾಳಿನ ನೇತಾರರು". ಈ ರೀತಿಯ ಮಾತು ನಾವು ಹಲವಾರು ಬಾರಿ ಹೇಳುತ್ತೇವೆ, ಕೇಳುತ್ತೇವೆ. ಆದರೆ ಆ ಮಕ್ಕಳಿಗೆ ಸತ್‌ಪ್ರಜೆಗಳಾಗಲು, ನಾಳಿನ ನೇತಾರರಾಗಲು ಉತ್ತಮ ಶಿಕ್ಷಣ ದೊರೆಯಬೇಕು. ಶಿಕ್ಷಣವೆಂದರೆ ಬರಿಯ ವಿಜ್ಞಾನ, ಗಣಿತ, ಚರಿತ್ರೆ ಅಥವಾ ಭಾಷಾಜ್ಞಾನ ಮಾತ್ರವಲ್ಲ. ಜೀವನದಲ್ಲಿ ಸತ್ಯನಿಷ್ಠೆ, ಪ್ರಾಮಾಣಿಕತೆ, ದಯಾಪರತೆ, ಸಹೋದರತೆ, ಕಾರ್ಯದಕ್ಷತೆ ಇಂತಹ ಮಾನವೀಯ ಗುಣಗಳನ್ನು ಮೈಗೂಡಿಸಿ ಕೊಳ್ಳುವುದೇ ನಿಜವಾದ ಶಿಕ್ಷಣ.

ಎಲ್ಲಾ ಮಹಾನ್ ವ್ಯಕ್ತಿಗಳಂತೆಯೇ ಮಹಾತ್ಮಾ ಗಾಂಧೀಜಿ ಕೂಡ 'ಕೆಡುಕಿನ ಕತ್ತಲೆ ಅಳಿಯಬೇಕಾದರೆ, ಅದು ಅಕ್ಷರದ ಬೆಳಕಿನಿಂದಷ್ಟೇ ಸಾಧ್ಯ' ಎಂಬ ಅರಿವುಳ್ಳವರು. ಶೋಷಣೆಯ ವಿರುದ್ಧ ಹೋರಾಡಬೇಕಾದರೆ, ಮೊದಲು ಆ ವ್ಯಕ್ತಿಯಲ್ಲಿ ತಾನು ಶೋಷಿತ ಎಂಬ ಪ್ರಜ್ಞೆ ಮೂಡಬೇಕು, ನಂತರ ಹೋರಾಟದ ರೂಪುರೇಷೆಗಳನ್ನು ಹಾಕುವ ಸಾಮರ್ಥ್ಯ ಇರಬೇಕು; ಜನರನ್ನು ಒಗ್ಗೂಡಿಸಲು ವಿವೇಕ ಮತ್ತು ವಾಕ್ ಪಟುತ್ವ ಇರಬೇಕು. ಕಾನೂನಿನ ಪರಿಜ್ಞಾನ ಇರಬೇಕು. ಇದೆಲ್ಲಾ ಸಾಧ್ಯವಾಗುವುದು ಶಿಕ್ಷಣದಿಂದ.

ಶಿಕ್ಷಣವೆಂದರೆ ಕೇವಲ ಪುಸ್ತಕಗಳಿಂದ ಪಡೆಯುವ ಜ್ಞಾನ ಎಂಬುದನ್ನು ಗಾಂಧೀಜಿ ಒಪ್ಪುತ್ತಿರಲಿಲ್ಲ. ದೈನಂದಿನ ಕೆಲಸಗಳಿಗೆ ಏನೇನೂ ನೆರವಾಗದ, ನಿತ್ಯೋಪಯೋಗಿ ವಸ್ತುಗಳನ್ನು ತಯಾರಿಸುವ ಕೌಶಲ್ಯವನ್ನು ಕಟ್ಟಿಕೊಡದ ಅನುತ್ಪಾದಕ ಶಿಕ್ಷಣವೆಂದರೆ, ಏನನ್ನೂ ಕೊಳ್ಳಲಾಗದವರು ಸಮಯ ಕಳೆಯಲು ಸಂತೆಯಲ್ಲಿ ತಿರುಗಾಡಿದಂತೆ ವ್ಯರ್ಥ. ದುಡಿಯುವ ಕೈಗಳಿಗೆ ಕೆಲಸ ಕೊಟ್ಟು, ಅವರನ್ನು ಸ್ವಾವಲಂಬಿಗಳನ್ನಾಗಿ ರೂಪಿಸುವುದೇ ಬಾಪುರವರ ಶಿಕ್ಷಣ ನೀತಿಯಾಗಿದ್ದಿತು. ಸೇವಿಸುವ ಆಹಾರ, ವಸ್ತ್ರ, ಬಟ್ಟೆ ಎಲ್ಲವನ್ನೂ ವ್ಯಕ್ತಿಗಳು ಸಂಘಟಿತರಾಗಿ ಉತ್ಪಾದಿಸಿ ಕೊಳ್ಳಬೇಕು ಎಂದು ಗಾಂಧೀಜಿ ಅವರು ಬಯಸಿದ್ದರು.

ಗಾಂಧೀಜಿ ಅವರ ಮೂಲ ಶಿಕ್ಷಣ

ಸಾಮಾನ್ಯವಾದ ಶಿಕ್ಷಣದ ಜೊತೆಯಲ್ಲೆ ಮೂಲ ಶಿಕ್ಷಣವನ್ನು ಪಡೆಯುವುದ ರಿಂದ, ಜ್ಞಾನಾರ್ಜನೆಯ ಜೊತೆಯಲ್ಲಿ ಧನಾರ್ಜನೆಯನ್ನು ಮಾಡಬಹುದು. ಮೂಲ ಶಿಕ್ಷಣದಿಂದ

ವಿವಿಧ ರೀತಿಯ ಪ್ರಯೋಜನವನ್ನು ಪಡೆಯಬಹುದು. ಸಾಮಾನ್ಯ ಶಿಕ್ಷಣದಲ್ಲಿ ಅಲ್ಲಿನ ನಿಯಮಗಳಿಗೆ ಅನುಸಾರವಾಗಿ ಇರಬೇಕೇ ಹೊರತು, ತನ್ನ ಅಭಿರುಚಿಗೆ ಅನುಸಾರವಾಗಿ ಅಲ್ಲ. ಆದರೆ ಮೂಲ ಶಿಕ್ಷಣದಲ್ಲಿ ವ್ಯಕ್ತಿಗಳು ತಮಗೆ ಬೇಕಾದ ಅಂದರೆ ಯಾವ ವಿಷಯದಲ್ಲಿ ಆಸಕ್ತಿ ಇದೆಯೋ ಅದನ್ನು ಆಯ್ದುಕೊಂಡು, ಆ ಕ್ಷೇತ್ರದಲ್ಲಿ ಮುಂದುವರೆದು, ತಮ್ಮ ಗುರಿಯನ್ನು ಸಾಧಿಸಬಹುದು.

ಹೀಗೆ ಮೂಲ ಶಿಕ್ಷಣವನ್ನು ಹೊಂದಿರುವರು ಯಾರ ಕೈಕೆಳಗೂ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ, ಸ್ವತಂತ್ರ್ಯವಾಗಿ ಏನನ್ನು ಬೇಕಾದರೂ ಮಾಡಬಹುದು. ಪೂರ್ಣ ಸ್ವಾತಂತ್ರ್ಯವಿದ್ದು ಬೇರೆಯವರಿಗೆ ಗುಲಾಮರಾಗಿ ಬಾಳಬೇಕಾಗಿಲ್ಲ. ಪದವಿ ಗಳಿಸಿದವರಿಗೆಲ್ಲಾ ಸರ್ಕಾರ ಉದ್ಯೋಗ ನೀಡಲು ಸಾಧ್ಯವಿಲ್ಲ.

ಈ ಸಮಸ್ಯೆಯನ್ನು ಮೂಲ ಶಿಕ್ಷಣದಿಂದ ಮಾತ್ರ ಸರಿಪಡಿಸಬಹುದು; ಮೂಲ ಶಿಕ್ಷಣ ತರಬೇತಿಯ ಕೊನೆಯಲ್ಲಿ ಸಿಗುವ ಮೂಲ ಧನದಿಂದ ಅನೇಕ ಚಿಕ್ಕಪುಟ್ಟ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪನೆ ಮಾಡಬಹುದು. ಅಷ್ಟೇ ಅಲ್ಲದೆ, ಉದ್ಯೋಗ ಕಲ್ಪಿಸಿ ಕೊಟ್ಟು ನಿರುದ್ಯೋಗಿಗಳ ಸಮಸ್ಯೆಯನ್ನು ನಿವಾರಿಸಬಹುದು. ಒಟ್ಟಾರೆ, ಮೂಲ ಶಿಕ್ಷಣ ಮಾನವನ ಅಭಿವೃದ್ಧಿಗೆ ಹೆಚ್ಚು ಸಹಕಾರಿಯಾಗಿದೆ ಎಂಬುದು ಮಹಾತ್ಮರ ಅನಿಸಿಕೆಯಾಗಿತ್ತು.

ಗಾಂಧೀಜಿ, ತಮ್ಮ ಜೀವನದ ದೃಷ್ಟಿಯನ್ನು ಆಧಾರ ಮಾಡಿಕೊಂಡು ರೂಪಿಸಿದ ಶಿಕ್ಷಣ ಪದ್ಧತಿಯು ಭಾರತದಲ್ಲಿ ಜೀವನ ಶಿಕ್ಷಣ, ಮೂಲ ಶಿಕ್ಷಣ, ನಯೀ ತಾಲೀಂ ಇತ್ಯಾದಿ ಹೆಸರುಗಳಿಂದ ಪ್ರಚಾರಕ್ಕೆ ಬಂದಿದೆ. ಗಾಂಧೀಜಿ ತಮ್ಮ ಮೂಲ ಶಿಕ್ಷಣವನ್ನು ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಿಗೆ ಅನ್ವಯಿಸಲು ಬಯಸಿದರು. ಭಾರತದ ಜನತೆಯ ಶೇ. 80ರಷ್ಟು ಜನರು ಗ್ರಾಮಗಳಲ್ಲಿ ಜೀವಿಸುವುದರಿಂದ ಭಾರತದ ಶಿಕ್ಷಣ ಯೋಜನೆ ಪ್ರಥಮತ: ಎಲ್ಲರ ಹಿತದೃಷ್ಟಿಯನ್ನು ಒಳಗೊಂಡಿರಬೇಕು.

ಗಾಂಧೀಜಿ ಅವರ ಶಿಕ್ಷಣದೃಷ್ಟಿ ಆಕಸ್ಮಿಕವಾಗಿ ರೂಪಗೊಂಡದ್ದಲ್ಲ. ಅವರ ಜೀವನ ದರ್ಶನ ಬೆಳೆದು ಪಕ್ವಗೊಂಡಂತೆ, ಅವರ ಶಿಕ್ಷಣ ತತ್ವವೂ ರೂಪುಗೊಂಡಿತು. ಅದನ್ನು ಅವರು ಪ್ರತ್ಯೇಕವಾಗಿ ರೂಪುಗೊಳಿಸಲಿಲ್ಲ. ಅವರ ಜೀವನ ದರ್ಶನದ ಕಾರ್ಯ ಸ್ವರೂಪವಾಗಿ ಅವರ ಶಿಕ್ಷಣ ಪದ್ಧತಿ ಮೈದಾಳಿತು.

ಆದ್ದರಿಂದ ಆ ಶಿಕ್ಷಣ ಪದ್ಧತಿಯಲ್ಲಿ ಅವರ ಜೀವನದ ತತ್ವದೃಷ್ಟಿ ಪ್ರತಿಬಿಂಬಿತವಾಗಿರುವುದು ಸ್ವಾಭಾವಿಕ. ನೇಯುವುದು, ನೂಲುವುದು ಮತ್ತು ಅದಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಜೀವನೋಪಾಯದ ಕಸಬನ್ನಾಗಿ ಆರಿಸಿ ಕೊಂಡು, ಅದರ ಆಧಾರದ ಮೇಲೆ ಶಿಕ್ಷಣ ನೀಡುವ ಬಗ್ಗೆ ಸತತವಾಗಿ ಗಾಂಧೀಜಿ ಅವರು ಪ್ರಯೋಗಗಳನ್ನು ನಡೆಸಿದರು. ಈ ಎಲ್ಲವುಗಳಲ್ಲಿ ದೊರೆತ ಅನುಭವಗಳಿಂದ ಕಸಬನ್ನು ಕೇಂದ್ರವಾಗಿ ಮಾಡಿಕೊಂಡು, ಶಿಕ್ಷಣ ನೀಡುವುದರ ಯಥಾರ್ಥತೆಯನ್ನು ಅವರು ಚೆನ್ನಾಗಿ ಮನದಟ್ಟು ಮಾಡಿಕೊಂಡರು.

ಮೂಲ ಶಿಕ್ಷಣವನ್ನು ರೂಪಿಸಿದ ಗಾಂಧೀಜಿ ಮೂಲತಃ ಶಿಕ್ಷಣವೇತ್ತರಲ್ಲ. ಅವರು ಅದನ್ನು ಶಿಕ್ಷಣ ಶಾಸ್ತ್ರದ ಬೆಳಕಿನಲ್ಲಿ ರೂಪಿಸುವ ಯತ್ನವನ್ನೂ ಮಾಡಿದವರಲ್ಲ. ಆದರೂ, ಅವರ ಯೋಜನೆಯಲ್ಲಿ ಶಿಕ್ಷಣ ಶಾಸ್ತ್ರ ಎತ್ತಿಹಿಡಿಯುವ ಹಲವು ಕ್ಷಣಗಳನ್ನು ಗುರುತಿಸಬಹುದು. ಉತ್ಪನ್ನದಾಯಕ ಚಟುವಟಿಕೆಯೊಂದರ ಮೂಲಕ, ಮಕ್ಕಳಿಗೆ ಶಿಕ್ಷಣ ನೀಡಲು ನಿಯೋಜಿಸಿರುವ ಅವರ ಯೋಜನೆ, ಎಲ್ಲ ಆಧುನಿಕ ತತ್ವಗಳಿಗೂ ಒಪ್ಪುವಂತಿದೆ. ಮಕ್ಕಳ ಸಮಗ್ರವೂ ಸರ್ವತೋಮುಖವೂ ಆದ ವಿಕಾಸಕ್ಕೆ ಅದು ಪರಿಣಾಮಕಾರಿ ವಿಧಾನ ಎಂಬುದನ್ನು ಎಲ್ಲ ಶಿಕ್ಷಣ ತತ್ವಗಳೂ ಒಪ್ಪುತ್ತವೆ.

ಮೂಲ ಶಿಕ್ಷಣದಲ್ಲಿ ಬೌದ್ಧಿಕ ಮತ್ತು ಶಾರೀರಿಕ ಅಂಶಗಳೆರಡೂ ಸೇರಿರುವುದರಿಂದ, ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳೆವಣಿಗೆಗಳೆರಡೂ ಸಮನ್ವಯಗೊಂಡು ಅಭಿವೃದ್ಧಿಯಾಗುತ್ತವೆ. ಮಕ್ಕಳು ಬರೀ ಅಕ್ಷರ ವಿದ್ಯೆಯನ್ನು ಸಾಧಿಸದೆ, ರಚನಾತ್ಮಕ ಉದ್ದೇಶಗಳಿಗಾಗಿ ಬುದ್ಧಿ ಮತ್ತು ಕೈಗಳನ್ನು ಬಳಸಿಕೊಂಡು ಶಿಕ್ಷಣ ಪಡೆಯುತ್ತಾರೆ. ಸಮಾಜಶಾಸ್ತ್ರದ ದೃಷ್ಟಿಯಲ್ಲೂ ಮೂಲ ಶಿಕ್ಷಣ ಹಲವು ಉತ್ತಮ ಗುಣಗಳಿಂದ ಕೂಡಿರುವುದನ್ನು ಕಾಣಬಹುದು. ಸರ್ವೋದಯ ತತ್ವ ವ್ಯಕ್ತಿಯ ಜೀವನದಲ್ಲಿ ಅಂಕುರಿಸಿ, ಸಮಾಜ ಜೀವನದಲ್ಲಿ ಆವಿಷ್ಕಾರವಾಗಬೇಕು ಎಂಬುದು ಗಾಂಧೀಜಿ ಅಭಿಲಾಷೆಯಾಗಿತ್ತು.

ಆಧಾರ ಗ್ರಂಥಗಳು

- ಗಾಂಧೀ ತತ್ವ ವಿಶ್ಲೇಷಣೆ – ಎಸ್. ಎಸ್. ಒಡೆಯರು
- ಗಾಂಧೀ ಅವರ ಆಧ್ಯಾತ್ಮಿಕ ಜೀವನ – ತಿಮ್ಮಪ್ಪ ನಾಯಕ
- ಮಹಾತ್ಮರ ಮಾರ್ಗ – ಪಿ. ಎಸ್. ನಾರಾಯಣ ರಾವ್
- ಗಾಂಧೀ ವಿಚಾರಧಾರೆ – ಎಂ. ಪಿ. ಭುವನೇಶ್ವರ ಪ್ರಸಾದ್
- ಮಹಾತ್ಮ ಗಾಂಧಿ ಜೀವನ ದರ್ಶನ – ರಂಗನಾಥ ರಾಮಚಂದ್ರ ದಿವಾಕರ ಮತ್ತು ಎಂ. ಯಮುನಾಚಾರ್ಯ
- ಮಹಾತ್ಮ ಮೋಹನದಾಸ ಕ. ಗಾಂಧೀ – ಕೆ. ಎಸ್. ನಾರಾಯಣ ಸ್ವಾಮಿ
- ಗಾಂಧೀಜಿ ಅವರ ಪರಿಕಲ್ಪನೆಯ ಗ್ರಾಮ ರಾಜ್ಯದಲ್ಲಿ ರಚನಾತ್ಮಕ ಕಾರ್ಯಕ್ರಮಗಳು – ಜಿ. ಹೆಚ್. ನಾಗರಾಜು ಹಾಗೂ ಎಂ. ಡಿ. ಉಮೇಶ್
- ಮೋ. ಕ. ಗಾಂಧೀ – ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ
- ಮಹಾತ್ಮ ಗಾಂಧೀ – ರಮೇಶ್ ಭಟ್

ಬಸವಣ್ಣ ಅವರ ಚಿಂತನೆಗಳಲ್ಲಿ ಸಾಮಾಜಿಕ ನ್ಯಾಯ

ಡಾ. ಎಸ್.ಆರ್. ಲೇಪಾಕ್ಷ

ಬಸವೇಶ್ವರರು ಕರ್ನಾಟಕದ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ಎಂಬಲ್ಲಿ ಮಾದರಸ ಮತ್ತು ಮಾದಲಾಂಬಿಕೆ ಎಂಬ ಬ್ರಾಹ್ಮಣ ದಂಪತಿಗಳಿಗೆ ಸುಮಾರು ಕ್ರಿ.ಶ.1131ರಲ್ಲಿ ಜನಿಸಿದರು. ಅವರಿಗೆ ದೇವರಾಜ ಎಂಬ ಅಣ್ಣ ಮತ್ತು ನಾಗಮ್ಮ ಎಂಬ ಅಕ್ಕ ಇದ್ದರು. ವಯಸ್ಸಿಗೆ ಮೀರಿದ ಪ್ರೌಢಿಮೆಯನ್ನು ಮತ್ತು ವೈಚಾರಿಕತೆಯನ್ನು ಅವರು ಹೊಂದಿದ್ದರು. 8ನೇ ವರ್ಷದಲ್ಲಿ ಅವರ ತಂದೆ–ತಾಯಿಯರು ಉಪನಯನ ಮಾಡಲು ವ್ಯವಸ್ಥೆ ಮಾಡಿದ್ದಾಗ, ಅದರ ನಿರರ್ಥಕತೆಯನ್ನು ತಿಳಿದು, ಅದನ್ನು ಧಿಕ್ಕರಿಸಿದವರು. ಬಸವಣ್ಣನವರು ಸಂಗಮೇಶ್ವರ ನಲ್ಲಿ ಗಾಢವಾದ ಭಕ್ತಿ–ಶ್ರದ್ಧೆಗಳನ್ನು ಬೆಳೆಸಿಕೊಂಡಿದ್ದಲ್ಲದೆ, ಅನೇಕ ಧಾರ್ಮಿಕ, ಐತಿಹಾಸಿಕ ಹಾಗೂ ಪೌರಾಣಿಕ ಗ್ರಂಥಗಳನ್ನು ಅಧ್ಯಯನ ಮಾಡತೊಡಗಿದರು. ಅವರು ಗಳಿಸಿದ ವಿದ್ವತ್ತಿನಿಂದ ಅವರೊಬ್ಬ ಶ್ರೇಷ್ಠ ಚಿಂತಕರಾದರು; ಉತ್ತಮ ವಚನಕಾರರಾದರು.

ಬಸವ ಕಲ್ಪನೆಯ ಸಾಮಾಜಿಕ ಸಮಾನತೆ : ಆದರ್ಶ ಮತ್ತು ಆಚರಣೆ

ಬಸವಣ್ಣನವರ ವ್ಯಕ್ತಿತ್ವ ಹಾಗೂ ವಿಚಾರ ಧಾರೆಯಲ್ಲಿ ಎದ್ದು ಕಾಣುವ ಒಂದು ಮುಖ್ಯವಾದ ಅಂಶವೆಂದರೆ, ಅವರ ಅಪಾರವಾದ ಸಾಮಾಜಿಕ ಕಳಕಳಿ. ಅವರು ಸಾಮಾಜಿಕ ಅಸಮಾನತೆಯ ವಿರುದ್ಧ ಅವಿರತವಾಗಿ ನಡೆಸಿದ ಹೋರಾಟ ನಡೆಸಿದರು. ಇಂತಹ ಹೋರಾಟವನ್ನು ಕೈಗೊಳ್ಳಲು ಅಂದಿನ ಸಾಮಾಜಿಕ ವ್ಯವಸ್ಥೆಯ ವಿಷಮ ಪರಿಸ್ಥಿತಿಗಳು ಕಾರಣ. ವರ್ಣ, ಜಾತಿ, ಸ್ತ್ರೀ–ಪುರುಷ, ಉಚ್ಚ–ನೀಚ ಎಂಬ ತಾರತಮ್ಯ ವಿಪರೀತವಾಗಿ ಬೆಳೆದು, ಆ ಕಾಲದ ಇಡೀ ಹಿಂದು ಸಮಾಜ ಅಜ್ಞಾನ–ತಾರತಮ್ಯ–ಶೋಷಣೆ ಎಂಬ ಅಂಧಕಾರದಲ್ಲಿ ಮುಳುಗಿತ್ತು. ಒಂದು ವರ್ಗದಿಂದ ಇನ್ನೊಂದು ವರ್ಗದ ಶೋಷಣೆ ಒಂದಲ್ಲ ಒಂದು ರೀತಿಯಲ್ಲಿ ನಡೆದಿತ್ತು. ಬುದ್ಧ ಮತ್ತು ಮಹಾವೀರರು ಇಂತಹ ಅಸಮಾನತೆಯ ವಿರುದ್ಧ ನಡೆಸಿದ ಹೋರಾಟದ ಕಾವು ಎಂದೋ ಇಳಿದು ಹೋಗಿತ್ತು. ಹಳೆಯ "ವೃತ್ತಿಪರ ಚಿಂತನಾ ಕ್ರಮ"ವೇ ಮುನ್ನಡೆದು "ಸಮಾಜಪರ ಚಿಂತನಾ ಕ್ರಮ" ಉಪೇಕ್ಷೆಗೆ ಗುರಿಯಾಗಿತ್ತು. ಇಡೀ ಸಮಾಜವೇ ವಿಭಜಿತವಾಗಿತ್ತು. 'ಭಾರತೀಯರು ವೈಯಕ್ತಿಕವಾಗಿ ಸಬಲರು, ಸಾಮಾಜಿಕವಾಗಿ ದುರ್ಬಲರು' ಎಂಬ ಪರಿಸ್ಥಿತಿ ಇತ್ತು.

ಇಂಥ ಕಾಲದಲ್ಲಿ, ಸಬಲ ಸಮಾಜ ನಿರ್ಮಾಣಕ್ಕಾಗಿ 'ವ್ಯಕ್ತಿ ಕಲ್ಯಾಣದೊಂದಿಗೆ ಸಮಾಜ ಕಲ್ಯಾಣವೂ ಅಗತ್ಯ' ಎಂದು ಸಾರಿ, ಅವುಗಳ ನಡುವೆ ಅನುಪಮವಾದ ಸಾಂಗತ್ಯ ಏರ್ಪಡುವಂತೆ ಮಾಡಿದ ಸಾಧನೆ ಬಸವೇಶ್ವರರದು. ಈ ಉಭಯ ಕಲ್ಯಾಣಗಳನ್ನು ಅವರ "ಲಿಂಗ ವ್ಯಸನ, ಜಂಗಮ ಪ್ರೇಮ" ಎಂಬ ಮಾತಿನಲ್ಲಿ ನಾವು ಕಾಣಬಹುದು.

ವ್ಯಕ್ತಿ ಜೀವನದಷ್ಟೇ ಸಮಾಜ ವ್ಯವಸ್ಥೆಯು ಮುಖ್ಯವಾದುದು, ವ್ಯಕ್ತಿತ್ವದ ಬೆಳವಣಿಗೆಯು ದೋಷರಹಿತವಾಗಿ ಮತ್ತು ಆರೋಗ್ಯಕರವಾಗಿ ಆಗಬೇಕಾದರೆ, ಹಸನಾದ ಸಮಾಜ ವ್ಯವಸ್ಥೆಯೊಂದಿರಬೇಕು. ಇಲ್ಲದಿದ್ದರೆ ಸ್ನಾನ ಮಾಡಿ, ಕೆಸರಿನಲ್ಲಿ ಮಿಂದಂತೆ ಆಗುತ್ತದೆ. ಮಾಡಿದ ಸ್ನಾನ ವ್ಯರ್ಥವಾಗುತ್ತದೆ. ಇದು ಬಸವಣ್ಣ ಕಂಡುಕೊಂಡ ಸತ್ಯ. "ವ್ಯಕ್ತಿತ್ವದ ಒಳ ಪದರಿನಲ್ಲಿ ವಿಕಾರಗಳಿರುವಂತೆ ಸಮಾಜದ ಒಳರಚನೆಯಲ್ಲಿಯೂ ನಿಯಮಗಳ ಹೆಸರಿನಲ್ಲಿ ಅನ್ಯಾಯಗಳು ನಿರ್ಮಾಣ ವಾಗಿರುತ್ತವೆ. ಇದರಿಂದಾಗಿ ಸಮಾಜ ಜೀವನವೂ ಅಶುದ್ಧವಾಗುತ್ತದೆ." ಇದು ಅವರ ಅವಲೋಕನ. ಭಾರತದಲ್ಲಿ ಇಂಥ ಶುದ್ಧೀಕರಣದ ಕಡೆಗೆ ಬೌದ್ಧಮತವನ್ನು ಬಿಟ್ಟರೆ ವೀರಶೈವ ಮತವೇ ಗಮನ ಹರಿಸಿತು ಎನ್ನುವ ಒಂದು ಅಭಿಪ್ರಾಯವಿದೆ. ಪ್ರಾಚೀನ ಭಾರತೀಯ ತತ್ವ ಸಿದ್ಧಾಂತ "ವ್ಯಕ್ತಿ ಶುದ್ಧಿ"ಯ ಬಗೆಗೆ ಒತ್ತು ಕೊಟ್ಟು "ಸಮಾಜ ಶುದ್ಧಿ"ಯನ್ನು ಉಪೇಕ್ಷಿಸುತ್ತದೆ. ಬಸವ ಸಿದ್ಧಾಂತ ವ್ಯಕ್ತಿ ಶುದ್ಧಿಯಲ್ಲಿ ಬಿಚ್ಚಿಕೊಂಡು, ಸಮಾಜ ಶುದ್ಧಿಯಲ್ಲಿ ವಿಸ್ತಾರಗೊಳ್ಳುತ್ತದೆ. ಸಮಾಜ ಶುದ್ಧವಾಗುವುದೆಂದರೆ ಸಮಾಜದಲ್ಲಿ ಸಮಾನತೆಯನ್ನು ತರುವುದು. ಬಸವಣ್ಣನವರು ಈ ಕಾರ್ಯದಲ್ಲಿ ತೊಡಗಿದರು.

ಸಮಾನತೆಯ ಸಮಾಜ ವ್ಯವಸ್ಥೆ ಸ್ಥಾಪಿಸಲು ವೈಚಾರಿಕ ಕ್ರಾಂತಿ

ಬಸವಣ್ಣನವರನ್ನು ಬಹಳ ಚಿಕ್ಕಂದಿನಲ್ಲೇ ಕಲಕಿದ್ದ ವಿಚಾರವೇ "ಸಾಮಾಜಿಕ ಅಸಮಾನತೆ". ಅಂತಹ ಅಸಮಾನತೆಯನ್ನು ನಿವಾರಣೆ ಮಾಡಿ, ಸಮಾನತೆಯ ನೆಲೆಯಲ್ಲಿ ಸಮಾಜವೊಂದನ್ನು ಸ್ಥಾಪಿಸಬೇಕೆಂಬುದೇ ಅವರ ತುಡಿತವಾಗಿತ್ತು. ಇದಕ್ಕಾಗಿ ಅವರು "ಸಕಲ ಜೀವಾತ್ಮರಿಗೆ ಲೇಸನೇ ಬಯಸುವ" ಸಾಮಾಜಿಕ ಜಾಗೃತಿಯನ್ನು ಜಾಗೃತಿಯನ್ನುಂಟು ಮಡಲು ಅವರ ಅಹಿಂಸಾತ್ಮಕವಾದ ಅನುನಯದ ಮಾರ್ಗವನ್ನು [**method of persuasion**] ಹಿಡಿದರು. ಈ ಮಾರ್ಗದಲ್ಲಿ ಎಲ್ಲರೂ ಸಾಗುವಂತೆ ಪ್ರೇರಣೆ ನೀಡಲು ತಾವೇ ಒಂದು ಮಾದರಿ [**model**]ಯಾಗಿ ನಿಂತರು. "ಕಾಯಕ" ಮತ್ತು "ದಾಸೋಹ"ಗಳ ಮಾಧ್ಯಮದಿಂದ, ತಮ್ಮ ಕಲ್ಪನೆಯ "ಆದರ್ಶ ಸಮಾಜ"ವೊಂದನ್ನು ಸ್ಥಾಪಿಸುವುದು ಸಾಧ್ಯ ಎಂಬುದು ಅವರ ನಂಬಿಕೆಯಾಗಿತ್ತು. ಹಾಗಾಗಿ, ಅವರು 12ನೇ ಶತಮಾನದ ವೈಚಾರಿಕ ಕ್ರಾಂತಿಗೆ ಕಾರಣರಾದರು.

ವೈಚಾರಿಕ ಕ್ರಾಂತಿಯ ಸಾಧನವಾಗಿ ವಚನಗಳ ಸೃಷ್ಟಿ

ಸಾಮಾಜಿಕ ಸಮಾನತೆ ಮತ್ತು ಧರ್ಮಜಾಗೃತಿಯ ಆದರ್ಶಗಳನ್ನು ಮುಂದಿಟ್ಟುಕೊಂಡು, ಬಸವೇಶ್ವರರು ಆರಂಭಿಸಿದ ವೈಚಾರಿಕ ಕ್ರಾಂತಿಯು "ಶಿವಶರಣರ ಆಂದೋಲನ"ವಾಗಿ

ಾಪು ತಳೆದುದು ಒಂದು ಅಪೂರ್ವವಾದ ಘಟನೆ. ಈ ಚಳುವಳಿಯನ್ನು ಅತ್ಯಂತ ರಿಣಾಮಕಾರಿಯಾಗಿ ಮಾಡಲು ಅವರ ವಚನಗಳನ್ನು ಜನರ ಆಡುಭಾಷೆಯಲ್ಲಿ ರಚಿಸಿ, ವುಗಳನ್ನು ಬಳಸಿಕೊಂಡಿದ್ದು ಒಂದು ಅನನ್ಯ ಪ್ರಯೋಗವೇ ಸರಿ.

ಬಸವಣ್ಣನವರ ನೇತೃತ್ವದಲ್ಲಿ ಕೈಗೊಳ್ಳಲಾಗಿದ್ದ ವ್ಯಕ್ತಿ ಕಲ್ಯಾಣ ಮತ್ತು ಸಮಾಜ ಕಲ್ಯಾಣ ಳುವಳಿಯಲ್ಲಿ ವಚನಗಳು ಜಾಗತಿಕ ಸಾಹಿತ್ಯದ ಮಹತ್ವ ಪೂರ್ಣ ಭಾಗವೆನಿಸಿವೆ. ಸರಳ ಬ್ದಗಳನ್ನೇ ಆಯ್ಕೆ ಮಾಡಿಕೊಂಡು, ಸಾಮಾನ್ಯರೂ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ದ್ಯ-ಪದ್ಯಗಳ ಸಂಮಿಶ್ರಣದ ವಚನಗಳನ್ನು ರಚಿಸಿದ್ದು "ಶಿವಶರಣರ ಆಂದೋಲನ"ದ ಂದು ವೈಶಿಷ್ಟ್ಯ. ವಚನಗಳ ಮೂಲಕ ಗಹನವಾದ ವಿಚಾರವನ್ನೂ ಸರಳವಾದ ಶೈಲಿಯಲ್ಲಿ ುನಸ್ಸಿಗೆ ನಾಟುವಂತೆ ಪ್ರಚಾರ ಮಾಡುತ್ತಾ ಹೋಗುತ್ತಿದ್ದುದು ಶಿವಶರಣ ಪರಂಪರೆಯಲ್ಲಿ ಂದ್ದು ಕಾಣುವ ಇನ್ನೊಂದು ಅಂಶ. ಸಮಾಜ ಕಲ್ಯಾಣವನ್ನು ಕುರಿತಾದ ವಚನಗಳಲ್ಲಿ ಹೆಚ್ಚಿನವು "ಸಾಮಾಜಿಕ ಸಮಾನತೆ"ಯ ಮೌಲ್ಯವನ್ನು ಎತ್ತಿ ಹಿಡಿಯುವಂಥವು.

ವಚನಗಳಲ್ಲಿ "ಆತ್ಮ ವಿಮರ್ಶೆ" ಮತ್ತು "ಸಮಾಜ ವಿಮರ್ಶೆ"

ಬಸವಣ್ಣನವರ ವಚನಗಳಲ್ಲಿ "ವ್ಯಕ್ತಿಶೋಧ" ಅಂದರೆ ಆತ್ಮ ವಿಮರ್ಶೆ ಪ್ರಧಾನವಾಗಿದೆ. ನೋವು, ವಿಷಾದ, ಪ್ರೀತಿ, ನಿಷ್ಠೆ, ಕರುಣೆ, ಅನುಕಂಪ, ಕೋಪ, ಮುಂತಾದವುಗಳನ್ನು ಅವರು ನಾಟಕದ ಪಾತ್ರಧಾರಿಯಂತೆ ತನ್ನ ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ; ಜೊತೆಗೆ "ಸಮಾಜ ವಿಮರ್ಶೆ"ಯೂ ಅವುಗಳಲ್ಲಿ ಇರುತ್ತಿತ್ತು. ಅನ್ಯಾಯವನ್ನು ಪ್ರತಿಭಟಿಸುವ, ನ್ಯಾಯವನ್ನು ಪ್ರತಿಪಾದಿಸುವ, ಸತ್ಯ-ಧರ್ಮಗಳನ್ನು ಬೆಂಬಲಿಸುವ, ಸಮಾಜದ ಹುಳುಕುಗಳನ್ನು ಹೊರಗೆಳೆಯುವ ಪ್ರಯತ್ನವೂ ಅವರ ವಚನಗಳಲ್ಲಿದೆ. ಅವರದು ರಚನಾತ್ಮಕ ದೃಷ್ಟಿಯಾಗಿದ್ದು ಅವರು ಒಬ್ಬ ಸಮಾಜ ವಿಜ್ಞಾನಿಯ ಪರಿಭಾಷೆಯಲ್ಲಿಯೇ ಮಾತನಾಡುವಂತೆ ಕಾಣುತ್ತದೆ. ಅನ್ಯಾಯವನ್ನು ಬೊಟ್ಟು ಮಾಡಿ ತೋರಿಸುವ, ಹಾಗೆಯೇ "ಬಿಜ್ಜಳಂಗೆ ಅಂಜುವೆನೆ ಅಯ್ಯಾ" ಎಂದು ತನ್ನ ಮೇಲಿನ ಆರೋಪಗಳನ್ನು ನಿರಾಕರಿಸುವ ಅವರ ಮಾತಿನ ಧಾಟಿ "ಚಳುವಳಿಯ ಭಾಷೆ"ಯಂತೆ ಕಾಣಿಸುತ್ತದೆ. "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ", "ದಯೆಯೇ ಧರ್ಮದ ಮೂಲವಯ್ಯಾ", "ಸತ್ಯವ ನುಡಿವುದೇ ಸ್ವರ್ಗ" ಮುಂತಾಗಿ ವಚನಗಳುದ್ದಕ್ಕೂ ಕೇಳಿ ಬರುವ ನೈತಿಕ ಲೋಕ ಸಂದೇಶಗಳಲ್ಲಿ, ಧಾರ್ಮಿಕ ಸಂತನ ಬೋಧನೆಯೂ ಕಾಣುತ್ತದೆ. ಅಲ್ಲದೆ, ವಚನಗಳು ಬಂಡಾಯ ಕಾವ್ಯದಂತೆ, ಕ್ರಾಂತಿಗೀತೆಗಳಂತೆ ಕಾಣಬರುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ, ಸಾಮಾಜಿಕ ಪರಿವರ್ತನೆಯ ವೇಗವನ್ನು ಹೆಚ್ಚಿಸುವ ಶಕ್ತಿಯಂತೂ ಈ ವಚನಗಳಲ್ಲಿ ಅಪಾರವಾಗಿದೆ.

ಬಸವ ಕಲ್ಪನೆಯ ಸಾಮಾಜಿಕ ಸಮಾನತೆಯ ವಿವಿಧ ಆಯಾಮಗಳು

ಸಾಮಾಜಿಕ ಸಮಾನತೆ ಎಂಬ ಉದಾತ್ತ ಕಲ್ಪನೆಯು ಮನಸ್ಸನ್ನು ಆವರಿಸಿದ ಮೇಲೆ, ಅವರು ಅದನ್ನು ಅನುಗಾಲವೂ ಸಾಕಾರಗೊಳಿಸುತ್ತಾ ಸಾಗಿದರು. ಅವರ ಕಲ್ಪನೆಯ

ಸಾಮಾಜಿಕ ಸಮಾನತೆಯು- ಆರ್ಥಿಕ ಸಮಾನತೆ [ವರ್ಗ ಸಮಾನತೆ], ಜಾತಿ ಸಮಾನತೆ, ಲಿಂಗ ಸಮಾನತೆಯ ಮತ್ತು ಕಾಯಕ ಅಥವಾ ವೃತ್ತಿ ಸಮಾನತೆ ಎಂಬ ನಾಲ್ಕು ಮುಖ್ಯವಾದ ಆಯಾಮಗಳನ್ನು ಹೊಂದಿತ್ತು ಎನ್ನಬಹುದು. ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

ಆರ್ಥಿಕ ಸಮೊನತೆ ಅಥವಾ ವರ್ಗ ಸಮಾನತೆ

ಬಸವೇಶ್ವರರ ಸಮಾನತೆಯ ಕಲ್ಪನೆಯಲ್ಲಿ "ಆರ್ಥಿಕ ಸಮಾನತೆ"ಯ ಅಂಶವು ಇದೆ. ಸಾಮಾಜಿಕ ಅಸಮಾನತೆಗೆ ಮೂಲ "ಆರ್ಥಿಕ ಅಸಮಾನತೆ"ಯೂ ಹೌದು ಎಂದು ಅವರು ನಂಬಿದ್ದರು. ಅವರು ಬಿಜ್ಜಳನ ಆಸ್ಥಾನದಲ್ಲಿ ಅರ್ಥಸಚಿವರಾಗಿದ್ದರು. ಒಂದು ಸಂದರ್ಭದಲ್ಲಿ ಜಂಗಮರಿಗೆ, ಪ್ರಜೆಗಳಿಗೆ ಭಂಡಾರದ ಹಣ ವಿನಿಯೋಗವಾದಾಗ, ಬಿಜ್ಜಳನು ಆ ಕುರಿತು ಆಕ್ಷೇಪಿಸಿದಾಗ "ತಮ್ಮೊಡವೆಯಂ ತಾವೆ ಕೊಂಡರ್" ಎಂದು ಬಸವಣ್ಣ ಹೇಳುತ್ತಾರೆ. ಇದರ ಅರ್ಥ "ಭಂಡಾರದ ಒಡೆಯ ರಾಜನಲ್ಲ. ಪ್ರಜೆಗಳು" ಎಂಬ ನಂಬಿಕೆ ಅವರಲ್ಲಿ ಬಲವಾಗಿತ್ತು ಎನ್ನುವುದು. "ಹಾವು ತಿಂದವರ ನುಡಿಸಬಹುದು, ಗರ ಹೊಡೆದವರ ನುಡಿಸಬಹುದು, ಸಿರಿಗರ ಹೊಡೆದವರ ನುಡಿಸಲು ಬಾರದು" ಎಂದು ಬಸವಣ್ಣ ಹೇಳುವಾಗ ಶ್ರೀಮಂತರನ್ನು ಅವರು ಎಚ್ಚರಿಸಲು ಬಯಸುತ್ತಿದ್ದರು ಎಂಬುದು ವ್ಯಕ್ತವಾಗುತ್ತದೆ. "ಉಳ್ಳವರು ಶಿವಾಲಯ ಮಾಡುವರು, ನಾನೇನ ಮಾಡುವೆ ಬಡವನಯ್ಯಾ" ಎನ್ನುವ ಅವರ ಮಾತುಗಳಲ್ಲಿ "ವರ್ಗಪ್ರಜ್ಞೆ"ಯ ಭಾವ ಕಾಣಬರುತ್ತದೆ. ವರ್ಗ ವಿಷಮತೆಯನ್ನು ಅರ್ಥಾತ್ ಶ್ರೀಮಂತ-ಬಡವನೆಂಬ ತಾರತಮ್ಯವನ್ನು ತೊಡೆದು ಹಾಕಲು ಬಸವಣ್ಣನವರು ರಕ್ತ ಕ್ರಾಂತಿಯ ಪರಿಹಾರವನ್ನು ಸೂಚಿಸಲಿಲ್ಲ. ಅದರ ಬದಲು ಈಶಾವಾಸ್ಯ ಉಪನಿಷತ್ತಿನ ಮಾತಿನಂತೆ " ನನಗೆ ಅಗತ್ಯವಿರುವುದಕ್ಕಿಂತ ಹೆಚ್ಚನದೇನನ್ನೂ ಸ್ವೀಕರಿಸಬೇಡ" [ತೇನ ತ್ಯಕ್ತೇನ ಭುಂಜೀಥಾ..........] ಎಂಬ ಸರಳ ಪರಿಹಾರವನ್ನು ಸೂಚಿಸಿದರು. "ಗುರುವಿಗೆ ತನು ದಾಸೋಹ, ಲಿಂಗಕ್ಕೆ ಮನ ದಾಸೋಹ, ಜಂಗಮಕ್ಕೆ ಧನ ದಾಸೋಹ" ಮಾಡಬೇಕೆಂಬುದು ಶರಣ ಸಿದ್ಧಾಂತ, ಶರಣ ಸಮಾಜದಲ್ಲಿ ಯಾರೂ ಶ್ರೀಮಂತರಿಲ್ಲ. ಯಾರೂ ದರಿದ್ರರಿಲ್ಲ. ಏಕೆಂದರೆ, ಎಲ್ಲರೂ ತಮ್ಮ ಜೀವನ ನಿರ್ವಹಣೆಗೆ ಎಷ್ಟು ಬೇಕೋ ಅಷ್ಟನ್ನು ಖಂಡಿಗ ಪಡೆದುಕೊಳ್ಳುವ ಅವಕಾಶ ಇರುತ್ತದೆ. ಉಳಿದುದೆಲ್ಲವೂ ಇತರರ ಸೇವೆಗಾಗಿ ಮೀಸಲು. ಗಾಂಧೀಜಿ ಪ್ರಸ್ತಾಪಿಸಿದ " ಅಸಂಗ್ರಹ ತತ್ವ"ವು ಇಲ್ಲಿ ಎದ್ದು ಕಾಣುವುದು.

ಜಾತಿ ಸಮಾನತೆ

ಹುಟ್ಟಿನಿಂದ ಯಾರೂ ಮೇಲಲ್ಲ, ಕೀಳಲ್ಲ; ಎಲ್ಲರೂ ಒಂದೇ. ಮಾನವ ಜೀವಿಗಳಲ್ಲಿ ಕೆಲವರು ಮೇಲು, ಇನ್ನೂ ಕೆಲವರು ಕೀಳು ಎಂಬ ಭೇದದಲ್ಲಿ ಯಾವ ಹುರುಳಿದೆ ಎಂದು ಅವರು ವರ್ಣ/ಜಾತಿ ತಾರತಮ್ಯವನ್ನು ಪ್ರಶ್ನಿಸಿದರು. ಬ್ರಾಹ್ಮಣ- ಕ್ಷತ್ರಿಯ-ವೈಶ್ಯ-ಶೂದ್ರ ಎಂಬ ವರ್ಣಗಳು ಈಶ್ವರನ ಮುಖ, ಭುಜ, ತೊಡೆ ಹಾಗೂ ಪಾದಗಳಿಂದ ಜನಿಸಿದವು ಎಂದು ಹೇಳಿಕೊಂಡು ಬಂದ "ಕಟ್ಟು" ವಿವರಣೆಯನ್ನು "ಕರ್ಣದಲ್ಲಿ ಜನಿಸಿದವರುಂಟೆ

ಗದೊಳಗೆ?" ಎಂದು ಹೀಗಳೆದರು. ಜನ್ಮದಿಂದ ಯಾರೂ ಹೊಲೆಯರಲ್ಲ ಅಥವಾ ಮಾದಿಗರಲ್ಲ ಎಂದು ಅವರು ಸಾರಿದರು.

ವೃತ್ತಿ ಸಮಾನತೆ

ಕಾಯಕವನ್ನು ಅವಲಂಬಿಸಿ ಜಾತಿಗಳನ್ನು ಗುರುತಿಸುವುದು ಸಮಾಜ ದ್ರೋಹ, ದೇಶದ್ರೋಹವಷ್ಟೇ ಅಲ್ಲ. ವಿಶ್ವದ್ರೋಹವೆಂದು ಜಗತ್ತಿನಲ್ಲಿಯೇ ಪ್ರಪ್ರಥಮ ವಾಗಿ ಸಾರಿದ ಕೀರ್ತಿ ಬಸವೇಶ್ವರರಿಗೆ ಸಲ್ಲಬೇಕು. ಕಾಯಕದಲ್ಲಿ ತಾರತಮ್ಯ ಮಾಡಲಾಗದೆಂದು ಅವರು ಲಿಂಗದ ಮೇಲೆ ಆಣೆಯಿಟ್ಟು ಹೇಳುತ್ತಾರೆ. "ಆವ ಜಾತಿ ಗೋತ್ರದಲ್ಲಿ ಬಂದರೂ, ತಮ್ಮ ತಮ್ಮ ಕಾಯಕಕ್ಕೆ, ಭಕ್ತಿ ಸೂತಕವಿಲ್ಲದಿರಬೇಕು" ಎಂಬ ಅಮ್ಮಿದೇವನ ವಚನದಲ್ಲಿ ಇಡೀ ಶರಣಕುಲದ ಮನೋಗತ, ಮನೋರಥಗಳ ಪ್ರತಿಧ್ವನಿಯಿದೆ. ಜಾತಿ ವಿನಾಶದ ಯಜ್ಞಕಾರ್ಯದ ಬಗೆಗಿನ ಶರಣ ಮನದ ಹಳವಳಿಕೆ ಶಿವಶರಣರ ವಚನಗಳಲ್ಲಿ ಎದ್ದು ಕಾಣುತ್ತದೆ.

ಲಿಂಗ ಸಮಾನತೆ

ಬಸವೇಶರ್ವರರಿಗೂ ಮುಂಚಿನ ಕಾಲದ ಭಾರತೀಯ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಗಳು ಅಧೋಗತಿಗಿಳಿದಿದ್ದವು. ಪುರುಷನ ಶ್ರೇಷ್ಠತೆ ಸ್ತ್ರೀಯ ಹೀನತೆ ಒಪ್ಪಿತ ಸಾಮಾಜಿಕ ತತ್ವವಾಗಿತ್ತು. ಕುಟುಂಬದ ಒಳಗಡೆ ಮತ್ತು ಹೊರಗಡೆ ಪುರುಷರ ಪ್ರಾಬಲ್ಯ ಇತ್ತು. ಸರ್ವಾಧಿಕಾರ ಎಲ್ಲೆಡೆ ರಾರಾಜಿಸುತ್ತಿತ್ತು. ಆದರೆ, ಬಸವೇಶ್ವರರ ನಿರಂತರ ಪ್ರಯತ್ನಗಳಿಂದ ವಚನ ಯುಗದಲ್ಲಿ ಸ್ತ್ರೀಯರು ಕೂಡ ಧಾರ್ಮಿಕ ವಿಚಾರಗಳಲ್ಲಿ ಮುಕ್ತ ಚರ್ಚೆ ನಡೆಸಲು ಅವಕಾಶ ಕಲ್ಪಿಸಲಾಯಿತು.

ಬಸವೇಶ್ವರರ ಸಾಮಾಜಿಕ, ಸಮಾನತೆ, ಕಾಯಕದ ಪರಿಕಲ್ಪನೆ, ಸ್ತ್ರೀಯರ ಸ್ಥಾನಮಾನ ಇವುಗಳನ್ನು ಎತ್ತಿ ಹಿಡಿಯಲೇಬೇಕು. ಈ ಕುರಿತು ಈಗ ಕಾನೂನುಗಳೂ ಇವೆ. ಹೀಗಿದ್ದರೂ ಈ ತತ್ವಗಳು ಸಮಾಜದಲ್ಲಿ ಇನ್ನೂ ಅನುಷ್ಠಾನಗೊಂಡಿಲ್ಲ ದಿರುವುದು ದುರಂತವೇ ಸರಿ. ಸಮಾಜಕ್ಕೆ ಎಲ್ಲಾ ಸಮಾಜ ಸುಧಾರಕರು ನೀಡಿರುವ ತತ್ವ-ಚಿಂತನೆಗಳು ಪಾಲಿಸಲ್ಪಡುವಂತಾದರೆ, ಉತ್ತಮ ಸಮಾಜ ಖಂಡಿತವಾಗಿಯೂ ನಿರ್ಮಾಣವಾಗುವುದು.

ಮಾರ್ಗದರ್ಶಕರಾಗಿ ಗಾಂಧಿ ಮತ್ತು ಅಂಬೇಡ್ಕರ್

ಸರಸ್ವತಿ. ಕೆ.

ಸತ್ಯ, ಅಹಿಂಸೆ, ಸರಳತೆ, ನೇರ ನಡೆ–ನುಡಿಗಳಿಗೆ ಹೆಸರಾಗಿದ್ದವರು ಗಾಂಧೀಜಿ. ಅವರ ಆದರ್ಶಗಳು ಜಗದ್ವಿಖ್ಯಾತಿಯನ್ನು ಹೊಂದಿವೆ. ಜಗತ್ತಿನಲ್ಲಿ ಇತರರಿಗಾಗಿ ಯಾರು ತಮ್ಮ ಜೀವನವನ್ನು ಸವೆಸಿದ್ದಾರೊ, ಅವರೆಲ್ಲರೂ ಚಿರಸ್ಮರಣೀಯರಾಗಿದ್ದಾರೆ. ಅವರಲ್ಲಿ ಬುದ್ದ, ಬಸವ, ಕಾರ್ಲ್ ಮಾರ್ಕ್ಸ್, ಗಾಂಧಿ, ಅಂಬೇಡ್ಕರ್ ಮೊದಲಾದವರು ಸೇರುತ್ತಾರೆ.

ಅಹಿಂಸೆ, ತ್ಯಾಗಗಳಿಗೆ ಹೆಸರಾಗಿ, 'ಅಮಿತ ಆಸೆಯೇ ದು:ಖಕ್ಕೆ ಮೂಲ ಕಾರಣ' ಎಂದ ಬುದ್ಧ ಎಂದೆಂದಿಗೂ ಅಜರಾಮರ. 'ಕಾಯಕವೇ ಕೈಲಾಸ;' 'ದಯೆಯೇ ಧರ್ಮದ ಮೂಲ', 'ಕಳಬೇಡ, ಕೊಲಬೇಡ. ಹುಸಿಯನುಡಿಯ ಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ' ಎಂದು ನಮ್ಮ ಕರ್ತವ್ಯದ ಬಗೆಗೆ ಜಾಗೃತಿಯನ್ನು ಮೂಡಿಸಿರುವ ಬಸವಣ್ಣ ಕೂಡ ಅಜರಾಮರ. 'ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ' ತತ್ವಗಳನ್ನು ಸಮಾಜದಲ್ಲಿ ನೆಲೆಗೊಳಿಸಲು ತಮ್ಮ ಜೀವನವನ್ನೇ ತೇಯ್ದ ಅಂಬೇಡ್ಕರ್ ಅವರೂ ಅಷ್ಟೇ ಅಜರಾಮರರು. ಮೂವರೂ ಮಹಾ ಮಾರ್ಗದರ್ಶಕರು.

ಗಾಂಧೀಜಿ

ಸತ್ಯಾಗ್ರಹ, ವಿನಮ್ರತೆಯಿಂದ ಇಡೀ ಜಗತ್ತನ್ನೇ ಬದಲಿಸಬಹುದು ಎಂಬ ಮನೋಧರ್ಮದವರು ಗಾಂಧೀಜಿ; ಸಾಮಾಜಿಕ ಸಮಾನತೆ ಕುರಿತು ಸಮಾಜದಲ್ಲಿ ಜಾಗೃತಿಯನ್ನು ಮೂಡಿಸಿ, ನ್ಯಾಯ ಮತ್ತು ವಿವೇಕವನ್ನು ಸ್ಥಾಪಿಸಲು ಶ್ರಮಿಸಿದ ಕ್ರಾಂತಿಕಾರಿ ಅಂಬೇಡ್ಕರ್. ಇವರು ನೀಡಿರುವ ಮಾರ್ಗದರ್ಶನ ಎಂದೆಂದಿಗೂ ಅನುಕರಣೀಯ. ಆರೋಗ್ಯಕರ ಸಮಾಜಕ್ಕೆ ಯುವಜನತೆ ಅವರುಗಳ ಮಾರ್ಗದರ್ಶನ ವನ್ನು ಪಾಲಿಸುವುದು, ದೇಶದ ಶಾಂತಿ ನೆಮ್ಮದಿಯ ಬದುಕಿಗೆ ಅವಶ್ಯಕವಾಗಿದೆ.

ಆರೋಗ್ಯಕರ ಸಮಾಜಕ್ಕೆ ಗಾಂಧಿ ಮತ್ತು ಅಂಬೇಡ್ಕರ್ ನೀಡಿರುವ ಕೊಡುಗೆಯೇನು ಎಂಬುದನ್ನು ಅಧ್ಯಯನ ಮಾಡುವುದು, ಗಾಂಧಿ ಮತ್ತು ಅಂಬೇಡ್ಕರ್ ವಿಚಾರಗಳ ಮಹತ್ವವನ್ನು ಯುವಪೀಳಿಗೆಗೆ ಮನದಟ್ಟು ಮಾಡಿ ಕೊಡುವುದು ಮತ್ತು ಸಧೃಡ

ಮಾಜವನ್ನು ಬಲಪಡಿಸಲು ಶ್ರಮಿಸುವ ಅಗತ್ಯವನ್ನು ಮನವರಿಕೆ ಮಾಡಿಕೊಡುವುದು ಈ ಲೇಖನದ ಉದ್ದೇಶ.

ಗಾಂಧಿ ಮತ್ತು ಅಂಬೇಡ್ಕರ್ ವಿಚಾರಗಳನ್ನು ಅಧ್ಯಯನ ಮಾಡಲು ಐತಿಹಾಸಿಕ ತಾರ್ಕಿಕ, ಹೋಲಿಕಾ, ವಿಶ್ಲೇಷಣಾತ್ಮಕ ವಿಧಾನವನ್ನು ಇಲ್ಲಿ ಅನುಸರಿಸ ಲಾಗಿದೆ. ಅಧ್ಯಯನಕ್ಕೆ ಪುಸ್ತಕಗಳು, ನಿಯತಕಾಲಿಕೆಗಳು, ಪತ್ರಿಕೆಗಳು, ಅಂತರ್ಜಾಲ, ಸಂದರ್ಶನಗಳ ಲೇಖನಗಳನ್ನು ಪರಾಮರ್ಶನ ಮಾಡಲಾಗಿದೆ.

ಯುವ ಪೀಳಿಗೆಯಲ್ಲಿ ಗಾಂಧೀಜಿ ಅವರ ಬಗ್ಗೆ ತಾತ್ಸಾರದ, ಹಾಗೆಯೇ ಅಂಬೇಡ್ಕರ್–ಬಸವಣ್ಣ ಬಗ್ಗೆ ಸಂಕುಚಿತ ಮನೋಭಾವ ಬೆಳೆದಿದೆ, 'ಜಾತಿ ಬೇಧವಿಲ್ಲ, ಎಲ್ಲಾ ಜಾತಿ ಒಂದೇ' ಎಂದು ಹೋರಾಡಿದ ಬಸವಣ್ಣ, ಲಿಂಗಾಯಿತರ ಸಂಕೋಲೆ ಯಲ್ಲಿ ಬಂದಿಯಾಗಿದ್ದಾರೆ; ಗಾಂಧೀಜಿ ಅಧಿಕಾರಸ್ಥರ ಕಪಿಮುಷ್ಠಿಯಲ್ಲಿ ಸಿಲುಕಿ ಕೊಂಡಿದ್ದಾರೆ; ಅಂಬೇಡ್ಕರ್ ಕೇವಲ ದಲಿತರ ಅಭ್ಯುದಯ ಕುರಿತು ಚಿಂತಿಸಿದರು ಎಂಬ ಸೀಮಿತ ತಿಳುವಳಿಕೆ ವ್ಯಾಪಕವಾಗಿದೆ.

ಸತ್ಯದ ಆಚರಣೆ ನಮ್ಮ ಆತ್ಮಶಕ್ತಿಯನ್ನು ಹೆಚ್ಚಿಸುತ್ತದೆ. ಸರಳತೆ ಸದಾ ವ್ಯಕ್ತಿಯ ಗೌರವವನ್ನು ಕಾಪಾಡುತ್ತದೆ. "ಅರೆಬೆತ್ತಲೆಯ ಮನುಷ್ಯ" ಎನಿಸಿಕೊಂಡಿದ್ದ ವ್ಯಕಿಯಿಂದಲೇ ನಾವು ಈ ದೇಶವನ್ನು ಬಿಟ್ಟು ಹೊರಡಬೇಕಾಗುತ್ತದೆ ಎಂದು ಬ್ರಿಟೀಷರು ಭಾವಿಸಿರಲಿಲ್ಲವೇನೋ. ರಾಮರಾಜ್ಯದ ಪರಿಕಲ್ಪನೆ, ಗ್ರಾಮ ಪಂಚಾಯತಿ ವ್ಯವಸ್ಥೆ, ಅಧಿಕಾರ ವಿಕೇಂದ್ರೀಕರಣ, ಮದ್ಯಪಾನ ನಿಷೇಧ, ಸರ್ವೋದಯ, ಸತ್ಯಾಗ್ರಹ, ಅಹಿಂಸಾವಾದ, ಪಕ್ಷರಹಿತ ಪ್ರಜಾಪ್ರಭುತ್ವ, ಶ್ರಮದ ಬದುಕಿನ ಪ್ರತಿಪಾದನೆ.. ..ಇತ್ಯಾದಿ ಗಾಂಧೀಜಿ ಅವರ ವಿಚಾರವಾಗಿತ್ತು.

ಒಬ್ಬ ವಕೀಲನ ವೃತ್ತಿಗೆ ಎಷ್ಟು ಗೌರವ ಇರುತ್ತದೆಯೋ ಅಷ್ಟೇ ಗೌರವ ಒಬ್ಬ ಕ್ಷೌರಿಕನ ವೃತ್ತಿಗೂ ಇದೆ' ಎಂಬುದು ನಮಗೆ ಇನ್ನೂ ಅರ್ಥವಾಗಬೇಕಿದೆ. ಅನ್ಯಾಯದ ವಿರುದ್ಧ ಹೋರಾಡಲು ಸದಾ ಮುಂದೆ ಇರುತ್ತಿದ್ದ ಅವರು ನಮಗೆ ಮಾರ್ಗದರ್ಶಕರೆಂದು ನಾವು ಒಪ್ಪಿಕೊಳ್ಳಬೇಕಿದೆ.

ಗ್ರಾಮಗಳ ಮಟ್ಟದಲ್ಲಿ ಅಧಿಕಾರ ಹಂಚಿಕೆಯಾಗಬೇಕೆಂಬ ಗಾಂಧೀಜಿ ಕನಸು, ಸಂವಿಧಾನದ 40ನೇ ವಿಧಿಯಲ್ಲಿ ರಾಜ್ಯನಿರ್ದೇಶಕ ತತ್ವಗಳ ಅಡಿಯಲ್ಲಿ "ಹಲ್ಲಿಲ್ಲದ ಹುಲಿ" ಎನಿಸಿತ್ತು. ಆದರೆ, ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳ ಮೂಲಕ ಕಾನೂನು ರೂಪ ಪಡೆದ ಬಳಿಕ, ಈ ತತ್ವವು ರಾಜಕೀಯ, ಆರ್ಥಿಕ, ಸಾಮಾಜಿಕ ಬದಲಾವಣೆಯ ಗಾಳಿ ಬೀಸುವುದಕ್ಕೆ ಆಧಾರವಾಗಿದೆ.

ಗಾಂಧೀಜಿ ಅವರ "ನ್ಯಾಸವಾಗಿ ಖಾಸಗಿ ಆಸ್ತಿ" ಪರಿಕಲ್ಪನೆಯು ಉದಾರವಾದವನ್ನು ಎತ್ತಿಹಿಡಿಯುತ್ತದೆ. 'ಶ್ರೀಮಂತರು ತಮ್ಮಲ್ಲಿರುವ ಹೆಚ್ಚಿನ ಆಸ್ತಿಯನ್ನು ಬಡವರಿಗಾಗಿ ವಿನಿಯೋಗಿಸಬೇಕು', 'ಅಗತ್ಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದುವುದು ಕಳ್ಳತನ

ಮಾಡಿದಂತೆ' ಎಂಬಂಥ ಹೇಳಿಕೆಗಳಿಂದ ಸ್ಫೂರ್ತಿಗೊಂಡ ಅನೇಕರು "ಭೂದಾನ ಚಳುವಳಿ"ಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆದರೆ, ಇಂದಿಗೂ ಸಂಪತ್ತಿನ ಸಮಾನ ಹಂಚಿಕೆ ಆಗಿಲ್ಲ.

ಬ್ರಿಟಿಷರ ಲಾಭಕೋರತನವನ್ನು ಖಂಡಿಸಿದ ಗಾಂಧೀಜಿ, ಸ್ವತ: ಚರಕದಿಂದ ನೂಲನ್ನು ತಯಾರಿಸಿ, ಬಟ್ಟೆಯನ್ನು ತಯಾರಿಸಲು ಮುಂದಾದರು. ಪರಿಸರದ ಬಗೆಗೆ ಕಾಳಜಿ ತೋರಿದ ಅವರು, ಗುಡಿ/ಗೃಹ ಕೈಗಾರಿಕೆಗಳನ್ನು ಉಳಿಸಲು ತಮ್ಮ ಜೀವನವನ್ನು ಅರ್ಪಿಸಿಕೊಂಡರು. ಸ್ವದೇಶಿ ಆಂದೋಲನಕ್ಕೆ ಜನಬೆಂಬಲ ದೊರಕಿಸಿ ಕೊಂಡ ಗಾಂಧೀಜಿ, ದೇಶದ ಸ್ವಾವಲಂಬನೆಯನ್ನು ಪ್ರತಿಪಾದಿಸಿದರು.

ಇಂದು ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗಿ ರಾಷ್ಟ್ರಗಳ ನಡುವೆ ಯುದ್ದದ ಭೀತಿ ಆವರಿಸಿದೆ. ಯುದ್ಧಗಳು ನಾಯಕರುಗಳ ತೀರ್ಮಾನದಿಂದ ಆಗುತ್ತವೆ; ಆದರೆ ಯುದ್ಧಗಳಲ್ಲಿ ಅಮಾಯಕರು ಸಾವಿಗೀಡಾಗುತ್ತಾರೆ. ಎಷ್ಟೋ ಮಂದಿ ಶಾಶ್ವತವಾಗಿ ಅಂಗವಿಕಲರಾಗುತ್ತಾರೆ. ಎಷ್ಟೋ ಮಂದಿ ತಮ್ಮ ಮಕ್ಕಳನ್ನು ಕಳೆದು ಕೊಂಡು ಅನಾಥರಾದರೆ, ಅದೆಷ್ಟೋ ಮಹಿಳೆಯರು ವಿಧವೆಯರಾಗುತ್ತಾರೆ. ಮಕ್ಕಳು ಅನಾಥರಾಗುತ್ತಾರೆ. ದೇಶದ ಆದಾಯದ ಬಹುಪಾಲು ಹಣವು ಶಸ್ತ್ರಾಸ್ತ್ರಗಳ ಖರೀದಿಯಲ್ಲಿ ವಿನಿಯೋಗವಾಗುತ್ತಿದೆ.

ಜಗತ್ತು ಇಂದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಉದಾಹರಣೆಗೆ ಬಡತನ, ಹಸಿವು, ಅನಕ್ಷರತೆ, ಅಪೌಷ್ಠಿಕತೆ, ಸಂಪತ್ತಿನ ಅಸಮಾನ ಹಂಚಿಕೆ, ನಿರುದ್ಯೋಗ, ಮೋಸ, ವಂಚನೆ, ಅಸಮಾನತೆ, ಭಯೋತ್ಪಾದನೆ, ಶಸ್ತ್ರಾಸ್ತ್ರಗಳ ಪೈಪೋಟಿ, ಯುದ್ಧದ ಭೀತಿಗಳು.

ಅಲ್ಲದೆ, ಜನಸಂಖ್ಯಾ ಸ್ಫೋಟ, ಬಹುರಾಷ್ಟ್ರೀಯ ಕಂಪನಿಗಳ ಹಾವಳಿ, ಹೊಸ ರೀತಿಯ ವಸಾಹತುಶಾಹಿಯ ಹಾವಳಿ, ಹಿಂದುಳಿದ/ಬಡ ದೇಶಗಳ ಮೇಲೆ ಬಲಿಷ್ಠ ರಾಷ್ಟ್ರಗಳ ನಿಯಂತ್ರಣ, ನೆರವಿನ ನೆಪದಲ್ಲಿ ದಬ್ಬಾಳಿಕೆ, ತಾಪಮಾನ ಏರಿಕೆ, ವಾಯು/ಜಲ/ಶಬ್ದ/ಬೆಳಕು ಮಾಲಿನ್ಯ ಸೇರಿದಂತೆ ಪರಿಸರ ಮಾಲಿನ್ಯ, ಇಂಧನದ ಕೊರತೆ, ರೋಗ-ರುಜಿನಗಳು, ಧಾರ್ಮಿಕ ಅಸಹಿಷ್ಣುತೆ, ಮುಲಭೂತ ವಾದ, ನೈತಿಕ ಅಧ:ಪತನ, ರೈತರ ಆತ್ಮಹತ್ಯೆ, ಭ್ರಷ್ಟಾಚಾರ, ಮೌಢ್ಯಾಚರಣೆ, ಆಡಂಬರ ಇವೂ ಜಗತ್ತಿನ ಮುಂದಿನ ಸಮಸ್ಯೆಗಳೇ ಆಗಿವೆ.

ಹೀಗೆ ಪ್ರಪಂಚದ ಎಲ್ಲಾ ಸಮಸ್ಯೆಗಳನ್ನು ಗಾಂಧೀಜಿ ತೋರಿದ ಮಾರ್ಗದ ಮೂಲಕ ಪರಿಹರಿಸಿಕೊಳ್ಳಬಹುದು.

ಯುವಜನರು ಇಂದು ವಿದೇಶಿ ವಸ್ತುಗಳಿಂದ ಆಕರ್ಷಿತರಾಗುತ್ತಿದ್ದಾರೆ. ಬಹು ರಾಷ್ಟ್ರೀಯ ಕಂಪನಿಗಳ ಪೈಪೋಟಿಯಲ್ಲಿ ಸ್ವದೇಶಿ ವಸ್ತುಗಳಿಗೆ ಬೇಡಿಕೆ ಕಡಿಮೆಯಾಗುತ್ತಿದ್ದು, ಸ್ಥಳೀಯ ಕಂಪನಿಗಳು ಮುಚ್ಚಿಹೋಗುತ್ತಿವೆ.

ಆದರೆ, ದಶಕಗಳಿಂದಲೂ ಕೆಂಪುಹಾಸಿನ ಸ್ವಾಗತವನ್ನು ಸರ್ಕಾರಗಳು ವಿದೇಶೀ ಕಂಪನಿಗಳಿಗೆ ನೀಡುತ್ತಿವೆ. ಮದ್ಯಪಾನ ದೇಹ ಮತ್ತು ಆತ್ಮಗಳೆರಡನ್ನು ಹಾಳು ಮಾಡುತ್ತದೆ.

ದನ್ನು 'ಕಳ್ಳತನ-ವ್ಯಭಿಚಾರಗಳಿಗಿಂತ ಹೇಯವಾದದ್ದು' (ಯಂಗ್ ಇಂಡಿಯಾ:8-9-21) ಂದ ಗಾಂಧೀಜಿ. 'ಈಗಲೇ ಎಚ್ಚೆತ್ತು ಈ ದುಷ್ಟಪದ್ಧತಿಯಿಂದ ದೂರವಾಗಿ'(ಯಂಗ್ ಂಡಿಯಾ:11-4-29)ಎಂದು ಕೂಡ ಜನರಿಗೆ ಕರೆಯಿತ್ತರು.

ಆದರೆ ಇಂದೂ ಮದ್ಯದ ಹಾವಳಿ ತಗ್ಗಿಲ್ಲ. ಮದ್ಯ ಸರಬರಾಜು ಮಾಡುವ ಾರ್ಟಿಗಳನ್ನು ಏರ್ಪಡಿಸುವುದು, ಅಂಥವುಗಳಲ್ಲಿ ಪಾಲುಗೊಳ್ಳುವುದು ದೊಡ್ಡಸ್ಥಿಕೆಯ ಂಕೇತವಾಗಿದೆ. ಬಡವರೂ ಕುಡಿತಕ್ಕೆ ದಾಸರಾಗಿದ್ದಾರೆ. ಚುನಾವಣೆಯ ಸಂಧರ್ಭಗಳಲ್ಲಿ ೆಂಡದ ಹೊಳೆಯೇ ಹರಿಯುತ್ತದೆ. ಸಿನೆಮಾ ಮುಂತಾದ ಸಮೂಹ ಮಾಧ್ಯಮಗಳೂ ುದ್ಯದ ದುಷ್ಪರಿಣಾಮವನ್ನು ಪ್ರಸಾರ ಮಾಡುತ್ತಿದೆ.

ಗಾಂಧೀಜಿಗೆ ಸಂಬಂಧಿಸಿದ ಇಂಥ ಅನೇಕ ವಿಷಯಗಳು ನಮಗೆ ಮಾರ್ಗದರ್ಶಿ. ಇಂದು ಪ್ರಪಂಚಕ್ಕೆ ಬೇಕಿರುವ ಮಾರ್ಗದರ್ಶನ ಗಾಂಧೀಜಿ ಅವರಲ್ಲಿ ಕಾಣುತ್ತೇವೆ.

ಅಂಬೇಡ್ಕರ್

ಶಿಕ್ಷಣ, ಸಂಘಟನೆ, ಹೋರಾಟ ಎಂಬ ಸಂದೇಶವನ್ನು ಕೊಟ್ಟ ಅಂಬೇಡ್ಕರ್, ಸಾಮಾಜಿಕ ಅಸಮಾನತೆ ಹೋಗುವವರೆಗೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ಎಂದೂ ಸಮಾಜದ ಅತ್ಯಂತ ಕೆಳಸ್ಥರದ ಶೂದ್ರರ ವಿಮೋಚನೆಯೇ ಸಾಮಾಜಿಕ ನ್ಯಾಯ. ಶತಶತಮಾನಗಳಿಂದ ಗುಲಾಮರಾದ ಜನತೆಗೆ ಸಮಾನತೆ ಒದಗಿಸಬೇಕೆಂದು ಆಗ್ರಹಿಸಿದರು. ಜಾತೀಯತೆಯನ್ನು ಖಂಡಿಸಿ, ಅದನ್ನು ನಿರ್ಮೂಲನೆ ಮಾಡುವ ದೃಢ ನಿರ್ಧಾರ ಹೊಂದಿದ್ದ ಅವರು ಅಂತರಜಾತಿ ವಿವಾಹವನ್ನು ಪ್ರೋತ್ಸಾಹಿಸಿದರು. ಆರ್ಥಿಕ, ನೈತಿಕ, ರಾಜಕೀಯ ಅಧಿಕಾರದ ಜೊತೆಗೆ ಸಾಮಾಜಿಕ ಅಧಿಕಾರವೂ ಎಲ್ಲಾ ಭಾರತೀಯರಿಗೆ ದಕ್ಕಬೇಕು ಎಂದು ಆಗ್ರಹಪಡಿಸಿದರು.

ಅಂಬೇಡ್ಕರ್ ಹೋರಾಟವು ದಲಿತ ವರ್ಗದಲ್ಲಿ ಸ್ವಾಭಿಮಾನವನ್ನು ಮೂಡಿಸಿದೆ. ಸಂವಿಧಾನದಲ್ಲಿ ಒದಗಿಸಲಾಗಿರುವ ಕ್ರಮಗಳಿಂದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಿಶೇಷ ಅವಕಾಶಗಳು ಲಭ್ಯವಾಗಿವೆ. ಈಗ ದಲಿತರಲ್ಲಿ ಜಾಗೃತಿ ಮೂಡಿದೆ. ಈಗ ಅವರು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಮುಂದಾಗಿದ್ದಾರೆ.

ಗಾಂಧೀ-ಅಂಬೇಡ್ಕರ್ ಹೋರಾಟಗಳಿಂದಾಗಿ ಮುನ್ನಡೆದಿರುವ ದೇಶವು ಇನ್ನೂ ಹಲವು ಹತ್ತು ಸವಾಲುಗಳಿಗೆ ಮುಖಾಮುಖಿಯಾಗಿ ನಿಂತಿದೆ. ವಿಕೇಂದ್ರೀಕರಣ ಪರಿಪೂರ್ಣ ಅರ್ಥದಲ್ಲಿ ಸಾಕಾರಗೊಂಡಿಲ್ಲ. ಭ್ರಷ್ಟಾಚಾರ ಕಡಿಮೆ ಆಗಿಲ್ಲ. ಅನಕ್ಷರತೆ ನಿರ್ಮೂಲನೆ ಆಗಿಲ್ಲ. ಕಾರ್ಯಾಂಗ-ಶಾಸಕಾಂಗಗಳು ಸಂಪೂರ್ಣವಾಗಿ ಜನಪರ ವಾಗಿ ಕಾರ್ಯನಿರ್ವಹಿಸುತ್ತಿಲ್ಲ. ನಾಗರಿಕ ಸಮಾಜ ತನ್ನ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ವಿಫಲವಾಗಿದೆ. ನಿರುದ್ಯೋಗ ಹೆಚ್ಚುತ್ತಿದೆ. ನಗರ/ಪಟ್ಟಣಗಳಿಗೆ ಹಳ್ಳಿಗಳಿಂದ ವಲಸೆ ವಿಪರೀತ ಆಗುತ್ತಿದೆ. ರೈತರ ಬವಣೆ ನೂರ್ಮಡಿಗೊಂಡಿದೆ. ಜನಸಾಮಾನ್ಯರಿಗೆ ಗೌರವಯುತ ಜೀವನ ಗಗನಕುಸುಮವಾಗುತ್ತಿದೆ.

ಗಾಂಧೀಜಿ ಅವರ ಕನಸು ನನಸಾಗಬೇಕೆಂದರೆ, ತಳಮಟ್ಟದಿಂದ ಅಧಿಕಾರ ಹಂಚಿಕೆಯಾಗಬೇಕು. ಸ್ವಾವಲಂಬನೆ ಸಾಧ್ಯವಾಗಬೇಕು. ಭ್ರಷ್ಟಾಚಾರ ಇಲ್ಲವಾಗಬೇಕು. ಮದ್ಯಪಾನ ತೊಲಗಬೇಕು. ಶ್ರೀಮಂತರು ತಮ್ಮಲ್ಲಿನ ಸಂಪತ್ತಿಗೆ ಮಾಲೀಕರಾಗದೆ, ಟ್ರಸ್ಟೀಗಳಾಗಬೇಕು. ನಾಗರಿಕ ಸಮಾಜ ಜವಾಬ್ದಾರಿಯನ್ನು ನಿರ್ವಹಿಸಬೇಕು.

ಹಾಗೆಯೆ, ಅಂಬೇಡ್ಕರ್ ಕನಸು ನನಸಾಗಬೇಕೆಂದರೆ, ಎಲ್ಲರಿಗೆ ಕಡ್ಡಾಯ, ಉಚಿತ ಮತ್ತು ಸಮಾನ ಶಿಕ್ಷಣ ದೊರಕಬೇಕು. ಎಲ್ಲಾ ಕ್ಷೇತ್ರಗಳಲ್ಲಿ ಸಮಾನತೆ ಸ್ಥಾಪನೆಯಾಗಬೇಕು. ವಂಚಿತರಿಗೆ ವಿಶೇಷ ಅವಕಾಶಗಳನ್ನು ಪ್ರಾಮಾಣಿಕವಾಗಿ ಒದಗಿಸಬೇಕು. ಇರುವ ಎಲ್ಲಾ ಕಾನೂನುಗಳು ಅತಿ ತುರ್ತಾಗಿ ಕಟ್ಟುನಿಟ್ಟಾಗಿ ಜಾರಿಗೊಳ್ಳಬೇಕು.

ಆಕರ ಗ್ರಂಥಗಳು

- ಡಾ. ಹೊ. ಶ್ರೀನಿವಾಸಯ್ಯ, 2012–'ಮದ್ಯಪಾನದ ವಿರುದ್ಧ ಮಹಾತ್ಮ ಗಾಂಧಿ'.
- ಡಾ. ಮೀನಾ ದೇಶಪಾಂಡೆ ಮತ್ತು –ರಾಜಕೀಯ ಸಿದ್ಧಾಂತ : ಸಮಕಾಲೀನ ಚಿಂತನೆ – ಪ್ರೊ. ಬಿ.ಕೆ. ದತ್ತಾತ್ರಿ, ಭಾರತೀಯ ವಿದ್ಯಾಭವನ, ಬೆಂಗಳೂರು.
- ಡಾ. ಜಿ.ಆರ್. ಪೂರ್ಣಿಮಾ–ಪ್ರಮುಖ ರಾಜಕೀಯ ಸಿದ್ಧಾಂತಗಳು ಮತ್ತು ಎಂ.ಎನ್. ಸುರೇಶ್ ಕುಮಾರ್ ಸಪ್ನ ಬುಕ್ ಹೌಸ್. ಬೆಂಗಳೂರು
- **Interview with Swamy and Ganesh-Mahatma Gandhi Rural Energy Institution, Jakkur, Bengaluru.**
- **Nagesh Hegde's article in Prajavani and Interview with him on 20-3-2017 at Govt. First Grade College, Kengeri, Bengaluru-60**

ಸಾಮಾಜಿಕ ನ್ಯಾಯ ಮತ್ತು ಬಸವ ಚಿಂತನೆ

ಡಾ. ಬಿ.ಎನ್. ಶಾರದ

ವಚನ ಚಳುವಳಿಯ ಅಗ್ರಗಣ್ಯರಾದ ಬಸವಣ್ಣನವರು ಶತಮಾನಗಳವರೆಗೂ ತಮ್ಮ ವಿಚಾರಗಳಿಂದ ಜನರ ಬದುಕನ್ನು ಪ್ರಭಾವಿಸುತ್ತಾ ಬಂದಿರುವ ಮಹಾ ಮಾನವತಾವಾದಿ. ಅಂಗೈ ಹುಣ್ಣಿನಂತೆ ಸ್ಪಷ್ಟವಾಗಿ ದೃಗ್ಗೋಚರವಾಗಿದ್ದ ಸಾಮಾಜಿಕ ಅಸಮಾನತೆಯ ನಿರ್ಮೂಲನೆಗೆ, ಸಾಂಸ್ಕೃತಿಕ, ಆರ್ಥಿಕ ಆಂದೋಲನ ನಡೆಸಿದವರು.

ಇಂದು ಸಮಾನತೆಪರ ಕಾನೂನು ಹಾಗೂ ಸಂವಿಧಾನ ಇದ್ದರೂ, ಅಸಮಾನತೆ ಅನೇಕ ರಂಗಗಳಲ್ಲಿ ಉಳಿದಿದೆ. ಅದು ಹುಟ್ಟುಹಾಕುತ್ತಿರುವ ಸಮಸ್ಯೆಗಳು ಗುಪ್ತಗಾಮಿನಿಯಂತೆ ಜೀವನದುದ್ದಕ್ಕೂ ತಳುಕು ಹಾಕಿಕೊಂಡು, ಪರಂಪರೆಯಿಂದ ಪರಂಪರೆಗೆ ಪ್ರವಹಿಸುತ್ತಿದೆ. ಇದನ್ನು ಎದುರಿಸಲು ಬಸವಣ್ಣನವರ ಚಿಂತನೆಗಳ ಜೊತೆಗೆ ಮುಖಾಮುಖಿಯಾಗಬೇಕಾಗುತ್ತದೆ.

ವಿವಿಧ ಧರ್ಮಗಳ ಹೆಸರಿನಲ್ಲಿ ಸಮಾಜ ಕಲಹಕ್ಕೀಡಾಗಿ, ಧರ್ಮಗಳ ಮೇಲಾಟದಿಂದಾಗಿ, ಶ್ರೇಣೀಕರಣಕ್ಕೆ ಒಳಗಾಗುತ್ತಾ, ಜನರನ್ನು ಕೊಲೆ, ಹಿಂಸೆಗಳಿಗೆ ಪ್ರಚೋದಿಸುವ ಹತ್ತಾರು ದೇವರುಗಳ ಪೈಪೋಟಿಯನ್ನು ಹತ್ತಿಕ್ಕುವ ಏಕದೇವತಾರಾಧನೆಯನ್ನು ಪ್ರತಿಪಾದಿಸುವ ಮೂಲಕ ಬಸವಣ್ಣನವರು ಮಾನವ ನಿರ್ಮಿತ ಅಸಮಾನತೆ, ಅನರ್ಹತೆ, ವೈಷಮ್ಯವನ್ನು ತೊಡೆದು ಹಾಕುವ ಯಾವ ಪ್ರಯತ್ನ ಮಾಡಿದ್ದಾರೆ. ಧರ್ಮವನ್ನು ಸಮಾಜದ ಒಂದು ವರ್ಗದ ಜನ ತಮ್ಮ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳಲು ಬಳಸಿದ್ದನ್ನು, ಅದನ್ನು ಇತರರ ಶೋಷಣೆಗೆ ಬಳಸಿಕೊಳ್ಳುವುದನ್ನು ಖಂಡಿಸುತ್ತಾರೆ. ಡಂಭಾಚಾರದ ಬ್ರಾಹ್ಮಣ್ಯವನ್ನು ಬಸವಣ್ಣ ವಿರೋಧಿಸುತ್ತಾರೆಯೇ ಹೊರತು ಬ್ರಹ್ಮಜ್ಞಾನವನ್ನಲ್ಲ. ಅಂಧಶ್ರದ್ಧೆಯಿಂದ ಆಧ್ಯಾತ್ಮದೆಡೆಗೆ ಎಲ್ಲರನ್ನೂ ಒಯ್ಯುವ ಪ್ರಯತ್ನ ಮಾಡುತ್ತಾರೆ. ಅವರು ಜಾತಿಯನ್ನು ನಿರಾಕರಿಸದೆ, ಜಾತಿವಾದಿಗಳ ಸಂಕುಚಿತತೆಯನ್ನು ಟೀಕಿಸುತ್ತಾರೆ. "ಅಡ್ಡ ದೊಡ್ಡ ನಾನಲ್ಲಯ್ಯ, ದೊಡ್ಡ ಬಸುರು ನನಗಿಲ್ಲಯ್ಯ" ಎನ್ನುವುದರ ಮೂಲಕ ತಮ್ಮನ್ನು ಕನಿಷ್ಠ ಸ್ಥಾನದಲ್ಲಿ ಗುರುತಿಸಿ ಕೊಂಡರೂ, ತಮ್ಮ ಅನುಯಾಯಿಗಳಿಗೆ ಸರ್ವಸಮಾನತೆಯ ಮೌಲ್ಯವನ್ನು ಪ್ರತಿಪಾದಿಸುತ್ತಾರೆ.

ಸಂಕುಚಿತತೆಗೆ ವಿರೋಧಿಯಾಗಿದ್ದ ಬಸವಣ್ಣನವರು 'ಕೊಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲಯ , ಸಕಲ ಜೀವಾತ್ಮರಿಗೆ ಲೇಸ ಬಯಸುವವನೇ ಕುಲಜ" ಎಂದಿದ್ದಾರೆ. ಲಿಂಗ ತಾರತಮ್ಯದ ವಿರುದ್ಧ ದನಿಯೆತ್ತುವ ಇವರು ಸ್ತ್ರೀಯರಿಗೆ ಲಿಂಗಧಾರಣೆ ಮಾಡಿಕೊಳ್ಳುವ, ಶಿವಾರಾಧನೆ ಮಾಡುವ, ಆಕೆಯ ಮೇಲೆ ಹೊರಿಸಿದ್ದ ಹೊಲೆ, ಸೂತಕ, ಮೈಲಿಗೆಗಳ ನಿರ್ಬಂಧ ನಿವಾರಿಸುವ, ವಿಧವೆಯರು, ಪರಿತ್ಯಕ್ತೆಯರು, ದಾಸಿಯರು, ವೇಶ್ಯೆಯರಿಗೆ ಸಮಾನ ಗೌರವ, ಪುನರ್ವಿವಾಹ, ಬದುಕುವ ಹಕ್ಕನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಹೋರಾಟ ನಡೆಸಿದ್ದು ಇಂದಿಗೂ ಅನುಸರಣೀಯ.

12ನೇ ಶತಮಾನದಲ್ಲಿ ಜನರು ಆತ್ಮಗ್ಲಾನಿಯಲ್ಲಿದ್ದಾಗ, ಪ್ರಭುತ್ವದ ಪ್ರಾಬಲ್ಯವಿದ್ದಾಗ ಜನಸಾಮಾನ್ಯರ ನಡುವಿನಿಂದಲೇ ಅರಳಿದ ನಾಯಕತ್ವ ಬಸವಣ್ಣನವರದ್ದು. ರಾಜ ಮನೆತನಗಳ ಹಿಡಿತದ ನಡುವೆಯೇ ಕಾಯಕ ಧರ್ಮ, ಸದಾಚಾರ, ಸನ್ಮಾರ್ಗ, ಭಕ್ತಿ-ಪ್ರೇಮ-ವಿನಯ, ಸಹಬಾಳ್ವೆ, ಜಾತ್ಯಾತೀತತೆ, ಅನುಭವ ಮಂಟಪದಲ್ಲಿ ಸಮಾನತೆ, ಸೋದರತ್ವ, ವಿಶ್ವಕುಟುಂಬ ಭಾವನೆ, ಅಂತರಂಗ-ಬಹಿರಂಗ ಶುದ್ಧಿಗೆ ಆದ್ಯತೆ, ಆಡು ಮಾತಿನ ಬಳಕೆ, ಜೀವನದ ಅರ್ಥ ಹಾಗೂ ಗುರಿಗಳ ಪುನರ್ ಅರ್ಥೈಸುವಿಕೆ, ಅಸ್ಪೃಶ್ಯರು ಅನುಭಾವಿಗಳಾಗುವ ಅವಕಾಶ, ಕರ್ಮ ಸಿದ್ಧಾಂತ ನಿರಾಕರಣೆ, ದಯೆಯನ್ನು ಧರ್ಮದ ಕೇಂದ್ರವಾಗಿಸುವಿಕೆ ಇತ್ಯಾದಿಗಳ ಮೂಲಕ ಬದುಕಿನ ಆಮೂಲಾಗ್ರ ಪರಿವರ್ತನೆಗೆ ಅವರು ಮುಂದಾದರು. ಚಿಂತನೆ, ಪ್ರಗತಿಪರ ಧೋರಣೆಗಳಲ್ಲಿ ಬಸವಣ್ಣನವರು ತಮ್ಮ ಕಾಲಘಟ್ಟಕ್ಕಿಂತ ತುಂಬಾ ಮುಂದಿದ್ದರು.

ಬಸವಣ್ಣ ತಮ್ಮ ಇತಿ-ಮಿತಿಗಳನ್ನು ಒಪ್ಪಿಕೊಂಡು, ಅದನ್ನು ಪರಿವರ್ತಿಸಿ ಕೊಳ್ಳಲು ಪ್ರಯತ್ನಿಸಿದವರು. ತಾವು ಬ್ರಾಹ್ಮಣ, ಪುರುಷ, ಅಧಿಕಾರಿ ಎಂಬ ಮೇಲರಿಮೆಯ ಪೊರೆಗಳನ್ನು ಕಳಚಿಕೊಂಡು, ಸಮಾಜದ ತೀರ ಕೆಳಸ್ತರದ ದಲಿತರ, ಮಹಿಳೆಯರ ಜೊತೆ ಗುರುತಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಅವರದ್ದಾಗಿತ್ತು. ಇದರ ಹಿನ್ನೆಲೆಯಲ್ಲಿ ಎದ್ದು ಕಾಣುವುದು ಅವರಿಗಿದ್ದ ಮಾನವಪ್ರೇಮ.

ಧಾರ್ಮಿಕ-ಸಾಂಸ್ಕೃತಿಕ ತಾತ್ವಿಕತೆಯನ್ನು ಪ್ರತಿಪಾದಿಸಿದ ಬಸವಣ್ಣನವರಿಗಿದ್ದ ಮುಖ್ಯ ಕಳಕಳಿಯೆಂದರೆ (1) ವೈದಿಕ ಯಾಜಮಾನಿಕೆಯ ವಿರುದ್ಧ ಹೂಡುವ ಬಂಡಾಯ (2) ಕೆಳಜಾತಿ ಹಾಗೂ ಅವರ ಕಸುಬುಗಳಿಗೆ ನೀಡಬೇಕಾದ ಆದ್ಯತೆ.

ಕಾಲ ಬದಲಾದಂತೆ, ಜನರ ಮನೋಧರ್ಮ ಬದಲಾದಂತೆ ಅದೇ ವಚನಗಳ ಅರ್ಥವೂ ಬದಲಾಗುತ್ತಿದೆ. 70ರ ದಶಕದಲ್ಲಿ ಬ್ರಾಹ್ಮಣರ ಯಾಜಮಾನಿಕೆಯನ್ನು ಹಿಮ್ಮೆಟ್ಟಿಸುವ ಭರದಲ್ಲಿ ಮಾರಿಮಸಣಿಯರ ಪೂಜೆಯನ್ನು ಟೀಕಿಸಲಾಯಿತು. ಆದರೆ ತಳ ಸಂಸ್ಕೃತಿ ಅವರು 90 ರ ದಶಕದಲ್ಲಿ ತಮ್ಮ ಹಿರಿಯರು ಬದುಕಿದ ಪರಂಪರೆಯನ್ನು ಸಹನೆಯಿಂದ ನೋಡಬೇಕೆಂದು, ಅದೇ ವಚನಗಳನ್ನು ತಮ್ಮ ಸಂಸ್ಕೃತಿಯ ವಿಶೇಷ ಚಹರೆಗಳೆಂಬಂತೆ ಭಾವಿಸಿದರು. ತಮ್ಮ ದೈವ ನಿರಾಕರಣೆಗೆ ಒಳಗಾಗದಂತೆ ಎಚ್ಚರವಹಿಸಿದರು. ಒಮ್ಮೆ ಜನಪರವಾದ ವಿಚಾರಗಳೇ ಮತ್ತೊಮ್ಮೆ ಜನಾಂಗಗಳ ನಡುವಿನ

ಸಂಘರ್ಷಕ್ಕೆ ಕಾರಣವಾಗುತ್ತದೆ. ಧರ್ಮಎಂಬುದು ವ್ಯಕ್ತಿಯ ಜ್ಞಾನ ಹಾಗೂ ಕರ್ಮಗಳಿಂದ ಸಂಸ್ಕಾರಗೊಳ್ಳಬೇಕಾದ ಸಾಧನೆ ಎಂಬ ನಂಬಿಕೆ ಇಂದು ಅರ್ಥಹೀನವಾಗಿದೆ. ಜಾತಿಯ ವಿಚಾರ ಸವಲತ್ತುಗಳಿಗಾಗಿ, ಸರ್ವಾಧಿಕಾರ ಕ್ಕಾಗಿ ಬಳಕೆಯಾಗುತ್ತಿದೆ.

ಬಸವಣ್ಣನವರ ಕಾಲದಲ್ಲಿ ಕಾಯಕ-ದಾಸೋಹಗಳ ಮೂಲಕ ಸಮ- ಸಮಾಜ, ಶ್ರಮ- ಸಮಾಜದ ಆಶಯ, ಕಾಗೆ-ಕೋಳಿಗಳ ಪ್ರತಿಮೆಗಳ ಮೂಲಕ ಸಹಕಾರ ತತ್ವ ಬಿಂಬಿತವಾಗಿತ್ತು. ಆರ್ಥಿಕ ಹಿರಿತನ, ಸಾಮಾಜಿಕ ಹಿರಿತನವಾಗಿ ಕೆಲವರ ಕೈ ಸೇರುವುದನ್ನು ಕಾಯಕ ತತ್ವ ನಿರಾಕರಿಸುತ್ತದೆ. ಆರ್ಥಿಕ ಸ್ವಾವಲಂಬನೆಯ ಜೊತೆಗೆ ದುರಾಸೆ ಮುಕ್ತ (ಆಯ್ದಕ್ಕಿ ಲಕ್ಕಮ್ಮನ ವಚನಗಳು) ಸಮಾಜದ ಪರಿಕಲ್ಪನೆಗಳು ರೂಪು ತಾಳುತ್ತವೆ. ಸಂಪತ್ತಿನ ಸಂಗ್ರಹಣೆ ನಿರ್ಮಿಸಬಹುದಾದ ಅಸಮತೋಲನವನ್ನು ಸರಿಪಡಿಸಲು ದಾಸೋಹ ಕಂಡುಬರುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳ ಸ್ವತ್ತು ಅವರಿಗೇ ಸೇರಬೇಕೆಂಬ ಹಂಬಲದೆ. "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲವುದೇ?" ಎಂಬ ನುಡಿ ಅಪ್ರಾಮಾಣಿಕ ಧನ ಸಂಚಯ, ಲೋಭ, ದುರಾಸೆಗಳನ್ನು ಖಂಡಿಸುತ್ತದೆ.

ಸಿರಿತನಕ್ಕೆ ಮನ್ನಣೆ ದೊರಕುವುದನ್ನು ಬಸವಣ್ಣ ಹೀಗೆ ಗುರುತಿಸುತ್ತಾರೆ. "ಕುದುರೆ ಏರಿದವರ ಕಂಡರೆ, ಹೊರಳಿ ಬಿದ್ದು ಕಾಲ ಹಿಡಿವರು, ಬಡ ಭಕ್ತರು ಬಂದರೆ ಎಡೆಯಿಲ್ಲ, ಅತ್ತ ಸರಿ ಎಂಬರು". ಧನಕ್ಕೆ ಒಲ್ಲದ ತಮ್ಮ ಮನಸ್ಸಿನ ಬಗ್ಗೆ "ಹೊನ್ನಿನೊಳಗೊಂದರೆಯೂ, ಸೀರೆಯೊಳಗೊಂದೆಳೆಯು, ಇಂದಿಗೆ ನಾಳಿಂಗೆ ಬೇಕೆಂದರೆ ನಿಮ್ಮಾಣೆ" ಎಂದಿದ್ದಾರೆ. 'ಹಾವು ತಿಂದವರ ನುಡಿಸಬಹುದು, ಸಿರಿಗರ ಬಡಿದವರ ನುಡಿಸಲು ಬಡತನವೆಂಬ ಮಂತ್ರವಾದಿ ಬರಬೇಕು' ಎನ್ನುತ್ತಾರೆ. ಸಿರಿಯೆಂಬುದು ಸಂತೆಯ ಮಂದಿಯಂತೆ ತಾತ್ಕಾಲಿಕ. "ಚಿತ್ತಶುದ್ಧದಲಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದರತ್ತ ಲಕ್ಷ್ಮಿ ತಾನಾಗಿಪ್ಪಳು", ಎಂದು ಸಿರಿತನವನ್ನು ಅನಾದರದಿಂದ ಕಾಣುತ್ತಾರೆ. ಮನುಧರ್ಮ ಶಾಸ್ತ್ರದಿಂದಾಗಿ ಸಾವಿರಾರು ವರ್ಷಗಳಿಂದ ದಲಿತರ ದುಡಿಮೆಯನ್ನು ಕಬಳಿಸುತ್ತಾ ಬರಲಾಗಿದೆ. ಅದಕ್ಕೆ ಮುಖಾಮುಖಿ ಯಾಗುವಂತೆ, ಶೂದ್ರರ ಜಾತಿ ಸೂತಕವನ್ನು ಕಳೆದು, ಅವರ ವೃತ್ತಿಯನ್ನೇ ಕಾಯಕ ಸೂಚಿಗಳಾಗಿಸಿ, "ಜಾತಿ ಸಂಕರವಾದ ಬಳಿಕ ಕುಲವ ನರಸುವರೇ?" ಎಂದು ಕಾಯಕ ಜೀವಿಗಳ ಕೇಂದ್ರಿತ ವರ್ಗ ನಿರ್ಮಿಸುತ್ತಾರೆ. "ಭಕ್ತರಲ್ಲಿ ಕುಲವ ನರಸಿದರೆ ನಿಮ್ಮ ರಾಣಿವಾಸದಾಣೆ" ಎಂದು ಭಕ್ತರ ಸರ್ವಸಮಾನತೆ ಸಾರುತ್ತಾರೆ.

ನಡೆ-ನುಡಿಗಳ ಶುದ್ಧತೆಯ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಬಸವಣ್ಣನವರು, "ವಿಪ್ರರು ನುಡಿದಂತೆ ನಡೆಯರು, ತನಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ" ಎಂದು ಟೀಕಿಸುತ್ತಾರೆ. ತಮ್ಮ ಹುಟ್ಟನ್ನೇ ಅಲ್ಲಗಳೆಯುವ ಅವರು, "ವ್ಯಾಸ ಬೋಯಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ...ಮಡಿವಾಳನೆಂಬೆನೆ ಮಾಚಯ್ಯನ? ಎಂದು ಕೇಳುತ್ತಾರೆ. ಮತಾಂತರ, ದಾಸೋಹ, ಅಂತರಜಾತಿ ವಿವಾಹಗಳಂಥ ಕ್ರಿಯಾತ್ಮಕ ಯೋಜನೆಗಳ ಮೂಲಕ ಜಾತಿ ತಾರತಮ್ಯವನ್ನು ಹೋಗಲಾಡಿಸಲು ಯತ್ನಿಸುತ್ತಾರೆ. "ಆವ ಕುಲವಾದರೇನು? ಶಿವಲಿಂಗವಿದ್ದವನೇ ಕುಲಜನು"; "ಕುಲವನರಸುವರೆ ಶರಣರಲಿ,

ಜಾತಿ ಸಂಕರವಾದ ಬಳಿಕ" ಎನ್ನುತ್ತಾರೆ. ಕೆಳಜಾತಿಯವರೂ ಕೂಡ ತಮ್ಮ ಕ್ಷುದ್ರ ಆಚರಣೆಗಳು ಮಾಂಸ, ಮದ್ಯ ಸೇವನೆಯಿಂದ ಹೊರಬರಬೇಕೆನ್ನುತ್ತಾರೆ. "ಕೊಲ್ಲೆನಯ್ಯ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಚೆಗೆ" ಎಂದು ಹೇಳುತ್ತಾರೆ.

20-21ನೇ ಶತಮಾನಗಳಲ್ಲಿ ಸಾಮಾಜಿಕ ನ್ಯಾಯ ಎಂಬುದು ಇನ್ನೂ ಸಂಕೀರ್ಣವಾಗುತ್ತಿದೆ. ಬಸವಣ್ಣ ಕೂಡ ಬಳಕೆ ಮಾಡಿಕೊಳ್ಳಲ್ಪಡುತ್ತಿದ್ದಾನೆ. ನಗರೀಕರಣ, ಬಂಡವಾಳಶಾಹಿ ನೀತಿ ಹೆಣ್ಣನ್ನು ಹಿಂದಿನ ಮಡಿವಂತಿಕೆ ಮತ್ತು ನಿರ್ಬಂಧಗಳಿಂದ ಮುಕ್ತವಾಗಿಸುತ್ತದಾದರೂ, ಹೊಸ ರೀತಿಯ ಮಡಿವಂತಿಕೆ-ನಿರ್ಬಂಧಗಳು ಹೆಣ್ಣಿನ ಮೇಲೆ ವಿಧಿಸಲ್ಪಡುತ್ತಿವೆ. ಸರಕು ಸಂಸ್ಕೃತಿ ವಿಜೃಂಭಿಸುತ್ತಿದೆ. ಹೆಣ್ಣು ಮಾರಾಟದ, ಪ್ರದರ್ಶನದ ವಸ್ತುವಾಗಿಯೇ ಪರಿಗಣಿತಳಾಗುತ್ತಿದ್ದಾಳೆ. ಶೋಷಣೆಯ ಹೊಸ ದಿಗಂತ ತೆರೆದಿದೆ. ಸ್ವಾತಂತ್ರ್ಯ, ಸಮಾನತೆಯ ಹೆಸರಿನಲ್ಲಿ ಬೌದ್ಧಿಕ, ಆರ್ಥಿಕ ಶಕ್ತಿ ಹೆಚ್ಚುವುದರೊಂದಿಗೆ, ಹೆಣ್ಣು ತನಗೇ ಅರಿಯದಂತೆ ಭ್ರಮಾತ್ಮಕ ಜಗತ್ತಿನ ಒಳಸಂಚಿಗೂ ಬಲಿಯಾಗುತ್ತಿರುವುದು ವಿಪರ್ಯಾಸ.

ಇನ್ನು ಜಾತಿಯ ವಿಷಯ. ಬಸವಣ್ಣ ಮತ್ತು ವಚನ ಚಳವಳಿಯು ಜಾತಿಯನ್ನು ಸಂಪೂರ್ಣವಾಗಿ ಖಂಡಿಸಿತು; ಅದನ್ನು ಮುರಿಯಲು ಮುಂದೆ ಬಂತು. ಆದರೆ, ಇಂದು ಎತ್ತ ನೋಡಿದರೂ, ಜನರು ತಮ್ಮದೇ ಜಾತಿಯ ಕೋಟೆಗಳನ್ನು ಕಟ್ಟಿಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಬಲಿಷ್ಠ ಮತ್ತು ದುರ್ಬಲ ಎಲ್ಲ ಜಾತಿಗಳಿಗೂ ಮಠಗಳು ಹುಟ್ಟುತ್ತಿವೆ; ಪ್ರತಿಯೊಂದು ಜಾತಿಯವರನ್ನು ಸೆಳೆದುಕೊಳ್ಳಲು ರಾಜಕೀಯ ಪಕ್ಷಗಳು, ವ್ಯಾಪಾರ-ಉದ್ಯಮಗಳು ತರಾತುರಿಯಲ್ಲಿವೆ. ಜಾತಿ ಅಸಮಾನತೆಯ ನಿರ್ಮೂಲನೆ ಸಾಧ್ಯವಾಗುತ್ತಿಲ್ಲ. ಬಸವ ಯುಗದಲ್ಲೇ ಮೂಢನಂಬಿಕೆಗಳ ಮೇಲೆ ಭಾರಿ ದೊಡ್ಡ ಏಟನ್ನು ಹಾಕಲಾಯಿತು. ಈ 21ನೇ ಶತಮಾನದಲ್ಲಿ ವೈಜ್ಞಾನಿಕವಾಗಿ ಸಮಾಜ ಮುಂದುವರೆದಿದ್ದರೂ, ವೈಚಾರಿಕವಾಗಿ ತುಂಬಾ ಸಮಾಜ ಹಿಂದುಳಿದಿದೆ. ಪೂಜೆ, ಹೋಮ, ಜ್ಯೋತಿಷ್ಯಗಳ ಹಾವಳಿ ತಗ್ಗಿಲ್ಲ.

ಬಸವಣ್ಣನವರು ವೈದಿಕತ್ವ, ಯಜಮಾನಿಕೆಗಳ ವಿರುದ್ಧ ದೃಢ ನಿಲುವು ತಾಳಿ, ಅವುಗಳನ್ನು ಧಿಕ್ಕರಿಸಿ ನಿಂತರು. ಆದರೆ ಇಂದು ಇವುಗಳ ವಿರುದ್ಧ ಹೊರ ಪರಿಧಿಯಲ್ಲಿ ನಿಂತು ಮಾತನಾಡಲಾಗುತ್ತಿದೆ. ವೈದಿಕತ್ವ ಪ್ರತಿಯೊಂದು ಜಾತಿಯಲ್ಲೂ ಬೆಳೆದಿರುವುದನ್ನು ಕಾಣಬಹುದು. ಬಸವ ತತ್ವ ಪ್ರತಿಪಾದಕರು ತಾವು ಎಂದು ಹೇಳಿಕೊಳ್ಳುವವರು ಸಮಾಜದಲ್ಲಿನ ಅನ್ಯಾಯ, ಅಸಮಾನತೆ, ಲಿಂಗ ತಾರತಮ್ಯ ಇತ್ಯಾದಿಗಳನ್ನು ಖಂಡಿಸುವ, ಅವುಗಳ ವಿರುದ್ಧ ಧ್ವನಿ ಎತ್ತುವ ಪ್ರಯತ್ನಗಳಿಗೆ ಮುಂದಾಗುತ್ತಿಲ್ಲ. ಹಳ್ಳಿಗಳಲ್ಲಿ ದಲಿತರ ಮೇಲೆ ಹಲ್ಲೆ ನಡೆದಾಗ, ಬಸವ ತತ್ವದ ಮೂಲಕ ಅವರನ್ನು ಒಗ್ಗೂಡಿಸುವ ಪ್ರಕ್ರಿಯೆ ನಡೆಯುತ್ತಿಲ್ಲ. ಪ್ರತಿಯೊಂದು ಜಾತಿಗೂ ಮಠ ಒದಗಿಸುವ ಪ್ರಯತ್ನ ನಡೆಯುತ್ತಿದ್ದು, ಒಂದು ಜಾತಿ/ಮಠ ಇನ್ನೊಂದು ಜಾತಿ/ಮಠದ ವಿರುದ್ಧ ನಿಲ್ಲುವ ಅಪಾಯ ಕಾಣುತ್ತದೆ. ಏಕೆಂದರೆ, ಈ ಮಠಗಳು ಜಾತಿ ಸಂಘಟನೆಯನ್ನೇ ತಮ್ಮ ಪ್ರಮುಖ ಅಜೆಂಡಾ ಮಾಡಿಕೊಂಡಂತಿವೆ. ದೇವರು, ಜಾತಿ, ಧರ್ಮದ ಹಂಗಿಲ್ಲದೆ ಕೇವಲ ಮನುಷ್ಯರಾಗಿ ಮಾತ್ರ ಬದುಕುವ

ಾರಿಯನ್ನು ಕಂಡುಕೊಳ್ಳಲು ಮುಂದಾಗದ ಬೌದ್ಧಿಕ ಸೋಲು ಮತ್ತು ಪ್ರಾಮಾಣಿಕತೆಯ ೀವ್ರ ಕೊರತೆ ಎದ್ದು ಕಾಣುತ್ತಿದೆ.

ಸಾಮಾಜಿಕ ನ್ಯಾಯವನ್ನು ಸಾಕಾರಗೊಳಿಸಲು ನಿರ್ದಿಷ್ಟ ಮಾರ್ಗವನ್ನು ಅನುಸರಿಸುವಲ್ಲಿ ಂಡು ಬಂದಿರುವ ವೈಫಲ್ಯಕ್ಕೆ ಮುಖ್ಯ ಕಾರಣವನ್ನಾಗಿ ನಾವು ಬಸವ ತತ್ವದಿಂದ ುಮುಖಗೊಳ್ಳುತ್ತಿರುವುದನ್ನು ನೀಡಬಹುದು. ಆದಾಗ್ಯೂ, ಬಸವಣ್ಣನವರ ಚಿಂತನೆಗಳಿಗೆ ಲ್ಲಾ ಕಾಲದ ಮನಸ್ಸನ್ನು ಕಾಡುವ ಚೈತನ್ಯವಿದೆ ಎಂಬುದರಲ್ಲಿ ನಂಬಿಕೆ ಇಡುವುದು, ಮಾಜವನ್ನು ಇತ್ತ ಹೊರಳಿಸುವ ಪ್ರಯತ್ನಗಳಲ್ಲಿ ಪ್ರಾಮಾಣಿಕವಾಗಿ ತೊಡಗುವುದು ಗತ್ಯ.

ರಾಮರ್ಶನ ಕೃತಿಗಳು

- ವಚನಸಾಹಿತ್ಯ – ಎಂ.ಚಿದಾನಂದಮೂರ್ತಿ
- ಬಸವಣ್ಣನವರ ವಚನ ಸಂಪುಟ – ಸಂ.ಡಾ.ಎಂ.ಎಂ.ಕಲುಬುರ್ಗಿ
- ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ
- ಕನ್ನಡ ವಿಶ್ವಕೋಶ
- ಸ್ಪೀಕಿಂಗ್ ಆಫ್ ಶಿವ – ಎ,ಕೆ. ರಾಮಾನುಜನ್
- ವಚನ ಸಾಹಿತ್ಯ – ಗದಿಗಯ್ಯ ಎಸ್.ಹಿರೇಮಠ್
- ವಚನಾಸ್ ಆಸ್ ಕಾಸ್ಟ್ ಕ್ರಿಟಿಕ್– ಡಂಕಿನ್ ಜಳಕಿ, ಮಣಿಪಾಲ್ ವಿಶ್ವವಿದ್ಯಾಲಯ

ಗಾಂಧಿ/ಅಂಬೇಡ್ಕರ್ ಅವರ ಆಶಯದ ಆರೋಗ್ಯಕರ ಸಮಾಜ

ಟಿ.ಜಿ. ಶಿವಕುಮಾರ್

ಸ್ವಾತಂತ್ರ್ಯ ಇತಿಹಾಸದ ದಿವ್ಯಚೇತನಗಳೆಂದರೆ ಮಹಾತ್ಮ ಗಾಂಧಿ ಮತ್ತು ಡಾ॥ ಬಾಬಾಸಾಹೇಬ್ ಅಂಬೇಡ್ಕರ್. ಸವರ್ಣೀಯ ಸಮುದಾಯದಿಂದ ಬಂದ ಗಾಂಧೀಜಿ ಅವರು ಅಸ್ಪೃಶ್ಯ ಸಮುದಾಯದಿಂದ ಬಂದ ಬಾಬಾಸಾಹೇಬ್‌ರ ಚಿಂತನೆಗಳು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಬುನಾದಿ. ಅಂದಿನ ಕ್ರೂರ ಸಾಮಾಜಿಕ ಜಾತಿ ವ್ಯವಸ್ಥೆಯ ವಿರುದ್ಧ ಕಟುವಾಗಿ ಟೀಕಿಸಿ, ಸೆಟೆದು ನಿಂತವರೇ ಬಾಬಾಸಾಹೇಬ್. ಸನಾತನ ಧರ್ಮದ ಕ್ರೂರ ಆಚರಣೆಗಳನ್ನು ವಿರೋಧಿಸುತ್ತಿದ್ದ ಬಾಬಾಸಾಹೇಬರಿಗೆ, ಸ್ವಸ್ಥ ಸಾಮಾಜಿಕ ವ್ಯವಸ್ಥೆಯ ನಿರ್ಮಾಣವೇ ನೈಜ ಧರ್ಮವಾಗಿತ್ತು. ಧರ್ಮವು ಸಾಮಾಜಿಕ ಪುರೋಭಿವೃದ್ಧಿಗೆ ಸಹಕಾರಿಯಾಗಿರಬೇಕು ಎಂಬುದು ಬಾಬಾಸಾಹೇಬರ ನಿಲುವಾಗಿತ್ತು.

ಒಂದು ಹಂತದಲ್ಲಿ ಬಾಬಾಸಾಹೇಬರ ವಿದ್ವತ್ತನ್ನು, ಮನೋಬಲವನ್ನು, ಬುದ್ಧಿಶಕ್ತಿಯನ್ನು ಮಹಾತ್ಮ ಗಾಂಧೀಜಿ ಅವರು ಶ್ಲಾಘಿಸಿದರು. ಆದರೆ ನಿಮ್ನ ವರ್ಗದ ಅಭ್ಯುದಯ ಸಾಧಿಸಲು ಬಾಬಾಸಾಹೇಬರು ಹಿಡಿದ ಮಾರ್ಗವನ್ನು ಗಾಂಧೀಜಿ ಅವರು ಬೆಂಬಲಿಸಲಿಲ್ಲ.

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ವರ್ಣಾಧಾರಿತ ಅಸಮಾನತೆಯ ವಿರುದ್ಧ ಧ್ವನಿ ಎತ್ತಿದರು. 1915ರಲ್ಲಿ ಸ್ವದೇಶಕ್ಕೆ ಹಿಂತಿರುಗಿ, ಅಹಮದಾಬಾದ್‌ನಲ್ಲಿ "ಸತ್ಯಾಗ್ರಹ ಆಶ್ರಮ"ವನ್ನು ಸ್ಥಾಪಿಸಿ, ಭಾರತದ ಕೆಲವೊಂದು ಕ್ರೂರ ಸಾಮಾಜಿಕ ಪದ್ಧತಿಗಳ ವಿರುದ್ಧ ಹೋರಾಡಿದರು. ಇದು ಭಾರತದಂತಹ ಬೃಹತ್ ರಾಷ್ಟ್ರಕ್ಕೆ ಇವರ ಬಹು ದೊಡ್ಡ ಕೊಡುಗೆ. ಸತ್ಯ, ಅಹಿಂಸೆ, ಉಪವಾಸ, ಸತ್ಯಾಗ್ರಹಗಳೆಂಬ ಅಸ್ತ್ರಗಳ ಮೂಲಕ ಹೋರಾಡಿದ ಗಾಂಧೀಜಿ ಅವರು ಸ್ವಾತಂತ್ರ್ಯ ಹೋರಾಟದ ಮುಂದಾಳತ್ವವನ್ನು ವಹಿಸಿ, ಸಮಾಜ ಮತ್ತು ದೇಶವನ್ನು ದಾಸ್ಯದಿಂದ ಬಿಡುಗಡೆಗೊಳಿಸಿದರು. ಚಂಪಾರಣ್ಯದ ನೀಲಿ ಬೆಳೆಗಾರರ ಮೇಲಿನ ದಬ್ಬಾಳಿಕೆ, ಬೇಡಾದ ರೈತರ ಶೋಷಣೆ, ಅಹಮದಾಬಾದಿನ ಕಾರ್ಮಿಕರ ಮೇಲಿನ ಅನ್ಯಾಯಗಳ ವಿರುದ್ಧ ಚಳುವಳಿಯನ್ನು ಕೈಗೊಂಡು ಸಾಮಾಜಿಕ ನ್ಯಾಯ ಸಾಧನೆಗೆ ಹೋರಾಡಿದರು.

ಇಂತಹ ರಾಜಕೀಯ ಚಳುವಳಿಗಳ ಜೊತೆಯಲ್ಲಿ ಪಾನ ನಿರೋಧ, ಅಸ್ಪೃಶ್ಯತಾ ನಿರೋಧಿ ಆಂದೋಲನ ಮೊದಲಾದ ರಚನಾತ್ಮಕ ಕಾರ್ಯಕ್ರಮ ಮತ್ತು ಚಳುವಳಿಗಳ ಮೂಲಕ ಭಾರತದ ಸಾಮಾಜಿಕ ಪುನಶ್ಚೇತನಕ್ಕೆ ಕಾರಣರಾದರು. ದಲಿತರನ್ನು 'ಹರಿಜನ' (ದೇವರ ಮಕ್ಕಳು) ಎಂದು ಕರೆದರಲ್ಲದೆ, "ಹರಿಜನ" ಎಂಬ ಪತ್ರಿಕೆಯನ್ನೂ ಪ್ರಾರಂಭಿಸಿ, ತಮ್ಮ ಕಾಳಜಿಯನ್ನು ಮೆರೆದರು. ಸವರ್ಣೀಯರಾಗಿದ್ದರೂ. ಧಾರ್ಮಿಕ ಕಟ್ಟಳೆಗಳನ್ನು ಲೆಕ್ಕಿಸದೆ, ದಲಿತರ ಅಭಿವೃದ್ಧಿಗೆ ಶ್ರಮಿಸಿದರು.

ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಬಾಬಾಸಾಹೇಬರ ಕೊಡುಗೆ ಅಪಾರ. ಸನಾತನ ಹಿಂದೂ ಧರ್ಮವು ಅಸ್ಪೃಶ್ಯ ಸಮುದಾಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ನಿರ್ಬಂಧಿಸಿದ್ದುದನ್ನು ಅವರು ಖಂಡಿಸಿದರು. ಇಂಥ ದುಷ್ಟ ಪದ್ಧತಿಗಳ ವಿರುದ್ಧ ಚಳುವಳಿಗಳ ಮೂಲಕ ಹೋರಾಟ ನಡೆಸಿದರು. ಮಹಾನ್ ವಿದ್ವಾಂಸರಾಗಿದ್ದ ಬಾಬಾಸಾಹೇಬರು ನ್ಯಾಯವಾದಿಯಾಗಿ, ಅರ್ಥಶಾಸ್ತ್ರಜ್ಞರಾಗಿ, ಸಮಾಜಶಾಸ್ತ್ರಜ್ಞರಾಗಿ, ಧಾರ್ಮಿಕ ಮುಖಂಡರಾಗಿ, ಮಹಿಳೆಯರ ಹಕ್ಕುಗಳ ಪ್ರತಿಪಾದಕರಾಗಿ ಕೆಲಸ ಮಾಡಿದ್ದಾರೆ. ಸಾಮಾಜಿಕ ಸಮಾನತೆ ತತ್ವದ ವರಿಷ್ಠ ಪ್ರತಿಪಾದಕರು ಅಂಬೇಡ್ಕರ್. ಸ್ವತಂತ್ರ ಭಾರತಕ್ಕೊಂದು ಸಂವಿಧಾನ ರೂಪಿಸಿ ಕೊಟ್ಟು, ಅದರಲ್ಲಿ ಸಮಾಜದ ಎಲ್ಲಾ ಶೋಷಿತ ಸಮುದಾಯಗಳಿಗೆ ನ್ಯಾಯವನ್ನು ಒದಗಿಸಿದ ಮೇರು ಮಾನವತಾವಾದಿ ಅವರು.

ಅಸ್ಪೃಶ್ಯರು ಶಾಂತಿಯಿಂದ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂಬುದು ಬಾಬಾಸಾಹೇಬರ ಆಶಯವಾಗಿತ್ತು. ಹಿಂದೂ ಸವರ್ಣೀಯರ ಆಕ್ರಮಣವನ್ನು ದಿಟ್ಟತನದಿಂದ ಎದುರಿಸುವಂತಹ ಧೈರ್ಯ–ಛಲಗಳನ್ನು ಬೆಳೆಸಿಕೊಳ್ಳಲು ಅವರು ಕರೆ ನೀಡಿದರು. ಕಾನೂನುಬದ್ಧ ಹಕ್ಕುಗಳನ್ನು ಪಡೆದುಕೊಳ್ಳಲು ದಲಿತರು ಹೋರಾಡುವ ಅಗತ್ಯವನ್ನು ಒತ್ತಿ ಹೇಳಿದರು. ಅಲ್ಲದೆ, ಮೂಕನಾಯಕ, ಬಹಿಷ್ಕೃತ ಭಾರತ, ಸಮತಾ, ಜನತಾ ಎಂಬ ಪತ್ರಿಕೆಗಳ ಸಂಪಾದಕರಾಗಿ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಅವರು ಅಡಿಪಾಯ ಹಾಕಿದರು.

ಆರೋಗ್ಯಕರ ಸಮಾಜದ ನಿರ್ಮಾಣ ಕಾರ್ಯದಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್ ಕೊಡುಗೆಗಳು ಅಜರಾಮರ. ಭಿನ್ನ ಸಮುದಾಯಗಳಲ್ಲಿ ಜನಿಸಿದ ಗಾಂಧೀ ಮತ್ತು ಅಂಬೇಡ್ಕರ್ ಹೋರಾಟದಲ್ಲಿ ಆಯ್ಕೆಗಳನ್ನು ಮಾಡಿಕೊಂಡ ಹಂತದಲ್ಲಿ ಸಾಕಷ್ಟು ವಿರೋಧಭಾಸ ಇರುವುದನ್ನು ನಾವು ಕಾಣಬಹುದು.ಎದೆ. ರಾಜಕೀಯ ನೆಲೆಯನ್ನು ಬದಿಗಿಟ್ಟು ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ನೆಲೆಯಲ್ಲಿ ಅಧ್ಯಯನ ಮಾಡಿದಾಗ ಈ ಎರಡೂ ಮಹಾಚೇತನಗಳು ಸಾಮಾಜಿಕ ವ್ಯವಸ್ಥೆಯ ಅಮಾನುಷ ಪದ್ದತಿಗಳ ವಿರುದ್ಧ ಹೋರಾಡಿದ್ದಾರೆ; ನೈತಿಕ ನೆಲೆಗಟ್ಟಿನಲ್ಲಿ ಸೈದ್ಧಾಂತಿಕವಾಗಿ ಚಳುವಳಿಗಳ ಮುಖೇನ ದಲಿತರ ಬದುಕನ್ನು ಹಸನಾಗಿಸಿದ್ದಾರೆ; ದಾಸ್ಯದಿಂದ ಸ್ವಾತಂತ್ರ್ಯದ ಕಡೆಗೆ ಮನುಷ್ಯ ಕುಲವನ್ನು ನಡೆಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಗಾಂಧೀಜಿ ಸ್ವಾತಂತ್ರ್ಯ ದೊರಕಿಸಿಕೊಟ್ಟ

ಮಹಾನುಭವರಾದರೆ, ಬಾಬಾಸಾಹೇಬರು ಸಾಮಾಜಿಕ ಅಭಿವೃದ್ಧಿ ಸಾಧಿಸುವ ಸಂವಿಧಾನ ಎಂಬ ಆಡಳಿತ ಯಂತ್ರವನ್ನು ರಾಷ್ಟ್ರಕ್ಕೆ ನೀಡಿದಂತಹ ದಿವ್ಯ ಚೇತನ ಎಂಬುದಾಗಿ ತಿಳಿಯುತ್ತದೆ.

ಈ ಇಬ್ಬರೂ ದೇಶಪ್ರೇಮಿಗಳು ಸಮಾಜಕ್ಕೆ ಬೋಧಿಸಿದ ಸತ್ಯ, ಅಹಿಂಸೆ, ಸತ್ಯಾಗ್ರಹ, ಸಮಾನತೆ, ಹೋರಾಟ ಮೊದಲಾದ ತತ್ವಗಳು ಸಾರ್ವತ್ರಿಕ ಮೌಲ್ಯಗಳಾಗಿವೆ.

ಪರಾಮರ್ಶನ ಗ್ರಂಥಗಳು

- ದಲಿತರ ಆಶಾಕಿರಣಗಳು– ಪಿ. ಕುಮಾರಸ್ವಾಮಿ, ಶ್ರೀ ಸೂರ್ಯ ಚೈತನ್ಯ ಸಾಮಾಜಿಕ ವಿಕಾಸ ಕೇಂದ್ರ, ಬೆಂಗಳೂರು
- ಆಧುನಿಕ ಭಾರತದ ಇತಿಹಾಸ– ಡಾ॥ ಕೆ.ಸದಾಶಿವ ಪ್ರಿಯದರ್ಶಿನಿ ಪ್ರಕಾಶನ, ಮೈಸೂರು
- ಯೋಜನಾ, ಮಾಸಪತ್ರಿಕೆ– ಅಕ್ಟೋಬರ್ 2015ರ ಸಂಚಿಕೆ

ಬಸವಣ್ಣ ಅವರ ಆಶಯದ ಸಮ ಸಮಾಜ

ಡಾ. ಶ್ರೀನಿವಾಸ ಎಚ್. ಕೊಪ್ಪಳ

ಮಹಾನ್ ಚೇತನ ಬಸವೇಶ್ವರರು 12ನೇ ಶತಮಾನದಲ್ಲಿ ಹುಟ್ಟಿ, ಸಾಮಾಜಿಕ ಕ್ರಾಂತಿಯ ಮೂಲಕ ಜಾತಿ, ಅಸ್ಪೃಶ್ಯತೆ, ಸ್ತ್ರೀ ಗುಲಾಮಗಿರಿಯನ್ನು ನಿರ್ಮೂಲನೆಗೆ ಶ್ರಮಿಸಿದರು. ಧಾರ್ಮಿಕ ಕ್ರಾಂತಿ ಮತ್ತು ಸಾಮಾಜಿಕ ಸುಧಾರಣೆ ಗಳನ್ನು ಮಾಡುವುದರ ಮೂಲಕ ಮಹಾ ಮಾನವತಾವಾದಿ ಎಂದು ಕರೆಸಿ ಕೊಂಡಿದ್ದಾರೆ. ಬಸವಣ್ಣನವರ ಕ್ರಾಂತಿಕಾರಿ ವಿಚಾರಗಳು ಮತ್ತು ಹೋರಾಟ ಗಳನ್ನು ಗಮನಿಸಿ ಅವರನ್ನು ಶ್ರೇಷ್ಠ ಸಮಾಜ ಸುಧಾರಕ ಎಂದು ಗುರುತಿಸ ಬೇಕಾಗುತ್ತದೆ.

ಬಸವಣ್ಣನವರು ತಮಗಾಗಿ ಏನನ್ನೂ ಬಯಸಲಿಲ್ಲ; ಅವರು ತಮಗಾಗಿ ಬದುಕಲೂ ಇಲ್ಲ. ಅವರು ತಮಗೆ ಇದ್ದುದನ್ನು ಬಿಟ್ಟು ಕೊಟ್ಟವರು. ಅವರು ಇತರರ ದು:ಖವನ್ನು ತೊಡೆದು ಹಾಕಲು ಬದುಕಿದವರು. ' ದಯೆ ಇಲ್ಲದ ಧರ್ಮ ಯಾವುದಯ್ಯ?' ಎಂದು ಬಸವಣ್ಣ ಎಲ್ಲ ಮಾನವರ ಸಮಾನತೆ, ಘನತೆಗಾಗಿ ಕ್ರಾಂತಿಯನ್ನು ರೂಪಿಸಿದರು. ಅಪಾರವಾದ ಜ್ಞಾನವನ್ನು ಗಳಿಸಿದ್ದ ಅವರು, ಜನರಲ್ಲಿನ ಮೂಢ ನಂಬಿಕೆಗಳನ್ನು ದೂರ ಮಾಡಲು ಅತ್ಯಂತ ಪ್ರಾಮಾಣಿಕ ರೀತಿಯಲ್ಲಿ ಪ್ರಯತ್ನವನ್ನು ಮಾಡಿದ್ದಾರೆ. ಧರ್ಮ, ಮತ, ತತ್ವಕ್ಕೆ ಮಾತ್ರವೇ ಸೀಮಿತರಾಗದೇ ಇಡೀ ಮಾನವ ಜನಾಂಗದ ಕಲ್ಯಾಣವನ್ನು ಅವರು ಬಯಸಿದರು.

ಸಮಾಜದಲ್ಲಿನ ಮೇಲು ಕೀಳು ಭಾವನೆ, ಜಾತೀಯತೆ, ದು:ಖದಿಂದ ಇರುವವರ ಸಂಕಟದ ಜೀವನ, ಧರ್ಮದ ಹೆಸರಿನಲ್ಲಿ ನಡೆಯುವ ದುರಾಚಾರಗಳು ಇವುಗಳೆಲ್ಲ ಬಸವಣ್ಣನವರು ಕಂಡ ಸಾಮಾಜಿಕ ಸಮಸ್ಯೆಗಳಾಗಿದ್ದವು. ಅಸ್ಪೃಶ್ಯತೆ, ಜಾತಿಭೇಧಗಳನ್ನು ದೂರ ಮಾಡಲು ಅವರು ಮುಂದಾದರು. ಸರ್ವಸಮಾನತೆಯನ್ನು ಹೊಂದಿದ ಸಮಾಜದ ನಿರ್ಮಾಣಕ್ಕಾಗಿ ಬಸವಣ್ಣನವರು ಕ್ರಾಂತಿಯನ್ನೇ ಮಾಡಿದರು. ಅಂತರ್‌ಜಾತಿಯ ವಿವಾಹವನ್ನು ನಡೆಸಿದರು. ಅಸ್ಪ್ರಶ್ಯರನ್ನು ಬಂಧುಗಳಂತೆ ನೋಡಿ, ಅವರೊಡನೆ ಇದ್ದು ಊಟ ಮಾಡಿ, ಸದಾಚಾರವನ್ನು ಮೆರೆದರು.

ಸಮಾಜವು ಬದಲಾಗುವುದು ವ್ಯಕ್ತಿಗಳು ಬದಲಾದಾಗ. ಆದಕಾರಣ ಬಸವಣ್ಣನವರು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಬದಲಾವಣೆ ತರಲು ಬಯಸಿದರು. ನೈತಿಕವಾಗಿ, ಧಾರ್ಮಿಕವಾಗಿ

ಜನರು ಉತ್ತಮರಾಗಬೇಕು ಎಂದು ಅವರು ಕಿವಿಮಾತು ಹೇಳಿದರು. ವ್ಯಕ್ತಿಗಳು ಒಳ್ಳೆಯವರಾದರೆ ಸಮಾಜದ ಒಳಿತು ಸಾಧ್ಯವಿದೆಯೆಂದು ಅವರು ತಿಳಿಸಿದರು. ನ್ಯಾಯ, ನೀತಿ, ಸದಾಚಾರ, ಸತ್ಯ ಮುಂತಾದ ಮೌಲ್ಯಗಳನ್ನು ಸ್ವತಃ ಆಚರಿಸಿ ಇತರರಿಗೆ ಅವರು ಬೋಧಿಸಿದರು. 12ನೇ ಶತಮಾನದಲ್ಲಿಯೂ ವರ್ಣವ್ಯವಸ್ಥೆ ಆಚರಣೆಯಲ್ಲಿತ್ತು. ಜಾತಿ ಪದ್ಧತಿ ಅಸ್ತಿತ್ವದಲ್ಲಿ ಇತ್ತು. ಈ ಲೋಕವನ್ನು ಎಲ್ಲರೂ ಒಂದೇ ರೀತಿ ಪ್ರವೇಶಿಸುತ್ತಾರೆ. ಆದರೆ ಎಲ್ಲರಲ್ಲಿ ಬೇರೆ ಬೇರೆ ಭಾವನೆ ಗುಂಪುಗಾರಿಕೆ ಏಕೆ? ಕಾಯಕಕ್ಕೆ ಏಕೆ ಮಹತ್ವವಿಲ್ಲ? ಯೋಗ್ಯರಿಗೇಕೆ ಬೆಲೆಯಿಲ್ಲ? ಕಂದಾಚಾರ, ಢಾಂಬಿಕತನ, ಮೂಢ ನಂಬಿಕೆಗಳು ಏಕೆ ಬೆಳೆದುಬಂದವು? ಎಂದು ಬಸವಣ್ಣನವರು ವಿಚಾರ ಮಾಡಿದರು. ಅನಂತರ ಸಮಗ್ರವಾಗಿ ಪರಿವರ್ತನೆಯನ್ನು ಮಾಡುವ ಕ್ರಮವನ್ನು ಯೋಚಿಸಿದರು. ಪರಿಹಾರ ಏನು ಎಂಬ ಬಗ್ಗೆ ವಚನಗಳ ಮೂಲಕ ತಿಳುವಳಿಕೆ ನೀಡಿದರು. ಜಾತೀಯತೆಗೆ ರಾಮಬಾಣ ಎಂದು ಅಂತರ್ ಜಾತೀಯ ವಿವಾಹವನ್ನು ನಡೆಸಿದರು; ಸ್ವತಃ ಭೇದ-ಭಾವ ತೋರದೆ ಬದುಕಿ ತೋರಿಸಿದರು.

ಸಮಾಜದಲ್ಲಿ ಸಹಕಾರ, ಉಪಕಾರ, ಸಹಜೀವನ ತತ್ವಗಳಿರಬೇಕು. ಕಾಗೆ, ಕೋಳಿ ಮುಂತಾದವು ಸಹ ಈ ತತ್ವಗಳಿಂದ ಬದುಕುತ್ತವೆ. ಹೀಗೆ ಬದುಕಿದಾಗಲೇ, ಆದರ್ಶ ಸಮಾಜದ ನಿರ್ಮಾಣವು ಸಾಧ್ಯವಿದೆ ಎಂದು ಬಸವಣ್ಣನವರು ತಿಳಿಸಿದರು. ಜನರಿಗೆ ನೈತಿಕವಾಗಿ, ಆಧ್ಯಾತ್ಮಿಕವಾಗಿ ಮತ್ತು ಸಾಮಾಜಿಕವಾಗಿ ಉತ್ತಮ ಗುಣಗಳನ್ನು ಹೊಂದುವಂತೆ ತಿಳುವಳಿಕೆ ನೀಡಿದರು. ಇತರರಿಗೆ ನೀತಿ ಹೇಳುವ ಮೊದಲು, ಅದರಂತೆ ತಾವೇ ಮೊದಲು ನಡೆದು ತೋರಬೇಕು ಎಂದರು. "ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" ಎಂದ ಅವರು 'ಅಂತರಂಗ ಶುದ್ಧಿಯಿಲ್ಲದವರನ್ನು ಕೂಡಲ ಸಂಗಮದೇವನು ಮೆಚ್ಚುವದಿಲ್ಲ' ಎಂದು ಸ್ಪಷ್ಟಪಡಿಸಿದರು.

ಉತ್ತಮ ಜೀವನಕ್ಕೆ ಉತ್ತಮ ನಡತೆಯು ಬೇಕು ಅದಕ್ಕಾಗಿ ಅಹಿಂಸೆ, ಸತ್ಯ, ನೈತಿಕತೆ, ಪ್ರಾಮಾಣಿಕತೆ ಸ್ವತಂತ್ರ ಮನೋಭಾವ, ವಿಚಾರಶೀಲತೆ ಮುಂತಾದವುಗಳು ಜನರಲ್ಲಿ ಬೆಳೆಯುವುದು ಅವಶ್ಯ ಎಂದು ಅವರು ತಿಳಿಸಿದರು. ಇವುಗಳ ಮೂಲಕವೇ ಸಮಾಜದಲ್ಲಿ ಸಾಮಾಜಿಕ ನ್ಯಾಯವನ್ನು ಸ್ಥಾಪಿಸಬಹುದು ಎಂದು ಮನವರಿಕೆ ಮಾಡಿಕೊಟ್ಟರು.

ಆಧಾರ ಗ್ರಂಥಗಳು

- ಜಗಜ್ಯೋತಿ ಬಸವೇಶ್ವರರು- ಜಿ ವಿ ಶಾಸ್ತ್ರಿ
- ಭಾರತೀಯ ರಾಜಕೀಯ ಚಿಂತನೆ- ಹೆಚ್ ಸಿ ಲೋಹಿತಾಶ್ವ
- ಭಾರತೀಯ ರಾಜಕೀಯ ಚಿಂತನೆ- ಎನ್ ಬಿ ಪಾಟೀಲ

ಗಾಂಧೀಜಿ ಅವರ ಮೂಲ ಶಿಕ್ಷಣದ ಪ್ರಸ್ತುತತೆ

ಡಾ. ಟಿ. ಶ್ರೀನಿವಾಸರೆಡ್ಡಿ

ಪ್ರಪಂಚದಲ್ಲಿ ಶಿಕ್ಷಣವು ಮಹತ್ವಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತದೆ. ಮನುಷ್ಯರು ನಾಗರಿಕ ಮತ್ತು ಸುಸಂಸ್ಕೃತ ಜೀವನವನ್ನು ನಡೆಸಲು ಶಿಕ್ಷಣವು ಅನಿವಾರ್ಯವಾಗಿದೆ. ಗಾಂಧೀಜಿ ಅವರ ಪ್ರಕಾರ ಶಿಕ್ಷಣವೆಂದರೆ "ಮಗು ಮತ್ತು ಮನುಷ್ಯರಲ್ಲಿನ ಶಾರೀರಿಕ, ಬೌದ್ಧಿಕ, ಸ್ಫೂರ್ತಿದಾಯಕ, ಶಕ್ತಿಯಲ್ಲಿ ಅತ್ಯುತ್ತಮವಾದುದನ್ನು ಸರ್ವತೋಮುಖವಾಗಿ ಹೊರಗೆಳೆಯುವುದೇ ಆಗಿದೆ".

ಶಿಕ್ಷಣವನ್ನು ಸಂಕುಚಿತ ಅರ್ಥದಲ್ಲಿ ಅರ್ಥೈಸುವುದಾದರೆ, ಪ್ರಾಥಮಿಕ ಶಾಲೆಯಿಂದ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳವರೆಗೂ ನಿರ್ದಿಷ್ಟ ಉದ್ದೇಶಗಳಿಗೆ ಅನುಗುಣವಾಗಿ, ಯೋಜಿತವಾಗಿ ನೀಡುವ ಶಿಕ್ಷಣ ಎನ್ನಬಹುದು. ಇದು ಬೋಧನೆ, ಕಲಿಕೆ, ಮತ್ತು ಜ್ಞಾನ ಪ್ರಸಾರಕ್ಕೆ ಸೀಮಿತವಾದುದು. ಕೇವಲ ನಾಲ್ಕು ಗೋಡೆಗಳ ಮಧ್ಯೆ ನೀಡುವ ಪಠ್ಯಕ್ರಮದ ಬೋಧನೆಗೆ ಮಾತ್ರ ಸೀಮಿತವಾದುದು.

ಶಿಕ್ಷಣವನ್ನು ವಿಶಾಲವಾದ ಅರ್ಥದಲ್ಲಿ ಅರ್ಥೈಸುವುದಾದರೆ, ಶಿಕ್ಷಣವು ನಿರಂತರವಾದ, ವ್ಯಾಪಕವಾದ ಅರಿವು ಪಡೆಯುವ ಪ್ರಕ್ರಿಯೆಯಾಗಿದ್ದು, ಅದು ಅಜೀವ ಪರ್ಯಂತ ವ್ಯಕ್ತಿಯ ಜೀವನದ ಉದ್ದಕ್ಕೂ ನಡೆಯುತ್ತಿರುತ್ತದೆ. ಶಿಕ್ಷಣವು ತಾಯಿಯ ಗರ್ಭದಿಂದಲೇ ಪ್ರಾರಂಭವಾಗುತ್ತದೆ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ.

ಶಿಕ್ಷಣದ ಗುರಿಗಳು

ಪ್ರಪಂಚದಾದ್ಯಂತ ಎಲ್ಲಾ ದೇಶಗಳಲ್ಲಿ ಕಂಡುಬರುವಂತೆ, ಶಿಕ್ಷಣಕ್ಕೆ ವೈಯಕ್ತಿಕ ಗುರಿ ಮತ್ತ ಸಾಮಾಜಿಕ ಗುರಿ ಎಂಬ ಎರಡು ರೀತಿಯ ಗುರಿಗಳು ಇವೆ.

ಶಿಕ್ಷಣದ ವೈಯಕ್ತಿಕ ಗುರಿ

ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯನ್ನು ಉತ್ತಮಪಡಿಸುವಂಥದ್ದು. ಶಿಕ್ಷಣದಿಂದ ವ್ಯಕ್ತಿಗಳ ಭವಿಷ್ಯವನ್ನು ಉತ್ತಮಪಡಿಸಬಹುದು. ಶಿಕ್ಷಣ ಪಡೆದವರಿಗೆ ಸಮಾಜದಲ್ಲಿ ವಿಶೇಷ ಗೌರವಾದರಗಳು ಲಭ್ಯವಾಗುತ್ತವೆ. ಶಿಕ್ಷಣವು ವ್ಯಕ್ತಿಯ ಆತ್ಮ, ಮನಸ್ಸು ಮತ್ತು ದೇಹವನ್ನು ಸಮರಸವಾಗಿ ಬೆಳೆಸಲು ಸಹಾಯಕವಾಗುತ್ತದೆ.

ಶಿಕ್ಷಣದ ಸಾಮಾಜಿಕ ಗುರಿಗಳು

ಶಿಕ್ಷಣದಿಂದ ಸಮಾಜ ವಿಕಾಸ ಮತ್ತು ಬೆಳವಣಿಗೆ ಸಾಧ್ಯವಾಗುತ್ತದೆ. ಮಾನವರು ಮೂಲತಃ ಸಮಾಜ ಜೀವಿಗಳು. ಆದ್ದರಿಂದ ಇಲ್ಲಿ ಅವರ ವರ್ತನೆ ಹಾಗೂ ಅವರು ಸಮಾಜಕ್ಕೆ ಕೊಡುಗೆ ನೀಡುವಂಥ ಶಕ್ತಿಯನ್ನು ಅವರಿಗೆ ಶಿಕ್ಷಣವು ಒದಗಿಸುತ್ತದೆ. ಯಾವ ಸಮಾಜದಲ್ಲಿ ಉತ್ತಮ ಶಿಕ್ಷಣ ವ್ಯವಸ್ಥೆ ಇರುತ್ತದೆಯೋ ಅಲ್ಲಿನ ಸಮಾಜ ಸಮೃದ್ಧವಾಗಿರುತ್ತದೆ.

ಶಿಕ್ಷಣ ಯಾತಕ್ಕಾಗಿ ಎಂದರೆ ಹಲವು ಉತ್ತರಗಳನ್ನು ಬಹುತೇಕ ಭಾರತೀಯ ಚಿಂತಕರು ಹಾಗೂ ಶಿಕ್ಷಣತಜ್ಞರು ನೀಡಿದ್ದಾರೆ. ಉದಾಹರಣೆಗೆ, ಜ್ಞಾನಕ್ಕಾಗಿ ಶಿಕ್ಷಣ, ಚಾರಿತ್ರ್ಯಕ್ಕಾಗಿ ಶಿಕ್ಷಣ, ಸಂಸ್ಕೃತಿಗಾಗಿ ಶಿಕ್ಷಣ, ಉದ್ಯೋಗಕ್ಕಾಗಿ ಶಿಕ್ಷಣ, ಆಧ್ಯಾತ್ಮಕ್ಕಾಗಿ ಶಿಕ್ಷಣ, ರಾಷ್ಟ್ರೀಯ ಐಕ್ಯತೆಗಾಗಿ ಶಿಕ್ಷಣ, ಪರಿಪೂರ್ಣ ಜೀವನಕ್ಕಾಗಿ ಶಿಕ್ಷಣ ಇತ್ಯಾದಿ.

ಭಾರತದಲ್ಲಿ ಶಿಕ್ಷಣ ಪರಂಪರೆ

ಭಾರತದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವಾರು ಗೊಂದಲಗಳು ಮೊದಲಿನಿಂದಲೂ ಇವೆ. ಮೊದಲನೆಯದಾಗಿ ಇಲ್ಲಿ ಎಲ್ಲರಿಗೂ ಶಿಕ್ಷಣ ನೀಡಬೇಕು ಎಂಬ ಬಗ್ಗೆ ಒಮ್ಮತ ಇರಲಿಲ್ಲ. ಎಂಥ ಶಿಕ್ಷಣ ನೀಡಬೇಕು ಎಂಬುದೂ ಗೊಂದಲದ ವಿಷಯವಾಗಿತ್ತು. ಆದರೂ, ದೇಶ ನಿರ್ಮಾಣ ಮಾಡುವುದಕ್ಕೆ ಯಾವ ರೀತಿಯ ಶಿಕ್ಷಣದ ಅವಶ್ಯಕತೆಯಿದೆ ಎಂಬ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದವು, ಈ ಚರ್ಚೆಗಳಲ್ಲಿ ರಾಷ್ಟ್ರ ನಾಯಕರು ಸಮಾಜ ಸುಧಾರಕರು ಮತ್ತು ಶಿಕ್ಷಣ ತಜ್ಞರು (ಉದಾ: ವಿವೇಕಾನಂದರು, ದಯಾನಂದ ಸರಸ್ವತಿ ಅವರು, ರವೀಂದ್ರನಾಥ ಟಾಗೋರ್ ಮೊದಲಾದವರು) ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಬಂದರು. ಶಿಕ್ಷಣದಲ್ಲಿ ಸಾಮಾಜಿಕ ಧಾರ್ಮಿಕ ಮತ್ತು ರಾಷ್ಟ್ರೀಯತೆಯ ಅಂಶಗಳು ಇರಬೇಕು ಎಂದು ಇವರು ಪ್ರತಿಪಾದಿಸಿದರು. ಆದರೆ, ಗಾಂಧೀಜಿ ಅವರು ತುಸು ಭಿನ್ನವಾಗಿ ಅಭಿಪ್ರಾಯ ಮಂಡಿಸಿದರು. ಅವರು ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿ ಮತ್ತು ಭಾರತದ ಶಿಕ್ಷಣ ಪದ್ಧತಿ ಎರಡನ್ನೂ ಆಳವಾಗಿ ಅಧ್ಯಯನ ಮಾಡಿದ್ದರು. ಹೀಗಾಗಿ, ಭಾರತ ದೇಶದ ಸ್ಥಿತಿಗತಿಗಳನ್ನು ಗಮನದಲ್ಲಿ ಇರಿಸಿಕೊಂಡು ಮತ್ತು ಭವಿಷ್ಯದಲ್ಲಿ ಭಾರತ ಎಲ್ಲಾ ರೀತಿಯಿಂದಲೂ ಅಭಿವೃದ್ಧಿ ಹೊಂದಿದ ದೇಶವಾಗಬೇಕು ಎಂಬ ಆಕಾಂಕ್ಷೆಯಿಂದ ಭಾರತಕ್ಕೆ 'ಮೂಲ ಶಿಕ್ಷಣ' ಬೇಕಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

'ಮೂಲ ಶಿಕ್ಷಣ'ದ ಪರಿಕಲ್ಪನೆ

ಗಾಂಧೀಜಿ ಅವರು 'ಮೂಲ ಶಿಕ್ಷಣ'ದ ಬಗ್ಗೆ ಸುಮಾರು ನಲವತ್ತು ವರ್ಷಗಳ ತಮ್ಮ ಅನುಭವವನ್ನು ಧಾರೆಯೆರೆದಿದ್ದಾರೆ. ಅವರು ದಕ್ಷಿಣ ಆಫ್ರಿಕಾದ 'ಟಾಲ್‌ಸ್ಟಾಯ್ ಫಾರ್ಮ್'ನಲ್ಲಿ ಇದ್ದಾಗ ಮೊಟ್ಟ ಮೊದಲಿಗೆ ತಮ್ಮ ಶೈಕ್ಷಣಿಕ ಪ್ರಯೋಗಗಳನ್ನು ಪ್ರಾರಂಭಿಸಿದರು. ಆ ಪ್ರಯೋಗಗಳ ಫಲಗಳೇ ಇವರ ಮೂಲಶಿಕ್ಷಣಕ್ಕೆ ಪ್ರೇರಣೆಯಾದವು. ಅವರ ಪಾಲಿನ ಶಿಕ್ಷಣವು 'ಮಕ್ಕಳ ಜ್ಞಾನಕ್ಕೆ ಅನುಗುಣವಾಗಿ' ಇರಬೇಕಿತ್ತು. ಇದಕ್ಕೆ ಪೂರಕವಾಗಿ ಪಠ್ಯ ರಚನೆ ಆಗಬೇಕಿತ್ತು. ಪ್ರತಿ ದಿನವೂ ಅವರವರ ಮಾತೃ ಭಾಷೆಯಲ್ಲಿ ಎಂಟು ಗಂಟೆಗಳವರೆಗೆ ಶಿಕ್ಷಣ ದೊರಕಬೇಕಿತ್ತು. ಬೋಧನೆಯು ಮೌಖಿಕವಾಗಿಯೂ ಹಾಗೂ ದೈಹಿಕ ಮತ್ತು ಔದ್ಯೋಗಿಕ ತರಬೇತಿಯ ಮೂಲಕವೂ ನೀಡಲ್ಪಡಬೇಕಿತ್ತು.

ಬ್ರಿಟಿಷ್ ಶಿಕ್ಷಣವು ಸಂಪೂರ್ಣ ಪುಸ್ತಕಮಯ; ಅದು ಕೇವಲ ಸಾಕ್ಷರತೆ ಹೆಚ್ಚಿಸುತ್ತದೆ; ದರಿಂದ ಪೂರ್ಣ ಪ್ರಮಾಣದ ಶಿಕ್ಷಣ ದೊರೆಯುವುದಿಲ್ಲ; ಅಲ್ಲಿ ಉದ್ಯೋಗದ ರಬೇತಿ ಇರುವುದಿಲ್ಲ ಎಂಬುದು ಗಾಂಧೀಜಿ ಅಭಿಮತ. ದ. ಆಫ್ರಿಕಾದಿಂದ ವಾಪಸ್ಸಾದ ಂತರ ರವೀಂದ್ರನಾಥ್ ಟಾಗೋರರವರ ಜೊತೆ ನಿರಂತರವಾಗಿ ಚರ್ಚಿಸಿದ ಅವರು, ಾರತೀಯರಿಗೆ ಎಂತಹ ಶಿಕ್ಷಣದ ಅವಶ್ಯಕತೆ ಇದೆ ಎಂಬುದನ್ನು 1937ರ ವಾರ್ಧಾ ಮ್ಮೇಳನದಲ್ಲಿ ಚರ್ಚಿಸಿದರು.

ನಂತರ ಗಾಂಧೀಜಿ ಮಂಡಿಸಿದ ಶಿಕ್ಷಣವು 'ಮೂಲ ಶಿಕ್ಷಣ', 'ನಯೀ ತಾಲಿಮ್', ರಾಷ್ಟ್ರೀಯ ಶಿಕ್ಷಣ' ಅಥವಾ 'ವಾರ್ಧಾ ಶಿಕ್ಷಣ' ಎಂಬ ಹೆಸರುಗಳಿಂದ ಕರೆಯಲ್ಪಟ್ಟಿದೆ. 937ರಲ್ಲಿ 'ಹರಿಜನ' ಪತ್ರಿಕೆಯಲ್ಲಿ ಗಾಂಧೀಜಿ 'ಮೂಲ ಶಿಕ್ಷಣ'ದ ಪ್ರಮುಖ ಆಶಯಗಳನ್ನು ಪ್ರಕಟಿಸಿದರು.

ಕೇವಲ ಓದು, ಬರಹ, ಗಣಿತ, ವಿಜ್ಞಾನಗಳಂತಹ ವಿಷಯಗಳು ಸಾಕಾಗುವುದಿಲ್ಲ; ಜೀವನಾಧಾರ ದೊರಕಿಸಿ ಕೊಡುವ ಶಿಕ್ಷಣ ಅವಶ್ಯ. ಇದಕ್ಕಾಗಿ ಕೈಗಾರಿಕಾ ತರಬೇತಿ ೀಡಬೇಕಾಗಬಹುದು; ಗ್ರಾಮೀಣ ಜನರು ವೃತ್ತಿನಿರತ ರಾಗುವುದಕ್ಕೆ ಶಿಕ್ಷಣ ಪೂರಕವಾಗಿರಬೇಕು; ಅವರು ಸ್ವಾವಲಂಬನೆ ಬದುಕನ್ನು ನಡೆಸುವಂತಾಗಬೇಕು; ಉದ್ಯೋಗಕ್ಕಾಗಿ ಅವರು ನಗರ ಸೇರುವುದನ್ನು ತಪ್ಪಿಸಬೇಕು; ಶಿಕ್ಷಣದ ಕೇಂದ್ರಬಿಂದು ಮಕ್ಕಳಾಗಿರಬೇಕು; ಕೇವಲ ಓದುವ ಅಥವಾ ಬರೆಯುವ ಮೂಲಕವಲ್ಲದೆ, ಮಾಡುವುದರ ಮೂಲಕ ಶಿಕ್ಷಣ ನೀಡಲ್ಪಡಬೇಕು. ಎಲ್ಲರಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ದೊರಕಬೇಕು; ಅದು ಮಾತೃಭಾಷಾ ಮಾಧ್ಯಮದ ಶಿಕ್ಷಣ ಆಗಿರಬೇಕು.. .ಇತ್ಯಾದಿ ವಿಚಾರಗಳು ಲೇಖನದಲ್ಲಿ ಇದ್ದವು.

ಸಮಾಜ ಧೀಮಂತವಾಗಬೇಕಾದರೆ, ಉಜ್ವಲವಾಗಬೇಕಾದರೆ ಅದು ತನ್ನದು ಎಂಬ ಭಾವನೆಯನ್ನು ಮಕ್ಕಳಲ್ಲಿ ಶಿಕ್ಷಣವು ಬೆಳೆಸಬೇಕು; "ಮೊದಲು ಸಮಾಜ; ಅಮೇಲೆ ನಾನು' ಎಂಬ ಅರಿವು ಶಿಕ್ಷಣದ ಮೂಲಕ ಪ್ರತಿಯೊಬ್ಬರಲ್ಲೂ ಬರಬೇಕು; ಶಿಕ್ಷಣದ ಮುಖ್ಯ ಗುರಿ, ಸರ್ವರೂ ಸುಖವಾಗಿರುವುದು ಮತ್ತು ಸಮಾಜ ನೆಮ್ಮದಿಯಾಗಿರುವುದು' ಎಂದಾಗಬೇಕು ಎಂದು ಗಾಂಧೀಜಿ ಎಚ್ಚರಿಸಿದರು.

ಕೇವಲ ಓದು ಬರಹ ಕಲಿಸುವುದೊಂದೇ ಶಿಕ್ಷಣವಲ್ಲ, ಶಿಕ್ಷಣವು ವ್ಯಕ್ತಿಗಳ ಚಾರಿತ್ರ್ಯ, ಗುಣ, ನಡತೆಯನ್ನು ಉತ್ತಮಗೊಳಿಸಬೇಕು. ಮಾನವೀಯತೆ, ಅನುಕಂಪ, ಸೇವೆ ಮನೋಭಾವವನ್ನು ಮೂಡಿಸಬೇಕು; ಮಕ್ಕಳಲ್ಲಿ ಅದು ಸ್ವಾವಲಂಬನೆ, ಅತ್ಮವಿಶ್ವಾಸಗಳನ್ನು ಉದ್ದೀಪಿಸಬೇಕು. ಹಿಂಸೆ ಮತ್ತು ಶೋಷಣೆಗೆ ಸಮಾಜದಲ್ಲಿ ಅವಕಾಶ ಇರಕೂಡದು ಎಂಬುದನ್ನು ಅದು ತಿಳಿಸಿ ಕೊಡಬೇಕು. ನೌಕರಿಗಾಗಿ ಶಿಕ್ಷಣ ಎಂದಾದರೆ, ಅಂದು ಸಮಾಜವನ್ನು ಸುಡುವ ಬೆಂಕಿಯ ಪಾತ್ರ ವಹಿಸುತ್ತದೆ.

ಮೂಲ ಶಿಕ್ಷಣವು ಪರಿಶ್ರಮವನ್ನು ಎತ್ತಿ ಹಿಡಿಯಬೇಕು. ಅಸಂಗ್ರಹ ವ್ರತವನ್ನು ಬೋಧಿಸಬೇಕು. ಇದು ಆರಂಭವಾಗಬೇಕಾಗಿರುವುದು ಏಳು ವರ್ಷದ ವಯಸ್ಸಿನ ಮಕ್ಕಳಿಂದಲ್ಲ, ಇದು ತಾಯಿಯ ಗರ್ಭದಿಂದಲೇ ಆರಂಭವಾಗುತ್ತದೆ. ತಾಯಿ-ತಂದೆಯರ ಬದುಕಿನಿಂದಲೇ, ಸುತ್ತ ಮುತ್ತಲಿನ ಜನರ ಜೀವನಕ್ರಮದಿಂದಲೇ ಮಗು ಶಿಕ್ಷಣವನ್ನು

ಪಡೆದುಕೊಳ್ಳುತ್ತದೆ. ಸಂಯಮ, ಸಹಬಾಳ್ವೆಗಳ ಮಹತ್ವವನ್ನು ಅರಿಯುತ್ತದೆ. ಹುದ್ದೆ ಆಧಾರದಲ್ಲಿ ಗೌರವ ನೀಡತಕ್ಕದ್ದು ಮತ್ತು ಪಡೆಯತಕ್ಕದ್ದು ಎಂಬುದನ್ನು ಮೂಲ ಶಿಕ್ಷಣ ಒಪ್ಪುವುದಿಲ್ಲ. ಭೋಗಜೀವನ ತಪ್ಪು ಎಂಬುದನ್ನು ಮೂಲ ಶಿಕ್ಷಣ ಮನವರಿಕೆ ಮಾಡಿಕೊಡುತ್ತದೆ. ಮೂಲ ಶಿಕ್ಷಣ ಹಾಗೂ ಗ್ರಾಮೋದ್ಯೋಗ ಒಂದೇ ನಾಣ್ಯದ ಎರಡು ಮುಖಗಳು ಎಂಬುದು ಗಾಂಧೀಜಿ ಅವರ ಅಭಿಪ್ರಾಯವಾಗಿತ್ತು.

ಆಧುನಿಕ ಯುಗದಲ್ಲಿ ಶಿಕ್ಷಣ ಎಲ್ಲಾ ಹಂತಗಳಲ್ಲಿಯೂ ಹೆಚ್ಚು ಪ್ರಾಮುಖ್ಯತೆ ಯನ್ನು ಪಡೆಯುತ್ತಿದೆ ಹಾಗೂ ದೇಶದ ಎಲ್ಲಾ ಕ್ಷೇತ್ರಗಳ ಬೆಳವಣಿಗೆಯಲ್ಲೂ ಶಿಕ್ಷಣದ ಪಾತ್ರ ಅಪಾರವಾಗಿದೆ. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಗಾಂಧೀಜಿ ಅವರ ಪರಿಕಲ್ಪನೆಯ 'ಮೂಲ ಶಿಕ್ಷಣ'ದ ಆಶಯ ಕಾಣೆಯಾಗಿದೆ. ಶಿಕ್ಷಣ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ಅವಶ್ಯವಿದೆ. ಶಿಕ್ಷಣ ಇನ್ನೂ ಸಾರ್ವತ್ರಿಕವಾಗಿ ಎಲ್ಲರಿಗೆ ದೊರಕಿಲ್ಲ. ಅನಕ್ಷರತೆ ಇನ್ನೂ ಇದೆ. ದೊರಕುತ್ತಿರುವ ಶಿಕ್ಷಣವು ಸಾಮರಸ್ಯವನ್ನು ಸ್ಥಾಪಿಸದೆ ಪ್ರತಿಷ್ಠೆ ಹಾಗೂ ತಾರತಮ್ಯಗಳನ್ನು ಎತ್ತಿ ಹಿಡಿಯುವಂಥದ್ದಾಗಿದೆ. ಜನರಲ್ಲಿ ಅಂತಸ್ತುಗಳನ್ನು ನಿರ್ಮಿಸುವಲ್ಲಿ ಶಿಕ್ಷಣವು ಸಾಧನವಾಗುತ್ತಿದೆ. ಗಾಂಧೀಜಿ ಅವರ 'ಮೂಲ ಶಿಕ್ಷಣ'ದ ಆಶಯವು ಭಾರತದ ಶಿಕ್ಷಣ ವ್ಯವಸ್ಥೆಯಿಂದ ಹಂತ ಹಂತವಾಗಿ ದೂರವಾಗುತ್ತಿವೆ. ಇಂದಿನ ಶಿಕ್ಷಣ, ಗ್ರಾಮ ಮತ್ತು ನಗರಗಳ ಮಧ್ಯೆ ದೊಡ್ಡ ಅಂತರ ಸೃಷ್ಟಿ ಮಾಡಿದೆ. ಉನ್ನತ ಶಿಕ್ಷಣ ಉದ್ಯೋಗ ಪಡೆದವರು ಗ್ರಾಮ/ದೇಶಗಳನ್ನು ತೊರೆಯುತ್ತಿದ್ದಾರೆ.

ಈಗಲೂ ಸಮಾಜ ಧೃಡ ನಿರ್ಧಾರ ಮಾಡಬೇಕಿದೆ. ಗಾಂಧೀಜಿ ಆಶಯವನ್ನು ಸಾಕಾರಗೊಳಿಸಬೇಕು. ದೇಶದಲ್ಲಿ ಸಮಾನತೆ, ಸಾಮರಸ್ಯ ಹಾಗೂ ಏಕತೆಗಳನ್ನು ತರಲು ಗಾಂಧೀಜಿ ಮಂಡಿಸಿದ 'ಮೂಲ ಶಿಕ್ಷಣ' ಕುರಿತು ತೆರೆದ ಮನಸ್ಸಿನ ಚರ್ಚೆ ನಡೆದು, ಅದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಗಳು ಆಗಬೇಕು.

ಪರಾಮರ್ಶನ ಗ್ರಂಥಗಳು

- ಗಾಂಧಿ ಚರಿತಮಾನಸ – ಪಿ.ವೆಂಕೋಬ್ ರಾವ್, ಸರ್ವೋದಯ ನಾಯಕರು–ಭಾಗ–2 ಜೀವನ ವಿಕಾಸ ಸಾಹಿತ್ಯ, ಶ್ರೀರಾಮಪುರ ಬೆಂಗಳೂರು, ಪುಟ 553–557
- ಉದಯೋನ್ಮುಖ ಭಾರತದಲ್ಲಿ ಶಿಕ್ಷಣ –ಡಾ.ಜಿ.ಎನ್. ಅಶೋಕ್ ನವನೀತ ಪ್ರಕಾಶನ, ದಾವಣಗೆರೆ–2009
- ನೈತಿಕ ಶಿಕ್ಷಣ –ಗೋಪಾಲ್.ಆರ್ ಮತ್ತು ನಾಗರಾಜ್.ಡಿ. ಚೂಡಾಮಣಿ ಪ್ರಕಾಶನ ಬೆಂಗಳೂರು–1981
- ಶ್ರೇಷ್ಠ ಶಿಕ್ಷಣ ತಜ್ಞರು–ಬಾದಾಮಿ.ಎಂ.ಎಸ್., ವಿದ್ಯಾನಿಧಿ ಪ್ರಕಾಶನ, ಗದಗ–1992
- ಇಂದಿನ ಶೈಕ್ಷಣಿಕ ಸಮಸ್ಯೆ–ಸದಾಶಿವಯ್ಯ, ವಿಶ್ವನಾಥ ಪ್ರಕಾಶನ, ಮೈಸೂರು–1976
- **Educational Philosophy of Mahatma Gandhi-M.S. Patil, Navajeevan publication, Ahamadabad-1953**

ಬಸವಣ್ಣ ಅವರ ಸಮಾಜವಾದ ಮತ್ತು ಕಾಯಕ/ ದಾಸೋಹ ತತ್ವ

ಪ್ರೊ. ಮೀನಾಕ್ಷಿ ಖಂಡಿಮಠ
ಸುರೇಶ್ ಕುಮಾರ್ ಎಂ. ಎನ್.

ಬಸವೇಶ್ವರರ ತತ್ವಗಳು ವಿಶ್ವಮಾನ್ಯವಾಗಿವೆ. ಪ್ಲೇಟೋನ ಚಿಂತನೆಗಳು ಮತ್ತು ಬುದ್ಧನ ಸಂಘಜೀವನಕ್ರಮ ಬಿಟ್ಟರೆ, ವಿಶ್ವಕ್ಕೆ ಪ್ರಜಾಪ್ರಭುತ್ವದ ಕಲ್ಪನೆಯೇ ಇರಲಿಲ್ಲ. 2ನೇ ಶತಮಾನದಲ್ಲಿ ಅಮೆರಿಕ ದೇಶವೇ ಇರಲಿಲ್ಲ. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಚೀನ, ರಷ್ಯಾ ಹೀಗೆ ಎಲ್ಲೆಡೆ ರಾಜಪ್ರಭುತ್ವದ ಅಟ್ಟಹಾಸ ಪ್ರಧಾನವಾಗಿ, ಕ್ರೌರ್ಯ ಮೆರೆಯುತ್ತಿತ್ತು ಅಂಥ ಸಂದರ್ಭದಲ್ಲಿ ಬಸವೇಶ್ವರರು ಪ್ರಜಾಪ್ರಭುತ್ವದ ಕನಸು ಕಂಡದ್ದು ಸವಾಲೇ ಸರಿ. ರಾಜ್ಯಶಕ್ತಿಯನ್ನು ಪ್ರಜಾಪ್ರಭುತ್ವ ಶಕ್ತಿಯಾಗಿ ಪರಿವರ್ತಿಸುವ ಮೊದಲು, ಜನರಲ್ಲಿ ಪ್ರಜಾಪ್ರಭುತ್ವದ ಪ್ರಜ್ಞೆ ತುಂಬಿ, ಆ ಮೂಲಕ ಸಂಪ್ರದಾಯಬದ್ಧ ಸಮಾಜವನ್ನು ಪ್ರಜಾಪ್ರಭುತ್ವವಾದಿ ಸಮಾಜವಾಗಿ ಪರಿವರ್ತಿಸಲು ಬಸವೇಶ್ವರರು ಮುಂದಾದರು.

ಬಸವೇಶ್ವರರು ತಮ್ಮ ಚಿಂತನೆಗಳು ಜನಸಾಮಾನ್ಯರಿಗೆ ಎಟುಕುವಂತೆ ಮಾಡಲು. ಸರಳ ಭಾಷೆಯಲ್ಲಿ ವಚನಗಳನ್ನು ರಚಿಸಿದರು. ಅವರು ಅಸ್ತಿತ್ವಕ್ಕೆ ತಂದ 'ಅನುಭವ ಮಂಟಪ' ಎಲ್ಲ ಸಮುದಾಯಗಳಿಗೆ ವೇದಿಕೆಯಾಗಿತ್ತು. ಅಲ್ಲಮ ಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಮಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ, ಮಾದಾರ ಚನ್ನಯ್ಯ, ಸಮಗಾರ ಹರಳಯ್ಯ, ನುಲಿಯ ಚಂದಯ್ಯ, ಅಂಬಿಗರ ಚೌಡಯ್ಯ ಮುಂತಾದವರು ಇವರ ಸಂಗಾತಿ/ ಅನುಯಾಯಿ ಆಗಿದ್ದರು.

ಸಾಮಾಜಿಕ ಸಮಾನತೆ

ಬಸವೇಶ್ವರರು 850 ವರ್ಷಗಳ ಹಿಂದೆ ಜಾತಿಭೇದ, ವರ್ಣಭೇದ, ಲಿಂಗಭೇದ, ವರ್ಗಭೇದ ಮತ್ತು ಕಾಯಕಭೇದಗಳಿಲ್ಲದ ಹೊಸ ಪರ್ಯಾಯ ಸಮಾಜವನ್ನು ನಿರ್ಮಿಸುವಲ್ಲಿ ಯಶಸ್ಸು ಸಾಧಿಸಿದರು; ಅವರ ಸರ್ವಸಮಾನತೆ ಇರುವ ಪ್ರಜಾಪ್ರಭುತ್ವವಾದಿ ಸಮಾಜದ ಕನಸು ಕಂಡಿದ್ದರು.

ನಮ್ಮ ದೇವರು ಮತ್ತು ಧರ್ಮಗಳು ನಮ್ಮೊಳಗೇ ಇರಬೇಕು. ಆದರೆ ನಾವು ಸಮಾಜದಲ್ಲಿ ಸದ್‌ಭಾವದೊಂದಿಗೆ ವ್ಯವಹರಿಸಬೇಕು ಎಂಬುದು ಪ್ರಜಾಪ್ರಭುತ್ವದ

ಅತಿದೊಡ್ಡ ಆಶಯವಾಗಿದೆ. ಬಸವೇಶ್ವರರು ಪ್ರಜಾಪ್ರಭುತ್ವವಾದಿ ನೆಲೆಯ ಚಿಂತನ-ಮಂಥನಕ್ಕಾಗಿ ಅನುಭವ ಮಂಟಪ ರಚಿಸಿದರು. ಅದು ವಿಶಿಷ್ಟ ವಾದ ಸಮಾಜೋ ಧಾರ್ಮಿಕ ಸಂಸತ್ ಆಗಿ ಕಾರ್ಯ ನಿರ್ವಹಿಸಿತು. ಮ್ಯಾಗ್ನಕಾರ್ಟಾ ಒಪ್ಪಂದಕ್ಕಿಂತ ಅರ್ಧ ಶತಮಾನ ಹಿಂದೆಯೆ ಬಸವೇಶ್ವರರು ಅನುಭವ ಮಂಟಪ ಸ್ಥಾಪಿಸುವುದರ ಮೂಲಕ ಜನರಲ್ಲಿ ಪ್ರಜಾಪ್ರಭುತ್ವದ ಅರಿವು ಮೂಡಿಸಿದ್ದರು ಎಂಬುದನ್ನು ನಾವು ಗಮನಿಸಬೇಕು. ಅಲ್ಲಿ ಸಮಾಜದ ಎಲ್ಲಾ ಜನರು ಜಾತಿಭೇದ, ವರ್ಗಭೇದ, ಲಿಂಗಭೇದ, ವೃತ್ತಿಭೇದ ಇಲ್ಲದೆ ಇದ್ದರು. ಮನುಷ್ಯರು ಸಾಮಾಜೀಕರಣ ಗೊಂಡಾಗ ಜೀವಕಾರುಣ್ಯದಿಂದ ತುಂಬಿದ ಸರ್ವ ಸಮಾನತೆಯ ಪ್ರಜೆಯಾಗುತ್ತಾರೆ ಎಂದು ಬಸವೇಶ್ವರರು ನಂಬಿದ್ದರು.

ಅಂತರ್ಜಾತಿ ವಿವಾಹ, ವಿಧವಾ ವಿವಾಹಗಳ ಮೂಲಕ ಬಸವೇಶ್ವರರು ಮಹಿಳಾ ವಿಮೋಚನಾ ಚಳವಳಿ, ಅಸ್ಪೃಶ್ಯತಾ ನಿವಾರಣಾ ಚಳವಳಿ, ಜಾತಿ ವಿರೋಧಿ ಚಳವಳಿ, ಲಿಂಗಭೇದ ವಿರೋಧಿ ಚಳವಳಿಗೆ ಕಾರಣಕರ್ತರಾಗಿದ್ದಲ್ಲದೆ, ವಯಸ್ಕರ ಶಿಕ್ಷಣವೂ ಸೇರಿದಂತೆ ವಿವಿಧ ಶೈಕ್ಷಣಿಕ ಚಳವಳಿಗೂ ನಾಂದಿ ಹಾಡಿದರು. ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಅಭಿಪ್ರಾಯ ಸ್ವಾಂತಂತ್ರ್ಯವಿತ್ತು. ಅಸ್ಪೃಶ್ಯತೆಯಿಂದ ಬಳಲುತ್ತಿದ್ದ ದಲಿತರಿಗೆ ಅವಕಾಶ ಇತ್ತು. ಒಟ್ಟಾರೆ, ಇಡೀ ಮಾನವ ಕುಲದ ಕಲ್ಯಾಣಕ್ಕೆ ಬಸವೇಶ್ವರರು ಕಂಕಣ ಬದ್ಧರಾಗಿದ್ದರು. ಹೀಗೆ ನಡೆದ ನವಸಮಾಜ ನಿರ್ಮಾಣ ಚಳವಳಿ ಬಸವೇಶ್ವರರ ಮುಂದಾಲೋಚನೆಗೆ ಸಾಕ್ಷಿಯಾಗಿದೆ.

ಬಸವ ಸಮಾಜವು ಅಹಂಕಾರ ಭಾವದಿಂದ ದಾಸೋಹ ಭಾವಕ್ಕೆ, ಜಾತೀಯತೆಯಿಂದ ಜಾತ್ಯತೀತತೆಗೆ, ಅಸ್ಪೃಶ್ಯತಾ ಭಾವದಿಂದ ಸಮೂಹ ಪ್ರಜ್ಞೆಗೆ, ಮೂಢನಂಬಿಕೆಯಿಂದ ವೈಚಾರಿಕತೆಗೆ, ಬಹುದೇವೋಪಾಸನೆಯಿಂದ ಏಕದೇವೋ ಪಾಸನೆಗೆ, ಮಂದಿರದಿಂದ ಅನುಭವ ಮಂಟಪಕ್ಕೆ, ವ್ಯಕ್ತಿಪ್ರಭುತ್ವದಿಂದ ಪ್ರಜಾಪ್ರಭುತ್ವಕ್ಕೆ, ಕರ್ಮದಿಂದ ಕಾಯಕಕ್ಕೆ, ಸ್ವಾರ್ಥದ ಭವಿ ಮಾರ್ಗದಿಂದ ನಿಸ್ವಾರ್ಥದ ಭಕ್ತ ಮಾರ್ಗಕ್ಕೆ, ಅಸಮಾನತೆಯಿಂದ ಸಮಾನತೆಗೆ, ಬಂಧನದಿಂದ ಸ್ವಾತಂತ್ರ್ಯದೆಡೆಗೆ ಕರೆದೊಯ್ಯುವಂಥದ್ದಾಗಿದೆ.

'ಲಿಂಗ ವ್ಯಸನಿ ಜಂಗಮ ಪ್ರೇಮಿ ಎಂದೆನಿಸಯ್ಯಾ' ಎಂದು ಬಸವೇಶ್ವರರು ಹೇಳುವಲ್ಲಿ ಮೌಲ್ಯಗಳಿಂದ ತುಂಬಿದ ಒಳಜಗತ್ತು ಹೊರ ಜಗತ್ತನ್ನು ಆಳಬೇಕೆಂದು ಸೂಚಿತವಾಗುತ್ತದೆ. ಬಸವ ತತ್ವದ ಪ್ರಕಾರ, ಮಾನವೀಯ ಮೌಲ್ಯಗಳು ಜಗತ್ತನ್ನು ಆಳಬೇಕು. ಸಕಲ ಜೀವಾತ್ಮರನ್ನು ಬಯಸುವವನು ಭಕ್ತ. ಈ ಜಗತ್ತನ್ನು ಭಕ್ತರ ಸಾಮ್ರಾಜ್ಯ ಮಾಡಿದಾಗ ಮೇಲು-ಕೀಳಿಲ್ಲದ, ಸುಲಿಗೆ ಇಲ್ಲದ, ಘನತೆವೆತ್ತ, ಸ್ವತಂತ್ರ ಮಾನವ ಸಮಾಜ ಉದಯವಾಗುತ್ತದೆ. ಇಂಥ ಹೊಸ ಸಮಾಜವನ್ನು ಸೃಷ್ಟಿಸುವುದು ಬಸವೇಶ್ವರರ ಉದ್ದೇಶವಾಗಿತ್ತು. ಇಲ್ಲಿ ಯುದ್ಧ, ಮಹಿಳೆಯ ಶೋಷಣೆ; ಜಾತೀಯತೆ ಮತ್ತು ವರ್ಗಗಳು ಇರುವುದಿಲ್ಲ.

"ಕೈಯಲ್ಲಿ ಕನ್ನಡಿಯಿರಲು ತನ್ನ ತಾ ನೋಡಬಾರದೆ?" ಎಂದು ಕನ್ನಡಿ ಕಾಯಕದ ರೇವಮ್ಮ ಹೇಳುತ್ತಾಳೆ. "ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ" ಎಂದು

ವಿರ ರೆಮ್ಮವ್ವೆ ತಿಳಿಸುತ್ತಾಳೆ. "ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ" ಎಂದು ಕೊಟ್ಟಣದ ಸೋಮಮ್ಮನ ವಚನ ತಿಳಿಸುತ್ತದೆ. "ಹದ ಮಣ್ಣಲ್ಲದೆ ಮಡಕೆಯಾಗಲಾರದು" ಎಂದು ಕುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ ತಿಳಿಸುತ್ತಾಳೆ. "ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ, ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ" ಎಂದು ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ಎಚ್ಚರಿಸುತ್ತಾಳೆ. "ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ; ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ; ವ್ಯವಹರಿಸುವುದಕ್ಕೆ ವೈಶ್ಯನಲ್ಲ; ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ; ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ" ಎಂದು ಒಕ್ಕಲಿಗ ಮುದ್ದಯ್ಯ ಹೇಳುವಲ್ಲಿ, ಬಸವೇಶ್ವರರು ರೈತಾಪಿ ಜನರನ್ನು ಹಾಗೂ ಇತರ ಕಾಯಕಜೀವಿಗಳಲ್ಲಿ ವರ್ಣವ್ಯವಸ್ಥೆಯನ್ನು ಎತ್ತಿಹಿಡಿಯುವ ಮನುಧರ್ಮದ ವಿರುದ್ಧ ಪ್ರಜ್ಞೆ ಮೂಡಿಸಿದ್ದರು ಎಂಬ ಬಗ್ಗೆ ಅರಿವಾಗುತ್ತದೆ.

ಸಮಾಜವಾದ

ಬಸವೇಶ್ವರರು ವ್ಯಕ್ತಿತ್ವ ವಿಕಸನದ ನೀಲನಕ್ಷೆಯನ್ನು ಪರಿಪೂರ್ಣವಾಗಿ ಬಿಡಿಸಿಟ್ಟಿದ್ದಾರೆ. ಮಾನವರು ಆ ಪ್ರಕಾರ ನಡೆದುಕೊಂಡರೆ ನಿಜಮಾನವರಾಗುವುದರಲ್ಲಿ ಸಂಶಯವಿಲ್ಲ. ಮಾನವರ ವ್ಯಕ್ತಿತ್ವ ವಿಕಸನಗೊಳ್ಳಬೇಕಾದರೆ ಮೊದಲಿಗೆ ಕಾಯಕ ಮಾಡಬೇಕು. ಅಂತರಂಗ ಶುದ್ಧಿಗಾಗಿ, ಸಮರ್ಪಣಾ ಭಾವದ ಮೂಲಕ, ಧ್ಯಾನ ಅಂದರೆ ಇಷ್ಟಲಿಂಗ ಪೂಜೆ ಮತ್ತು ಬಹಿರಂಗ ಶುದ್ಧಿಗಾಗಿ ಕಾಯಕ ದಾಸೋಹದ ಮೂಲಕ ಜಂಗಮಲಿಂಗದ ಪೂಜೆ ಮಾಡಬೇಕು. ಅಂತರಂಗ ಶುದ್ಧಿಯಿಂದ ಆತ್ಮಕಲ್ಯಾಣವಾಗುತ್ತದೆ. ಬಹಿರಂಗ ಶುದ್ಧಿಯಿಂದ ಲೋಕಕಲ್ಯಾಣವಾಗುತ್ತದೆ, ಆತ್ಮ ಕಲ್ಯಾಣ ಸ್ವಾತಂತ್ರ್ಯದ ಆನಂದ ನೀಡಿದರೆ, ಲೋಕಕಲ್ಯಾಣ ಜವಾಬ್ದಾರಿಯ ಪ್ರಜ್ಞೆಯನ್ನು ಮೂಡಿಸುತ್ತದೆ. ಅನುಭವ ಮಂಟಪದ ಚಿಂತನ-ಮಂಥನದಲ್ಲಿ ಸರ್ವರೂ ಸಮಷ್ಟಿ ಅನುಭವ ಪಡೆಯುವರು. ಈ ಸಮಷ್ಟಿ ಅನುಭವದ ಅರಿವೇ ಗುರುವಾಗಿ ಅನುಭಾವದೆಡೆಗೆ ಒಯ್ಯುವುದು. ಆಗ ಮಾನವರು ನಿಜಮಾನವರಾಗುವರು ಎಂದು ಬಸವೇಶ್ವರರು ಬಯಸಿದ್ದರು.

ಕಾಯಕವೇ ಕೈಲಾಸ

ಬಸವೇಶ್ವರರು 'ಕಾಯಕವೇ ಕೈಲಾಸ' ಎಂದು ನಂಬಿದ್ದರು. ಯಾವುದೇ ವೃತ್ತಿಯನ್ನು ಭಕ್ತಿಯಿಂದ ನೆರವೇರಿಸುವುದು ಕಾಯಕದ ಪ್ರಧಾನ ಗುರಿ ಎಂದು ಅವರು ಪ್ರತಿಪಾದಿಸಿದರು. 'ಕಾಯಕ' ಎಂದರೆ ಶ್ರದ್ಧೆಯಿಂದ ನಿರ್ವಹಿಸುವುದು ಎಂದರ್ಥ. ಆ ಕಾಯಕವನ್ನು ವ್ಯಕ್ತಿ ವೈಭವೀಕರಣಕ್ಕೆ ಅಲ್ಲದೆ ಶಿವಾರ್ಪಿತಗೊಳಿಸಬೇಕು.

ಬಸವತತ್ವ ಅನುಯಾಯಿಗಳಿಗೆ ಅವರು 6 ಸೂತ್ರಗಳನ್ನು ನೀಡಿದ್ದಾರೆ. ಅವುಗಳೆಂದರೆ, 1. ಕಳ್ಳತನ ಮಾಡಬಾರದು 2. ಕೊಲ್ಲಬಾರದು 3. ಸುಳ್ಳು ಹೇಳಬಾರದು 4. ನಿಂದಿಸಬಾರದು 5. ಅಸಹ್ಯ ಪಡಬಾರದು 6. ಹೊಗಳಿ ಕೊಳ್ಳಬಾರದು ಎಂಬವು.

ಈ ಸೂತ್ರಗಳು ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿಗೆ ಅತ್ಯಗತ್ಯ ಎಂದು ಬಸವೇಶ್ವರರು ಹೇಳಿದ್ದಾರೆ.

ಪೃಥ್ವಿಯು ಸೂರ್ಯನ ಸುತ್ತ ತಿರುಗುವ ಕಾಯಕ, ಸೂರ್ಯ ಬೆಳಕನ್ನು ಕೊಡುವ ಕಾಯಕ ಹಾಗು ಚಂದಿರ ಬೆಳದಿಂಗಳು ಕೊಡುವ ಕಾಯಕ ಮಾಡುತ್ತಾರೆ; ರೈತರು ಸೂರ್ಯಾಸ್ತದವರೆಗೆ ಹೊಲದಲ್ಲಿ ಕಾಯಕ ಮುಗಿಸಿ ಬರುತ್ತಾರೆ. ಎರೆಹುಳು ಗಳು ಅವರ ಭೂಮಿಯನ್ನು ಹದಗೊಳಿಸುವ ಕಾಯಕವನ್ನು ಮಾಡುತ್ತವೆ. ಗಿಡ–ಮರಗಳು ದಾಸೋಹ ರೂಪದಲ್ಲಿ ನಮಗೆ ಹೂ ಹಣ್ಣು ಮುಂತಾದವುಗಳಲ್ಲದೆ ಪ್ರಾಣವಾಯುವನ್ನು ಕೊಡುವ ಕೆಲಸವನ್ನೂ ಮಾಡುತ್ತವೆ. ಹೀಗೆ ಇಡೀ ಬ್ರಹ್ಮಾಂಡವೇ ಕಾಯಕನಿರತವಾಗಿದೆ. ನಿಸರ್ಗದಲ್ಲಿ ಪ್ರತಿಜೀವಿ ತನ್ನ ಕಾಯಕ ತತ್ವವನ್ನು ಪಾಲಿಸುತ್ತಿರು ವಾಗ, ನರರಿಗೇಕೆ ಅದು ಸಾಧ್ಯವಾಗದು? ಎಂದು ಬಸವ ಚಿಂತನೆ ಪ್ರಶ್ನಿಸುತ್ತದೆ.

ಕಾಯಕವು ನಮ್ಮ ದೈಹಿಕ ಮತ್ತು ಬೌದ್ಧಿಕ ಶಕ್ತಿಯನ್ನು ಹೆಚ್ಚಿಸಿ, ನಮ್ಮ ಆರೋಗ್ಯವನ್ನು ಕಾಪಾಡಿ, ಮಾನಸಿಕ ಒತ್ತಡಗಳಿಂದ ರಕ್ಷಿಸಿ ನಾವು ಪರಾವಲಂಬಿಗಳಾಗದಂತೆ ನೋಡಿಕೊಳ್ಳುತ್ತದೆ. 'ಮನೆ ನೋಡಾ ಬಡವರು, ಮನ ನೋಡಾ ಘನ; ಸೋಂಕಿನಲ್ಲಿ ಶುಚಿ; ಸರ್ವಾಂಗ ಕಲಿಗಳು. ಪಸರಕ್ಕನುವಿಲ್ಲ; ಬಂದ ತತ್ಕಾಲಕ್ಕೆ ಉಂಟು. ಕೂಡಲಸಂಗನ ಶರಣರು ಸ್ವತಂತ್ರರು, ಧೀರರು' ಎಂದು ಬಸವೇಶ್ವರರು ಹೇಳುತ್ತಾರೆ. ಕಾಯಕ ಮಾಡದವರಿಗೆ ಹಸಿವು, ರುಚಿ, ವಿಶ್ರಾಂತಿ ಮತ್ತು ನಿದ್ರೆಯ ತೊಂದರೆ ಇರುವುದಿಲ್ಲ. ಕಾಯಕ ಜೀವಿಗಳಿಗೆ ಎಲ್ಲ ಆಹಾರ ಪದಾರ್ಥಗಳು ಪ್ರಸಾದವಾಗಿತ್ತವೆ.; ರುಚಿಕರವಾಗುತ್ತವೆ. ಅವರಿಗೆ ಸಮಾಧಾನ ಮತ್ತು ನಿದ್ರೆಯ ಸುಖ ಸಹಜವಾಗಿಯೇ ಸಿಗುತ್ತದೆ. ಸತ್ಯಶುದ್ಧ ಕಾಯಕದಿಂದ ಮನಸ್ಸು ಪವಿತ್ರವಾಗಿರುತ್ತದೆ. ಆದ್ದರಿಂದ ಕಾಯಕ ತತ್ವವು ವಿಶ್ವಮಾನ್ಯವಾಗಿದೆ.

ಅಂತೆಯೆ, ಬಸವೇಶ್ವರರು ಕಟ್ಟಕಡೆಯ ಮನುಷ್ಯರ ಮೇಲಾಗುತ್ತಿದ್ದ ಅನ್ಯಾಯದ ವಿರುದ್ಧ ಸಿಡಿದೆದ್ದರು. "ಜಾತಿ ಸಂಕರವಾದ ಬಳಿಕ ಕುಲವನರಸುವರೆ" ಎಂದು ಪ್ರಶ್ನಿಸಿ, ಕಾಯಕಜೀವಿಕೇಂದ್ರಿತ ಶರಣ ಸಂಕುಲವನ್ನು ಸೃಷ್ಟಿಸಿದರು. ವಿವಿಧ ಕಾಯಕಗಳ ಶೂದ್ರರಿಗೆ, ಮಹಿಳೆಯರಿಗೆ ಮತ್ತು ಪಂಚಮರಿಗೆ ಮೊದಲ ಬಾರಿಗೆ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದರು. ಅವರೆಲ್ಲ ಅನುಭವ ಮಂಟಪದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಶರಣರಲ್ಲಿ ಸಮಗಾರ, ಮಾದಾರ, ಮೇದಾರ, ಡೋಹರ, ಅಂಬಿಗ ಮುಂತಾದ ಪದಗಳು ಜಾತಿ ಸೂತಕವನ್ನು ಕಳೆದುಕೊಂಡು ಕಾಯಕ ಸೂಚಕಗಳಾದವು

ಕಾಯಕವು ಮಾನವ ಏಕತೆಯನ್ನು ಸಾಧಿಸುವ ಮೂಲಮಂತ್ರವಾಗಿದೆ. ಕಾಯಕವು ಭೂಲೋಕದ ಮಹತ್ವವನ್ನು ತಿಳಿಸುತ್ತದೆ. ಈ ಭೂಮಿಯನ್ನು ಬದುಕಲು ಹೆಚ್ಚು ಯೋಗ್ಯವಾಗುವಂತೆ ಮಾಡುತ್ತದೆ. ಕಾಯಕವು ಮಾನವರ ಮಧ್ಯದ ಅಂತಸ್ತುಗಳನ್ನು ಒಡೆದು ಹಾಕುತ್ತದೆ. ಕಂದಕಗಳನ್ನು ತುಂಬುತ್ತದೆ. ಕಾಯಕ ಮಾಡುವುದೆಂದರೆ ಬದುಕನ್ನು ಪ್ರೀತಿಸುವುದು ಎಂದು ತಿಳಿಸಿ ಕೊಡುತ್ತದೆ. "ದೇವ ಸಹಿತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ! ತಲೆದಂಡ!

ಲೆದಂಡ! ತಲೆದಂಡ! ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಿಸಿದೊಡೆ ನಿಮ್ಮ ರಾಣೆವಾಸದಾಣೆ" ಎಂದು ಹೇಳುತ್ತಾ, ಬಸವೇಶ್ವರರು ಭಕ್ತರಲ್ಲಿ ಸರ್ವಸಮಾನತೆಯನ್ನು ಕಾಣುತ್ತಾರೆ.

ದಾಸೋಹ

ನಿರಹಂಕಾರದಿಂದ ಮಾತ್ರ ಮಾನವರು ಇಷ್ಟೆಲ್ಲ ಸಾಧನೆಗಳನ್ನು ಮಾಡ ಬಲ್ಲರು. ಅಹಂಭಾವದಿಂದ ವಿಶ್ವ ನಾಶ; ದಾಸೋಹಂಭಾವದಿಂದ ವಿಶ್ವದ ರಕ್ಷಣೆ; ಮಾನವರು ಉನ್ನತ ಮೌಲ್ಯಗಳೊಂದಿಗೆ ಬಾಳುತ್ತ ಈ ಭೂಮಿಯ ಹಿತವನ್ನು ಕಾಪಾಡಬೇಕೆಂಬುದು ಬಸವೇಶ್ವರರ ಆಶಯವಾಗಿದೆ.

'ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು, ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯಾ ಸಂಗಮದಾಸೋಹಕ್ಕೆಂದು' ಎಂದು ಬಸವೇಶ್ವರರು ಹೇಳುವಾಗ, ಕಾಯಕವು ಕೇವಲ ಸ್ವಾವಲಂಬನೆಗಾಗಿ ಅಲ್ಲ, ಅದಕ್ಕೆ ತ್ರಿವಿಧ ದಾಸೋಹದ ಜವಾಬ್ದಾರಿಗಳಿವೆ ಎಂಬುದನ್ನು ಅವರು ಸೂಚಿಸುತ್ತಾರೆ. ನಮ್ಮ ಕಾಯಕದಿಂದ ಬಂದದ್ದನ್ನು ದೇವರ ಪ್ರಸಾದವಾಗಿ ಸ್ವೀಕರಿಸುವುದರ ಮೂಲಕ ಗಳಿಕೆಯ ಅಹಂನಿಂದ ಹೊರಬಂದು, ಆ ಗಳಿಸಿದ್ದನ್ನೆಲ್ಲ ನಮಗಾಗಿಯೇ ಖರ್ಚು ಮಾಡದೆ ಸಾಮಾಜಿಕ ಜವಾಬ್ದಾರಿಯನ್ನು ಸಮರ್ಪಣಾ ಭಾವದಿಂದ ನಿಭಾಯಿಸುವುದೇ ದಾಸೋಹವೆಂದು ತಿಳಿಸುತ್ತಾರೆ. ಅಂತೆಯೆ ಬಸವ ಚಿಂತನೆಯಲ್ಲಿ ಕಾಯಕ –ಪ್ರಸಾದ–ದಾಸೋಹಗಳಿಗೆ ಅವಿನಾಭಾವ ಸಂಬಂಧವಿದೆ. ಯೋಗ್ಯ ಉತ್ಪಾದನೆ, ಯೋಗ್ಯ ಬಳಕೆ ಮತ್ತು ಯೋಗ್ಯ ವಿತರಣೆ ಇವು ಮೂರು ಬಸವೇಶ್ವರರ ಅರ್ಥಶಾಸ್ತ್ರದ ಪ್ರಮುಖ ಅಂಶಗಳಾಗಿವೆ. ಕಾಯಕವೆಂದರೆ ಯೋಗ್ಯವಾದುದನ್ನೇ ಉತ್ಪಾದಿಸುವ ಕ್ರಿಯೆ. ಪ್ರಸಾದವೆಂದರೆ ಯೋಗ್ಯ ಬಳಕೆ, ದಾಸೋಹವೆಂದರೆ ಯೋಗ್ಯ ವಿತರಣೆ.

'ನಾವು ಗಳಿಸಿದ್ದೆಲ್ಲ ನಮ್ಮದು' ಎಂಬ ಅಹಂಕಾರವನ್ನು ಪ್ರಸಾದ ಪ್ರಜ್ಞೆ ಹೊಡೆದು ಹಾಕುತ್ತದೆ. ನಾವು ಗಳಿಸಿದ್ದೆಲ್ಲ ಪ್ರಸಾದಕ್ಕೆ ಎಂಬುದು ಅರಿವಾದಾಗ ಅದನ್ನು ಸುವ್ಯಸ್ಥಿತವಾಗಿ ಬಳಸುತ್ತೇವೆ ಹಾಗೂ ಸತ್ಕಾರ್ಯಗಳಿಗಾಗಿ ವ್ಯಯಿಸುತ್ತೇವೆ. ಆ ವಸ್ತುವಿನ ಮಹತ್ವವನ್ನು ಅರಿತುಕೊಳ್ಳುತ್ತೇವೆ. ಸೇವಾ ಮನೋಭಾವ ತಾಳುತ್ತೇವೆ. ದುಃಖಿಗಳಿಗೆ ಮತ್ತು ಕಷ್ಟದಲ್ಲಿರುವವರಿಗೆ ಒಳ್ಳೆಯದಾಗುವ ಹಾಗೆ ನಮ್ಮಲ್ಲಿರುವ ಸಂಪತ್ತನ್ನು ವಿನಿಯೋಗಿಸಲು ಬಯಸುತ್ತೇವೆ. ನಾವು ಸೇವಿಸುವ ಆಹಾರವೊಂದೇ ಪ್ರಸಾದವಲ್ಲ. ಸೂರ್ಯ, ಚಂದ್ರ, ನಕ್ಷತ್ರ, ಈ ಭೂಮಿ ಮತ್ತು ನಮ್ಮ ಕಾಯ ಕೂಡ ದೇವರ ಪ್ರಸಾದವೇ ಆಗಿದೆ. ನಾವು ಈ ಭೂಮಿಯ ಮೇಲೆ ಏನೆಲ್ಲ ಗಳಿಸಬಹುದು. ಆದರೆ ಈ ಭೂಮಿಯಿಂದ ಏನನ್ನೂ ಒಯ್ಯಲು ಸಾಧ್ಯವಿಲ್ಲ. ನಮ್ಮ ದೇಹವನ್ನು ಕೂಡ ಒಯ್ಯಲಾರೆವು. ಆದ್ದರಿಂದ ಎಲ್ಲವನ್ನೂ ದೇವರ ಪ್ರಸಾದವೆಂದು ಭಾವಿಸಬೇಕು. ನಮ್ಮಲ್ಲಿರುವ ಸಂಪತ್ತು ದೇವರು ಕೊಟ್ಟದ್ದು. ಆದ್ದರಿಂದ ಅದರ ಮೇಲೆ ಸಕಲಜೀವಾತ್ಮರ ಹಕ್ಕಿದೆ ಎಂಬುದನ್ನು ಮರೆಯಬಾರದು. ಹೀಗೆ,

ಕಾಯಕ ಪ್ರಜ್ಞೆಯು ಪ್ರಸಾದ ಪ್ರಜ್ಞೆಗೆ ದಾರಿ ಮಾಡಿಕೊಟ್ಟಂತೆ, ಪ್ರಸಾದ ಪ್ರಜ್ಞೆಯು ದಾಸೋಹ ಪ್ರಜ್ಞೆಗೆ ದಾರಿಮಾಡಿಕೊಡುತ್ತದೆ. ಆದ್ದರಿಂದ ಕಾಯಕ-ದಾಸೋಹ-ಪ್ರಸಾದಗಳು ಆರ್ಥಿಕ ಮತ್ತು ಪಾರಮಾರ್ಥಿಕ ತತ್ವಗಳ ಅಂದರೆ ಸಮತಾವಾದದ ತತ್ವದ ಸಂಕೇತಗಳಾಗಿವೆ. ಈ ಸಮತಾವಾದದಲ್ಲಿ ಮನುಷ್ಯರಿಗಷ್ಟೇ ಅಲ್ಲ, ಸಕಲ ಜೀವಿಗಳಿಗೂ ಒಳಿತು ಇದೆ ಎಂಬುದನ್ನು ಬಸವ ತತ್ವವು ಮನಗಾಣಿಸಿ ಕೊಡುತ್ತದೆ.

ಬಸವ ಚಿಂತನೆ ಇಡೀ ಲೋಕವ್ಯವಹಾರದ ಚಿಂತನೆಯಾಗಿದೆ. "ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ ಹರದ ಕುಳಿತಿರ್ದ ನಮ್ಮ ಮಹಾದೇವ ಸೆಟ್ಟಿ. ಒಮ್ಮನವಾದಡೆ ಒಡನೆ ನುಡಿವನು, ಇಮ್ಮನವಾದಡೆ ನುಡಿಯನು, ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ, ಜಾಣ ನೋಡವ್ವ ನಮ್ಮ ಕೂಡಲಸಂಗಮದೇವ" ಎಂದು ಬಸವೇಶ್ವರ ಹೇಳುತ್ತಾರೆ. ಕಾಯಕ-ಪ್ರಸಾದ-ದಾಸೋಹ ತತ್ವದ ಮೂಲಕ ಮಾನವರಿಗೆ ಗಣಪ್ರಜ್ಞೆ ಮೂಡಿದಾಗ, ವ್ಯಕ್ತಿಸ್ವಾತಂತ್ರ್ಯದ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನೂ ಹೊಂದುವುದರಿಂದ, ಲೋಕವು ಶಾಂತಿ ಮತ್ತು ಸಹಬಾಳ್ವೆಯ ಧಾಮವಾಗುವುದು. ಇದೇ ಕರ್ತಾರನ ಕಮ್ಮಟ,ಅಂದರೆ ದೇವರ ಆನಂದಭವನ. ಇಲ್ಲಿ ಸಾಹಿತ್ಯ, ತತ್ತ್ವ ಮತ್ತು ಬದುಕು ಒಂದಾಗಿ ಹೋಗುತ್ತದೆ. ಭೌತಿಕ ಜಗತ್ತಿನಲ್ಲಿ ಎಷ್ಟು ಸಾಧ್ಯವೊ ಅಷ್ಟು ಕಡಿಮೆ ವಸ್ತುಗಳೊಂದಿಗೆ ಮತ್ತು ಆಂತರಿಕ ಜಗತ್ತಿನಲ್ಲಿ ಎಷ್ಟು ಸಾಧ್ಯವೊ ಅಷ್ಟು ಹೆಚ್ಚು ಆನಂದಮಯವಾಗಿ ಬದುಕುವವರೇ ಶರಣರು ಎಂದು ಬಸವೇಶ್ವರರು ಹೇಳುತ್ತಾರೆ. ದಾಸೋಹ ಭಾವವು ಸಹಜವಾಗಿಯೆ ನಮ್ಮನ್ನು ವಿಶ್ವಮಾನವರನ್ನಾಗಿ ಮಾಡುತ್ತದೆ. ಎಲ್ಲ ಐಹಿಕ ದುರಾಸೆಗಳಿಂದ ದೂರ ಉಳಿಯುವಂತೆ ಮಾಡುತ್ತದೆ. ಜಂಗಮ (ಸಾಮಾಜಿಕ) ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ಇದೇ ಬಸವ ಚಿಂತನೆಯ ವೈಶಿಷ್ಟ್ಯ.

ಗ್ರಂಥಋಣ

- ವಚನಸಾಹಿತ್ಯ- ಎಂ.ಚಿದಾನಂದಮೂರ್ತಿ
- ಬಸವಣ್ಣನವರ ವಚನ ಸಂಪುಟ- ಸಂ.ಡಾ.ಎಂ.ಎಂ.ಕಲುಬುರ್ಗಿ
- ಕನ್ನಡ ಸಾಹಿತ್ಯ ಚರಿತ್ರೆ- ರಂ.ಶ್ರೀ. ಮುಗಳಿ
- ಬಸವನಾಳ.ಶಿ.ಶಿ.- ಬಸವಣ್ಣನವರ ಷಟ್‌ಸ್ಥಲದ ವಚನಗಳು-ವಚನ ಸಂಖ್ಯೆ-592.
- ಕಲಬುರ್ಗಿ ಎಂ.ಎಂ- ಬಸವಣ್ಣನವರ ವಚನ ಸಂಪುಟ, ವಚನ ಸಂಖ್ಯೆ-345.ಪು. 83.

ಗಾಂಧಿ ಮತ್ತು ಅಂಬೇಡ್ಕರರ ಸ್ವಾತಂತ್ರ್ಯದ ಪರಿಕಲ್ಪನೆಯ ಪ್ರಸ್ತುತತೆ

ಸ್ವಾಮಿ ಹೆಚ್.
ಶಿವಣ್ಣ

ಭಾರತದ ಇತಿಹಾಸದಲ್ಲಿ ಹಲವಾರು ಸಾಮಾಜಿಕ, ರಾಜಕೀಯ ತತ್ವಜ್ಞಾನಿಗಳು ಮತ್ತು ಚಿಂತಕರನ್ನು ಕಾಣಬಹುದು. ಅವರಲ್ಲಿ ಮಹಾತ್ಮ ಗಾಂಧೀಜಿ ಮತ್ತು ಭಾರತರತ್ನ ಅಂಬೇಡ್ಕರ್ ನಿಸ್ಸಂಶಯವಾಗಿಯೂ ಪ್ರಮುಖರು. ಅವರಿಬ್ಬರೂ ಅಪರೂಪದ ಮತ್ತು ಕುತೂಹಲಕಾರಿ ವ್ಯಕ್ತಿತ್ವ ಹೊಂದಿದವರು. ಇಬ್ಬರೂ ವಿದ್ವಾಂಸರು, ಚಿಂತಕರು, ಬರಹಗಾರರು, ನಾಯಕರು, ಬಹುಮುಖ ಪ್ರತಿಭೆ ಮತ್ತು ಬಹುಮುಖ ಆಯಾಮ ಹೊಂದಿದವರು. ತಮ್ಮ ಜೀವನವನ್ನೇ ಪ್ರಯೋಗಾಲಯವನ್ನಾಗಿಸಿಕೊಂಡು ಸತ್ಯಾನ್ವೇಷಣೆಯಲ್ಲಿ ತೊಡಗಿದವರು.

ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಸ್ವಾತಂತ್ರ್ಯದ ಬಗ್ಗೆ ತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿದ್ದವರು; ಈ ವಿಚಾರದಲ್ಲಿ ಈರ್ವರ ನಡುವೆ ತಾತ್ವಿಕ ಭಿನ್ನಾಭಿಪ್ರಾಯಗಳಿವೆ. ಗಾಂಧೀಜಿ ಅವರ ದೃಷ್ಟಿಕೋನದ ಸ್ವರಾಜ್ಯ ಮತ್ತು ಅಂಬೇಡ್ಕರ್ ಚಿಂತನೆಯ ಸ್ವರಾಜ್ಯ ಬೇರೆ ಬೇರೆ. ಸ್ವರಾಜ್ಯ ಎಂಬ ಪರಿಕಲ್ಪನೆ ಕುರಿತು ಇಬ್ಬರಲ್ಲೂ ಭಿನ್ನ ಅಭಿಪ್ರಾಯಗಳಿವೆ.

ಗಾಂಧೀಜಿ ಅವರ ದೃಷ್ಟಿಕೋನದಲ್ಲಿ ಸ್ವಾತಂತ್ರ್ಯ

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ತರವಾದ ಪಾತ್ರವಹಿಸಿದ ಗಾಂಧೀಜಿ, ಸ್ವರಾಜ್ಯ ಕುರಿತು ಹೊಂದಿದ್ದ ನಿಲುವುಗಳು ಸುಲಭಗ್ರಾಹ್ಯವಲ್ಲ. ಅವರ ಸ್ವಾತಂತ್ರ್ಯದ ಪರಿಕಲ್ಪನೆಯು ರಾಮರಾಜ್ಯದ ಕನಸನ್ನು ಅವಲಂಬಿಸಿದೆ. ಇದು ಅವರ 'ಹಿಂದ್ ಸ್ವರಾಜ್' ಕೃತಿಯಲ್ಲಿ ವ್ಯಕ್ತವಾಗುತ್ತದೆ. ಗಾಂಧೀಜಿ ಅವರ ದೃಷ್ಟಿಯಲ್ಲಿ ವ್ಯಕ್ತಿಗಳು ತಮ್ಮನ್ನು ತಾನು ಆಳ್ವಿಕೆ ಮಾಡಿಕೊಳ್ಳುವುದೆ ಸ್ವಾತಂತ್ರ್ಯವಾಗಿದೆ. ಅಂದರೆ ವ್ಯಕ್ತಿಗಳಿಗೆ ತಮ್ಮ ಬೇಕು-ಬೇಡಗಳೇನು? ಎಂದು ನಿರ್ಧರಿಸುವ ಹಕ್ಕುಗಳು ಇರಬೇಕು. ಅವುಗಳಿಗೆ ಪೂರಕವಾಗಿ ವ್ಯಕ್ತಿಗಳು ತಮ್ಮ ಜೀವನವನ್ನು ನಿಯಂತ್ರಿಸಿಕೊಳ್ಳಬೇಕು.

ದಶಕಗಳ ಕಾಲ ಭಾರತವನ್ನಾಳಿದ ಬ್ರಿಟಿಷರಿಂದ ಬಂಧಮುಕ್ತರಾಗುವುದಷ್ಟೇ ಸ್ವಾತಂತ್ರ್ಯವಲ್ಲ; ಅನಂತರ ಅವರ ಜೀವನಕ್ರಮ, ಚಿಂತನೆಗಳು, ಆಡಳಿತ ಪದ್ಧತಿ ಕಾನೂನುವ್ಯವಸ್ಥೆಯನ್ನು ಯಥಾವತ್ತಾಗಿ ಅಳವಡಿಸಿಕೊಳ್ಳದೆ, ನಮ್ಮದೇ ಆಡಳಿತ ವ್ಯವಸ್ಥೆ, ಜೀವನಕ್ರಮ ಮತ್ತು ಕಾನೂನುವ್ಯವಸ್ಥೆಯನ್ನು ಅನುಸರಿಸುವುದೇ ನಿಜವಾದ ಸ್ವರಾಜ್ಯ ಎಂದು ಗಾಂಧೀಜಿ ಹೇಳುತ್ತಾರೆ. ಜೊತೆಗೆ ಸ್ವದೇಶಿ ವಸ್ತುಗಳನ್ನು ಉಪಯೋಗಿಸಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಬೇಕು ಎಂದು ಕರೆ ನೀಡುತ್ತಾರೆ. ರಾಜ್ಯರಹಿತ ವ್ಯವಸ್ಥೆ ಇರಬೇಕು ಏಕೆಂದರೆ ರಾಜ್ಯ ತನ್ನ ಕಾರ್ಯ ಬಲದಿಂದ ವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ಬಂಧಿಸುತ್ತದೆ. ಸತ್ಯ-ಅಹಿಂಸೆಗಳನ್ನು ಸಾಧನಗಳಾಗಿ ಹೊಂದಿ, ವ್ಯಕ್ತಿ ತನ್ನ ಗುರಿಗಳನ್ನು ಸಾಧಿಸಬೇಕು, ಉದ್ದೇಶ ಒಳ್ಳೆಯದಾಗಿದ್ದರಷ್ಟೇ ಸಾಲದು, ಆ ಉದ್ದೇಶವನ್ನು ಸಾಧಿಸುವ ಮಾರ್ಗವು ಕೂಡ ಒಳ್ಳೆಯದಾಗಿರಬೇಕು ಎಂದು ಹೇಳುವ ಮೂಲಕ, ಸತ್ಯ ಮತ್ತು ಅಹಿಂಸೆಯ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ.

ಅಂಬೇಡ್ಕರ್ ದೃಷ್ಟಿಕೋನದಲ್ಲಿ ಸ್ವಾತಂತ್ರ್ಯ

ಡಾ. ಬಿ.ಆರ್. ಅಂಬೇಡ್ಕರ್ ದೃಷ್ಟಿಕೋನದಲ್ಲಿ ಸ್ರಾತಂತ್ರ್ಯವೆಂದರೆ ದೇಶದ ಜನರಿಗೆ ಸ್ವಾತಂತ್ರ್ಯ ಇರಬೇಕು; ಅಧಿಕಾರ ಯಾವುದೇ ವರ್ಗದ ಕೈಯಲ್ಲಿ ಕೇಂದ್ರೀಕೃತವಾಗಿರಬಾರದು. ಸಮಸ್ತ ಜನತೆಯ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಸರ್ಕಾರ ಕಾಪಾಡುವಂತಿರಬೇಕು. ನೈಜ ಸ್ವಾತಂತ್ರ್ಯವು ಸಾಮಾಜಿಕ, ರಾಜಕೀಯ, ಆರ್ಥಿಕ ಬೌದ್ಧಿಕ, ನೈತಿಕ ಚಟುವಟಿಕೆಗಳ ಆಯಾಮವನ್ನು ಪಡೆದುಕೊಳ್ಳುತ್ತದೆ.

ಅಂಬೇಡ್ಕರ್ ದೃಷ್ಟಿಯಲ್ಲಿ ವ್ಯಕ್ತಿಯ ವಿಕಾಸ ಮತ್ತು ಅಭಿವೃದ್ಧಿಗೆ ಸಮಗ್ರ ಸ್ವಾತಂತ್ರ್ಯ ಅತ್ಯವಶ್ಯಕವಾದುದು. ವಿಚಾರಸ್ವಾತಂತ್ರ್ಯ, ಅಭಿವ್ಯಕ್ತಿಸ್ವಾತಂತ್ರ್ಯ, ವೃತ್ತಿಸ್ವಾತಂತ್ರ್ಯ ಗಳನ್ನು ಅಳವಡಿಸುವುದರ ಜೊತೆಗೆ ಅದನ್ನು ರಕ್ಷಿಸಲು ಸೂಕ್ತ ರಕ್ಷಣೋಪಾಯಗಳನ್ನು ಸೇರಿಸಬೇಕು ಹಾಗೂ ಜೀವನಾವಶ್ಯಕ ಪ್ರಾಥಮಿಕ ಸೌಲಭ್ಯ ಗಳೆಲ್ಲಾ ಯಾವ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮನಾಗಿ ಸಿಗುತ್ತವೆಯೋ ಅಲ್ಲಿ ಸ್ವಾತಂತ್ರ್ಯ ಇರುತ್ತದೆ ಎಂದು ಅವರು ಹೇಳಿದ್ದಾರೆ.

ಅಂಬೇಡ್ಕರರು ಸಾಮಾಜಿಕ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸಿದ್ದಾರೆ. ಅಂದರೆ ಭಾರತದ ಜನತೆಗೆ ಆರ್ಥಿಕ, ಸಾಮಾಜಿಕ, ಸ್ವಾತಂತ್ರ್ಯಗಳಿರಬೇಕು ಸಮಾಜದಲ್ಲಿ ದಬ್ಬಾಳಿಕೆಗೆ ಒಳಪಟ್ಟ ವರ್ಗಗಳ ಸಂಕಷ್ಟ ಪರಿಹಾರಕ್ಕಾಗಿ, ಅವರ ಹಿತಾಸಕ್ತಿ ರಕ್ಷಿಸುವುದಕ್ಕೆ ಕಾನೂನುಬದ್ಧ ನಿಯಮಗಳಿರಬೇಕು; ಸಮಾನತೆಯು ಸಮಾಜದಲ್ಲಿ ಮೈದಾಳುವುದಕ್ಕೆ ಸ್ವಾತಂತ್ರ್ಯ ಅನುವು ಮಾಡಿಕೊಡಬೇಕು; ಕಡೆಯಲ್ಲಿ ಇಡೀ ಸಮಾಜದಲ್ಲಿ ಭ್ರಾತೃತ್ವ ನೆಲೆಸಬೇಕು. ಇದಕ್ಕಾಗಿ ಅಸ್ಪೃಶ್ಯತೆ, ಜಾತೀಯತೆ, ತಾರತಮ್ಯ ಇತ್ಯಾದಿಗಳನ್ನು ನಾಶ ಮಾಡುವುದು ಅಗತ್ಯ ಎಂದು ಅವರು ತಿಳಿಸಿದರು.

ಾಂಧಿ–ಅಂಬೇಡ್ಕರ್ ಚಿಂತನೆಯಲ್ಲಿನ ಭಿನ್ನತೆ

ರಾಜಕೀಯ ಸ್ವಾತಂತ್ರ್ಯವನ್ನು ದೇಶವು ಗಳಿಸಿಕೊಳ್ಳುವುದಕ್ಕೆ ಗಾಂಧೀಜಿ ಹೆಚ್ಚು ುಹತ್ವವನ್ನು ನೀಡಿದರು. ಇನ್ನುಳಿದ ವಿಷಯಗಳನ್ನು ಸ್ವತಂತ್ರ ಭಾರತದಲ್ಲಿ ವಿಚಾರ ಾಡಬಹುದು ಎಂಬುದು ಅವರ ಅಭಿಮತವಾಗಿತ್ತು. ಆದರೆ, ಅಂಬೇಡ್ಕರರು, ್ರಿಟಿಷರು ಹೇರಿದ ರಾಜಕೀಯ ಗುಲಾಮಗಿರಿಯನ್ನು ತೊಡೆದು ಹಾಕಿ ಸ್ವಾತಂತ್ರ್ಯವನ್ನು ಡೆದುಕೊಳ್ಳುವ ದೇಶದಲ್ಲಿ ಜಾತಿ ಹೆಸರಿನ ಗುಲಾಮಗಿರಿ ಇರುವುದಿಲ್ಲ ಎಂಬ ಬಗ್ಗೆ ಧೃಡ ರ್ಧಾರವನ್ನು ಈಗಲೇ ಮಾಡಬೇಕಲ್ಲವೆ? ಎಂಬ ಪ್ರಶ್ನೆಯನ್ನು ಎತ್ತುತ್ತಾರೆ.

ಸಮಾನತೆ ಇಲ್ಲದ ಸ್ವಾತಂತ್ರ್ಯ ಅರ್ಥಹೀನ; ಸ್ವತಂತ್ರ ದೇಶದಲ್ಲಿ ಎಲ್ಲಾ ಮುದಾಯಗಳು ಸ್ವಾಭಿಮಾನದಿಂದ, ಘನತೆಯಿಂದ ಬದುಕಬೇಕು; ಅಸಮಾನತೆ ಯನ್ನು ುತ್ತು ಅಮಾನವೀಯ ನಡವಳಿಕೆಗೆ ಆಧಾರವಾಗಿರುವ ಧರ್ಮಶಾಸ್ತ್ರಗಳನ್ನು ಧಿಕ್ಕರಿಸಬೇಕು ಂಬ ನಿಲವು ತಾಳಿದರು.

ಲಹೆಗಳು

- ಗಾಂಧಿ ಮತ್ತು ಅಂಬೇಡ್ಕರ್ ವಿಚಾರಧಾರೆಗಳನ್ನು ಸಮಾಜಕ್ಕೆ ತಿಳಿಸುವ ಅವಶ್ಯಕತೆ ಇದೆ.
- ಸ್ವಯಂ ಆಡಳಿತ ಎಂಬ ಗಾಂಧೀಜಿ ಅಭಿಪ್ರಾಯದ ಮಹತ್ವವನ್ನು ಸಮಾಜಕ್ಕೆ ತಿಳಿಸಬೇಕು.
- ಗಾಂಧಿ ಮತ್ತು ಅಂಬೇಡ್ಕರ್ ವಿಚಾರ ಸಮಾಜದ ಆರೋಗ್ಯಕ್ಕೆ ಪ್ರಸ್ತುತ ಎಂಬುದನ್ನು ಮನವರಿಕೆ ಮಾಡಿ ಕೊಡಬೇಕು.
- ಅಂಬೇಡ್ಕರ್ ಕನಸು ಕಂಡ ಸಾಮಾಜಿಕ–ಆರ್ಥಿಕ ಪ್ರಜಾಪ್ರಭುತ್ವದ ಅನುಷ್ಠಾನಕ್ಕೆ ಪ್ರಯತ್ನಿಸಬೇಕು.
- ಎಲ್ಲರ ವ್ಯಕ್ತಿತ್ವ ವಿಕಸನಕ್ಕೆ ಸ್ವಾತಂತ್ರ್ಯ ಅನಿವಾರ್ಯ. ಆದರೆ, ಪ್ರತಿಯೊಬ್ಬರೂ ಎಲ್ಲರ ಹಕ್ಕು ಸ್ವಾತಂತ್ರ್ಯಗಳನ್ನು ಗೌರವಿಸಬೇಕು.
- ಗಾಂಧೀಜಿ ಮುಖ್ಯವಾಗಿ ಬೋಧಿಸಿದ ಸತ್ಯ ಮತ್ತು ಅಹಿಂಸೆ ತತ್ವಗಳನ್ನು ಸಮಾಜದಲ್ಲಿ ಅನುಷ್ಠಾನಗೊಳಿಸಬೇಕು.
- ಅಂಬೇಡ್ಕರ್ ಮುಖ್ಯವಾಗಿ ಬೋಧಿಸಿದ ಸಮಾನತೆಯನ್ನು ಸಮಾಜದಲ್ಲಿ ಸ್ಥಾಪಿಸಬೇಕು.
- ಶತಮಾನಗಳಿಂದ ಶೋಷಣೆಗೆ ಗುರಿಯಾಗಿರುವ ಸಮುದಾಯಗಳಿಗೆ ಕಡ್ಡಾಯ ಪ್ರಾತಿನಿಧ್ಯ ದೊರಕಬೇಕು.

ಉಪಸಂಹಾರ

ಗಾಂಧಿ ಮತ್ತು ಅಂಬೇಡ್ಕರ್ ಸ್ವಾತಂತ್ರ್ಯದ ಬಗೆಗೆ ಹೊಂದಿದ್ದ ಅಭಿಪ್ರಾಯ ಗಳನ್ನು ಪ್ರಸಾರ ಮಾಡಬೇಕು. ಇಡೀ ಸಮಾಜದ ಆರೋಗ್ಯವನ್ನು ಗಮನದಲ್ಲಿ ಇಟ್ಟುಕೊಂಡು, ಅವರ ತತ್ವಗಳನ್ನು ಸಮಾಜದಲ್ಲಿ ಜಾರಿಗೊಳಿಸುವ ಕಾರ್ಯ ನಡೆಯಬೇಕು. ಗಾಂಧೀ ಮತ್ತು ಅಂಬೇಡ್ಕರ್ ನಮ್ಮ ಸಮಾಜಕ್ಕೆ ಎಲ್ಲಾ ಕಾಲಕ್ಕೂ ಹಿತಕರ ಎನಿಸುವ ಚಿಂತನೆಯನ್ನು ನೀಡಿದ್ದಾರೆ. ಅದರ ಆಧಾರದಲ್ಲಿ ನಾವು ಆರೋಗ್ಯಕರ ಸಮಾಜವನ್ನು ನಿರ್ಮಿಸಬೇಕು. ಗಾಂಧೀ–ಅಂಬೇಡ್ಕರ್ ಇಬ್ಬರ ವ್ಯಕ್ತಿತ್ವವೂ ನಮಗೆ ಮಾದರಿ.

ಪರಾಮರ್ಶನ ಗ್ರಂಥಗಳು

- ಮೋಹನದಾಸ್ ಕರಮಚಂದ ಗಾಂಧಿ –ಹಿಂದ್‌ಸ್ವರಾಜ್ (2008) ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು.
- ಚಂದ್ರಶೇಖರ್ ಕೆ. – ಆಧುನಿಕ ಭಾರತದ ರಾಜಕೀಯ ಚಿಂತಕರು
- ನರೇಂದ್ರ ಕುಮಾರ್ ಎಸ್. – ಮಹಾಮಾನವತಾವಾದಿ ಭಾರತರತ್ನ ಡಾ॥ ಬಿ.ಆರ್. ಅಂಬೇಡ್ಕರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
- ವಿಜಯ ಕರ್ನಾಟಕ ದಿನಪತ್ರಿಕೆ – 2 ಅಕ್ಟೋಬರ್ 2016.

ಮಾನವತಾವಾದಿ ಡಾ. ಬಿ. ಆರ್. ಅಂಬೇಡ್ಕರ್

ಸೈಯದ್ ಮುಯಿನ್

ಭೀಮರಾವ್ ರಾಮ್‌ಜೀ ಅಂಬೇಡ್ಕರ್ ಬಹುಮುಖಿ ವ್ಯಕ್ತಿತ್ವ ಹೊಂದಿದ ವರು; ಅವರು ಭಾರತದ ಶೋಷಿತರ ವಿಮೋಚನೆಗೆ ತಮ್ಮನ್ನು ಅರ್ಪಿಸಿಕೊಂಡವರು. ಅವರೊಬ್ಬ ಬಹುದೊಡ್ಡ ರಾಷ್ಟ್ರೀಯ ನಾಯಕರು; ಪರಮ ದೇಶಭಕ್ತರು; ಬಹು ದೊಡ್ಡ ಶಿಕ್ಷಣತಜ್ಞರು; ರಾಜಕೀಯ ಮುತ್ಸದ್ದಿ; ಅಪೂರ್ವ ಸಾಮಾಜಿಕ ತತ್ವಜ್ಞಾನಿ; ಅಮೋಘ ಧಾರ್ಮಿಕ ಮಾರ್ಗದರ್ಶಕರು.

ಅಸ್ಪೃಶ್ಯ ಜಾತಿಯವರಾಗಿದ್ದ ಕಾರಣಕ್ಕೆ ಅವಮಾನ ಅನುಭವಿಸಿ, ಅದಕ್ಕೆ ಕಾರಣ ಕಂಡುಕೊಂಡು, ಅದರಿಂದ ಸಮಾಜವನ್ನು ಬಿಡುಗಡೆಗೊಳಿಸಲು ಮುಂದೆ ಬಂದವರು ಅಂಬೇಡ್ಕರ್. ಸುಮಾರು 5000 ವರ್ಷಗಳಿಂದ ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ಮಾರಕವಾಗಿದ್ದ ಜಾತಿಪದ್ಧತಿಯ ವಿರುದ್ದ ಅವರು ದಂಗೆಯೆದ್ದರು; ಜಾತಿ ವ್ಯವಸ್ಥೆಯಿಂದ ಮುಕ್ತಿ ಪಡೆಯುವ ಮಾರ್ಗವನ್ನು ಅವರು ಭಾರತೀಯರಿಗೆ ತಿಳಿಸಿದವರು. ಅಂಬೇಡ್ಕರ್ ಮಾನವತೆಗಾಗಿ ಮತ್ತು ನಾಗರಿಕ ಹಕ್ಕುಗಳಿಗಾಗಿ ಹೋರಾಟ ನಡೆಸಿದವರು.

ಅಂಬೇಡ್ಕರ್, 'ರಾಷ್ಟ್ರದ ಸ್ವಾತಂತ್ರ್ಯ'ಕ್ಕಿಂತ ಹೆಚ್ಚಾಗಿ 'ಮಾನವೀಯತೆಯ ಸ್ವಾತಂತ್ರ್ಯ'ಕ್ಕೆ ಹೆಚ್ಚು ಮಹತ್ವ ನೀಡಿದರು. ಹೊರಗಿನ ಶತೃ ಮತ್ತು ಒಳಗಿನ ಶತೃ ಇಬ್ಬರ ಕಣ್ಣುಗಳನ್ನೂ ತೆರೆಸುವ ಮಹಾನ್ ಕಾರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡರು.

ಅಂಬೇಡ್ಕರ್ ಅವರು ತಮಗೆ ಬುದ್ಧ ಮೊದಲನೆಯ ಗುರು, ಮಹಾತ್ಮ ಕಬೀರ್ ಎರಡನೆಯ ಗುರು ಮತ್ತು ಜ್ಯೋತಿಬಾ ಫುಲೆ ಮೂರನೆಯ ಗುರು ಎಂದು ಹೇಳಿದರು. ಹೇಳುತ್ತಿದ್ದರು. ಅವರು ಹಿಂದೂಧರ್ಮವನ್ನು 'ನ್ಯಾಯ' ಮತ್ತು 'ಉಪಯುಕ್ತತೆ'ಯ ದೃಷ್ಟಿಯಿಂದ ಅಧ್ಯಯನ ಮಾಡಿದರು. 'ಬುದ್ಧ ಧರ್ಮ ಒಂದು ಶುದ್ಧ ವಿಚಾರವಲ್ಲದೆ ಬೇರೇನೂ ಅಲ್ಲ, ಬುದ್ಧ ಪಥ ಸಕಾರಣವೂ ವೈಚಾರಿಕವೂ ಆದುದಾಗಿದೆ. ಅಂತೆಯೇ ಬುದ್ಧನ ಧರ್ಮ ಪಥದಲ್ಲಿ ಮಾತ್ರ ಶೋಷಿತರ ಮುಕ್ತಿ ಸಾಧ್ಯ'. ಎಂದು ನಂಬಿದ್ದರು.

ಮನುಷ್ಯ ತನ್ನ ಸುಖ ಮತ್ತು ದುಃಖಗಳಿಗೆ ತಾನೇ ಕಾರಣನೆಂದು ಬುದ್ಧನು ಹೇಳಿದ್ದನು. ಆ ಪ್ರಕಾರ ಮನುಷ್ಯ ತಾನೇ ತನ್ನ ಅದೃಷ್ಟ ರೂಪಿಸಿಕೊಳ್ಳಬಲ್ಲ ಶಿಲ್ಪಿ. ಒಳ್ಳೆಯದಿರಲಿ, ಕೆಟ್ಟದಿರಲಿ, ಕೇವಲ ಹೊರಗಿನ ಕಾರಣಗಳು ಮನುಷ್ಯ ಬದುಕಿನ ಮಾರ್ಗವನ್ನು

ನಿರ್ಣಯಿಸುವುದಿಲ್ಲ. ಮನುಷ್ಯರು ವಿಧಿಯ ಕೈಗೊಂಬೆಯಲ್ಲ. ಮನುಷ್ಯರು ತಮ್ಮ ದೃಢ ಪ್ರಯತ್ನದಿಂದ ದುಃಖವನ್ನು ಮೆಟ್ಟಿ, ಸುಖ-ಸಂತೋಷವನ್ನು ಪಡೆಯಬಹುದು' ಎಂಬ ಬುದ್ಧನ ಬೋಧನೆಯನ್ನು ಅಂಬೇಡ್ಕರ್ ಬಹಳವಾಗಿ ಮೆಚ್ಚಿದ್ದರು.

ಅಂಬೇಡ್ಕರ್‌ರವರು ಹೋರಾಟಕ್ಕೆ ಇಳಿದ ಸಂದರ್ಭದಲ್ಲಿ ಭಾರತದ ಪರಿಸ್ಥಿತಿ ಸಂಕೀರ್ಣವಾಗಿತ್ತು. "ಭಾರತದಲ್ಲಿ ಪ್ರಜಾಸತ್ತಾತ್ಮಕ ಆಡಳಿತ ಮತ್ತು ಮಾನವೀಯ ಮೌಲ್ಯಗಳನ್ನು ಆಧರಿಸಿದ ಅಭಿವೃದ್ಧಿ ವ್ಯವಸ್ಥೆಯನ್ನು ಅಂಬೇಡ್ಕರ್ ಪ್ರಧಾನವಾಗಿ ಪ್ರತಿಪಾದಿಸಿದರು. ಅವರ ವಿಚಾರಧಾರೆ ಮತ್ತು ಹೋರಾಟಗಳ ಉದ್ದೇಶ, ಭಾರತೀಯ ಜನತೆಯ ಮೂಲಭೂತ ಮಾನವ ಹಕ್ಕುಗಳನ್ನು ಉಳಿಸುವುದಾಗಿತ್ತು. ಅವರದು ಉದಾತ್ತ ಧ್ಯೇಯ. ಮನುಷ್ಯಕೇಂದ್ರಿತ ಚಿಂತನೆಯನ್ನು ಮುಂದಿಟ್ಟ ಅವರು 'ಎಲ್ಲಾ ಕಾನೂನುಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳು ಮಾನವಹಕ್ಕುಗಳನ್ನು ರಕ್ಷಿಸುವ ಮತ್ತು ಮಾನವ ಜನಾಂಗವನ್ನು ಅಭಿವೃದ್ಧಿಯೆಡೆಗೆ ಮುನ್ನಡೆಸುವ ಉದ್ದೇಶವನ್ನು ಹೊಂದಿರಬೇಕು' ಎಂದರು' ಎಂದು ದಾಖಲಿಸಿದ್ದಾರೆ.

ಡಾ. ಬಿ.ಆರ್.ಅಂಬೇಡ್ಕರ್ ಚಿಂತನೆಗಳು ಮತ್ತು ಹೋರಾಟಗಳು ಮೂಲ ಭೂತವಾಗಿ ಮಾನವೀಯತೆಯನ್ನು ಆಧರಿಸಿದ್ದವು, ಅವರು ತಮ್ಮ ಬದುಕನ್ನು ಕೇವಲ ದಲಿತೋದ್ಧಾರಕ್ಕೆ ಸೀಮಿತಗೊಳಿಸಲಿಲ್ಲ, ಎಲ್ಲ ಭಾರತೀಯರು ಆದರ್ಶ ಮಾನವರಾಗಿ ಬದುಕಬೇಕೆಂಬ ಕನಸನ್ನು ಕಂಡಿದ್ದರು. ಹಿಂದೂ ಧರ್ಮದ ಕೆಲವು ಕಂದಾಚಾರಗಳು ಮತ್ತು ಕಟ್ಟುಪಾಡುಗಳು ಮನುಷ್ಯ-ಮನುಷ್ಯರ ನಡುವೆ ಕಂದಕವನ್ನು ಸೃಷ್ಟಿಸಿ ಶೋಷಿತ ಜನವರ್ಗಗಳನ್ನು ಗುಲಾಮಗಿರಿಗೆ ದಬ್ಬುವುದನ್ನು ಅಂಬೇಡ್ಕರ್ ಒಪ್ಪಲಿಲ್ಲ, ದೇವರು, ಧರ್ಮ ಮತ್ತು ಆಚಾರಗಳ ಹೆಸರಿನಲ್ಲಿ ಮನುಷ್ಯರನ್ನು ಶೋಷಣೆಗೆ ಗುರಿಪಡಿಸುವುದು ಧರ್ಮಸಮ್ಮತವಲ್ಲವೆಂದು ಅವರು ಪ್ರತಿಪಾದಿಸಿದರು. ಅಸ್ಪೃಶ್ಯತೆ ನಿವಾರಣೆಯಾಗದ ಹೊರತು ಭಾರತವು ಪ್ರಬುದ್ಧ ಭಾರತವಾಗಲಾರದೆಂದು ಅವರು ಎಚ್ಚರಿಸಿದರು. ಇದಕ್ಕಾಗಿ ಧರ್ಮ ನಿರಪೇಕ್ಷತೆಯ ಆಧಾರದ ಮೇಲೆ ಭಾರತೀಯ ಸಂವಿಧಾನವನ್ನು ರಚಿಸಿ ತಾವೊಬ್ಬ ಅಪ್ಪಟ ಮಾನವತಾವಾದಿ ಮತ್ತು ಮಾನವಹಕ್ಕುಗಳ ರಕ್ಷಕ ಎಂಬುದನ್ನು ಅವರು ಸಾಬೀತುಪಡಿಸಿದ್ದಾರೆ.

ಭಾರತೀಯರೆಲ್ಲರೂ ಸಮಾನರು, ಎಲ್ಲ ಭಾರತೀಯರಿಗೂ ಮಾನವತಾ ವಾದ ಒಂದೇ ಎನ್ನುವ ಧ್ಯೇಯವನ್ನು ಇಟ್ಟುಕೊಂಡು ಹೋರಾಟ ನಡೆಸಿದ ಅಂಬೇಡ್ಕರ್, ಹಿಂದೂ ಧರ್ಮದ ಆಘಾತಕ್ಕೆ ತುತ್ತಾಗಿದ್ದ ಹಿಂದೂ ಮಹಿಳೆಯರ ಸಬಲೀಕರಣದ ಬಗ್ಗೆಯೂ ಧ್ವನಿ ಎತ್ತಿದರು. ಸ್ತ್ರೀಯರಿಗೆ ಶಿಕ್ಷಣ, ಸ್ವಾತಂತ್ರ್ಯ, ಸಮಾನತೆ ಮತ್ತು ಸಮಾನ ಅವಕಾಶಗಳು ಅಗತ್ಯ; ಇದರಿಂದ ಅವರ ಸರ್ವತೋಮುಖ ಅಭಿವೃದ್ಧಿಯಾಗುತ್ತದೆ. ಇದಕ್ಕಾಗಿ ಹಿಂದೂಧರ್ಮದಲ್ಲಿ ಹಲವಾರು ಬದಲಾವಣೆಗಳನ್ನು ತರಬೇಕಿದೆ ಎಂದು ಅವರು ತಿಳಿಸಿದರು. ಸ್ತ್ರೀಯರಿಗೆ ವಿವಾಹ ಸ್ವಾತಂತ್ರ್ಯ, ವಿವಾಹ ವಿಚ್ಛೇದನಾ ಸ್ವಾತಂತ್ರ್ಯ, ಸ್ತ್ರೀಯರ ವಿದ್ಯಾಭ್ಯಾಸ, ಸ್ತ್ರೀಯರಿಗೆ ಆಸ್ತಿಯ ಹಕ್ಕು, ಸ್ತ್ರೀಯರಿಗೆ ಅಧಿಕಾರ ಮೊದಲಾದ

ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಿ, ಅವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಬೇಕು ಎಂದು ಪ್ರತಿಪಾದಿಸಿದರು.

'ಮಾನವರಲ್ಲಿ ಹುಟ್ಟಿನಿಂದ ಯಾರೂ ಶ್ರೇಷ್ಠರೂ ಅಲ್ಲ, ಯಾರೂ ಕನಿಷ್ಠರೂ ಅಲ್ಲ. ಎಲ್ಲರೂ ಸಮಾನರು' ಎಂಬ ಮಾನವತಾವಾದವನ್ನು ಅಂಬೇಡ್ಕರ್ ಎತ್ತಿ ಹಿಡಿದರು. ಮಾನವೀಯತೆ ಮತ್ತು ಸಾಮಾಜಿಕ ನ್ಯಾಯಕ್ಕೆ ಭಂಗ ತರುವ ಶಾಸ್ತ್ರಗಳು ಮತ್ತು ಸ್ಮೃತಿಗಳನ್ನು ಅವರು ಪ್ರಬಲವಾಗಿ ವಿರೋಧಿಸಿದರು. ಇದಕ್ಕೆ ವ್ಯತಿರಿಕ್ತವಾಗಿ ತಿಳಿಸುವ ಮನುಧರ್ಮಶಾಸ್ತ್ರ ಅಥವಾ ಇನ್ನಾವುದೇ ಗ್ರಂಥ ತಿರಸ್ಕಾರಯೋಗ್ಯ ಎಂದು ತಿಳಿಸಿದರು. ಇದು ಅಮಾನವೀಯತೆಯಿಂದ ಮಾನವೀಯತೆಯೆಡೆಗೆ, ನ್ಯಾಯದೆಡೆಗೆ, ಕಾನೂನುಬದ್ಧ ಸುವ್ಯವಸ್ಥೆಯೆಡೆಗೆ ಇಟ್ಟ ದಿಟ್ಟ ಹೆಜ್ಜೆಯಾಗಿತ್ತು. ಹಿಂದೂಧರ್ಮವು 'ಅಸಮಾನತೆಯ ತವರೂರು' ಎಂದು ಹೇಳಿದ ಅವರು ಆಳವಾಗಿ ಬೇರುಬಿಟ್ಟಿದ್ದ ಮೌಢ್ಯ, ಪುರೋಹಿತಶಾಹಿ ಹಾಗೂ ಮೇಲ್ವರ್ಗದವರ ನೈತಿಕ ಅಧಃಪತನ, ಅಸಮಾನತೆ, ಶೋಷಣೆ ಇತ್ಯಾದಿ ಅನ್ಯಾಯವನ್ನು ಖಂಡಿಸಿದರು. ಹಿಂದೂ ಧರ್ಮಕ್ಕೆ 'ನೈತಿಕ ಪುನರ್ಜನ್ಮ'ದ ಅವಶ್ಯಕತೆಯಿದೆ ಎಂದು ಹೇಳಿದರು.

ಅಂಬೇಡ್ಕರ್‌ರವರು ಧರ್ಮವನ್ನು ಕಡೆಗಣಿಸಲಿಲ್ಲ, ಧರ್ಮವು ಸಾಮಾಜಿಕ ಪರಿವರ್ತನೆಗೆ ಅತ್ಯಂತ ಪ್ರಬಲ ಸಾಧನ ಎಂದು ತಿಳಿದಿದ್ದರು, ಹಿಂದೂ ಸಮಾಜದಲ್ಲಿ ಅಡಗಿಕೊಂಡಿದ್ದ ಜಾತಿಪದ್ಧತಿ, ಅಸ್ಪೃಶ್ಯತೆ, ಸ್ತ್ರೀಯರ ದಾಸ್ಯಪದ್ಧತಿ, ಗುಲಾಮಗಿರಿ, ಅಮಾನವೀಯತೆ, ಕಾರ್ಮಿಕರ ಬಗೆಗಿನ ಧೋರಣೆ, ಸತಿ ಸಹಗಮನ ಪದ್ಧತಿ, ಬಾಲ್ಯವಿವಾಹ ಇಂತಹ ಅನಿಷ್ಟ ಪದ್ಧತಿಗಳ ವಿರುದ್ಧ ಅವರು ಮಾತನಾಡಿದರು. ಸಾಮಾಜಿಕ ನ್ಯಾಯ ಸ್ವಾತಂತ್ರ್ಯ, ಸಮಾನತೆ ಹಾಗೂ ಸೋದರತೆ ತತ್ವಗಳನ್ನು ಎತ್ತಿ ಹಿಡಿದರು.

ಅಂಬೇಡ್ಕರ್ ಅವರದು ಸಮಸ್ತ ಶೋಷಿತರ ಪ್ರತಿಧ್ವನಿ. ಅವರು ಕೇವಲ ರಾಜಕೀಯ ಮುಖಂಡರಲ್ಲ; ಆಧುನಿಕ ಭಾರತದ ನಿರ್ಮಾಪಕರು. ಪ್ರಜಾಪ್ರಭುತ್ವಕ್ಕೂ, ದೇಶಾಭಿವೃದ್ಧಿಗೂ ಸಂಬಂಧ ಇದೆ ಎಂಬುದನ್ನು ಸಾಬೀತು ಪಡಿಸಿದವರು. ಭಾರತದಲ್ಲಿ ಪ್ರಜಾಪ್ರಭುತ್ವದ ಆದರ್ಶದ ತಳಹದಿಯಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ಆಚರಣೆಯುಳ್ಳ ಸಮಾಜದ ಸ್ಥಾಪನೆ ಆಗಬೇಕೆಂಬ ನಿಟ್ಟಿನಲ್ಲಿ ಸತತವಾಗಿ ಹೋರಾಡಿದರು. ಇತಿಹಾಸ ಕಂಡ ಮಹಾನ್ ವ್ಯಕ್ತಿಗಳಾದ ಬುದ್ಧ, ವಾಲ್ಟೇರ್, ಥಾಮಸ್ ಕ್ಯಾರ್‌ಲಿಲ್, ಜಾನ್ ಸ್ಟುವರ್ಟ್ ಮಿಲ್, ಆಲ್ಬರ್ಟ್ ಐನ್‌ಸ್ಟೈನ್ ಸಾಲಿನಲ್ಲಿ ಸೇರ್ಪಡೆ ಆಗುವಂಥವರು ಅಂಬೇಡ್ಕರ್. ಭಾರತೀಯ ರಾಗಿದ್ದರೂ ವಿಶ್ವಮಾನವರಾದವರು. ಜಡತ್ವದಲ್ಲಿ ನಲುಗುತ್ತಿದ್ದ ಸಮಾಜಕ್ಕೆ ಚೈತನ್ಯಶಕ್ತಿಯಾದವರು, ಮಾನವೀಯತೆಯ ಉಳಿವಿಗಾಗಿ ಅವರು ನಿರಂತರವಾಗಿ ಸ್ವಾಭಿಮಾನದ ಹೋರಾಟ ನಡೆಸಿದವರು.

ಬಸವಣ್ಣನವರು ಮತ್ತು ಅಂಬೇಡ್ಕರರು

ಡಾ. ಉಮಾದೇವಿ

ಬಸವಣ್ಣನವರು 12ನೇ ಶತಮಾನದ ಪೂರ್ವಭಾಗದಲ್ಲಿ ಕರ್ನಾಟಕದಲ್ಲಿ ಜನಿಸಿದರೆ, ಅಂಬೇಡ್ಕರರು 19ನೇ ಶತಮಾನದ ಕೊನೆಯ ದಶಕದಲ್ಲಿ ಮಹಾರಾಷ್ಟ್ರದಲ್ಲಿ ಜನಿಸಿದರು. ಅವರಿಬ್ಬರ ಹುಟ್ಟಿನಲ್ಲಿಯೇ ಅತ್ಯಂತ ಭೀಕರವೂ ಹಾಗೂ ಪರಸ್ಪರ ವಿರುದ್ಧವೂ ಆದ ವ್ಯತ್ಯಾಸವಿದೆ. ಅವರಿಬ್ಬರಿಗೂ ನಡುವೆ ಭೂಮ್ಯಾಂತರಿಕ್ಷಗಳಷ್ಟು ಅಂತರ ಇದೆ.

ಬಸವಣ್ಣ ಮತ್ತು ಅಂಬೇಡ್ಕರ್ ಇಬ್ಬರೂ ತಮ್ಮ ಬದುಕಿನ ಉದ್ದಕ್ಕೂ ಕರಾಳ ವ್ಯವಸ್ಥೆಯ ಭೀಕರ ಸವಾಲುಗಳನ್ನು ಎದುರಿಸಿದರು. ಆದರೂ ಜೀವಮಾನವಿಡೀ ಮಾನವೀಯ ಅಂತಃಕರಣದ ನೆಲೆಯಲ್ಲಿಯೇ ಚಿಂತಿಸಿದರು ಮತ್ತು ಕ್ರಿಯಾಶೀಲ ರಾದರು. ತಾರ್ಕಿಕತೆ, ಪ್ರಜ್ಞೆ, ಕರುಣೆ, ಸಮತೆ ಎಂಬ ಮೂಲತತ್ವಗಳ ಆಧಾರದಲ್ಲಿ ಸಮಾಜ ನಿರ್ಮಿಸುವುದಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ಸಮಾಜದ ಪರಿವರ್ತನೆಗಾಗಿ ಸೈದ್ಧಾಂತಿಕ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು; ಹರಿಕಾರರು ಎನಿಸಿದರು.

ಅವರಿಬ್ಬರ ಹೋರಾಟ, ತಮ್ಮ ಕಾಲಮಾನದ ವಾಸ್ತವ ಸಮಸ್ಯೆಯ ಒತ್ತಡಗಳಿಗೆ ಅನಿವಾರ್ಯವಾದ ತತ್ಕಾಲೀನ ಪರಿಹಾರವನ್ನು ಸೂಚಿಸಿ ಸಮಾಧಾನ ಪಟ್ಟುಕೊಳ್ಳುವುದಕ್ಕಾಗಿ ನಡೆದಿರಲಿಲ್ಲ. ಬದಲಾಗಿ, ಅದು ನವೀನ ಸಮಾಜದ ಮೂಲಕ ಮಾನವೀಯ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುವು ದಕ್ಕಾಗಿ ನಡೆದಿತ್ತು. ಅದಕ್ಕಾಗಿ ಭೂತ-ಭವಿತವ್ಯಗಳ ವಿಶ್ಲೇಷಣೆಯ ನೆಲೆಯಲ್ಲಿಯೇ ವರ್ತಮಾನದ ಸಮಸ್ಯೆಗಳನ್ನು ಶೋಧಿಸಿ ಸಾರ್ವಕಾಲಿಕವಾದ ಮತ್ತು ಸಾರ್ವತ್ರಿಕವಾದ ಮೌಲ್ಯಗಳನ್ನು ಅವರು ಅನ್ವೇಷಿಸಿ ಅವುಗಳಿಗೆ ಸೈದ್ಧಾಂತಿಕ ಹಾಗೂ ವೈಜ್ಞಾನಿಕ ನೆಲೆಗಟ್ಟನ್ನು ಒದಗಿಸುವುದಕ್ಕೆ ಅವರಿಬ್ಬರೂ ಹೋರಾಡಿದರು. ಅವರ ಹುಟ್ಟು ಮತ್ತು ಕಾಲ ಬೇರೆ ಬೇರೆಯಾಗಿದ್ದರೂ, ಅವರ ತತ್ವ-ಸಿದ್ಧಾಂತಗಳಲ್ಲಿ ಸಮಾನ ಅಂಶಗಳು ಇವೆ; ಅವರಿಬ್ಬರ ಸ್ವಂತಿಕೆ, ವಿಚಾರವಂತಿಕೆ, ಕ್ರಿಯಾಶೀಲತೆ, ಛಲ ಇತ್ಯಾದಿಗಳು ಎಲ್ಲರ ಗಮನ ಸೆಳೆಯುತ್ತವೆ.

ಬಸವಣ್ಣನವರು ಮತ್ತು ಅಂಬೇಡ್ಕರರು ಇಟ್ಟುಕೊಂಡ ಆದರ್ಶ, ಕನಸು ಕಂಡ ಸಮಾಜ, ನಡೆಸಿದ ಹೋರಾಟ, ಆ ಹೋರಾಟಕ್ಕಾಗಿ ಬಳಸಿಕೊಂಡ ಅಸ್ತ್ರ, ಆ ಅಸ್ತ್ರದ

ಯೋಗಕ್ಕಾಗಿ ಅನುಸರಿಸಿದ ರೀತಿ, ಎದುರಿಸಿದ ಪರಿಸ್ಥಿತಿ ಹಾಗೂ ಮಾರ್ಗ ಎಲ್ಲವೂ ರಕಾಲ ಅಭ್ಯಾಸಯೋಗ್ಯ ಮತ್ತು ಅನುಕರಣೀಯ. ಮೂಢನಂಬಿಕೆ, ಸಂಪ್ರದಾಯ, ಂಡವಾಳಶಾಹಿಯ ಹಿಡಿತ, ಜಾತಿ-ಮತ-ಭೇದಗಳ ಸಂಕೋಲೆಯಲ್ಲಿ ನಲುಗುತ್ತಿರುವ ನರ ಉದ್ಧಾರಕ್ಕಾಗಿ ಅವರು ತಮ್ಮನ್ನು ತೊಡಗಿಸಿಕೊಂಡರು. ನಿಸ್ತೇಜವಾದ ಮತ್ತು ಪಮೌಲ್ಯಗೊಂಡ ಸಂಸ್ಕೃತಿಯ ಮೌಲ್ಯಗಳನ್ನು ಶೋಧಿಸಿ, ಆತ್ಮಾವಲೋಕನದ ನಿವಾರ್ಯತೆಯನ್ನು ಮನವರಿಕೆ ಮಾಡಿಕೊಟ್ಟರು.

ಅಂಬೇಡ್ಕರರು ವಿದ್ಯೆ-ಬುದ್ಧಿ-ಜ್ಞಾನ, ಪಾಂಡಿತ್ಯ, ಸಜ್ಜನಿಕೆ ಯಾವುದರಲ್ಲೂ ಂದಿರಲಿಲ್ಲ. ಆದರೆ, ಅವರನ್ನು ಜಾತೀಯತೆಯ ಚಕ್ರವ್ಯೂಹ ಬಂಧಿಸಿಟ್ಟಿತ್ತು. ಅದನ್ನು ೇದಿಸಿಕೊಂಡು ಹೊರಬರಲು ಅವರು ನಿರಂತರವಾಗಿ ಪ್ರಯತ್ನಗಳನ್ನು ನಡೆಸಿಕೊಂಡು ಂದರು. ಸಮಕಾಲೀನ ಪಾಶ್ಚಾತ್ಯ ತತ್ವಜ್ಞಾನಿಗಳ, ಚಿಂತನಶೀಲರ ಆಲೋಚನೆಗಳಿಂದ ್ರೇರಣೆ-ಪ್ರಚೋದನೆಗಳನ್ನು ಪಡೆದುಕೊಂಡಿದ್ದ ಅವರು, ಶೋಷಿತರ ಸಮಸ್ಯೆಗಳಿಗೆ ಧ್ವನಿ ೀಡಿದರು. ಅನ್ಯಾಯ-ಅತ್ಯಾಚಾರಗಳನ್ನು ಸಮಾಜದ ಮುಖಕ್ಕೆ ರಾಚಿದರು. ಬದುಕಿನ ಅಸ್ವಸ್ಥತೆಯನ್ನು ಸೈದ್ಧಾಂತಿಕ ನೆಲೆಯಲ್ಲಿ ಗುರುತಿಸಿ, ಅದರ ಪರಿಹಾರವನ್ನು ಸಮಾನತೆಯ ೆಲೆಯಲ್ಲಿಯೇ ಗ್ರಹಿಸಿ, ವ್ಯಷ್ಟಿ-ಸಮಷ್ಟಿ ಪ್ರಜ್ಞೆಯ ಸಾಮರಸ್ಯವನ್ನು ಸಾಧಿಸಿಕೊಡುತ್ತಲೇ ಟ್ಟು ಬದುಕಿನ ನೈತಿಕತೆಯ ಅಖಂಡತೆಯನ್ನು ಬಸವಣ್ಣನವರು ಸಾಕ್ಷಾತ್ಕರಿಸಿಕೊಟ್ಟರು. ಮಾನವ ಬದುಕಿನ ಪರಮ ಸಾರ್ಥಕತೆಯನ್ನು ತೋರಿದವರು ಬಸವಣ್ಣನವರು.

ಬಸವಣ್ಣನವರ ಕಾಲದ ಶೋಷಣೆ ಧರ್ಮಮೂಲವಾದ ಶೋಷಣೆ ಯಾಗಿತ್ತು. ಜಾತಿಪದ್ಧತಿಯಲ್ಲಿರುವ ತತ್ವಹೀನ ವಿಚಾರಗಳು, ಯಜ್ಞ-ಯಾಗಾದಿಗಳು, ವರ್ಣಾಶ್ರಮ ಪದ್ಧತಿ, ಕರ್ಮ ಸಿದ್ಧಾಂತಗಳು ಮತ್ತು ರಾಜಾ ಪ್ರತ್ಯಕ್ಷ ದೇವತಾ ಎಂಬ ಮೌಲ್ಯದ ಕಾಲವಾಗಿತ್ತು. ಕಲುಷಿತಗೊಂಡ ಧಾರ್ಮಿಕ ಪರಿಸರ, ಪುರೋಹಿತಶಾಹಿ ಅಂದಿನ ಶೋಷಣೆಯ ಎಲ್ಲ ನೆಲೆಗಳಿಗೂ ನೇರ ಜವಾಬ್ದಾರಿ ಯಾಗಿತ್ತು. ಬಸವಣ್ಣನವರ ಕಾಲದ ರಾಜಕೀಯ ಆಂತರಿಕವಾಗಿದ್ದು, ಅಲ್ಲಿ ವಸಾಹುತಶಾಹಿಯ ಹಿಡಿತ ಇರಲಿಲ್ಲ. ಆದರೆ ಅಂಬೇಡ್ಕರ್ ಕಾಲದಲ್ಲಿ ಸಾಮಾಜಿಕ ಹಾಗೂ ಹಿಂದೂ ಜನಾಂಗಿಕ ಸಂಕೀರ್ಣತೆಯಿಂದಾಗಿ ಧರ್ಮ ಉಪೇಕ್ಷಿತವಾಯಿತು. ಇವರ ಕಾಲದ ಅನಾಹುತಗಳಿಗೆ ರಾಜಕೀಯ ಮೂಲವಾದ್ದರಿಂದ ಹೋರಾಟವು ಸಾಮಾಜಿಕ ಮತ್ತು ರಾಜಕೀಯ ಮೂಲದ್ದಾಗಬೇಕಾಯಿತು.

ಬಸವಣ್ಣನವರ ಪ್ರಯತ್ನಗಳು ಆಂತರಿಕ ಪರಿವರ್ತನೆಗೆ ಮಹತ್ವವನ್ನು ನೀಡಿದರೆ, ಅಂಬೇಡ್ಕರರ ಪ್ರಯತ್ನಗಳು ಸಮಾಜದ ಪರಿವರ್ತನೆಗೆ ಮಹತ್ವವನ್ನು ನೀಡಿದವು. ಇಬ್ಬರೂ ತಮ್ಮ ಪ್ರಯತ್ನಗಳಿಗೆ ರಾಜಕೀಯ, ಧಾರ್ಮಿಕ, ಸಾಮಾಜಿಕ ಆಯಾಮಗಳನ್ನು ಪರಿಗಣಿಸಿದರು. ಪುರೋಹಿತ ವರ್ಗದಿಂದ ಉಲ್ಬಣಿಸಿದ ಅನ್ಯಾಯ-ಹಿಂಸೆಯನ್ನು ಪ್ರತಿಭಟಿಸಲು ಬಸವಣ್ಣನವರು ಅಧಿಕಾರ ತ್ಯಾಗ ಮಾಡಿದರೆ, ರಾಜ್ಯಪ್ರಭುತ್ವವು ಪರಿವರ್ತನೆಗೆ

ಸ್ಪಂದಿಸದೇ ಹೋದ ಕಾರಣಕ್ಕೆ ಅಂಬೇಡ್ಕರರು ಅಧಿಕಾರ ತ್ಯಾಗ ಮಾಡಿದರು. ಇಬ್ಬರೂ ಶೋಷಣೆ, ಆಕ್ರಮಣ, ಅನ್ಯಾಯಗಳಿಂದ ಪೀಡಿತರಾದ ಜನರ ಏಳಿಗೆಗೆ ತಮ್ಮನ್ನು ತಾವೇ ಸಮರ್ಪಿಸಿಕೊಂಡ ಮಹಾಪುರುಷರು.

ಬಸವಣ್ಣ ಮತ್ತು ಅಂಬೇಡ್ಕರ್ ಇಬ್ಬರೂ ಸಾಮಾನ್ಯ ಕುಟುಂಬದಿಂದ ಬಂದವರು. ಬಸವಣ್ಣನವರಿಗೆ ಧಾರ್ಮಿಕ ಹಿನ್ನಲೆಯ ಬೆಂಬಲವಿದ್ದಂತೆ, ಅಂಬೇಡ್ಕರರಿಗೆ ಅಂತಹ ಹಿನ್ನಲೆಯ ಬೆಂಬಲವಿರಲಿಲ್ಲ. ಬಸವಣ್ಣನವರು ಕ್ರಿಯಾ ಪೂರ್ಣ ಸಂಘಟನೆಯನ್ನು ಸ್ಥಾಪಿಸಿದರು, ಅಂಬೇಡ್ಕರರಿಗೆ ಅದು ಸಾಧ್ಯವಾಗಲಿಲ್ಲ. ಇವರಿಬ್ಬರೂ ಸಾಮಾನ್ಯ ಜನರಿಗಾಗಿ ಹಾಗೂ ದಲಿತರ ಪ್ರಗತಿಗಾಗಿ ದುಡಿದವರು. ನಿಸ್ವಾರ್ಥದಿಂದ, ಅತ್ಯಂತ ಆಸಕ್ತಿಯಿಂದ, ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ ಧರ್ಮದ ಕೊಂಕು-ಡೊಂಕುಗಳನ್ನು ತಿದ್ದಿ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸ್ವಾವಲಂಬಿ, ಸ್ವಾಭಿಮಾನಿ ಸಮಾಜವನ್ನು ರಚಿಸಬೇಕೆಂಬ ಉದಾತ್ತ ಧ್ಯೇಯ ಇಟ್ಟುಕೊಂಡಿದ್ದರು.

ಲೋಕದಲ್ಲಿ ಬಿದ್ದವರು, ನೊಂದವರು, ಕಂಬನಿಗರೆಯುವವರು ನ್ಯಾಯ-ಸ್ವಾಭಿಮಾನಕ್ಕಾಗಿ ಎತ್ತಿದ ಧ್ವನಿಯ ಮೂಲದಲ್ಲಿ ವಿಶ್ವಜ್ಞಾನಿ ಅಂಬೇಡ್ಕರ್ ಹಾಗೂ ವಿಶ್ವಜ್ಯೋತಿ ಬಸವಣ್ಣನವರ ಜೀವನ-ವಿಚಾರ ಸದಾ ದಾರಿದೀಪವಾಗಿರುತ್ತದೆ. ಈಗಲೂ ಇವರ ಬದುಕು-ಸಂದೇಶಗಳನ್ನು ನಿರ್ಲಕ್ಷಿಸಿದರೆ ರಾಷ್ಟ್ರಕ್ಕೆ ಭವಿಷ್ಯವಿಲ್ಲ ಎಂದೇ ಹೇಳಬೇಕಾಗುತ್ತದೆ. ಧರ್ಮ ಎನ್ನುವುದು ಶೋಷಣೆಯ ಕೇಂದ್ರವಾಗಕೂಡದು; ಧರ್ಮವು ಮೂಲತ: ನೈತಿಕತೆಯನ್ನು ಒಳಗೊಂಡಿರಬೇಕು. ಧರ್ಮದ ಶುದ್ಧ, ಉದಾತ್ತ ರೂಪವನ್ನು ಪುನಃ ಸ್ಥಾಪಿಸುವುದು ಆದ್ಯ ಕೆಲಸ ಎಂದು ಬಸವಣ್ಣನವರು ಮತ್ತು ಅಂಬೇಡ್ಕರರು ಪ್ರತಿಪಾದಿಸಿದರು. ಬಸವಣ್ಣನವರು ಹಾಗೂ ಅಂಬೇಡ್ಕರರು ಆತ್ಮಸ್ಥೈರ್ಯದೊಂದಿಗೆ, ಅಹಿಂಸಾ ಮಾರ್ಗದಲ್ಲಿ ಸಾಧನೆಯ ದಾರಿಯಲ್ಲಿ ನಡೆದರು. ಸಮಷ್ಟಿ ಪ್ರಜ್ಞೆಯ ಕ್ರಿಯಾಶೀಲತೆಯಿಂದ ರೂಪಗೊಂಡ ಶರಣ ಧರ್ಮವನ್ನು ಬಸವಣ್ಣನವರು ತಮ್ಮ ಹೋರಾಟಕ್ಕೆ ಲಿಂಗಸಾಕ್ಷಿಯಾಗಿ ನಡೆಸಿದರು. ಅಂಬೇಡ್ಕರರು ವೈಚಾರಿಕತೆ, ತರ್ಕ ಮತ್ತು ನಿಷ್ಠುರತೆಗಳ ಆಧಾರ ಹೊಂದಿ ತಮ್ಮ ಹೋರಾಟವನ್ನು ಮುನ್ನಡೆಸಿದರು.

ಬಸವಣ್ಣನವರು ನೇತೃತ್ವ ನೀಡಿದ ಶರಣ ಚಳವಳಿಯಾಗಲಿ, ಅಂಬೇಡ್ಕರ್ ನೇತೃತ್ವದ ಸ್ವಾಭಿಮಾನಿ ಚಳುವಳಿಯಾಗಲಿ, ದಿಢೀರನೆ ಹುಟ್ಟಿಕೊಂಡ ಚಮತ್ಕಾರಗಳಲ್ಲ. ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ನೆಲೆಗಳ ಪ್ರಯೋಗಶೀಲತೆಯ ಪರಿಣಾಮವಾಗಿ ಅವು ಪ್ರಜ್ವಲಿಸಿದವು. ಇವುಗಳ ಕೇಂದ್ರಶಕ್ತಿಯಾಗಿ ವ್ಯಷ್ಟಿಯಲ್ಲಿ ಅಂಬೇಡ್ಕರರನ್ನು ಕಂಡರೆ, ಸಮಷ್ಟಿಯಲ್ಲಿ ಬಸವಣ್ಣನವರನ್ನು ಕಾಣಬಹುದು. ದಲಿತ ಮತ್ತು ಶರಣ ಆಂದೋಲನಕ್ಕೆ ಪ್ರೇರಕ-ಪೋಷಕ ಶಕ್ತಿಯಾಗಿ ಅಂಬೇಡ್ಕರ-ಬಸವ ಕಾಣಿಸಿಕೊಳ್ಳುತ್ತಾರೆ. ಬಸವಣ್ಣನವರದು ಮುಖ್ಯವಾಗಿ ಶೋಷಿತ ಸಮುದಾಯದ ಒಡಲಾಳದ ಅನುಭಾವದ ಭಾಷೆ. ಅಂಬೇಡ್ಕರರದು ನೇರ, ಸರಳ, ಸ್ಪಷ್ಟ, ಕಟುವಾದ, ಹರಿತವಾದ ನುಡಿಗಳಿಂದ

ಾಗೃತವಾದ ಭಾಷೆ. ಅಂದಂದಿನ ದೌರ್ಜನ್ಯ, ಹಿಂಸೆ, ಶೋಷಣೆ ಒಟ್ಟು ವ್ಯವಸ್ಥೆಯ ರುದ್ಧ ಕ್ರಾಂತಿಪುರುಷನಾಗಿ ಹೋರಾಟಕ್ಕೆ ಇಳಿದಾಗ ಅವರ ವಿಚಾರಗಳ ಅಭಿವ್ಯಕ್ತಿ ಡುಗು, ಸಿಡಿಲಾಗಿ ಕೇಳಿ ಬರುತ್ತದೆ. ಬಸವಣ್ಣನವರು ಒಬ್ಬ ದಾರ್ಶನಿಕ ತತ್ವಜ್ಞಾನಿಯಾದರೆ, ಂಬೇಡ್ಕರ್ ವರ್ಣರಂಜಿತ ವ್ಯಕ್ತಿತ್ವದ ಮಹಾನ್ ಮೇಧಾವಿ.

ಭಾರತೀಯರ ಮನಸ್ಸನ್ನು ಆವರಿಸಿಕೊಂಡಿರುವ ಪ್ರಧಾನ ಪೋಷಕ ಶಕ್ತಿ ಯಾವುದೆಂಬುದನ್ನು ಇವರೀರ್ವರು ಗುರುತಿಸಿಕೊಂಡರು. ಅದನ್ನು ಇಬ್ಬರೂ ಪ್ರಶ್ನಿಸಿದರು. ಸಮಾನತೆಯನ್ನು ಸ್ಥಾಪಿಸಲು ಒತ್ತು ನೀಡಿದರು. ಮಾನವೀಯತೆಯನ್ನು ಎತ್ತಿ ಹಿಡಿಯಲು ತಮ್ಮನ್ನು ಅರ್ಪಿಸಿಕೊಂಡರು.

ಬಸವಣ್ಣ ಅವರ ಸಮ ಸಮಾಜದ ಸಿದ್ಧಾಂತಗಳು

ಡಾ. ವನಜಾಕ್ಷಿ ಆರ್ ಹಳ್ಳಿಯವರ್

ಕರ್ನಾಟಕದ ರಾಜಕೀಯ ಮತ್ತು ಧಾರ್ಮಿಕ ಇತಿಹಾಸದಲ್ಲಿ 12ನೆಯ ಶತಮಾನ ಒಂದು ಯುಗ ಪರಿವರ್ತನೆಯ ಸಂಧಿಕಾಲ. ಅನೇಕ ದೃಷ್ಟಿಗಳಿಂದಾಗಿ ಈ ಯುಗಕ್ಕೆ ಮಹತ್ವವಿದೆ. ಅದು ಹೊಸ ಯುಗಧರ್ಮವಾದ ಶೈವಧರ್ಮದ ಪ್ರಾಬಲ್ಯ ಇದ್ದ ಕಾಲ; ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿನ ವಾದ–ಪ್ರತಿವಾದ, ಕ್ರಿಯೆ–ಪ್ರತಿಕ್ರಿಯೆ, ಸಂಘರ್ಷ–ಸಾಮರಸ್ಯಗಳು ಆಂದೋಲನದ ಸ್ವರೂಪವನ್ನು ತಾಳಿ, ಸಾಹಿತ್ಯದ ಮೇಲೆ ಆಳವಾದ ಪ್ರಭಾವವನ್ನು ಬೀರಿದ ಸಂಕ್ರಮಣ ಕಾಲ.

ಈ ಧಾರ್ಮಿಕ, ಸಾಮಾಜಿಕ ಸಂಘರ್ಷದ ಫಲಶ್ರುತಿಯಾಗಿ ಮೂಡಿ ಬಂದುದೇ ವಚನ ಸಾಹಿತ್ಯ ಪ್ರಕಾರ. ಅಂದಿನ ಸಮಾಜದಲ್ಲಿ ರೂಢಿಮೂಲವಾಗಿದ್ದ ಅಂಧಶ್ರದ್ಧೆಯ ಆಚರಣೆಗಳನ್ನು ಬುಡಸಹಿತ ಕಿತ್ತೆಸೆದು, ಬದುಕಿಗೆ ಅಗತ್ಯವಾದ ಮಾನವೀಯತೆಯ ಆದರ್ಶಗಳನ್ನು ಜನಸಾಮಾನ್ಯರಿಗೆ ಅವರ ಭಾಷೆಯಲ್ಲಿಯೇ, ಅವರಿಗೆ ತಿಳಿಯುವ ಹಾಗೆ, ಸರಳವಾಗಿ ನಿರೂಪಿಸಲಾಯಿತು. ದೇವಭಾಷೆ ಜನಸಾಮಾನ್ಯರ ಮಟ್ಟಕ್ಕೆ ಇಳಿಯಲು ನಿರಾಕರಿಸಿದಾಗ ಜನಸಾಮಾನ್ಯರ ಭಾಷೆಯನ್ನೇ ದೇವಭಾಷೆಯ ಮಟ್ಟಕ್ಕೆ ಏರಿಸಿದ ಕೀರ್ತಿ ಈ ವಚನಕಾರರದ್ದು. ಸರ್ವ ಸಮಾನತೆಯ ತಳಹದಿಯ ಮೇಲೆ ಶೋಷಣೆರಹಿತ ಹೊಸ ಸುಖೀ ಸಮಾಜವೊಂದನ್ನು ರೂಪಿಸುವ ಸುಂದರವಾದ ಕನಸು ಕಂಡವರು ಮತ್ತು ಅದಕ್ಕಾಗಿ ಸಾಹಿತ್ಯ ಕೃಷಿಯನ್ನು ಪ್ರಧಾನವಾಗಿರಿಸಿಕೊಂಡು ಕಾಯಾ–ವಾಚಾ–ಮನಸಾ ಪ್ರಾಮಾಣಿಕವಾಗಿ ಹೋರಾಟ ನಡೆಸಿದವರು ವಚನಕಾರರು.

ಇಂತಹ ಸಾಹಿತ್ಯ ಕೃಷಿಯ ನೇತಾರ ದೇವರದಾಸಿಮಯ್ಯ 11ನೆಯ ಶತಮಾನದಲ್ಲಿಯೇ ಇಂಥ ಸಾಹಿತ್ಯಕ್ಕೆ ನಾಂದಿ ಹಾಡಿದ ಹರಿಕಾರ. 12ನೆಯ ಶತಮಾನದಲ್ಲಿ ಬಸವಣ್ಣನವರು ಅದಕ್ಕೆ ಮತ್ತಷ್ಟು ರೂಪ ಕೊಟ್ಟು ವಚನ ಸಾಹಿತ್ಯಾಂದೋಲನದ ಅಗ್ರನಾಯಕರಾಗಿ ಮತ್ತು ಕೇಂದ್ರ ಬಿಂದುವಾಗಿ ಮೂಡಿ ಬಂದರು. ಬಸವಣ್ಣನವರ ಕಾಲ ಎಲ್ಲ ಸಂಶೋಧಕರ ಅಭಿಪ್ರಾಯದಂತೆ ಕ್ರಿ.ಶ. 1150. ಬಿಜಾಪುರ ಜಿಲ್ಲೆಯ ಬಾಗೇವಾಡಿ ಎಂಬ ಅಗ್ರಹಾರದ ಮಾದರಸ–ಮಾದಲಾಂಬಿಕೆ ಎಂಬ ಬ್ರಾಹ್ಮಣ ದಂಪತಿಗಳ ಮಗನಾಗಿ ಜನಿಸಿದರು. ಗಂಗಾಬಿಕೆ ಮತ್ತು ನೀಲಾಂಬಿಕೆಯರು ಇವರ ಮಡದಿಯರು. ಬಾಲ್ಯದಲ್ಲಿಯೇ ಕರ್ಮಲತೆ ಯಂತಿದ್ದ ಜನಿವಾರವನ್ನು ಕಿತ್ತೆಸೆದ ಕ್ರಾಂತಿಪುರುಷ! ಕೂಡಲ–ಸಂಗಮನನ್ನು ಆರಾಧ್ಯ

ಶೈವವೆಂದು ನಂಬಿದ್ದ ಬಸವಣ್ಣನವರು ಅದೇ ಅಂಕಿತದಿಂದಲೇ ವಚನಗಳ ರಚನೆ ಮಾಡಿ, ಸಾಹಿತ್ಯ ಕೃಷಿಯೊಂದಿಗೆ ಸಮಾಜ ಸುಧಾರಕರಾಗಿ ಕಾರ್ಯ ನಿರ್ವಹಿಸಿದವರು. ಮಂಗಳವೇಢೆ ಮತ್ತು ಕಲ್ಯಾಣಗಳು ಬಸವಣ್ಣನವರ ಕಾರ್ಯ ಕ್ಷೇತ್ರಗಳು. ಕಲ್ಯಾಣದಲ್ಲಿ ಬಿಜ್ಜಳನ ಕರಣಿಕನಾಗಿ, ಮಹಾಮಂತ್ರಿಯಾಗಿ ಆರಂಭಿಸಿದ ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನಗಳು ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯುವಂತಹುದ್ದಾಗಿದೆ.

ಬಸವಣ್ಣನವರ ವ್ಯಕ್ತಿತ್ವ ವಿಶಿಷ್ಟವಾದುದು. ಆ ಕಾಲದ ಜಾತಿ ವ್ಯವಸ್ಥೆಯಲ್ಲಿ ಉನ್ನತ ಸ್ಥಾನ-ಮಾನಗಳನ್ನು ಹೊಂದಿದ್ದ ವೈದಿಕ ಕುಟುಂಬದಲ್ಲಿ ಜನಿಸಿದ್ದರೂ, ಅದರ ಕಠೋರ ಸಂಪ್ರದಾಯಗಳನ್ನು ಒಪ್ಪಿಕೊಳ್ಳಲಾರದೇ, ಸಮಾಜದ ಜಾತಿ-ವರ್ಗ ತಾರತಮ್ಯವನ್ನು ಕಟುವಾಗಿ ವಿರೋಧಿಸುವ ಜೊತೆಗೆ, ಬ್ರಾಹ್ಮಣ್ಯವನ್ನು ನಿರಾಕರಿಸಿ, ಸರ್ವಸಮಾನತೆಯ ತತ್ವವನ್ನು ಸಮಾಜದಲ್ಲಿ ಸ್ಥಾಪಿಸಲು ತಮ್ಮ ಬದುಕಿನುದ್ದಕ್ಕೂ ಹೋರಾಟ ಮಾಡಿದ ಕ್ರಾಂತಿಪುರುಷ.

ಬಸವಣ್ಣನವರು ಆಗಿನ ಸಾಮಾಜಿಕ ಮತ್ತು ಧಾರ್ಮಿಕ ವಲಯದಲ್ಲಿ ಮನೆಮಾಡಿದ್ದ ಅಸ್ಪೃಶ್ಯತೆ, ಜಾತಿಪದ್ಧತಿ, ವರ್ಣವ್ಯವಸ್ಥೆ, ಅಂಧಾನುಕರಣೆ, ಮೂರ್ತಿಪೂಜೆ, ಮೂಢನಂಬಿಕೆ ಮುಂತಾದ ಅನಿಷ್ಠ ಪದ್ಧತಿಗಳ ವಿರುದ್ಧ ಸಮರವನ್ನೇ ಸಾರಿದರು. ಅವುಗಳ ನಿರ್ಮೂಲನೆಗೆ ಪಣ ತೊಟ್ಟರು. ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿ ಅಧಿಕಾರ, ಸಂಪತ್ತು, ಭೋಗವಿಲಾಸಗಳಿಗೆ ಆಸೆಪಡದೇ, ಪ್ರಾಮಾಣಿಕ ಸೇವೆಯಿಂದ ರಾಜ್ಯದ ಬೊಕ್ಕಸ ತುಂಬುವುದರ ಜೊತೆಗೆ, ಹಲವು ಜವಾಬ್ದಾರಿಗಳನ್ನು ನಿಷ್ಠೆಯಿಂದ ನಿರ್ವಹಿಸಿದರು. ಜನಸಾಮಾನ್ಯರಲ್ಲಿ ಸಮಾನತೆಯ ಬಗ್ಗೆ ಜಾಗೃತಿ ಮೂಡಿಸಿದರು. ವೇದಗಳು ಪ್ರತಿಪಾದಿಸಿದ ಅಸಮಾನತೆಯನ್ನು ಖಂಡಿಸುತ್ತ, 'ಜಾತಿಪದ್ಧತಿ ಕೃತಕವಾದುದು, ಅದಕ್ಕೆ ಧರ್ಮಶಾಸ್ತ್ರಗಳ ಆಧಾರವಿಲ್ಲ' ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು. ಭಿನ್ನ ಜಾತಿಗಳವರ ಸಹಭೋಜನಕ್ಕೆ ಪ್ರೋತ್ಸಾಹ ನೀಡುವುದರೊಂದಿಗೆ ತಾವೇ ಅಸ್ಪೃಶ್ಯರ ಮನೆಗಳಿಗೆ ತೆರಳಿ ಅವರ ಅತಿಥ್ಯವನ್ನು ಸ್ವೀಕರಿಸುವ ಮೂಲಕ, ಜಾತಿ-ಜಾತಿಗಳ ನಡುವಿನ ತಾರತಮ್ಯವನ್ನು ಅಲ್ಲಗಳೆದರು.

ಪ್ರಾಣಿಬಲಿಯನ್ನು ಕಟುವಾಗಿ ವಿರೋಧಿಸಿದ ಬಸವಣ್ಣನವರು
"ದಯವಿಲ್ಲದ ಧರ್ಮವದಾವುದಯ್ಯ
ದಯೆಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯೆಯೇ ಧರ್ಮದ ಮೂಲವಯ್ಯ"
ಎಂದು ಹೇಳಿ 'ಸಕಲ ಜೀವರಾಶಿಗಳ ಬಗ್ಗೆ ದಯೆ ಇರಲಿ; ಅದುವೆ ಧರ್ಮದ ಮೂಲ' ಎಂದು ತಿಳಿಸಿ, ಪ್ರಾಣಿಹಿಂಸೆಯನ್ನು ಖಂಡಿಸಿದರು.

ಬಸವಣ್ಣನವರು ಸ್ಥಾಪಿಸಿದ 'ಅನುಭವ ಮಂಟಪ' ವಿಚಾರ ಮಂಥನಗಳ ಕೇಂದ್ರಸ್ಥಾನವಾಗಿತ್ತು. ಜಾತಿ-ಮತ-ಲಿಂಗ ಭೇದವಿಲ್ಲದೇ ಎಲ್ಲ ಅನುಭಾವಿಗಳು

ಈ ಅನುಭವ ಮಂಟಪದಲ್ಲಿ ಮುಕ್ತವಾಗಿ ತಮ್ಮ ವಿಚಾರಗಳನ್ನು ಮಂಡಿಸುವ, ಚರ್ಚಿಸುವ ಅವಕಾಶ ಪಡೆದಿದ್ದರು. ಅನುಭವ ಮಂಟಪದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದ ಅಲ್ಲಮಪ್ರಭು, ಅವರೊಂದಿಗೆ ಚೆನ್ನಬಸವ, ಸಿದ್ಧರಾಮ, ಅಂಬಿಗರ ಚೌಡಯ್ಯ, ಮಾದಾರ ಚನ್ನಯ್ಯ, ಮಡಿವಾಳ ಮಾಚಯ್ಯ, ಮುಕ್ತಾಯಕ್ಕ, ನಾಗಾಂಬಿಕೆ, ನೀಲಲೋಚನೆ, ಅಕ್ಕಮಹಾದೇವಿ, ಕಿನ್ನರಿ ಬೊಮ್ಮಯ್ಯ, ಆಯ್ದಕ್ಕಿ ಮಾರಯ್ಯ..... ಮೊದಲಾದ ವಚನಕಾರರು ವೃತ್ತಿ/ಜಾತಿಭೇದ ಮರೆತು, ಶೈವ ಧರ್ಮದ ತತ್ವಗಳ ಚರ್ಚೆಯೊಂದಿಗೆ ಸಾಮಾಜಿಕ ಚಿಂತನೆಗಳನ್ನೂ ಮಂಡಿಸುತ್ತಿದ್ದರು.

